Government Oriental Library Series

EDITED BY PANDITS UNDER THE SUPERVISION OF THE CURATOR, GOVERNMENT ORIENTAL LIBRARY, MYSORE.

Kannada Section No. V.

ಕುಮಾರವ್ಯಾಸಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

೨ನೆಯ ಸಂಪುಟ

ಆದಿಪರ್ವದೊಳ್ ಜತುಗೃಹಾದಿಪರ್ವಗಳು

THE

KARNATAKA MAHABHARATA

BY

KUMARAVYASA MAHAKAVI

VOLUME II

JATUGRUHAPARVA, Etc.

EDITED BY

V. SYAMACHARYA,

Pandit, Govt. Oriental Library, Mysore

PUBLISHED UNDER THE AUTHORITY OF THE GOVERNMENT OF HIS HIGHNESS THE MAHARAJA OF MYSORE

MYSORE:
PRINTED AT THE GOVERNMENT BRANCH PRESS
1913

ಅವತರಣಿಕೆ.

ಈ ಪುಸ್ತಕವು ಕರ್ಣಾಟಕಮಹಾಭಾರತದ ಎರಡನೆಯ ಸಂಚಿಕೆಯಾಗಿರುವುದು. ಈ ಗ್ರಂಥಕರ್ತನ ವಿಷಯದಲ್ಲಿಯೂ ಈ ಕವಿಯ ಭಾಷೆ ಮೊದಲಾದ ವಿಷಯಗಳಲ್ಲಿಯೂ ಹೇಳಬೇಕಾದ ವಿಷಯಗಳೆಲ್ಲಾ (ಕನ್ನಡ ಸೆಕ್ಷನ್ ನಂಬರು ಮೂರು ನಾಲ್ಕನೆಯದಾದ) ಉಪೋದ್ಘಾತಸಂಚಿಕೆ ಮತ್ತು ಸಭಾಪರ್ವ ಇವುಗಳ ಅವತರಣಿಕೆಯಲ್ಲಿ ಹೇಳಲ್ಪಟ್ಟಿದೆ. ಆದುದರಿಂದ ಪ್ರಕೃತ ಈ ಪುಸ್ತಕದಲ್ಲಿರುವ ಗ್ರಂಥದ ವಿಚಾರಮಾತ್ರ ಆವಶ್ಯಕವಾಗಿರುವುದು.

(1) ಜತುಗೃಹಪರ್ವ, (2) ಹಿಡಿಂಬವಧಪರ್ವ, (3) ಬಕವಧಪರ್ವ, (4) ಚೈತ್ರರಥಪರ್ವ, (5) ಸ್ವಯಂವರಪರ್ವ, (6) ವೈವಾಹಿಕಪರ್ವ (7) ವಿದುರಾಗಮಪರ್ವ. (8) ರಾಜ್ಯಲಾಭಪರ್ವ (9) ತೀರ್ಥಯಾತ್ರಾಪರ್ವ, (10) ಸುಭದ್ರಾಹರಣಪರ್ವ, (11) ಖಾಂಡವವನದಹನಪರ್ವ, ೧ನೆಯ ಪರಿಶಿಷ್ಟ, ೨ನೆಯ ಪರಿಶಿಷ್ಟ, ಇವೆಲ್ಲವೂ ಈ ಪುಸ್ತಕದಲ್ಲಿ ಅಡಗಿವೆ.

ಈ ಪುಸ್ತಕದಲ್ಲಿ ಪ್ರಕಟಿಸಿರುವ ಪಾಠವು ಪ್ರಾಯಿಕವಾಗಿ ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಮುದ್ರಿತವಾದ ಪುಸ್ತಕಗಳಂತೆಯೂ ಚ, ಛ, ಟ. ಗುರ್ತುಗಳುಳ್ಳ ಪುಸ್ತಕಗಳಂತೆಯೂ ಇರುತ್ತದೆ. ಆದರೆ 24ನೆಯ ಸಂಧಿಯ ಕೊನೆಯಲ್ಲಿ ಅರ್ಜುನನಿಗೂ ಅಂಗಾರವರ್ಮನಿಗೂ ಸ್ನೇಹವಾದ ಬಳಿಕ ಅಂಗಾರವರ್ಮನು ಪಾಂಡವರಿಗೆ ಅನರ್ಘವಾದ ರತ್ನಾಭರಣಾದಿಗಳನ್ನು ಕೊಡುವಾಗ, ಅವರು "ಬೇಕಾದ ಸಮಯದಲ್ಲಿ ತರಿಸಿಕೊಳ್ಳುವೆವು ನಿಮ್ಮಲ್ಲೇ ಇರಲಿ" ಎಂದು ಹೇಳಿ ಹೊರಟರು. ಆಗ ಅಂಗಾರವರ್ಮನು ಕೆಲವು ಧರ್ಮಮಾರ್ಗಗಳನ್ನೂ ಪೂರ್ವದ ಕಥೆಗ

ಳನ್ನೂ ಹೇಳಿದನೆಂದು ಗ್ರಂಥಕಾರನು ಹೇಳುತ್ತಾ, ಆ ಪ್ರಕರಣದಲ್ಲಿ ಪರಶುರಾಮರ ಕಥೆಯನ್ನು ವಿಸ್ತಾರವಾಗಿ ಹೇಳಿರುವನು. ಮತ್ತು ಈ ಪುಸ್ತಕದಲ್ಲಿ ಪ್ರಾಯಿಕವಾಗಿ ಪ್ರತಿಸಂಧಿಯಲ್ಲಿಯೂ ಮೇಲೆ ಕಂಡ ಪುಸ್ತಕಗಳಕಿಂತಲೂ ಕೆಲವು ಕಥಾಸಂದರ್ಭಗಳೊಳಗೆ ಅಧಿಕವಿಚಾರವುಳ್ಳ ಪದ್ಯಗಳು ಕೆಲವು ಹೆಚ್ಚಾಗಿ ದೊರೆಯುತ್ತವೆ.

ಮೊದಲನೆಯ ಸಂಚಿಕೆಯ ಮುದ್ರಣಸಮಯದಲ್ಲಿ ಶೋಧನಕ್ಕಾಗಿ ಉಪಯೋಗಿಸಲ್ಪಟ್ಟ ಬಹುಪುಸ್ತಕಗಳಲ್ಲಿ ಈ ವರೆಗೆ ಗ್ರಂಥವು ಇರಲಿಲ್ಲವಾಗಿ ಕೆಲವು ಪುಸ್ತಕಗಳ ಆಧಾರದ ಮೇಲೆ ಮುದ್ರಣಕಾರ್ಯವು ನಡೆದಿರುವುದು. ಫಿಯಲಾಜಿಕಲ್ ಕಾಲೇಜಿನಿಂದ ಆರ್ಕಿಲಾಜಿಕಲ್ ಆಫೀಸರ ದ್ವಾರಾ ಈ ಆಫೀಸಿಗೆ ಬಹುಮಾನವಾಗಿ ಬಂದ 'ಡ' ಗುರ್ತುಳ್ಳ ಲೈಬ್ರರಿ 227 ನೆಯ ನಂಬರಿನ ಪುಸ್ತಕವು ಶೋಧನಕ್ಕೆ ಸಹಾಯವಾದುದಕ್ಕಾಗಿ ಅತ್ಯಂತ ಕೃತಜ್ಞರಾಗಬೇಕಾಗಿದೆ. ಇದರ ಶೋಧನಕ್ಕಾಗಿ ಉಪಯೋಗಿಸಿರುವ ಪುಸ್ತಕಗಳ ವಿವರಣೆ—

ಗುರ್ತು	ಗ|| ಓ|| ಲೈಬ್ರರಿ ನಂಬರು
ಕ.	70
ಖ.	ಕೋರ್ಟ್ ಪ್ರೆಸ್ ಪ್ರೊಪ್ರೈಟರಿಂದ [ಬಂದುದು.
ಚ.	251
ಜ.	2
ಟ.	205
ಡ.	227

ಈ ಪುಸ್ತಕದ ಕೊನೆಯಲ್ಲಿ ೧ ನೆಯ ಪರಿಶಿಷ್ಟದಲ್ಲಿಯೂ ೨ ನೆಯ ಪರಿಶಿಷ್ಟದಲ್ಲಿಯೂ ಪ್ರಕಟಿಸಿರುವ ಹರಿಶ್ಚಂದ್ರರಾಯನ ಕಥೆ ಮತ್ತು ಯಯಾತಿರಾಯನ ಕಥೆಯು ಅನೇಕ ಪುಸ್ತಕಗಳಲ್ಲಿ ಇಲ್ಲ. ಮತ್ತು ಅದರ ಶೈಲಿಯು, ಶಬ್ದಸೌಷ್ಠವವು, ಇವೇ ಮೊದಲಾದ ಸಂದರ್ಭಗಳನ್ನು ನೋಡಿದರೆ ಲಕ್ಷಣಜ್ಞರಾದ ಕವಿಗಳಿಗೆ ಹೃದ್ಯವಾಗಿ ತೋರುವದಿಲ್ಲ. ಆದರೂ

ಗ. ಘ. ಜ. ಠ. ಅಂದರೆ 218, 210, 2, 273 ಲೈಬ್ರರಿ ನಂಬರಿನ ಪುಸ್ತಕಗಳಲ್ಲಿ ಕಂಡು ಬಂದುದರಿಂದ ಮುದ್ರಣಮಾಡಿದುದಾಯಿತು.

ಮೇಲೆ ಹೇಳಿದಂತೆ ಬಹುಪುಸ್ತಕಗಳನ್ನನುಸರಿಸಿ ಈ ಗ್ರಂಥವು ಶೋಧಿಸಲ್ಪಟ್ಟು ಮುದ್ರಿತವಾಗಿರುವುದರಿಂದ, ಒಂದು ವೇಳೆ ಪ್ರಾಮಾದಿಕದೋಷಗಳೇನಾದರೂ ಇದ್ದರೆ ಅದನ್ನು ಲಕ್ಷ್ಯಕ್ಕೆ ತಾರದೆ, ಅಭಿಜ್ಞರೂ ಗುಣಗ್ರಾಹಿಗಳೂ ಆದವರೆಲ್ಲರೂ ಗುಣವನ್ನು ಮಾತ್ರ ಮನಸ್ಸಿಗೆ ತಂದು ಆನಂದಿಸುವರೆಂದು ನಂಬಿದೆ.

ವಿ ಷ ಯ ಸೂ ಚಿ ಕೆ .

ಶ್ರೀ

ಕುಮಾರವ್ಯಾಸ ಮಹಾಕವಿ ವಿರಚಿತಂ

ಕರ್ಣಾಟಕ ಮಹಾಭಾರತಂ

ಆದಿಪರ್ವ.

ದ್ವಿತೀಯ ಸಂಪುಟಂ

ಇಪ್ಪತ್ತೊಂದನೆಯ ಸಂಧಿ

ಸೂಚನೆ

ವಾಯುಸುತನರಮನೆಯ ಕೌರವ
ರಾಯ ಕೃತಕವ ಕಳದು ಹೊಕ್ಕನು
ತಾಯಿಯೊಡಹುಟ್ಟಿದರು ಸಹಿತ ಮಹಾವನಾಂತರವ ||

ಕುರುಪಾಂಡವರ ವೈರಾಭಿವೃದ್ಧಿ.

ಕೇಳು ಜನಮೇಜಯ ಧರಿತ್ರೀ
ಪಾಲ ಗಜನಗರಿಯಲಿ ಪಾಂಡವ
ರಾಳ ಕೌರವರಾಳ ಸೆಣಸಿನ ಕಾಲುಮುಟ್ಟುಗಳ |
ಸೂಳು ಮತ್ಸರ ಬಿರಿದುಪಾಡಿನ
ಜೋಳಿ ಕಲಹದ ಕದಡು ಜೂಜಿನ
ಕೋಳು ಚಲದೊಳ[1] ತೋಟಿ ಮಸಗಿತು ದಿವಸ ದಿವಸದಲಿ[2] || ೧

1 ವಲರೊಳ, ಕ. ಚ. 2 ನಾಡುಬೀಡಿನಲಿ, ಜ.

ಬೀದಿಗಲಹದ ಕದಡು ಬೀಡಿನೊ
ಳೈದೆ ಹಬ್ಬಿತು ಕೂಡೆ ನಗರದಿ [1]
ಕೈದೊಳಸಕೊಂಡೆಸಗಿ ಮಸಗಿತು ನಾಡುನಾಡಿನಲಿ [2] ।
ಆದುದೆರಡರಸಿಭಪುರಿಗೆ ಕಾ
ಳಾದುದಿನ್ನೇನೆನುತ ಪುರಜನ
ವೈದೆ ಮಱುಗಿತು ಭೀಮದುರ್ಯೋಧನರ ಹೋರಟೆಗೆ ॥ ೧

ಬೇಱೆ ಪಾಂಡವರಿರಲಿ ರಾಯನ
ನೂಱುಮಕ್ಕಳು ಪುರವನಾಳಲಿ
ಬೇಱೆ ಕೌರವರಿರಲಿ ಪಾಂಡವರಿರಲಿ ನಗರಿಯಲಿ [3] ।
ನೂಱುಜೊಡನೈವರನು ಧರಿಯಿಸ
ಲಾರದಿಭಪುರಿ ಯೆನುತ ದುಗುಡವ
ಹೇಱಿ ಹೊದಕುಳಗೊಳುತಲಿರ್ದುದು ಹಸ್ತಿನಾನಗರ ॥ ೨

ಕರ್ಣಶಕುನಿಗಳೊಡನೆ ದುರ್ಯೋಧನನ ರಹಸ್ಯಾಲೋಚನೆ.

ಒಂದುದಿನ ದುರ್ಯೋಧನನು ನಿಜ
ಮಂದಿರದೊಳೇಕಾಂತದಲಿ ಮನ
ನೊಂದು ನುಡಿದನು ಕರ್ಣಶಕುನಿಜಯದ್ರಥಾದ್ಯರಿಗೆ ।
ಇಂದು ಭೀಮಾರ್ಜುನರು ದ್ರುಪದನ
ತಂದು ದಕ್ಷಿಣೆ ಯಿತ್ತು ಗುರುವಿಗೆ
ಸಂದರ್ಭೆ ಸಮರದಲಿ ಪರಿಭವವಾಯ್ತು ಸಮಗೆಂದ ॥ ೪

ವನಜವನದಲಿ ತುಱುಚೆ ಕಬ್ಬಿನ
ಬನದಿ ಕಡಸಿಗೆ ಚೂತಮಯಕಾ
ನನದೆ ಬಬ್ಬುಲಿ ಭೀಮಸೇನನ ಯಿರವು ನಮ್ಮೊಡನೆ ।

---

1 ಕೈದುಗದನದ, ಖ. ಬೀದುಗಲಹದ, ಚ.
2 ರಾಜರಾಜರಲಿ, ಜ. 3 ರಾಳಲಿಭಪುರಿಯು, ಚ.

ಇನಿತು ಪಾರ್ಥನೊಳಿಲ್ಲ ಯಮಳರ
ಜೆನುಗಿನಲಿ ಜಾಣಿನು ಯುಧಿಷ್ಠಿರ
ಜನಪನಾಗಲಿ ಮೇಣು ಮಾಣಲಿ ಖಾತಿ [1] ಯಿಲ್ಲೆಂದ ॥ ೫

ಹುದು ನಡೆಯದಿವರೊಡನೆ ನಮ್ಮೊಳು
ಕದನವೇ ಕೈಗಟ್ಟುವುದು ಕಾ
ದಿವರೆ ಹೆಬ್ಬುಲವಹುದು [2] ದುರ್ಬಲ ದೈವಗತಿ ಬೇಱೆ ।
ನದಿಗಳರಳಿಯ ಹಾಸು ನವವಿಷ
ಪ್ರದರದೀಪನಚೂರ್ಣವಾದಂ
ದದಲಿ ದಾಯಾದ್ಯರ [3] ಲಿ ಸದರವ ಕಾಣೆ ನಾನೆಂದ ॥ ೬

ಎನೆ ಕಳಿಂಗಾದಿಗಳು ತಂತ
ಮ್ಮನುಮತವ ಹೇೞಿದರು ಕೌರವ
ಜನಪನಿರವಿಗೆ ಕೇಡ ನಿಶ್ಚಯಿಸಿದರು ಮನದೊಳಗೆ ।
ಜನಪನಲ್ಲಿಗೆ ನಡುವಿರುಳು ಬಂ
ದನುನಯದಿ ಮಾತಾಡುತೆಂದರು
ಜನಪ ಕೇಳ್ಳೈ ಭೀಮನರ್ಜುನರುಗಳ ಸಾಹಸವ ॥ ೭

ದುರ್ಯೋಧನನಿಗೆ ಕರ್ಣನ ಸಮಾಧಾನ.

ದುಗುಡವೇತಕೆ ಜೀಯ ಡೊಂಬಿಯ
ಜಗಳವನು ತೆಗೆದರಿನೃಪರ ಸುಂ
ಟಗೆಯನಾಯುವೆನಹರ ತನುವನು ಯುದ್ಧರಂಗದಲಿ ।
ದಿಗುಬಲಿಯ ಕೊಡಿಸುವೆನು ಸಾಕಿಂ
ನೊಗುಮಿಗೆಯ ಚಿಂತಾಂಗನೆಯನೋ
ಲಗಿಸದಿರು ಕುರುರಾಯ ಚಿತ್ತೈಸೆಂದನಾಕರ್ಣ ॥ ೮

ಪೊಡೆದು ಪೊಡೆಚಂಡಾಡಿ ರಿಪುಗಳ
ಗಡಣವನು ಯಮರಾಜಧಾನಿಗೆ

1 ಭೀತಿ, ಖ. ಚ. 2 ವದುವೆ, ಚ. 3 ಗಧಲಿ ಸಾಪತ್ನರಲಿ, ಚ.

ನಡಿಸುವೆನು ನೀ ನೋಡುತಿರು ಸಾಕೆಂದು ನಿಮಿಷದಲಿ |
ಕೊಡು ನನಗೆ ನೇಮವನು ಭೀತಿಯ [1]
ಬಿಡು ಮನಸಿನಲಿ ಕಂದುಕುಂದನು
ಹಿಡಿಯದಿರು ಕುರುರಾಯ ಚಿತ್ತೈಸೆಂದನಾಕರ್ಣ || ೯

ವಿದುರಭೀಷ್ಮಾದಿಗಳು ನಿನ್ನಯ
ಸದನದೊಳಗುಂಡುಟ್ಟು ಪರರ
ಭ್ಯುದಯವನೆ ಪರಸುವರು ಮಾಡುವರೆಮ್ಮನವಗುಣಗಳ |
ಪದನ ನೀನೇ ಬಲ್ಲೆ ಸಾಕಿ
ನ್ನದಱ ಮಾತೇಕರಸ ನಮ್ಮಯ
ಕದನವನು ಚಿತ್ತೈಸು ಸಾಕಿನ್ನೆಂದನಾಕರ್ಣ || ೧೦

ಹಬ್ಬುಗೆಯ ಪದಿನಾಲ್ಕು ಲೋಕದ
ಮಬ್ಬುಗಳ ನೀಡಾಡಿ ಜಗದೊಳ [2]
ಗೊಬ್ಬನೇ ರವಿ ತೊಳಗಿ ಬೆಳಗುವ ವೋಲು ಪಾಂಡವರ |
ಕೊಬ್ಬುಗಳ ನಿಲಿಸುವೆನು ಧರೆಯೊಳ
ಗೊಬ್ಬನೇ ದುರ್ಯೋಧನನು ಮ
ತ್ತೊಬ್ಬರಿಲ್ಲೆಂದೆನಿಸಿ ತೋಱುವೆನೆಂದನಾಕರ್ಣ || ೧೧

ಕರ್ಣನಾಡಿದುದನೊಪ್ಪಿ ಶಕುನಿಯು ಸ್ವಾಭಿಪ್ರಾಯವನ್ನು ಹೇಳುವಿಕೆ.

ಸಹಜವೀನುಡಿ ಕರ್ಣನಾಡಿದು
ದಹುದು ಪಾಂಡವರೆಂಬವರು ಕಡು
ಸಹಸಿಗರು ಗೆಲಲರಿದು ಕುಹಕೋಪಾಯಮಾರ್ಗದಲಿ |
ಅಹಿತರನು ಗೆಲಲಹುದು ಪರಿಕರ
ಸಹಿತವರುಗಳ ನಿಮ್ಮ ಚಿತ್ತಕೆ
ಬಹೊಡೆ ನಮ್ಮಭಿಮತವ ಚಿತ್ತೈಸೆಂದನಾಶಕುನಿ || ೧೨

---

1 ಖತಿಯನು, ಖ. 2 ನಭದೊಳ, ಚ.

ಐಸುಮುಖ ವೀರೈದುಭುಜ ಪದಿ
ನೈದು ಕರ್ಣನ ವಿಗಡರುದ್ರನು
ಮೇದಿನಿಯು ಮೇಲೊಂದು ಶಿರಭುಜಯೆರಡನಳವಡಿಸಿ ।
ಆದಿಪುರುಷನು ಭೀಮವೇಷದಿ
ನೈದೆ ಜನಿಸಿದನಾತನಿದಿರೊಳು
ಕೈದುಕಾರನದಾವನೈ ಹೇಳೆಂದನಾಶಕುನಿ ॥ ೧೩

ಅರಸ ಕೇಳ್ಬಲುವಿದ್ಯೆಯಲಿ ಮೂ
ವರು ಕಣಾ ಸಾಮರ್ಥ್ಯ ಪುರುಷರು
ಧರೆಯೊಳೊಬ್ಬರಿಗೊಂದು ಗುಣ ಪಾರ್ಥಂಗೆ ಮೂಱುಗುಣ ।
ಭರಿತವಾಗಿಹುದಧಿಕವಾತನ
ಸರಿಸದಲಿ ಮೂಱೊಂತು ಜೀವಿಸೆ
ಮರಳಬಲ್ಲವನಾವನೈ ಹೇಳೆಂದನಾಶಕುನಿ ॥ ೧೪

ರಾಮಚಂದ್ರನ ಚರಣಯುಗನಿ
ಸ್ಸೀಮಭೀಷ್ಮಾಚಾರಿಯನ ಶಿರ
ವಾಮಹಾರಥದ್ರೋಣನದೆ ನಡುಗುವುದು ಕದನದಲಿ ।
ಸಾಮನಸ್ಯನು ನಿಷ್ಪ್ರಕಂಪನ
ನಾಮನರ್ಜುನದೇವನಿದಿರಲಿ
ಭೂಮಿಯೊಳು ಬಿಲುಗಾಱ [1] ದಾವವನೆಂದನಾಶಕುನಿ ॥ ೧೫

ಶತ್ರುಗಳ ಸಂಹರಿಸಿ ರಾಜ್ಯವ
ನೊತ್ತಿಯಾಳುವೆನೆಂಬ ಸಾಹಸ
ಸತ್ವಗುಣ ನಿಮಗಿಲ್ಲ ಪಾಂಡವರತುಳಭುಜಬಲರು ।
ಕೃತ್ರಿಮದ ಮುಖದಿಂದ ರಿಪುಗಳ
ಕಿತ್ತು ಹಾಯ್ಕೀ ನೆಲನನೇಕ
ಚ್ಛತ್ರದಲಿ ಸಲಹುವುದು ಮತವೆಂದೆಂದನಾಶಕುನಿ ॥ ೧೬

---

1 ಬಿಲ್ಲಾಳ, ಖ. ಚ.

ಸೋದರರುಗಳು ನೀವು ನಿಮ್ಮೊಳು
ಭೇದಮಂತ್ರವ ಮಾಡುವುದು ಮರಿ
ಯಾದೆಯೇ ನಾವ್ ನಿಮ್ಮಡಿಯುಲರಮನೆಯ ಸೇವಕರು |
ವಾದಿಸುವರಿತ್ತಂಡ ಸರಿ ನಮ
ಗಾದರೆಯು ಕಂಡುದ ನುಡಿಯಬೇ
ಕಾದರಿಸು ಮೇಣ್ಮಾಣು ನಿಚ್ಚ ಯುಜೆಂದನಾಶಕುನಿ ‖ ೧೭

ಪಕ್ಷವೆರಡೇ ಲೋಕದಲಿ ಪಿತ್ರ
ಪಕ್ಷ ಮೇಣಾಮಾತೃಪಕ್ಷ ವಿ
ಪಕ್ಷ ತಂದೆಯ ದೆಸೆ ಸಪಕ್ಷವು ತಾಯಿ ದೆಸೆಯವರು |
ತಕ್ಷಕನ ತೆಱನಂತೆ ನಿಮ್ಮನು
ಭಕ್ಷಿಸುವರಾವಂದದಲಿ ನೀ
ಶಿಕ್ಷಿಸುವುದೈ ಪಾಂಡುಪುತ್ರರನೆಂದನಾಶಕುನಿ ‖ ೧೮

ಮೊಳೆಯಲೇ ಮುಱುಟಿಸಲು ಬೇಹುದು
ಬೆಳದ [1] ಬಟಿಕದು ನಿನ್ನ ಹವಣೇ
ಯಿಳೆಯೊಳರ್ಧವನಿತ್ತು ಹಗೆಗಳ ಹೆಚ್ಚಿಸಿದ ಬಳಿಕ |
ಗೆಲುವನಾವನು ದೇವದಾನವ
ರೊಳಗೆ ಭೀಮಾರ್ಜುನರ ಕೈಮನ
ದಟಿವ [2] ನಱಿಯಾ ಕಂಡು ಕಾಣದೆ ಮರುಳಪರೆ ಯೆಂದ [3] ‖ ೧೯

ಧಾರುಣಿಯೊಳು ಪಿಪೀಲಿಕೆಯು ವಿ
ಸ್ತಾರದಲಿ ಮಾಡಿದ ಮನೆಯ ಕಾ
ಳೋರಗನು ಹೊಗುವಂತೆ ರಿಪುಕುಂತೀಕುಮಾರಕರು |
ವೈರದಲಿ ಸಪ್ತಾಂಗವನು ಕೈ
ಸೂಱೆಗೊಂಬರು ತಪ್ಪದಿದಕೆ ವಿ
ಚಾರವನು ಮಾಡುವುದು ಕಾಲದೊಳೆಂದನಾಶಕುನಿ ‖ ೨೦

---

1 ಬಲಿದ, ಖ ಚ. 2 ಕುಂತೀಸ ತರ ಕೈಮ್ಮೆಯುಳವ, ಖ.
3 ಭಾರ ವೈಮೇಲೆಂದನಾಶಕುನಿ, ಚ.

ಹಿಂದೆ ನೀನವರುಗಳ ನಾನಾ
ಚಂದದಲಿ ನೋಯಿಸಿದೆ ಮನದಲಿ
ಕಂದುಹಿಂಗದು ಕಷ್ಟವೃತ್ತಿಯನಾಚರಿಸುತಿಹರು ।
ಇಂದಿನಲಿ ನೀ ಪಾಂಡುಪುತ್ರರ
ನಂದಗೆಡಿಸದೆ ಬಿಟ್ಟೆಯಾದೊಡೆ
ಮುಂದೆ ಕೆಟ್ಟಿತು ರಾಜಕಾರಿಯ ವೆಂದನಾಶಕುನಿ ॥ ೭೧

ಇಱುಬಿನಲಿ ಸಿಕ್ಕಿರ್ದ ಹುಲಿಯನು
ಮುಱಿಯಲೊಲ್ಲದೆ [1] ತಳಪಟಕೆ ಬಿ
ಟ್ಟಱಿಯ ಬಹುದೇ ಕೊಂದು ಕೂಗದೆ ಬಿಡುವುದೇ ಬಟಕ ।
ಕಱುಬರಹ ಪಾಂಡವರಿಗೀಗಲೆ
ಹರುವ ನೆನೆ ಹೊಱಬಿದ್ದರಾದರೆ
ತಱಿದು ಬಿಸುಡದೆ ಬಿಡುವರೇ ಹೇಳೆಂದನಾಶಕುನಿ ॥ ೭೨

ಹರಿಹಯನು ವೃತ್ರಾಸುರನ ಸಂ
ಹರಿಸಲಱಿಯದೆ ಗರುವದಿಂದಿರು
ತಿರಲವನು ದಿನದಿನದೊಳಂಗುಲಮಾತ್ರವನು ಬಳೆದು ।
ಧರೆಯ ತುಂಬಲು ತನ್ನ ಸತ್ವದ
ನೆಱವಣಿಗೆಗೈದಿಸದೆ ನಾನಾ
ತೆಱದೊಳಾಯಸಗೊಳ್ಳನೇ ಹೇಳೆಂದನಾಶಕುನಿ ೭೩

ಅಡವಿಯಲಿ ಜನಿಸಿದರು ಬಳವಿಗೆ
ಯಡವಿಯೊಳಗಿನ್ನವರ ಬಾಳಿಕೆ
ಯಡವಿಯೇ ನೆಲೆಮನೆಯದಲ್ಲದೆ ಪಾಂಡುತನಯರಿಗೆ ।
ಪೊಡವಿಯೊಡೆತನ ಸಲ್ಲದವರನು
ಸುಡುವುದಲ್ಲದೆ ಬೇಱೆ ರಾಜ್ಯವ
ಕೊಡುವುದಾವೆಂದದಲಿ ಮತವಲ್ಲೆಂದನಾಶಕುನಿ ॥ ೭೪

---

1 ಲೀಯದೆ, ಖ. ಮುಱಿದು ಕಳೆಯದೆ, ಚ.

ತಿಮಿರವಡಗಿದ ಲೋಕ ಶಿಕ್ಷಾ
ಕ್ರಮಣವಡಗಿದ ದಂತಿ ಕರ್ಮ
ಭ್ರಮೆಗಳಡಗಿದ ಯೋಗಿ ರುಜೆಯುಡಗಿದ ನರೋತ್ತಮರು ।
ಹಿಮವಡಗಿದ ಸರೋಜದಂತಿಹು
ದಮಳಮತಿ ಕೇಳ್ ಹಗೆಗಳಡಗಿದೊ
ಡಮರಪದವೆನಿಸುವುದಲ್ಲೆ ಕೇಳೆಂದನಾಶಕುನಿ ॥ ೧೫

ಬಿಡದೆ ಸುಖದುಃಖದೊಳಗೊಂದನು
ಹಿಡಿದು ಸದ್ವ್ಯವಹಾರಮುಖದಲಿ
ನಡೆಯಲೊಂದಱ ನಷ್ಟವೊಂದಱ ತುಷ್ಟಿ ತನಗಹುದು ।
ಹಿಡಿದುದಿಹಪರವೆರಡಱೊಳಗಳ
ವಡಿಕೆ ತನಗಹುದಾವದೊಂದನು
ಬಿಡುವುದಲ್ಲದೆ ಬೇಱೆ ಮತವಲ್ಲೆಂದನಾಶಕುನಿ ॥ ೧೬

ಭಾವ ಮೈದುನನಣ್ಣ ತಮ್ಮನು
ಮಾವನಳಿಯನು ಪುತ್ರಮಿತ್ರರು
ಸೇವಕರು ಸಜ್ಜನರು ಸತ್ಪುರುಷರುಗಳಿವರೆಂದು ।
ಭಾವಿಸದಿರಾರುವನು ನಿನ್ನಯ
ಜೀವವುಳ್ಳನ್ನಬರ ನಿನ್ನಯ
ದೈವವೇ ಗತಿಯೆಂದು ನಂಬಿಹುದೆಂದನಾಶಕುನಿ ॥ ೧೭

ಶತ್ರುಶೇಷವದಲ್ಪವೆಂದುಱು
ಹುತ್ತ ಬರಲಾಗದು ಕಣಾ ಭೂ
ಪೋತ್ತಮರುಗಳು ವೈರಿರಾಯರ ವಂಶಬೀಜವನು ।
ಬಿತ್ತುವರೆ ನೇತ್ರಾವಳಿಯ ಹಾ [1]
ಟಿತ್ತು ಕಾರಾಗಾರದೊಳಗೆ ಛ
ಳತ್ರಸಹಿತನಶನದಿಂಧಿಕವ್ರತರ ಮಾಡೆಂದ ॥ ೧೮

1 ಕಿತ್ತುಬಿಸುಡುವುದಕ್ಷಿಗಳ ಮಿಾ, ಖ.

ವಿಷವನುಣುವೆಂದಳುಕದುಪಭೋ
ಗಿಸಲು ಕೊಲ್ಲದೆ ಬಿಡುವುದೇ ಕರ
ಗಸದ ನಡು ಬಡವಾದರೆಯು ಕೊಱೆದಿಕ್ಕದೇ ತರುವ ।
ಶಿಶುವಿವನು ಸಾಮಾನ್ಯಪುರುಷನು
ಹುಸಿ ಕಣಾ ಯೆನುತೀಕ್ಷಿಸಲು ರ
ಕ್ಕಸನಹನು ಮುಂದಕ್ಕೆ ತನಗವನೆಂದನಾಶಕುನಿ ॥ ೧೯

ಕಾಳವನು ಗೂಗೆಗಳು ನಿರ್ಜರ
ರೋಟಿಗವನು ದೈತ್ಯಸಿಕರ ತ
ಮಾಳಿ ರವಿರಶ್ಮಿಗಳನಾಬಲುನಿದ್ರೆಯನು ಚಕೋರ ।
ಕಾಳಭುಜಗನು ಗರುಡನಟಿವನು
ತಾಳದಂದದಿ ಪಾಂಡವರು ನಿ
ನ್ನೇಟಿಗೆಯು ಸ್ಥಿರಿಸರು ಚಿತ್ತ್ರೈಸೆಂದನಾಶಕುನಿ ॥ ೨೦

ಹಿಡಿವ ಫಣಿಯನು ಸುಡುವ ಸಿಡಿಲನು
ಹೊಡೆವ ಮಾರಿಯನಲೆವ ರುಜೆಯನು
ಮಡಿವ ದಿನವನು ಹಾನಿವೃದ್ಧಿಯ ಹೆಚ್ಚು ಕುಂದುಗಳ ।
ಜಡಿವ ಹಗೆಯನು ಕಾಲಕರ್ಮದ
ಗಡಣೆಯನು ಸುಖದುಃಖದುದಯದ
ಕಡೆಮೊದಲ ಕಾಣಿಸುವನಾವವನೆಂದನಾಶಕುನಿ ॥ ೨೧

ದೇವದಾನವರಂತೆ ಹದ್ದಿನ
ಹಾವಿನವೊಲತಿವೈರ ಬಂಧದ
ತಾವು ತವಣೆಯು ನೀರು ಭೇದಿಸುವಂತೆ ಭೇದಿಸುತ ।
ಕಾವವರ ಕಾವುತ್ತ ಕಂಟಕ
ಜೀವಿಗಳನಪಹರಿಸುವಂತ
ಭಾರ್ಗವಶುದ್ಧಿಯಲಿಳೆಯನಾಳುವುದೆಂದನಾಶಕುನಿ ॥ ೨೨

ಇನಿತು ಚಿಂತಿಸಲೇಕೆ ಕೌರವ
ಜನಪ ನಿಮ್ಮಡಿಗಳಿಗೆ ನಾನೊಂ
ದನುವ ಬಿನ್ನಹ ಮಾಡುವೆನು ಪಾಂಡವರ ನೆಳಲಿರಲು |
ನಿನಗೆ ರಾಜ್ಯವನಾಳ್ದ ಫಲಸಂ
ಜನಿಸಲಱಿಯದು ಕಾಲದಲಿ ನೀ
ನೆನೆವುದಿದಕೊಂದನುವನೆಂದು [1] ಕಳಿಂಗ ಕೈಮುಗಿದ || ೨೩

ಮೃತ್ಯುವಿನ ತಾಳಿಗೆಯೊಳಗ್ಗದ
ಶತ್ರುಗಳ ಸಾಮೀಪ್ಯದಲಿ ದು
ರ್ವೃತ್ತರೋಲಗದೊಳಗೆ ಸಿಂಹದ ಗುಹೆಯೊಳಹಿಪತಿಯ |
ಹುತ್ತಿನೊಳಗಿಹವೋಲು ಸಲೆ ಬಾ
ಳುತ್ತಲಂತಃಪುರದೊಳರಸಿಹು [2]
ದತ್ಯ [3] ಧಿಕಪೆಚ್ಚರಿಕೆ ಯಿರಬೇಕೆಂದನಾಶಕುನಿ || ೨೪

ಹಗೆಯು ಹೆಂಗಳ [4] ನರಮನೆಗಳೊಳು
ಹೊಗಿಸಲಾಗದು ತನಗವರು ಹೇ
ಳಿಗೆಯು ಹಾವಿನ ವೋಲು ಸುಖತರವಲ್ಲ ರಿಪುನೃಪರ |
ಹಗೆಯು ಮಕ್ಕಳ ದೆಸೆಯು ನೀನೋ
ಲಗಿಸುವರೆ ಬಾಹತ್ತರ ನಿಯೋ
ಗಿಗಳ ನಂಬುವುದುಚಿತವೇ ಹೇಳೆಂದನಾಶಕುನಿ || ೨೫

ದೈವ ಹೊಡೆದಂದದಲಿ ಬೆಱತು ಸ
ಭಾವಳಯದಲಿ ಗರ್ವವಿಭ್ರಮ
ಭಾವಭಾಷಿತರಾಗಿ ವೈಹಾಯಸವನೀಕ್ಷಿಸುತ |
ಹಾವಿನಂದದಲಿರದೆ ಹಾಸ್ಯರ

1 ನೆನೆಯುಪಾಯವನೊಂದನೆಂದು, ಖ. 2 ರಸಿಹ, ಖ.
3 ಲತ್ಯ, ಖ. 4 ಹೆಂಡಿರ, ಖ.

ಸಾವೆಲಂಬನ ವೊಪ್ಪುದಲ್ಲದ
ದಾವಪರಿಯಿಂದವರ ಜನ್ಮ ನಿರರ್ಥಕರವೆಂದ ‖ ೩೬

ಹೀನಮುಖ ಬಹುಮುಖ ಪರಾಙ್ಮುಖ
ದೀನಮುಖ ವಾಚಾಲಮುಖ ವೆ
ಜ್ಞಾನಮುಖವೆಂತರ್ಮುಖರು ಕಲಹದಲಿ ಕಾರ್ಯದಲಿ ।
ಆನರೇಂದ್ರನ ವರ್ತನಕೆ ದು
ಸ್ಥಾನವಾಗದೆ ಬಿಡದು ಸಂಶಯ
ವೇನಿದಕೆ ಕುರುರಾಯ ಚಿತ್ತೈಸೆಂದನಾಶಕುನಿ ‖ ೩೭

ಶಯನದಲಿ ವಹ್ನಿಯಲಿ ವೈಹಾ
ಳಿಯಲಿ ಬೇಂಟೆಯಲೂಟದಲಿ ಕೇ
ಳಿಯಲಿ ಸುರತಕ್ರೀಡೆ [1] ಯಲಿ ನಾನಾವಿನೋದದಲಿ [2] ।
ಜಯದ ಜೋಗೆಯಲೂರುಗಳ [3] ಮರ
ವೆಯಲಿ ಕುಪಕಸ್ತ್ರೀಯರುಗಳಲಿ
ಲಯವನೈದಿಸಬಹುದು ಚಿತ್ತೈಸೆಂದನಾಶಕುನಿ ‖ ೩೮

ರುಜೆಯನಲುಗುವ ರದನವ ದ್ರುಗು
ರಜವನನುಚಿತಜಾತಧೂಮ
ಧ್ವಜವನಾರುಣವಿದ್ಯೆಯನು ಗೃಹವಾಸಕುಂಡಲಿಯ ।
ವೃಜಿನವನು ಕಂಪಿತವ ವೈರಿ
ವ್ರಜವನುಳುಹುವನೆಗ್ಗನಂಬಿದು
ಸುಜನರಭಿಮತ ನಿನ್ನ ಮತವೇನೆಂದನಾಶಕುನಿ ‖ ೩೯

ಮಣಿದು ಕೂಪದ ಜೀವನವ ಕಡೆ
ಗಣಿಸದೇ ಘಟಯಂತ್ರವ್ಯೊಗರಿಪು
ಹಣಿಗಿದರೆ ಹರಿಣಂಗೆ ಗೆಲವೇ ಕಾರ್ಯಗತಿಯಱಿದು ।

1 ಸಲಿಲಕ್ರೀಡೆ, ಖ. 2 ವಿವಿಧಾಯುಧಂಗಳಲಿ, ಖ.
3 ಬೋಲಗದ, ಖ. ಚ.

ಮಣಿವುದಳುಕುವುದಾವಪರಿಯಿಂ
ದೆಣಿಸಿ ಮನದಲಿ ವೈರಿರಾಯರ
ಹಣಿದವಾಡುವುಪಾಯವಿದು ಕೇಳೆಂದನಾಶಕುನಿ ॥ ೪೦

ಅಹಿಯ ಬಾಧೆಯ ಬಲೆಗೆ ಸಿಲುಕಿದ
ಮಿಹಿರಬಿಂಬದ ಪೋಲು ಮಾಯಾ
ವಿಹರಣದ ವೀಧಿಯಲಿ ಸಿಕ್ಕಿದ ಜೀವರುಗಳಂತೆ ।
ಅಹಿತರುಪಟಲದೊಳು ಸಿಲುಕದೇ
ಕುಹಕರವದಿರ ಹರಿವ ನೆನೆ ಲೇ
ಸಹುದು ಕಾಲಕ್ಷೇಪವಿದಕೇನೆಂದನಾಶಕುನಿ ॥ ೪೧

ನಂಬುವರ ನೆಱೆ ನಂಬು ನಂಬದ
ಡಂಬಕರ ನಂಬದಿರು ಸಂಗರ
ವೆಂಬ ಮಾತಿಗೆ ಹಂಬಲಿಸಿ ಬೆಂಬೀಳ್ವ ಬಾಹಿರರ ।
ನಂಬಿರದೆ ಅರಿರಾಯಹನನವಿ
ಳಂಬನವ ಮಾಡದಿರು ರೋಷಾ
ಡಂಬರವ ರಚಿಸದಿರು ಬಹಿರಂಗದಲಿ ನೀನೆಂದ ॥ ೪೨

ಖೂಳನಹ ದಾತಾರನನು ದು
ರ್ಮೇಳನಹ ಮಿತ್ರನನು ತನಗನು
ಕೂಲೆಯಲ್ಲದ ಸತಿಯನಂತರ್ದಾಹಿಯಹ ನರನ ।
ವ್ಯಾಳಯುತವಹ ನಿಳಯವಿನಿತುವ
ಕಾಲದಲಿ ವರ್ಜಿಸುವುದಲ್ಲದೊ
ಡೊಟಿಗವು ಹಿರಿದಹುದು ಚಿತ್ತೈಸೆಂದನಾಶಕುನಿ ॥ ೪೩

ಎಲ್ಲರಿಂ ಬಹುಧನವ ಕೊಳು ನಿ
ನ್ನಲ್ಲಿ ಕಾಣಿಯ ಬಱಿದೆ ಸೋಲದಿ
ರಿಲ್ಲವೆನ್ನದೆ ನಡೆದು ಕಾಲಕ್ಷೇಪವನು ಮಾಡು ।

ಬಳ್ಳಿದನು ನಮಗೆಂಬ ನಯನುಡಿ
ಯೆಲ್ಲರಲಿ ಬೆಚ್ಚಂತೆ ರಿಪುಗಳ
ಗೆಲ್ಲಗೆಡುಹುವ ಮಂತ್ರವಿದು ಕೇಳೆಂದನಾಶಕುನಿ ॥ ೪೪

ಧನವನಿತ್ತಾದೊಡೆಯು ಸಹಭೋ
ಜನವನುಂಡಾದೊಡೆಯು ಮೋಹೋ ನಿಜ
ತನುಜೆಯರನಿತ್ತಾದೊಡೆಯು ಬಟ್ಟಿ ಸಂದು ಬೇಸರದೆ ।
ತನುವ ಬೆಳಸಿದಾದೊಡೆಯು ನೂ
ತನಗುಣವ ನುಡಿದಾದೊಡೆಯು ರಿಪು
ಜನಪತಿಯು ವಶ ಮಾಳ್ಪುದುಚಿತವಿದೆಂದನಾಶಕುನಿ ॥ ೪೫

ಕೋಶಪಾನಾದಿಗಳ ಮಾಡಿ ಮ
ಹೀಸುರರ ಮೇಲಾಯುಧಂಗಳ
ಸೂಸಿಡೈವವ ಮುಟ್ಟೆ ದಿವ್ಯಾಜ್ಞೆಗಣಲೊಡಬಡಿಸಿ ।
ಹೇಸದರಿಭೂಪಾಲರನು ನಿ
ಶ್ಶೇಷವೆನಿಸುವದಿಲ್ಲದಿರ್ದೊಡೆ
ಪ್ರೈಸರಿಸುವುದು ರಾಜಕಾರ್ಯವಿದೆಂದನಾಶಕುನಿ ॥ ೪೬

ನರಕವಿಲ್ಲದ ನರರು ನಾರಿಯು
ರರುಬೆಯಿಲ್ಲದ ಯತಿಗಳಸುರರ
ವಿಸರವಿಲ್ಲದ ಸುರರು ಮಾಯಾಪಾಶವನು ಹರಿದ ।
ಪರಮತತ್ತ್ವಜ್ಞಾನಿಯಂತಿಹ
ಧರಯೊಳಗೆ ಹಾಗರಸುಗಳು ಹಗೆ
ಹರಿದು ಹೋಗಲಸಾಧ್ಯವಹುದೇನುಂಟು ಹೇಳೆಂದ ॥ ೪೭

ಮಸಗೆ ಮೂಡಿದ ಹೊಲನು ದುಷ್ಟ
ಪ್ರಸರದೇಳಿಗೆ ಪಾಪಿಯೋಲಗ
ಹುಸಿಯು ಬಾಳುವೆ ಹುದುವಿನಾರಂಭದ ಫಲೋದಯವು ।

ನಸಿದು ಹೋಗದೆ ಲೋಕದೊಳಗವು
ಹೆಸರುವಡೆವವೆ ಹಗೆಯು ಹೆಚ್ಚುಗೆ
ಹಸನ ಕೊಡುವುದೆ ರಾಯ ಚಿತ್ತೈಸೆಂದನಾಶಕುನಿ ॥ ೪೮

ಜಾತಿಬಾವನ್ನದಲಿ ಸರ್ಪದ
ಭೀತಿ ಸತ್ಪುರುಷರಿಗೆ ದುರ್ಜನ
ಭೀತಿ ದೇವಾದ್ಯರಿಗೆ ದನುಜಾರಿಗಳ ಬಲುಭೀತಿ ।
ಜಾತಮಾತ್ರಕೆ ಮರಣಜನನದ
ಭೀತಿ ಬೆಂಬಿಡದಂತೆ ಗೋತ್ರಜ
ಭೀತಿ ಭೂಪಾಲರಿಗೆ ಹಿರಿದಹುದೆಂದನಾಶಕುನಿ ॥ ೪೯

ಕರಣಿಕರು ಕರಣಿಕರೊಡನೆ ಸಹ
ಚರರು ಸಹಚರರೊಡನೆ ಸಾಮಂ
ತರಲಿ ಸಾಮಂತರುಗಳಾ ಮಂತ್ರಿಯಲಿ ಮಂತ್ರಿಗಳು ।
ತರುಣಿಯರು ತರುಣಿಯರೊಡನೆ
ಪರಿಕರರು ಪರಿಕರರೊಡನೆ ಯಿರಲೊರ
ಸೊರಸು ಮಿಗೆ ಮಸೆವುದು ಕಣಾ ಭೂಭುಜನೆ ಕೇಳೆಂದ ॥ ೫೦

ವ್ಯಾಕುಲಿತ ವಿಪ್ರರ ವಿಪತಿಯು ದಿ
ವಾಕರನ ಲೋಕಾಯುತರ ರ
ತ್ನಾಕರನ ಲಾವಕರ ಹಿಸುಣರ ದಾಯಭಾಗಿಗಳ ।
ಶೋಕಿಗಳ ಮಾಯಾವಿಗಳ ದ
ರ್ವೀಕರನ ವಿನಿಯೋಗಿಗಳ ಸ
ರ್ಪೈಕಮತ್ಸರದೊಳಗೆ ಬದುಕುವನಾವ ಕೇಳೆಂದ ॥ ೫೧

ಮಂಜು ಮಹಿಯನು ಮುಸುಕುವಂತೆ ಧ
ನಂಜಯನು ಕಾನನವ ಸುಡುವಂ
ತಂಜಿಕೆಗಳುಮ್ಮಾಹವನು ಹೋ ಯೊರಸುವಂದದಲಿ ।

ರಂಜಕರು ಪಾಂಡವರು ನಿನ್ನನು
ಭಂಜಿಸುವರಾವಂಗದಲಿ ನವ
ಕುಂಜರನ ಕಾಲಾಟ ಸಿಂಹಕೆ ಸೇಱುವುದೆ ಯೆಂದ ॥ ೫೨

ದನಿಗೆ ನಡೆದೊಳಪೊಕ್ಕು ಮರಗೂ
ಡಿನಲಿ ಸಿಲುಕಿದ ಹುಲಿಯು ವೋಲ್ಕಾ
ನನದಿ ಬೀಸಿದ ಬಲೆಯೊಳಗೆ ಗಾನಕ್ಕೆ ಮನಸೋಲ್ದು ।
ಹನನವಱಿಯದ ಮೃಗದ ವೋಲಿರು
ಬಿನಲಿ ಕೆಡಹಿದ ಕರಿಯು ವೋಲ್ ರಿಪು
ಜನಪರಭ್ಯುದಯದ ವಿನಾಶವನೆಸಗಬೇಕೆಂದ ॥ ೫೩

ಶಕುನಿಯು ಉಪದೇಶಿಸಿ ಕಾರ್ಯವನ್ನು ಮಾಡೆಂದು
ಹೇಳುವಿಕೆ.

ಎಂದು ದುರ್ಯೋಧೆಗಳ ನಾನಾ
ಚಂದದಲಿ ಬೋಧಿಸಿ ಸುನೀತಿಯು
ನಂದಗೆಡಿಸಿ ತದೀಯುವಂಶಚ್ಛೇದದೇಟೆಗೆಯು [1] ।
ಬಂದು ಗೂಡಿ ಸುಯೋಧನಗೆ ತಾ
ನೊಂದನೆಣಿಸಿ ಕಳಂಗ ಲೋಕವ
ಕೊಂದನೈ ಜನಮೇಜಯುಕ್ಷಿತಿಪಾಲ ಕೇಳೆಂದ ॥ ೫೪

ಇನ್ನು ಸಂಶಯುಮಂತ್ರವೇನೆನೆ
ಸನ್ನೆಯಲಿ ಕುರುಭೂಪನೆಂದನು
ಯನ್ನ ನಿವಿನ್ನಾ ಮಂತ್ರಕೊಳ್ಳೆದು ಪಿತನು ನೇಮಿಸದೆ ।
ಬಿನ್ನಣವೆನಿದ ನುಡಿದು ಫಲವೇ
ನಿನ್ನೆನುತ ಕುಲಮೂಲಛೇದನು
ತನ್ನೊಳಗೆ ಧೃತಿಗುಂದುತಿರ್ದನು ಭೂಪ ಕೇಳೆಂದ ॥ ೫೫

[1] ಮಾರ್ಗವನು, ಖ ಚ.

ಈ ವರ್ತಮಾನವನ್ನು ಧೃತರಾಷ್ಟ್ರನಿಗೆ ಹೇಳಬೇಕೆಂದು ಕರ್ಣಾದಿಗಳು ಸೂಚಿಸುವಿಕೆ

ಬಳಿಕ ಕರ್ಣಾದಿಗಳು ತಮ್ಮಯ
ಯೊಳಗೆ ಯಾಲೋಚಿಸಿದರಾಗಲು
ಮುಱಿಹಿ ತೋಱುವ ಕುರುನೃಪನನಾ ಪಿತನ ವಂಚಿಸಿಯು ।
ನೆಲೆಯನಾತಂಗಱುಹ ಬೇಕೆಂ
ದೊಳಗೆ ಯಾಲೋಚಿಸಲು ಕೌರವ
ಬಳಿಕ ನುಡಿದನು ನಿಮ್ಮ ಯುಕ್ತಿಗೆ ನಾನು ಹೊಱಗೆಂದ ॥ ೫೬

ಎನಲು ನೀನಿಮ್ಮಯ್ಯನಾಜ್ಞೆಯೊ
ಳಿನಿತುವನು ನೀ ಮೀಱಿದಿರ್ದೊಡೆ
ಜನಪ ಕೆಡುವುದು ಕಾರ್ಯವೆಂಮಯ ಮಾತ ಕೆಡಿಸಿದೊಡೆ ।
ವಿನಯದಿಂದವೆ ನಾವು ಮಾಡಿದ
ಯನುಮತವ ನಾವೊಪ್ಪೆನೆಮ್ಮಯ
ಜನಕನನು ನಾ ಬಲ್ಲಪರಿಯಲಿ ತಿಳುಹಿ ನೋಡುವೆನು ॥ ೫೭

ಎನಲು ಹರುಷದಿ ಶಕುನಿ ತನ್ನಯ [1]
ಯನುಮತವ ಹೇಳಿದನು [2] ಕೌರವ
ಜನಪನಿರವಿಗೆ ಕೇಡ ನಿಶ್ಚೈಸಿದನು ದೃಢವಾಗಿ ।
ಜನಕನಲ್ಲಿಗೆ ನಡುವಿರುಳು ಬಂ
ದನುನಯದೊಳೀಮಾತ ತೆಗೆದೆಂ
ದನು ವೃಕೋದರನೂಟಿಗವನರ್ಜುನನ ಸಾಹಸವ ॥ ೫೮

ಪಾಂಡವರ ಮೇಲೆ ದುರ್ಯೋಧನನ ದೂರು.

ಅರಿಗಳುದುಭವವಿನ್ನು ಗಂಟಲ
ನರೆವುದೆಮ್ಮನು ನೂಱುಮಕ್ಕಳ
ನರಸ ಬಱಿದೇ ಹಡೆದು ಕೆಡಿಸಿದೆ ತಾಯ ಯೌವನವ ।

---

1 ಎನಲು ಕರ್ಣನು ಶಕುನಿ ತಮ್ಮೊ, ಖ.   2 ಹೇಳಿದರು, ಖ.

ಇರಲು ಭೀಮಾರ್ಜುನರು ಗಜಪುರ
ದರಸ ನಮ್ಮಿನಿಬರನು ದೇಶಾಂ
ತರಕೆ ನೇಮಿಸು ಜೀಯ ನೂಕದು ಭೀಮನೊಡನೆಮಗೆ ॥ ೫೯

ಮಗನ ಮಾತಿಗೆ ಧೃತರಾಷ್ಟ್ರನ ಅಸಮ್ಮತಿ.

ಅಕಟ ಮಗನೇ ಧರ್ಮಸುತ ಬಾ
ಧಕನೆ ಭೀಮಾರ್ಜುನರು ಮತಿಕಂ
ಟಕದೊಳಗಿರು ಮೀಱಿ ನಡೆಯರು ಧರ್ಮನಂದನನ।
ಸಕಲರಾಜ್ಯಕೆ ಪಾಂಡುಪ್ರತಿಪಾ
ಲಕನು ನಮ್ಮಲಿ ತಪ್ಪಿದನೆ ಬಿಡು
ವಿಕಳಮತಿಗಳ ಮಾತನೆಂದನು ಮಗಗೆ ಧೃತರಾಷ್ಟ್ರ ॥ ೬೦

ಆಗ ದುರ್ಯೋಧನನು ಕೋಪದಿಂದ ಮಾತನಾಡುವಿಕೆ.

ಬೊಪ್ಪ ಬಿನ್ನಹವವರ ಜನಕನು
ತಪ್ಪಿ ನಡೆಯನು ನಿಮಗೆ ನೀವಿ
ನ್ನೊಪ್ಪಿಸುವುದಾಪಾಂಡುಸುತರಿಗೆ ರಾಜ್ಯವೈಭವವ।
ಅಪ್ಪುದಿಳೆ ಧರ್ಮಜಗೆ ತರುವಾ
ಯಪ್ಪುದಾವಿಧಿ [1] ಯಲ್ಲಿ ಸಂತತಿ
ಯಪ್ಪುದವರಿಗೆ ಸಲಲಿ ನೆಲನಿದು ಹೊಲ್ಲ ಯೇನೆಂದ ॥ ೬೧

ಜನಕ ಸುಖದಲಿ ನಿಮ್ಮ ತಮ್ಮನ
ತನುಜರಲಿ ನೀವ್ ರಾಜ್ಯಮಾಡುವು
ವನುಗುಣವಲೇ ಬೀಳುಕೊಡುವುದು ನಮ್ಮ ನೂರ್ವರನು।
ಜನಪರುಂಟೋಲೈಸಿ ಕೊಂಬವ
ರೆನಗಿದೇ ಖಂಡೆಯದ ಸಿರಿ ಕರೆ
ಜನನಿಯುನು ಬೀಪ್ಕೊಂಬೆವಿನ್ನೇನೆನುತ ನಿಂದಿರ್ದ ॥ ೬೨

---

1 ಯುತ್ತಪ್ಪದದು ವಿಧಿ, ಖ ಜ.

ಧೃತರಾಷ್ಟ್ರನು ಮಗನ ಮಾತನ್ನು ಲಾಲಿಸುವಿಕೆ

ಎಲೆ ಮಗನೆ ಯೆನ್ನಾಣೆ ಬಾ ಕುರು
ಕುಲತಿಲಕ ನೀ ಹೋಗಲೆನ್ನೊಡ
ಲುರಿವುದೇ ಮಃ ಯಾನೆ ಬಾರೈ ಕಂದ ಬಾರೆನುತ |
ಸೆಳೆದು ಬಿಗಿದಪ್ಪಿದನು ಕಂಬನಿ
ದುಳುಕಿದನು ಹೇಳಿನ್ನು ಮೇಲಣ
ಬಳಿಕೆಯನು ರಿಪುರಾಜಕಾರ್ಯಕೆ ಬುದ್ಧಿ ಯೇನೆಂದ || ೬೩

ಆಗ ಉಪಾಯವನ್ನು ದುರ್ಯೋಧನನು ಹೇಳುವಿಕೆ.

ಆವ ಪರಿಯಲಿ ವೈರಿಘಟಕುಲ
ಕಾವುಗೆಯನಿಡಿಸುವಿರಿ ನಿಮ್ಮೊಳ
ಗಾವು ಹೊಱಗೇ ಮಗನೆ ಸೊಗಸೆನೆ ನಿಮ್ಮ ವೈಭವಕೆ |
ಸಾವರಾವಂದದಲಿ ಮಿಗೆ ಸಂ
ಭಾವಿಸುವುದಾತೆಱನ ನೀ ಹೇ
ಳಾವು ಕೇಳುವೆವೆಂದು ನುಡಿದನು ಮಗಗೆ ಧೃತರಾಷ್ಟ್ರ || ೬೪

ನೀರ ವಿಷವಿಕ್ಕಿದೆವು ಕಿಚ್ಚಿನ
ಭಾರವಣೆ ಯೇನಹುದೊ ಪಥ್ಯದ
ಸಾರತರ ವೊದಗಿದರೆ ಹೋಗಲಿ ನಮ್ಮ ಹಗೆ ಹರಿದು |
ಧಾರುಣಿಯ ಸಿರಿಯವರಿಗತಿವಿ
ಸ್ತಾರ ನೆರೆಯಲಿ ಜೀಯ ಜೂಜಿನ
ಬಾರುಗುತ್ತಿದು ನಿಮ್ಮ ಚಿತ್ತಕೆ ಒಪೊಡೆ ಮಾಡೆಂದ [1] || ೬೫

ಕರೆಸಿ ಪಾಂಡುಕುಮಾರಕರ ನೀ
ಧರೆಯ ಹಸುಗೆಯ ಮಾಡಿ ಕೊಡು ಕರಿ
ತುರಗಭಂಡಾರವನು ಸಹ ದಾಯಾದವಿಷಯದಲಿ [2] |

---

1 ಮಾಡುವೆವು, ಚ. 2 ರಾದಿಗಳ ದಾಯಾದ್ಯಭಾಗಯಲಿ, ಕ.

ಇರವನವರಿಗೆ ವಾರಣಾವತ
ಪುರದೊಳಗೆ ಪರುಠವಿಸಿ ಕೊಡು ನಾ
ನುರುಹಿ ತೋಱುವೆ [1] ಬಳಿಕ ಲಾಕ್ಷಾಭವನದಹನದಲಿ [2] ॥ ೬೬

ಮಗನ ಆಲೋಚನೆಗೆ ತಂದೆಯು ಸಮ್ಮತಿ.

ಅಹುದು ಮಗನೇ ಮಂತ್ರವಿದು ಮತ
ವಹುದು ನಮಗೀಭೀಷ್ಮವಿದುರರು
ಕುಹಕಿಗಳು ಕೃತಭಿನ್ನವಾದರೆ ಭಾರವೆಮು ಮೇಲೆ ।
ಗಹನಗತಿಯಲಿ ಗೂಢಚರರಸ
ನ್ನಿಹಿತಕರ್ಮಕಳಾಪದಲಿ ರಿಪು
ವಹನಸಿದ್ಧಿಯ ನೆನೆವುದೆಂದನು ಮಗಗೆ ಧೃತರಾಷ್ಟ್ರ ॥ ೬೭

ಪುರೋಚನನನ್ನು ವಾರಣಾವತಕ್ಕೆ ಕಳುಹಿಸುವಿಕೆ.

ಜನಕನನು ಬೀಳ್ಕೊಂಡು ಕೌರವ
ಜನಪ ತನ್ನರಮನೆಯ ಸಚಿವರೊ
ಳನುಪಮಿತವಿಶ್ವಾಸಸೂಚಕನನು ಪುರೋಚನನ ।
ನೆನೆದ ಕೌರವರಾಜಕಾರ್ಯದ
ಘನವನಱುಹಿದನವರೊಡನೆ ಸಾ [3]
ಧನವ ಸೂಚಿಸಿ ಜಡಿತೆಯಲಿ [4] ಕಳುಹಿದನು ಗುಪ್ತದಲಿ ॥ ೬೮

ಆಪುರೋಚನನೆಂಬನಿಮ್ಮಡಿ
ಪಾಪಕರ್ಮನು ಕುರುಪತಿಗೆ ಬಳಿ
ಕಾಪುರಾಂತರದಿಂದ ಬಂದನು ಹಲವುಪಯಣದಲಿ [5] ।

---

1 ಸುಡುವೆನು, ಚ. 2 ರಚನೆಯಲಿ, ಚ.
3 ಸಮಗ್ರಧನಸಾ, ಚ. 4 ಜೋಡಿಸಿಕೆನಟ್ಟು, ಡ.
5 ವಾರಣಾವತಿಗೆ, ಚ.

ಪುರೋಚನನ ವಿಚಿತ್ರ ಭವನ ನಿರ್ಮಾಣ.

ಆಪುರದ ಜನವಱಿಯದಂತಿರೆ
ಕಾಪುರುಷನಳವಡಿಸಿದನು ನಸು
ದೀಪ ತಾಕಿದೊಡೇಕರೂಪಹ ರಾಜಮಂದಿರವ ॥ ೧೯

ನಿಗಮಸಂಸ್ಥಿತವಾಸ್ತುರಚನಾ
ದಿಗಳನಾಯವ್ಯಯದ ತಾರಾ
ಳಿಗಳ ರಾಶಿ ಗ್ರಹದ ಬಲವಿಪರೀತಯೋಗದಲಿ ।
ಹಗಲು ತೀರಲು ತಳಿತ ಕೈದೀ
ವಿಗೆಯು ಪಂತಿಯು ಹೊಳಪಿನಲಿ ಕೇ
ಣಿಗರು ಕೃತ್ರಿಮರಚನೆಯಲಿ ರೂಹಿಸಿದರರಮನೆಯ ॥ ೨೦

ಮನೆಯ ಮಾಡುವ ಮೊದಲಲೇ ತಾ
ವಿನುತಪಂಚಕದಗ್ನಿಯಲಿ ಬಳಿ
ಕನುಕರಿಸಿದನು ಖಳಪುರೋಚನನೊಡೆಯನಾಜ್ಞೆಯಲಿ ।
ದಿನ ಸವೆಯಲಿನ್ನೊಱಕಾಯಿತು
ಜನಪ ಕೇಳ್ಕೈ ಪತಿತಯೋಗದ
ಲನಲನಾಹುತಿಯಾಗಿ ಮಾಡಿದನಾಪುರೋಚನನು । ೨೧

ಅರಗಿನಲಿ ಭಿತ್ತಿಗಳ ನವಸ
ಜ್ಜರಸ ಗುಡಮಿಶ್ರಿತದ ನೆಲೆಯು
ಪ್ಪರಿಗೆಗಳನವರಲಿ ಕವಾಟಸ್ತಂಭವೇದಿಗಳ ।
ವಿರಚಿತದ ವರಸೌಧಭದ್ರಾ
ಸ್ತರಣನಂದ್ಯಾವರ್ತದಲಿ ಪರಿ
ಪರಿಯ ಬಿನ್ನಾಣದಲಿ ಮಿಗೆ ಮಾಡಿಸಿದನರಮನೆಯ ॥ ೨೨

ಹಿರಿಯಭವನದ ಸುತ್ತುವಳಯದ
ಮುಱವಿನಲಿ ಮನೆಮನೆಗಳೊಳಮಂ
ದಿರನಿಕಾಯದ ಬಾಗಿಲೊಂದೇ ದ್ವಾರವೆಸೆದಿಹುದು ।

ಇರುವು ತನ್ನದು ಬಾಗಿಲೆಲ್ಲವ
ಹೊಱಗೆ ಮುದ್ರಿಸಿ ಕಿಚ್ಚು ಚುಚ್ಚುವ
ಪರುಠವಣೆಯಲಿ ಖಳಪುರೋಚನನಂದು ನಿರ್ಮಿಸಿದ ॥ ೨೩

ಕುಂತೀಪುತ್ರರನ್ನು ಕರೆಕಳುಹಿಸುವಿಕೆ.

ಧರಣಿಪತಿಗಱುಹಿಸಲು ಹಸ್ತಿನ
ಪುರಕೆ ದೂತರ ಕಳುಹೆ ಕೌರವ
ಧರಣಿಪತಿ ಧೃತರಾಷ್ಟ್ರನಲ್ಲಿಗೆ ಬಂದು ಬಿನ್ನವಿಸೆ ।
ವರುಷವಾಯಿತು ನೀವು ಕಳುಹಿದ
ಹಿರಿಯ ಕೆಲಸದಲಾಪುರೋಚನ
ಪರುಠವಿಸಿ ಬರಹೇಳಿ ಕಳುಹಿದ ಕುಂತಿಪುತ್ರರನು ॥ ೨೪

ವಿದುರನು ರಹಸ್ಯಮಾರ್ಗವನ್ನು ಮಾಡಿಸುವಿಕೆ.

ಜನಪ ಕೇಳೈ ವಿದುರನೊಬ್ಬಗೆ
ಕನಕರತ್ನವನೀಯಲೊಬ್ಬನ
ದನುಕರಿಸಿ ಮಾಡಿದನು ಯೋಜನವೆರಡಱಳತೆಯಲಿ ।
ಘನತರದ ಬಿಲವೊಂದ ಕೊಱೆದನು
ಕನಕವರ್ಮನು ಕನಕರತ್ನಾ
ದ್ಯನುಪಮಸ್ಥಾಪನೆಯ ಭೂಮಿಯಿದೆನಲು ನೋಡುವೊಡೆ ॥ ೨೫

ಧರ್ಮಾದಿಗಳಿಗೆ ಧೃತರಾಷ್ಟ್ರಕೃತೋಪದೇಶ.

ಧರಣಿಪತಿ ಕೇಳಿತ್ತ ಹಸ್ತಿನ
ಪುರದೊಳಗೆ ಕುಂತೀಕುಮಾರರ
ಕರೆಸಿ ಕಟ್ಟೇಕಾಂತದಲಿ ಧೃತರಾಷ್ಟ್ರ ಭೂಪಾಲ ।

---

* ಘನತರದ ಶೈಲಗಳ ಕೊಱೆವುತ ಕನಕವರ್ಮನ ಕನ್ನಖರು ತಿದೆ ಮಹಿಯ ಮಧ್ಯಕೆ ನೆಲನ ಕೊಱೆದನು ಪಥವ ಗುಪಿತದೊಳು, * ಕ. ಜ.

ಬೆಱಗು ಬಿನ್ನಾಣದಲಿ ಮಕ್ಕಳ
ಮರುಳು ಮಾಡಿದನೇನ ಹೇೞುವೆ
ನುರಿವನೆಯ ಬೀಡಾರದಲಿ ಬಿಡಸಲಿಕೆ ಪಾಂಡವರ ॥ ೨೬

ದುರುಳ ದುರ್ಯೋಧನನು [1] ನೀಚತಿ
ಗರುವರವದಿರು ಪಾಪಕರ್ಮರು
ಪರಮಧಾರ್ಮಿಕ ನೀನು ತನ್ನವದಿರು ಕುಮಂತ್ರಿಗಳು ।
ಎರಳೆ ತೋಳನ ಸಾದು ಪುಣ್ಯರ
ನೆರವಿಗದುವಾಬಗೆಯು [2] ಸೇರುವೆ
ಯರಸ ನಿನ್ನೊಡನೆನ್ನ ಕುನ್ನಿಗಳೆಂದು ಬಿಸುಸುಯ್ದ ॥ ೨೭

ತಂದೆ ಯಿಲ್ಲದೆ ಹಿತವರೆಮಗಾ [3]
ರೆಂದು ನೀವಿಹಿರೆನ್ನ [4] ಮಕ್ಕಳು
ಕೊಂದು ಹಿಂಡೆಯು ಕೊಳನುಂಬರು ಹೇಸುವವರಲ್ಲ ।
ಇಂದು ನಿಮಗವರಿಂದಲುಪಹತಿ
ಬಂದುದಾದೊಡೆ ತನ್ನ ತಲೆಯಲಿ
ನಿಂದೆ ಹೊಱುವುದು ಮುನ್ನಬಲ್ಲೆನು ಕಂದ ಕೇಳೆಂದ ॥ ೨೮

ತಾತ ಕೆಡುವಿರಿ ನೀವು ನಿಮಗ
ಖ್ಯಾತಿ ಕೌರವರೆಂಬವರು ದು
ರ್ನೀತಿಕಾರರು ಭೀಷ್ಮವಿದುರರು ಭೀತರವದಿರಿಗೆ ।
ನೀತಿಸಮ್ಮತವಾಗಿ ಚಿತ್ತದೊ
ಳಾತುದೇನದನೆನ್ನ ಚಿತ್ತದಿ
ಭೀತಿ ಬೇಡೆಂದರಸ ಹಿಡಿದನು ಧರ್ಮಜನ ಕರವ ॥ ೨೯

---

1 ದುರುಳರೀಕೌರವರು, ಚ. ಛ. 2 ಸುಣ್ಣದನೆರವಿಗದು ಪಾವಗೆಯು, ಚ.
3 ತಂದೆಯಿಲ್ಲದ ನಿಮಗೆ ಹಿತರಾ, ಖ 4 ರೆಂದು ಮಱುಗುವೆನೆನ್ನ, ಖ.

ಧೃತರಾಷ್ಟ್ರನ ಮಾತಿಗೆ ಧರ್ಮರಾಯನ ಒಪ್ಪಿತ.

ಬೇಱೆ ಮತವೇನೆಮಗೆ ಲೋಕದ
ದೂಱು ನಿಮ್ಮದು ನೀವು ಬೊಪ್ಪನ
ನೂಱುಮಡಿಗೊಳ್ಳದರು ಬೇಱೆಮಗಿನ್ನು ಹಿತರುಂಟೆ ।
ಬೇಱಿರಿಸಿ ಕೂಡಿರಿಸಿ ನೀವೇ
ತೋಱಿದುದೆ ಪಥ ನಿಮ್ಮ ನೇಮವ
ಮೀಱಬಲ್ಲನೆ ಯೆಂದು ಧರ್ಮಜ ನುಡಿದನರಸಂಗೆ ॥ ೮೦

ಎಱೆಯು ಯೆಕ್ಕೆಯೊ ತಳಿತಮೆಕ್ಕೆಯೊ
ಹುಱಿಯು ಬಲೆಯೋ ರಾಗಸನ್ನೆಯೊ
ಸರಿಯು ಗೋರೆಯೊ ಠಕ್ಕಿನುಂಡೆಯೊ ಸವಿಯು ಚಿತ್ರಕವೋ ।
ಅರಸನಂಕೆಯು ಮನದ ಬೆಂಕಿಯು
ಹೊಱವೆ ಬಯಕೆಯುನೀಸಮಂಜಸ
ತರದ ಸಾತ್ವಿಕರೆತ್ತ ಬಲ್ಲರು ಭೂಪ ಕೇಳೆಂದ ॥ ೮೧

ಕಂದ ಮನ ಮುನಿಸಿಲ್ಲವೇ ನಾ
ವೆಂದ ನುಡಿಗೊಡಬಡುವಿರಾದೊಡೆ
ಮುಂದೆ ಪುರವಿದೆ ವಾರಣಾವತವಿಲ್ಲಿಗೈವತ್ತು ।
ಸಂದನಾಡು ಸಮಸ್ತವಸ್ತುಗ
ಳಿಂದ ಪೂರಿತಹಸ್ತಿನಾಪುರ
ದಿಂದ ಘನವದು ರಾಜಧಾನಿಸ್ಥಾನ ನಿಮಗೆಂದ ॥ ೮೨

ಐ ಹಸಾದ ಭವತ್ಕೃಪಾಸ
ನ್ನಾಹವೇ ಸಾಮ್ರಾಜ್ಯಪದವಿಯ
ನೂಹಿಸಿದಿರಾಸ್ಥಿತಿಯೊಳಡಗಿಹೆವೆಂದು ವಿನಯದಲಿ ।
ಗಾಹುಗತಕವನಱಿಯದವರು
ತ್ಸಾಹದಲಿ ಕೈಕೊಂಡು ಭೀಷ್ಮಗೆ
ಬೇಹ ವಿದುರದ್ರೋಣಮುಖ್ಯರಿಗಱುಹಿದರು ಹದನ ॥ ೮೩

ಧಾರುಣೀಪತಿ ರತ್ನಮಯಭೂ
ದಾರಸಹಿತರಥಾಶ್ವಗಜಪರಿ
ವಾರವನು ಮಾಡಿದನು ಹಸುಗೆಯನೆರಡುಭಾಗದಲಿ ।
ಕೌರವರಿಗೊಂದಿವರಿಗೊಂದೆನ
ಲೋರಣದಲಳವಡಿಸಿ ಬಹುವಿ
ಸ್ತಾರದಲಿ ಭೀಷ್ಮಾದ್ಯರಹುದೆನಲಿವರ ಮನ್ನಿಸಿದ ॥ ೮-೪

ಇವರು ಶುಭದಿನ ಶುಭಮುಹೂರ್ತ
ಪ್ರವರದಲಿ ಹೊಱವಂಟರಾಜನ
ನಿವಹ ಮುಱುಗಿತರಣ್ಯವಾಯಿತು ನಗರವಿಂದಿನ್ನು ।
ಇವರ ಕಳುಹುತ ಬಂದರಾಕೌ
ರವರು ನಿಂದರು ಭೀಷ್ಮಕಳಶೋ
ದ್ಭವರು ಸುತರಿಗೆ ಬುದ್ಧಿ ಹೇಳಿಯೆ ಮರಳಿದರು ಪುರಕೆ ॥ ೮-೫

ವಿದುರನೊಡನೈತರುತ ಸಂಕೇ
ತದಲಿ ಸೂಚಿಸಿ ಮರಳಿದನು ನೃಪ
ಸುದತಿಯರು ಗಾಂಧಾರಿಮೊದಲಾದಖಿಳನಾರಿಯರು ।
ಮುದದ ಮುಱುವಿನೊಳವರ ತೆಗೆದ
ಪ್ಪಿದರು ಭೂಪತಿಸಹಿತ ಕಡು ಶೋ
ಕದಲಿ ಕಳುಹಿಸಿ ಕೊಂಡು ಬಂದರು ಹಸ್ತಿನಾಪುರಕೆ ॥ ೮-೬

ಅರಸ ಕೇಳ್ಯ ಹಸ್ತಿನಾಪುರ
ವರವ ಹೊಱವಡುವಾ ಮುಹೂರ್ತಕೆ [1]
ವರುಷವಿಪ್ಪತ್ತೊಂಭತಾಯಿತು [2] ಧರ್ಮಪುತ್ರಂಗೆ ।
ವರುಷ ಹದಿಮೂಱಱಲಿ ಹಸ್ತಿನ
ಪುರದೊಳಿರ್ದರು ಹಿಂದೆ ಷೋಡಶ
ವರುಷ ವನದೊಳಗಿಂತು ಲೆಕ್ಕವ ನೋಡಿಕೊಳ್ಳಂದ ॥ ೮-೭

1 ವಡುವಂದಿಗಾದುವು; ಖ. 2 ವರುಷವಂದೇಕೋನತ್ರಿಂಶತಿ, ಖ.

ಪಾಂಡವರಿಗೆ ವಾರಣಾವತಪ್ರವೇಶ.

ಬಂದರೈವರು ಕುಂತಿಸಹಿತಾ
ನಂದದಲಿ ವರವಾರಣಾವತ
ಕಂಡು ಪುರಜನ ಕೂಡಿ ಕನ್ನಡಿಕಳಸವಿಭವದಲಿ ।
ಬಂದು ತಾವಿದಿರಾಗಿ ಕುಂತೀ
ನಂದನರ ಹೊಗಿಸಿದರು ಪಟ್ಟಣ
ವೆಂದು ಮೆಱೆದುದು ಕೂಡೆ ಗುಡಿತೋರಣದ ರಚನೆಯಲಿ ॥ ೮೮

ಬೀಡುಗಾಣಿಕೆ ಯಿಕ್ಕಿ[1] ಕಂಡನು
ನಾಡೆ ಕಾಣಿಸಿಕೊಂಡನೀತನು
ಕೂಡೆ ಸಂದನು ಹಾಸುಹೊಕ್ಕಾಗಿವರ ಮನವಱಿದು ।
ನೋಡಿದನು ಯಮನಂದನನು ಮನ
ಮಾಡಿದಂದವನರಗಿನರಮನೆ
ಗೂಡಿನಲಿ ಬೇಳುವೆಯ ನೆನೆದರೆ ಬೊಪ್ಪನವರೆಂದ ॥ ೮೯

ಸಮಿಧೆಗಳು ನಾವ್ ನಾಲ್ವರೈಯ್ಯನ
ರಮಣಿ ಯಾಹುತಿ ಭೀಮನೇ ಪಶು
ಕುಮತಿ ಕಟ್ಟಿಸಿದರಗಿನರಮನೆ ಯಜ್ಞ[2] ಕುಂಡವಿದು ।
ಎಮಗೆ ಸಂಶಯವಿಲ್ಲ ರಾಜೋ
ತ್ತಮನೊ ದುರ್ಯೋಧನನೊ ದೀಕ್ಷಾ
ಕ್ರಮವ ಧರಿಸಿದನಾವನೆಂದನು ನಗುತ ಯಮಸೂನು ॥ ೯೦

ಪಾಂಡವರು ಗುಪ್ತಮಾರ್ಗವನ್ನು ಕನಕವರ್ಮನಿಂದ ತಿಳಿದುದು.

ಜನಪ ಕೇಳ್ಳೈ ವಿದುರನಟ್ಟಿದ
ಕನಕ ಬಂದನು ತಮ್ಮ ಸೆಜ್ಜೆಯ
ಮನೆಯೊಳತಿಗುಪ್ತದಲಿ ನೆಲದೊಳು ಸವೆಸಿದನು ಪಥವ ।

---

1 ಯಿತ್ತು, ಚ. 2 ಯಗ್ನಿ, ಚ.

ಅನುದಿವಸ ವೀಬಾಹಿರಗನು ಕಿ
ಚ್ಚಿನಲಿ ಚುಚ್ಚುವ ಸಂದುಕಟ್ಟನು
ನೆನೆಯುತಿರ್ದನು ಖಳಪುರೋಚನನೊಡೆಯನಾಜ್ಞೆಯಲಿ ॥ ೯೦

ಒಂದುದಿನ ಹಬ್ಬದಲಿ ಭೂಸುರ
ವೃಂದ ವುಂಡುದು [1] ಪಂಚಪುತ್ರಿಕೆ
ಯೆಂದು ಬೇಡಿತಿಯೊಬ್ಬಳಿದ್ದಳು ಸುತರು ಸಹಿತಲ್ಲಿ ।
ಅಂದಿನಿರುಳು ಪುರೋಚನನು ತಾ
ನೊಂದ ನೆನೆದರೆ ದೈವಗತಿ ಬೇ
ಱೊಂದು ನೆನೆದುದು ಕೇಳು ಜನಮೇಜಯಮಹೀಪಾಲ ॥ ೯೧

ಅರಗಿನ ಮನೆಗೆ ಬೆಂಕಿಯನ್ನು ಹಚ್ಚಿ ಬಿಲಮಾರ್ಗದಿಂದ ಪ್ರಯಾಣ ಮಾಡಿದುದು.

ಅವನು ನಿದ್ರೆಯೊಳಱಿಯದಿರಲಾ
ಭವನಮುಖದಲಿ ಕಿಚ್ಚನೊಟ್ಟಿಸೆ
ಪವನಸುತ ಸಹಿತಿವರು ಹಾಯ್ದರು ಬಿಲದ ಮಾರ್ಗದಲಿ ।
ಅವನು ಬೆಂದನು ಮುನ್ನ ಬಳಿಕಾ
ಭವನಪಂಕ್ತಿಗಳುರಿದು ಕರಗಿದ
ವವನಿಯಲಿ ಹೊನಲಾಯ್ತು ಪುರಜನವೃದೆ ಬೆಱಗಾಗೆ ॥ ೯೨

ಕಂಡರಾವರಪುರಜನಂಗಳು
ತಂಡತಂಡದಿ ಬಂದು ನೋಡಲಿ
ಕಂಡಲೆದು ಪುರಿ ಹೊಯ್ಯಲರಗಿನ ಮಾಡ ಬೆಂದುದಲೆ ।
ಕಂಡು ಪುರಜನ ಬೞಲುತಾಗೋ
ಱಂಡೆಕೊಳುತಲಿ ಪಾಂಡುಪುತ್ರರ
ತಂಡ ಹೋಯ್ತೇ ವಾರಣಾವತಪುರದೊಳಕಟೆನುತ ॥ ೯೩

---

1 ದಣಿದುದು, ಖ.

ಅಕಟ ಪಾಂಡವರಳಿದರೇ ಕೌ
ಳಿಕದಿ ಕೌರವರಿಱಿದರೇ ಮತಿ
ವಿಕಳರಿವದಿರು ಬೆಂದು ಹೋದರು ಧರ್ಮದಲಿ ನಡೆದು |
ಪ್ರಕಟಪಾಪರಿಗಾಯ್ತು ಸಾಂಬ್ರಾ
ಜ್ಯಕವು ಧರ್ಮಾತ್ಮರಿಗದೆಂತೋ [1]
ವಿಕಳ ಕೇಸುರಿ ರಾಜ್ಯವೆಂದುದು ಮಱುಗಿ ಪೌರಜನ [2] || ೯೫

ಮುನ್ನ ಬೆಂದನಲಾ ಪುರೋಚನ
ಕುನ್ನಿಯುದು ಲೇಸಾಯ್ತು ದಹನವಿ
ಪನ್ನರಾದರೆ ಕುಂತಿಸಹಿತಾಪಾಂಡುನಂದನರು |
ಇನ್ನು ಸುಡು ಸುಡು ಧರ್ಮಸಂಪ್ರತಿ
ಪನ್ನಗುಣದಾಚರಣೆಯು ಪರಿ ಸಂ
ಪನ್ನತೆಯುನೆಂದೊಱಲಿ ಮಱುಗಿತು ನಿಖಿಳಜನನಿಕರ || ೯೬

ಬಗೆದುದೇ ಬೇಳಂಬ ಹಸ್ತಿನ
ನಗರದತ್ತಲು ಪೌರಜನಮನ
ಪುಗಿದುದು ಗಡಾ [3] ಶೋಕಮಯಸಾಗರದ ಮಧ್ಯವಲಿ |
ಹೊಗೆದುದಾನನ ಭೀಷ್ಮವಿದುರಾ
ದಿಗಳಿಗಾಧೃತರಾಷ್ಟ್ರಸುತನಿಗೆ
ದುಗುಡದಡ್ಡಿಯು ಹರ್ಷಸಸಿ ಹೊಕ್ಕುದು [4] ಮುಖಾಂಬುಜವ || ೯೭

ಬೆಂದುಹೋದರೆಂದು ಪಾಂಡವರಿಗೆ ಉತ್ತರಕ್ರಿಯೆ.

ಬಂದುದಾ ಸುರನದಿಗೆ ಕೌರವ
ವೃಂದ ಪುರಜನ ಸಹಿತ ಶೋಕಿಸಿ
ಮಿಂದು ಗಂಗಾತೀರದಲಿ ಬಱಿಕೂರ್ಧ್ವಕ್ರಿಯೆಗಳನು |

---

1 ಗೀಪರಿ, ಚ. 2 ವಿಕಟತೆಯು ಸುರರಾಜ್ಯವೆಂದುದು ಪೌರಜನ ಮಱುಗಿ, ಚ.
3 ಉಗಿದು ಬಿದ್ದುದು, ಚ. 4 ಸಿರಿಹೊಕ್ಕಳು, ಚ.

ಸಂಪ ವಿಧಿಯಲಿ ಮಾಡಿ ಪರವಾ
ನಂದ ಮಿಗಿಲಿವರಿತ್ತಲಿದ್ದರ
ದಿಂದುಕುಲಸಂಭವರ ವಿಧಿಗಳ ನಿನ್ನು ಕೇಳೆಂದ ॥ ೯೮

ಬಿಲಮುಖದೊಳುತ್ತರಿಸಿ ಬಲುಗ
ತ್ತಲೆಯೊಳಟವೀಮಾರ್ಗದಲಿ
ಕಲುಮುಳುಗಳಿಗೆ ಕಾಪಥಕೆ ಕೋಮಲಪದವ ನೆಱೆ ಕೊಡುತ ।
ತೊಳಲಿದರು ಬೆಳಗಾಗೆ ಸಾಱಿಯೆ
ಹಳುವವನು ಬೆಳಗಡಗೆ ಹಳ್ಳಿಯ
ಬಟೆಯ ಹೋಗುತ ಹಾಯ್ದು ಬಂದರು ತ್ರಿಪಥಗಾಮಿನಿಗೆ ॥ ೯೯

ಭಾಗೀರಥೀತರಣ

ಇರುಳು ಗಂಗೆಯೊಳೊಬ್ಬ ನಾವೆಯ
ನಿರಿಸಿ ಕೊಂಡಿರೆ ವಿದುರನಾಜ್ಞೆಯ
ಧರಿಸಿ ಪಾಂಡವರಿವರ ಕರೆದನು ಬನ್ನಿ ನೀವೆನುತ ।
ಕರೆಯಲಂದಾ ಯಮಜನೆಂದನು
ಮರುತಸುತ ನೀ ಕೇಳು ಕೌರವ
ಧರಣಿಪನ ಕಾರಣಿಕವಲ್ಲವೆ ಯೆಂದೊಡಿಂತೆಂದ ॥ ೧೦೦

ಅರಗಿನುರಿಯೊಳಗಲ್ಲಿ ರಕ್ಷಿಸಿ
ಹರಿವ ನದಿಯೊಳಗಿಲ್ಲಿ ಕೊಲ್ವನೆ
ಪರಮಕರುಣಾಸಿಂಧು ರಕ್ಷಿಪನೆನುತ ದಾಂಟುವುದು ।
ಅರಸಮೊದಲಾದಾರು ಮಾನಿಸ
ರಿರದೆ ನಾವೆಯನೇಱಿ ದಾಟಿಯೆ
ಸರಸಿರುಹಸಖನುದಯಕಾಲಕೆ ಮಿಂದು ಸುರನದಿಯ ॥ ೧೦೧

ದಾಟಿದರು ಗಂಗೆಯನು ರಾಯನ
ನೋಟದಲಿ ಮನಮಱಿದೆವೆಮ್ಮಯ
ನೋಟಕಿದು ಹಿರಿದಲ್ಲ ಹಾ ಯೆನುತ್ತೈವರಡಿಗಡಿಗೆ ।

ಕೋಟಲೆಯ ಕೊಲ್ಲಣಿಗೆಯಲಿ ವ್ಯೆ
ಸೋಟಕಲಸದೆ ಬಿಸಿಲಲಿದ್ದರು ಮ
ಹಾಟವಿಯ ಮಧ್ಯದಲಿ ಬಂದರು ನೃಪತಿ ಕೇಳೆಂದ ॥ ೧೦೨

ಬರುತಲಾಗದು ಕೃಷ್ಣನಾಮ
ಸ್ಮರಣೆ ಮಾಡುತ ಮರುತಸುತನಾ
ಕರ ವಿಡಿದು ಬೞಿಗಾಲು ಬೞಿವ್ಯೆಯ್ಯಿಂದ ಬರುತಿರಲು ।
ಹರಿಯ ನಾಮಸ್ಮರಣಬಲದಲಿ
ಪರಮಹರ್ಷದೊಳವರು ನಡೆದರು
ನಿರುತ ದಕ್ಷಿಣದೆಸೆಗೆ ನಾರಾಯಣನ ಕರುಣದಲಿ ॥ ೧೦೩

ಇಪ್ಪತ್ತೊಂದನೆಯ ಸಂಧಿ ಮುಗಿದುದು.

ಜತುಗೃಹಪರ್ವ ಮುಗಿದುದು.

ಇಪ್ಪತ್ತೆರಡನೆಯ ಸಂಧಿ.

ಸೂಚನೆ.

ಬೆಂಬಿಡದೆ ಕಲಿ ಭೀಮ ಹಿಡಿದು ಹಿ
ಡಿಂಬಕನ ಮುಱಿದವನ ತಂಗಿ ಹಿ
ಡಿಂಬಿಯನು ಕೂಡೊಲಿದು ಪಡೆದನು ಕಲಿಘಟೋತ್ಕಚನ ॥

ಅರಣ್ಯದಲ್ಲಿ ಪಾಂಡವರ ಸಂಚಾರ.

ಕೇಳು ಜನಮೇಜಯಧರಿತ್ರೀ
ಪಾಲ ಯಮನಂದನನ ಪಾರ್ಥನ
ಕಾಲೊಡೆದು ಸುಱಿವರುಣಜಲದಲಿ ಬಟ್ಟೆ ಕೆಸರಾಯ್ತು ।
ಮೇಲೆ ಯಮಳರ ಕುಂತಿಯರನೇ
ವೇಱುವೆನು ಬೇಗದಲಿ ಕುರುಭೂ
ಪಾಲ ಹಿಡಿಯಲಿ ಕೊಲಲೆನುತ ಕುಳ್ಳಿರ್ದರಡವಿಯಲಿ ॥ ೧

ಉರಿಯ ಮನೆಯಲಿ ಸಾಯಲೀಸದೆ
ಸೆಱಗ [1] ಹಿಡಿದೆಳತಂದು ಕೊಯ್ದನು
ಕೊರಳನಕಟಾ ಭೀಮನೇ ಹಗೆ ಯೆಂದಳಾಕುಂತಿ ।
ಅರಸ ಹಿಡಿಯಲಿ ದಾನವರು ನಿಂ
ದಿರಿಕೆಯಲಿ ನುಂಗಲಿ ಕೃತಾರ್ಥರು
ಧರೆಯೊಳಾವೆಂದೊದಱಿದರು ಮಾದ್ರೀಕುಮಾರಕರು ॥ ೨

ಹಿರಿದು ಖತಿಗೊಳುತಲ್ಲಿ ನಡೆಯದೆ
ಬಿರಿದಳುತ್ತಡವಿಯಲಿ ಮಾದ್ರಿಜ
ರಿರಲು ಕುಂತೀದೇವಿ ಸಹಿತವೆ ಮುಂದುಗೆಡುತಿರಲು ।

---

1 ಕರವ, ಖ.

ನರಯುಧಿಷ್ಠಿರರವರು ಖರಖರ
ಹಿರಿದು ಬಳಲಿದರೆಲ್ಲ ಬಱಿಲಿಕೆ
ವರವೃಕೋದರ ನಿಲ್ಲದದನಾರೈದು ಕೇಳಿದನು ॥ ೩

ಸಾಕು ಸಾಕಾನಿಹೆನು ಕಳಕಳ [1]
ವೇಕೆ ಹೋ ಹೋ ಯೆನುತ ಹೊತ್ತನು
ನೂಕಿ ಹೆಗಲೆರಡಱಲಿ ಕುಂತಿಯ ಧರ್ಮನಂದನನ ।
ಆಕಿರೀಟಿಯನೆಡದಲಾ ಮಾ
ದ್ರೀಕುಮಾರರ ಬಲದ ಬದಿಯೊಳ
ಗೌಕಿ ನಡೆದನು ಭೀಮ ನಡಹಾಯ್ದೊದೆದು ಕಲುಮರನ ॥ ೪

ಬಂದನೀಪರಿ ಹಲವು ಯೋಜನ
ದಿಂದ ಹೇರಡವಿಯಲಿ ಬಱಿಲಿದ
ನೆಂದನೇ ನೀರಡಿಸಿದನೆ ಬಲುನಿದ್ರೆಗಳಸಿದನೆ ।
ತಂದೆ ಯಿಲ್ಲದ ಸುತರಿಗಾತನೆ
ತಂದೆಯಾದನು ಕುಂತಿ ಮಾದ್ರೀ
ನಂದನರ ಪವಮಾನನಂದನನೆತ್ತಿ ತರುತಿರ್ದ ॥ ೫

ಬಂದು ಕಾನನಮಧ್ಯದಲಿ ತರು
ವೃಂದದೆಡೆಯಲಿ ನಿಲಿಸಿ ಬಱಿಕರ
ವಿಂದದೆಲೆಯಲಿ ನೀರ ತಂದೆಱೆದನು ನೃಪಾಲರಿಗೆ ।
ಅಂದವರಿಗಿಲ್ಲರಸ ಹಾಸಲಿ
ಕೊಂದು ವಸ್ತ್ರಗಳಿಲ್ಲ ಹೊದೆಯಲಿ
ಕೆಂದು ಬಱಿಕಾವಾಯುಸುತ ಹಾಸಿದನು ತಳಿರುಗಳ ॥ ೬

ತಳಿರ ತಱಿದೊಟ್ಟಿದನು ತರುವಿನ
ನೆಳಲೊಳಗೆ ವಿಶ್ರಮಿಸಿದರು ತನು
ಬಱಿಲಿಕೆಯು ಬಾರಣೆಯು ಕಡುಜೋಡಿಸಿದ ಝೋಂಪಿನಲಿ ।

1 ರಲು ಹೆಕ್ಕಳ್ಳು, ಚ.

ಝುಳಕೆ ಕಂದಿದ ಮೈಯ್ಯ ಬಾಡಿದ
ಲಲಿತವದನದ ಮಾಸಿ ಕೆದಱಿದ
ತಲೆನವಿರ ತನ್ನೈವರನು ಕಂಡೞಲಿದನು ಭೀಮ ॥ ೭

ತಾಯೆ ನೀ ದಿಟ ನಾಗನಗರದ
ರಾಯನರಸಿಯು ನಿನ್ನ ಮಕ್ಕಳು
ರಾಯರೆದೆದಲ್ಲಣರು ಭೂರಿಯ ಬಾಹುವಿಕ್ರಮರು ।
ಈ ಯವಸ್ಥೆಗೆ ಸೋಮವಂಶದ
ರಾಯತನವೆಂತಹುದು ಕಡೆಯಲಿ
ತಾಯೆ ಹೇೞೆನ್ನಾಣೆ ಯೆಂದೞಲಿದನು ಕಲಿ ಭೀಮ ॥ ೮

ಜನನಿಯಂಘ್ರಿಯನೊತ್ತಿ ಯಮನಂ
ದನನ ಚರಣವ ಮುಱುಹಿ ಬೞಿಕ
ರ್ಜುನನ ಯಮಳರ ಪದವನೆಚ್ಚರದಂತೆ ಹಿಡಿಕಿಸುತ ।
ಅನಿಬರವರನು ನೋಡಿ ಪೂರ್ವವ
ನೆನೆದು ಬಿರಿಬಿರಿದಳುತ ಘನಕಾ
ನನದ ಮಧ್ಯದೊಳೀತಸಿದ್ದನು ಹಿರಿದು ಶೋಕಿಸುತ [1] ॥ ೯

ಔಕುವುದು ಬಲುನಿದ್ರೆ ನಿದ್ರೆಯ
ನೌಕುವನು ಕಣ್ಣವೆಗಳಲಿ ನಸು
ತೂಕಡಿಕೆ ತೂಗುವುದು ಮೈಗೆದಱುವನು ಕೈಯ್ಯೊಡನೆ ।
ಸೋಕುವುದು ಮೆಯ್ಮಱವೆ ಮಱವೆಯು
ನೋಕರಿಸುವುದು ಚಿತ್ತವೃತ್ತಿ ನಿ
ರಾಕುಳಾಂತಃಕರಣನಾದನು ಬೞಿಕ ಕಲಿಭೀಮ ॥ ೧೦

ವ್ಯಾಳಗಜಸೂಕರದ ಮೃಗಶಾ
ರ್ದೂಲ ಸಿಂಹಾದಿಗಳ ಭಯವಾ
ಭೀಳದೈತ್ಯಪ್ರಕರಭಯವೆಹುದೆನ್ನ ಮಱವೆಯಲಿ ।

1 ಚಿಂತಿಸುತ, ಚ.

ಹೇಡಿಲೇನದನೆಂದು ನಿದ್ರಾ
ವ್ಯಾಳವಿಷವನು ತೆಗೆದು [1] ಸೂಸಿ ವಿ
ಶಾಲಮತಿಯುವಧಾನದಲಿ ಕಾಯ್ದಿರ್ದ ತನ್ನವರ [2] ॥ ೧೧

ಹಿಡಿಂಬನು ಹಿಡಿಂಬಿಯುನ್ನು ಪಾಂಡವರ ಕೊಂದು ತಾ
ಎಂದಾಜ್ಞಾಪಿಸುವಿಕೆ.

ಧರಣಿಪತಿ ಕೇಳೊಂದು ಮಾರಿಯು
ಮುರಿವನವರಿಗೆ ತದ್ವನಾಂತರ
ದರಸು ದೈತ್ಯಹಿಡಿಂಬನೆಂಬವನತುಳಭುಜಬಲನು ।
ಮುರಿಮುರಿದು ಮೇಗಾಳಿಯುಲಿ ಮಾ
ಗರಳ ಮಾನವಗಂಧವಿದು ಗೋ
ಚರಿಸಿದೆತ್ತಣದೋ ಮಹಾದೇವನುತ ಬೆಱಗಾದ ॥ ೧೨

ತಾಯೆ ಬಾರೌ ತಂಗಿ ಗಂಧದ
ವಾಯುವಿದೆ ಹೊಸೆಗಾಱನಾಗಿ ನ
ವಾಯು ಭೋಜನವಿಂದು ದೊರಕಿತು ಮನುಜಮಾಂಸದಲಿ ।
ಸಾಯುಲವದಿರ ಬಡಿದು ತಾ ನಮ
ಗಾಯುದಲಿ ಕೃತಪುಣ್ಯಫಲವೆನೆ
ಮಾಯುಗಾತಿ ಹಸಾದವೆನುತ ಹಿಡಿಂಬಿ ಗಮಿಸಿದಳು ॥ ೧೩

ಬಂದಳವಳತಿರೌದ್ರರೂಪಿನೊ
ಳಂದು ಕಂಡಳು ದೂರದಲಿ ಹರಿ
ನಂದನನ ಸುಟಿದಲೆಯು ಕೆವಿಮ್ಮಾಸೆಗಳ ಕರ್ಕಶದ ।
ಕೆಂದಳಿರ ಕೇಸರಿಯು ಕಂಗಳ
ಕುಂದದಶನಪ್ಟವಿಯುಲಿರೆ ಮನ
ಸಂದಳಾಖಳನನುಜೆ ಸೋತಳು ಭೀಮಸೇನಂಗೆ ॥ ೧೪

---

1 ಮೊಗೆದು, ಚ. 2 ನೈವರನು, ಚ.

ಇವನ ರಮಣನ ಮಾಡಿ ಕೊಂಡೋ
ಡುವೆನು ವಿಪಿನಾಂತರದೊಳು ಮುನಿದೊ
ಡಿವದಿರೈವರ ತಿನಲಿ ಮರದಡಿಯಲ್ಲಿ ಮಲಗಿದರ ।
ಇವನು ತನ್ನಯ ತೀವ್ರತರ [1] ರೂ
ಪವನು ಕಂಡೊಡೆ ಹೆದಱುವನಲಾ
ಯುವತಿಯಹೆನೆಂದಸುರೆ ಸುಳಿದಳು ದಿವ್ಯರೂಪಿನಲಿ ॥ ೧೫

ಹೊಳೆವ ಕಂಗಳ ಕಾಂತಿ ಮರುಗ
ತ್ತಲೆಯ ಮೊತ್ತವ ಬಿಗಿಯೆ ತನುಪರಿ
ಮಳಕೆ ತಗುಳುವ ತುಂಬಿಗಳ ತನುಲತೆಯ ಚಲುವಿನಲಿ ।
ಲಲನೆ ಸುಳಿದಳು ಕುಚದ ಭರದಲಿ
ಬಳುಕುತಡಿಗಡಿಗೊಲೆದೊಲೆದು ಮೈ
ವಳಿಯ ಮೌಳಿಯ ಮಱುಕದೋಱುತ ಭೀಮನಿದಿರಿನಲಿ ॥ ೧೬

ಭೀಮ ನೋಡನು ನುಡಿಸನೊಯ್ಯನೆ
ತಾಮರಸಮುಖಿ ಹೊದ್ದಿದಳು ನಿ
ಸ್ಸೀಮನೇ ನೀನಾರು ಮಲಗಿದಮರ್ತ್ಯರಿವರಾರು ।
ಈ ಮಹಾರಣ್ಯದಲಿ ಬರವಿದು
ಕಾಮಿತವು ಕೋಮಲರಿಗೆನೆ ನಿ
ಷ್ಕಾಮಮನದಲಿ ಸತಿಯ ನುಡಿಸಿದನಾರು ನೀನೆಂದ ॥ ೧೭

ಹಿಡಿಂಬಿಯು ತನ್ನ ವೃತ್ತಾಂತವನ್ನು ಹೇಳುವಿಕೆ.

ವನ ಹಿಡಿಂಬನದಾ ಹಿಡಿಂಬಕ
ನನುಜೆ ನಾನು ಹಿಡಿಂಬೆ ಯಾಕಾ
ನನವಿದೆಮ್ಮಾಶ್ರಮವಗಮ್ಯವು ದಿವಿಜಮನುಜರಿಗೆ ।
ನಿನಗೆ ಕಾಮಿಸಿ ಬಂದೆನಣ್ಣನು
ಮುನಿದೊಡಿವದಿರ ತಿನಲಿ ನೀನೇ
ಟೆನಗೆ ವಲ್ಲಭನಾಗು ಕೊಂಡೊಯ್ವೆನು ಹಿಮಾಚಲಕೆ ॥ ೧೮

---

1 ರೌದ್ರಮಯ, ಚ.

ನಿನ್ನನೊಲ್ಲೆನು ಮುನಿದೆಯಾದೊಡೆ
ನಿನ್ನ ದೈತ್ಯನ ಕೊಂಡು ಬಾ ಹೋ
ಗೆನ್ನ ಬಲುಹನು ನೋಡು ನೀನೆನಲಸುರೆ ವಿನಯದಲಿ ।
ಮುನ್ನಲೇ ಮನುಮಥನ ಶರದಲಿ
ಖಿನ್ನೆಯಾಗಿಯೆ ಮಱೆಯ ಪೊಕ್ಕೆನು
ಎನ್ನನೀಪರಿ ಮುನಿದು ನುಡಿವರೆ ಯೆಂದಳಿಂದುಮುಖಿ ॥ ೧೯

ಹಿಡಿಂಬನ ಆಗಮನ.

ಅನುಜೆ ತಳುವಿದಳೆಂದು ರೋಷ
ಸ್ತನಿತಗದುಗದಕಂಠನೊದೆದೆ
ದ್ದನು ಮಹೀಮಂಡಲವನುಗ್ರಾಂಬಕನ ಡೊಂಬಿನಲಿ ।
ಅನಿಲಸುತನಿದಿರೆದ್ದನಿವನೇ
ದನುಜನೆಂಬವನಹುದು ತಪ್ಪೇ
ನೆನುತಲಿರಲಾದನುಜೆ [1] ಹೋದಳು ಮರನ ಹೊರೆಗಾಗಿ ॥ ೨೦

ದನುಜನೊದಱುತ ಬಂದು ವಟಕುಜ
ವನುಱೆ ಕೀಱುತ ಬರಲು ದೈತ್ಯಗೆ
ವನದೊಳಗೆ ದುಶ್ಶಕುನವಾದುದು [2] ಮರಣಸೂಚಕದ ।
ದನುಜನದ ತಾ ಬಗೆಯದಲ್ಲಿಗೆ
ಮನುಜರಿಗೆ ದುಶ್ಶಕುನವೆನುತವೆ
ಕನಲಿ ಖಳ ಮದದಿಂದಲೈದಿದ ಭರದಿ ಬೊಬ್ಬಿಡುತ ॥ ೨೧

ಬಱಲಬೇಡವೊ ಕುನ್ನಿ ಮೆಲ್ಲನೆ
ತಱುಬಿ ಕಾದುವುದೆನುತ ವೈಮಱೆ
ದೊಱಗಿದವರೇಱುವೆರು ಮೆಲ್ಲನೆ ಯೆನಲು ರೋಷದಲಿ ।

---

[1] ನೆನುತಸಿಂದಿರಲಾಕೆ, ಖ. [2] ವನದೊಳೊಂದುತ್ಪಾತವಾದುದು, ಖ.

ಭೀಮ ಹಿಡಿಂಬರ ದ್ವಂದ್ವಯುದ್ಧ.

ತುಱುಬ ಹಿಡಿದನು ಭೀಮ ಬೆನ್ನಿನೊ
ಳೆಱಗಿದರೆ ಹೆಮ್ಮರನ ಹಾಯಿದು
ಮುಱಿಯಲದನವ ಕಂಡು ಕೆಡಹಿದನನಿಲನಂದನನ ॥ ೨೨

ಎದ್ದು ತಿವಿದನು ಖಳನ ಬದಿಯೊಳ
ಗದ್ದಿತೀತನ ಮುಷ್ಟಿಮುಱಿದೊಡ
ಬಿದ್ದು ನಿಮಿಷಕೆ ಸಂತವಿಸಿ ಹೆಮ್ಮರನ ಕೊಂಬಿನಲಿ ।

ಹಿಡಿಂಬ ವಧೆ.

ಬಿದ್ದ[1] ಯಿದ ಕೊಳ್ಳನುತ ಖಳನು
ಬ್ಬೆದ್ದು ಹೊಯ್ದರೆ ಮರಸಹಿತ ಹಿಡಿ
ದುದ್ದಿ ನೆಲದೊಳಗೊಱಸಿ ಕೊಂದನು ಕಲಿಹಿಡಿಂಬಕನ ॥ ೨೩

ಕಳಕಳದೊಳಿವರೆದ್ದು ನೋಡಿದ
ರೆಲೆ ಮಹಾಕಲಿ ತಮ್ಮನೆಬ್ಬಿಸಿ
ಬೞಿಕ ಕಾದದೆ ಕೆಡಿಸಿದೇ ಯಕಟೆನುತ ತವಕದಲಿ ।
ಬೞಲಿದೆಮ್ಮನು ಹೊತ್ತು ತೊೞಲಿದೆ
ಬೞಲಿಕೆಯಲೀಯುದ್ಧ ಲೇಸಾ
ಯ್ತುೞಿದೆ ಪುಣ್ಯವಿದೆಂದರಾಯಮನಂದನಾದಿಗಳು ॥ ೨೪

ಹಿಡಿಂಬಿಯು ಕುಂತಿಯ ಬಳಿಗೆ ಹೋಗಿ ತನ್ನ ವೃತ್ತಾಂತ
ವನ್ನು ಹೇಳುವಿಕೆ.

ಖಳ ಮಡಿಯಲವನನುಜೆ ಭೀಮನ
ನೊಲಿಸಲಾರದೆ ಕುಂತಿಗೆಲ್ಲವ
ತಿಳುಹಿ ನುಡಿದಳು ತನ್ನ ಪೂರ್ವಾಪರದ ಸಂಗತಿಯ ।
ಹಲವುಪರಿಯಲಿ ಸತಿ ಯಿವರನಂ
ಡಲೆದು ಭೀಮಗೆ ಹೇೞಿಸಿದಳಾ
ಫಲುಗಣನ ಕಯ್ಯಿಂದ ಧರ್ಮಜನಿಂದ ತಿಳುಹಿದಳು[2] ॥ ೨೫

1 ಗೆದ್ದ, ಖ. 2 ನುಡಿಸಿದಳು, ಚ.

ಆರು ನುಡಿಯಲಿ ಸರ್ವಥಾ ಖಳ
ನಾರಿಯನು ಕೈಕೊಳ್ಳನೆಂದಾ
ಧೀರ ಬಲಿದೊಡೆ ಬೞಿಕ ವೇದವ್ಯಾಸಮುನಿ ಬಂದ ।
ವೀರಪಾಂಡವರಿವರ ಕಂಡ ವಿ
ಚಾರವಿದಕೇನೆನುತಲೀಶ್ವರ
ನಾರಿಗಾವುದ ಕಲ್ಪಿಸಿದನದ ಮೀರಬಹುದೆನುತ ॥ ೧೬

ಚರಣಕೆಱಗಲು ಪಾಂಡುಪುತ್ರರ
ಪರುಷ ಮಿಗೆ ಬಿಗಿದಪ್ಪಿ ಕುಂತಿಯು
ಪರಮವಾಕ್ಯದಿ ಸಂತವಿಟ್ಟನು ಮುನಿಪನಿಂತೆನುತ ।
ಹಿರಿದು ಬೞಲಿದೆ ಯಿವರ ಸಂಗಡ
ತಿರುಗಿ ಯಿನ್ನೀಸತಿಯು ನೀ ಸ್ವೀ
ಕರಿಪುದೆಂದರೆ ವ್ಯಾಸದೇವರಿಗೆಂದ ನಾಭೀಮ ॥ ೧೭

ವಾರಿತವು ತನಗಣ್ಣ ನಿರೆನಾ
ಧಾರುಣಿಯೊಳಿದ ಮಾಡಬಹುದೆನೆ
ಮಾರುತಾತ್ಮಜ ಕೇಳು ನೀನೇ ಹಿರಿಯನೆಲ್ಲರಿಗೆ ।
ನಾರಿಯಾದರೆ ದೇವವಧು ದೈ
ತ್ಯಾರಿಗಗ್ಗದ ಭಕ್ತೆ ದನುಜನ
ವೀರಕಾಣಿಕೆ ಬಂದಳಿಲ್ಲಿಗೆ ನಿನಗೆ ವಧುವೆನಿಸಿ ॥ ೧೮

ಹಿರಿಯನೀಧರ್ಮಜಗೆ ನೀನಲೆ
ನಿರುತಕಾರಣ ಪ್ರಕೃತಿಪುರುಷರ
ನೆಱವಣಿಗೆ ಹರಿ ಸಿರಿಯುನಿಬ್ಬರನುೞಿದು ಭೂಗಣಕೆ ।
ಮರುತನಾತ್ಮಜ ನಿನಗೆ ಸರಿಯೀ
ಧರೆಯು ಜೀವರೊಳಾರು ಯೆಂದೊಡೆ
ಸರಸಿಜಾಸನಪಿತಗೆ ಬಿನ್ನಹ ಮಾಡಿದನು ಭೀಮ ॥ ೧೯

ಜನನ ಮೊದಲೆನಗಾಗದೇತ
ಕ್ಕೆನಲು ಮುನಿಯಿಂತೆಂದ ಮೊದಲಲಿ
ಜನನವಾದರೆ ರಾಜಕಾರಿಯು ನಡೆವುದಿಲ್ಲೆಂದ ।
ಜನಪ ತನ್ನಜ್ಞಾನ ಹರಿಯಲಿ
ಅನಿಲಸುತ ನಿನಗಿಲ್ಲ ಸಂಶಯ
ವನಜಲೋಚನನಲ್ಲಿ ಯಾಗಳು ಮುಖ್ಯಧರ್ಮಗಳು ॥ ೩೦

ಸಾಱಲಱಿಯುವದಕ್ಕೆ ಜೀವರ
ಮಾರಿಯಹೆ ಯನ್ಯಾಯ ಕಂಡರೆ
ಧಾರುಣಿಯ ಸುರಕಾರ್ಯಕೋಸುಗ ಹಿರಿಯ ಧರ್ಮಜನು ।
ಸಾಱಿ ನಯದಲಿ ತಿಳಿಯ ಹೇೞಿ ಕು
ಮಾರಸಂಭವ ಮಾಡಿಯೆಂದೇ
ನಾರಿಯನು ಗಂಟಿಕ್ಕಿ ತಿರುಗಿದ ಭೀಮಸೇನಂಗೆ ॥ ೩೧

ಮುನಿ ಮರಳೆ ತಾ ವೇೞುಜನ ರಿಪು
ವನವನಾಗಳೆ ಬಿಟ್ಟು ನಡೆದರು
ಮನದ ಬೞಲಿಕೆಗಳೆದು ರಾಜ್ಯದ ಸುಖವ ನೆಱೆ ಮಱೆದು ।
ವನಜಲೋಚನಪಾದಪದ್ಮವ
ನೆನೆದು ಕಾನನದೊಳಗೆ ಕೌರವ
ಜನಪರವನಿಯ ರಾಯರಱಿಯದೆ ನಡೆದು ಬರುತಿರಲು ॥ ೩೨

ಎಲ್ಲಿ ಯುಪವನ ವರಸರೋವರ
ವೆಲ್ಲಿ ಕೇಳೀಶೈಲಸಂತತಿ [1]
ಯೆಲ್ಲಿ ರಮ್ಯೋದ್ಯಾನವೆಲ್ಲಿ ವಿಹಾರವನಭೂಮಿ ।
ಅಲ್ಲಿಗಲ್ಲಿಗೆ ಗಮಿಸಿ ಮಾರುತಿ
ವಲ್ಲಭೆಯ ರಮಿಸಿದನು ಚಾಪಟ
ಮಲ್ಲ ಜನಿಸಿದನಾಘಟೋತ್ಕಚನಾ ಹಿಡಿಂಬಿಯಲಿ ॥ ೩೩

---

1 ಹಿಮಗೃಹ, ಚ.

ಜನಿಸಲಿಚ್ಛೈಸಿದನು ಘನತರ
ಮನುಜವಾಹನ ಭೀಮಸೇನನ
ತನುಜನಾಗಿಯು ಪರಮನೈರುತಿ ಹರಿಯು ಸೇವೆಯಲಿ |

ಘಟೋತ್ಕಚನ ಜನನ.

ಜನಿಯಿಸಿದನಾಷಾಢಮಾಸದ
ವಿನುತ ಬಿದಿಗೆಯು ರುದ್ರತಾರಾ
ದಿನದೊಳಪರಾಹ್ಣದಲಿ ರಾಕ್ಷಸವತ್ಸರಾಂತದಲಿ || ೨೪

ಕಲಿಘಟೋತ್ಕಚ ಜನಿಸಿದಾಕ್ಷಣ
ಕಿಳಯು ರಾಕ್ಷಸಜನವದಳುಕಿತು
ಬಲುಹ ಬಿಟ್ಟರು ತಮತಮಗೆ ತಾವೆದ್ದು ಬೆಂಬಳಿಗೆ |
ಬಳಿಕ ಭೀಮನು ತನ್ನ ಸುತನನು
ನಳಿನಮುಖಿಯನು ನೀವು ಸಂಗಡ
ತೊಳಲ ಬೇಡಿ ಹಿಡಿಂಬನಗರಿಗೆ ನಡೆಯಿ ನೀವೆಂದ || ೨೫

ನುಡಿದ ಸಮಯಕೆ * ನೀವು ಬಹುದೆಂ
ದೊಡಬಡಿಸಿ ಸುತಸಹಿತ ಕಳುಹಿಯೆ
ಮಡದಿಯನು ಹೈಡಿಂಬರಾಜ್ಯಕೊಡೆಯತನವಿತ್ತು * |
ನಡೆದು ಬರುತಿರೆ ಶಾಲಿಹೋತ್ರನ
ನಡುವೆ ಕಂಡುಪಚರಿಸಿ ವಿದ್ಯೆಯ
ಪಡೆದು ಸಂಮುಖರಾಗಿ ಬಂದರು ವಿಪ್ರವೇಷದಲಿ || ೨೬

ಇಪ್ಪತ್ತೆರಡನೆಯ ಸಂಧಿ ಮುಗಿದುದು

ಹಿಡಿಂಬವಧಪರ್ವ ಮುಗಿದುದು.

---

* ತನ್ನ ರಮಣಿಯು ನೊಡಬಡಿಸಿ ಹೈಡಿಂಬರಾಜ್ಯದ ಒಡೆತನವ ನೆಲೆ ಮಾಡಿ ನಿಲಿಸಿದನಾಘಟೋತ್ಕಚನ, ಜ.

ಇಪ್ಪತ್ತುಮೂರನೆಯ ಸಂಧಿ

ಸೂಚನೆ

ವಿಕಟಭುಜಬಲರೇಕಚಕ್ರದೊ
ಳಕುಟಿಲರು ಭೂಸುರರ ರಕ್ಷಿಸಿ
ಒಕನ ಮುಱಿದರು ಮೆಱೆದರಮಳಗುಣಾಗ್ರಹಾರದಲಿ ||

ಏಕಚಕ್ರನಗರವನ್ನು ಕುರಿತು ಹೋಗಿರೆಂದು ವ್ಯಾಸೋಪದೇಶ.

ಕೇಳು ಜನಮೇಜಯಮಹೀಪತಿ
ಶಾಲಿಹೋತ್ರಾಶ್ರಮವನನಿಬರು
ಬೀಳುಕೊಂಡರು ಮತ್ತೆ ಕಂಡರು ಬಾದರಾಯಣನ |
ಹೇಳಿದನು ನಿಮಗೇಕಚಕ್ರವಿ
ಶಾಲಪುರದೊಳಗಾಱುತಿಂಗಳು
ಕಾಲ ಸವೆಯಲಿ ಬಳಿಕ ಬಳಿಸುವಿರುತ್ತರೋತ್ತರವ || ೧

ಎಂದು ಮುನಿ ತಿರುಗಿದನು ಕುಂತೀ
ನಂದನರು ಸುಕ್ಷೇತ್ರತೇಜೋ
ವೃಂದವನು ಮುಸುಕಿದರು ವಿಮಳಬ್ರಹ್ಮರಶ್ಮಿಯಲಿ |
ಅಂದವೇಱಿದ ಗಡ್ಡದರ್ಭೆಗ
ಳಂದ ನಿರಿಯುಡಿಗೆಯಲಿ ನಾಟಕ
ದಿಂದ ಮಟ್ಟೆಯ ತೊಟ್ಟನೊಸಲಲಿ ದೇಶಿ ಪರಿಮೆಱೆಯೆ || ೨

ಮನೆಯು ಉರಿಯಲು ಭೀಮನು ಆರಿಸುವಿಕೆ.

ಬರುತ ಭವನಕ್ಕೆಯ್ದಿ ಚಕ್ರಿಯ
ಚರಣಸೇವೆಯೊಳಿರುಳು ಮಲಗಿರೆ

ಪುರದೊಳಗ್ನಿಯು ಬಾಧೆ ಯೇಟಲು ಭೀಮ ಬೇಗದಲಿ ।
ಕರಗಳನು ತಳುವಿಕ್ಕಿ ಭವನವ
ಜರಿಯುಲೀಯದೆ ಕೆಲಕೆ ತೆಗೆದಪ
ನುರಿಯುಲಾಪುರಿ ಮಾಣೆ ಮನೆಯುನು ನೆಲದೊಳಿರಿಸಿದನು ॥ ೩

ತರಣಿಯುುದಯುದ ಮೇಲೆ ಭಾಂಡಾ
ಕರಣಿ ಯೆದ್ದನು ಕಂಡನಿವರನು
ಮರುತನಾತ್ಮಜಗೆಂದ ಬೋಧನವಯ್ದು ಪುರಿಯುತಲೆ ।
ಹಿರಿದು ಪುರಿಯೊಳಗೆನ್ನ ಗೃಹವಿದು
ಕರಗದುಟಿಯಿತು ನಿಮ್ಮದೆಸೆಯುಲಿ
ನಿರುತವೆಂದರೆ ಭೀಮನೆಂದನು ದೇವರುಟುಹಿದರು ॥ ೪

ಎನಲು ಸಂತೋಷದಲಿ ಭೀಮನ
ವಿನಯವೃತ್ತಿಗೆ ಬಟಿಕ ಹರುಷಿಸಿ
ಮನವೊಲಿದು ನೀವೇನ ಬೇಡಿದೊಡದನ ನಾನೀವೆ ।
ಎನಲು ಪವನಜನೆಂದ ನಮಗೀ
ವಿನುತಪುರದೊಳು ಭಿಕ್ಷೆ ತರಲಿಕೆ
ಮನವೊಲಿದು ನಾಲ್ಕೈದುಭಾಂಡವ ಕೊಡುವುದೈ ನೀನು ॥ ೫

ಹಿರಿದು ಹರುಷಿಸಿ ತಂದನಾಕ್ಷಣ
ಪರಿಪರಿಯ ವರಭಾಂಡವೈದನು
ಹರಸಿ ಕೊಟ್ಟನು ನೀವು ಪೃಥ್ವೀಪಾಲರಾಗೆನುತ ।
ಮರುತಜಾದ್ಯರಿಗಿತ್ತು ಕಳುಹಿದೆ ೧
ಡಿರದೆ ಕುಂತೀಸುತರು ಹರುಷದಿ
ತರಣಿಗರ್ಘ್ಯವ ಕೊಡಲು ಬಂದರು ಕೆಟಿಯುನಟಿಸುತಲಿ ॥ ೬

ಬಂದು ಪ್ರಾತಸ್ಸ್ನಾನಸಂಧ್ಯಾ
ವಂದನೆಯ ಮಾಡಿದರು ಬಟಿಕರ
ವಿಂದನಾಭಂಗಲ್ಲಿ ಕರ್ಮಾದಿನ್ನೆದೆ ಸತ್ಕರಿಸಿ ।

ಅಂದು ಮಾತೆಯು ಪಾದಕೆಱಗಿಯೆ
ಬಂದರೈವರು ಬಟ್ಟಿಕ ಬೋಧನ [1]
ಕಂದು ನಡೆತರುತಿರಲು ಭಿಕ್ಷಾವೃತ್ತಿಯನೆ ಪಡೆದು ॥ ೭

ಬಡತನವನನುಕರಿಸಿ ಬೋಧನ [2]
ದೆಡೆಯ ಹೊಕ್ಕರು ಭೀಮಸೇನನು
ಗಡಣದಿಂದವೆ ಕೇರಿಕೇರಿಯ ನಡುವೆ ಬರಬರುತ [3] ।
ಪೊಡವಿಪತಿ ನೀ ದೇಹಿ ಯೆಂಬುದು
ಕಡು ವಿರೋಧ [4] ವಿದಕ್ಕೆ ನಾನೀ
ವೊಡಲಭರಿತಕೆ ದೇಹಿ ಯೆಂಬೆನು ಬಿಡೆನು ಧರ್ಮವನು ॥ ೮

ಕಾಲ ತಾ ವಿಪರೀತವಾದೊಡೆ
ಮೇಲೆ ತಾ ವರ್ಣಾಶ್ರಮಂಗಳ
ಸೇಳಿದವ ಗೊಂಡವರು ಬೀಳುವ ನರಕವನಗಹುದು ।
ಜಾಳಿಸೆನು ವರ್ಣಾಶ್ರಮಂಗಳ
ಲೋಲಧರ್ಮವನೆನಲು ಭೀಮನು
ಪಾಲಿಸಿದ ಕುಲಚಲವ ಭಿಕ್ಷಾವೃತ್ತಿಯಂಗದಲಿ ॥ ೯

ಹೊಟ್ಟಿಲೊಳಗೆ ಹುಂಕಾರಘೋಷದಿ
ಮೆಲೆತು ಬೇಡುವ ತಾನು ಭಿಕ್ಷೆಯ
ಬಟ್ಟಿಕ ನನಗಲ್ಲದಾಗಲಿ ಯೆನುತ ಬರುತಿರ್ದ ।
ಜಲರುಹಾಕ್ಷನ ನಾಮಕೀರ್ತನ
ಗಳನು ಪಾಡುತ ಭೀಮಸಹಿತೀ
ಯಿಳೆಯರಾಯರಿಗಾಯ್ತು ಬೇಡಿಕೆ ವಿಪ್ರರಂದದಲಿ ॥ ೧೦

ಬಟ್ಟಿಕ ವಿಪ್ರನ ಮನೆಯೊಳಾಯಿತು
ಹೊಟ್ಟಿಲೊಳಗೆ ತಾವಲ್ಲಿ ಕುಳ್ಳಿರ್ದು

---

1 ಭೋಜನ, ಕ. ಖ. 2 ಭೋಜನ, ಕ. ಖ.
3 ಬರುತಿರಲು; ಖ. ಜ. 4 ನಿರೋಧ, ಜ.

ಬೞಲಿಕೆಯನಪಹರಿಸಿ ಕೊಂಡರು ವಿಪ್ರನಿಳಯದಲಿ |
ಜಲವನಂಗೀಕರಿಸಿ ಪಾಂಡವ
ತಿಲಕರಿಗೆ ಬಂದಾವಿಪತ್ತನು
ವೊಲಿದು ಕೇಳೈ ರಾಯ ಜನಮೇಜಯ ಮಹೀಪಾಲ || ೧೧

ಇಳೆಯರಾಯರಿಗೊಬ್ಬ ಭೂಸುರ
ಬೞಗ ತಿರಿಕನ ಮನೆಯ ಗುಡಿಸಿಲ
ಹೊೞಲ ಬೀಡಿಕೆಯಾಯ್ತು ಯಿನ್ನೀ ಮನುಜರಳವೇನು |
ಬೞಲಿಕೆಯನಪಹರಿಸಿ ಭಿಕ್ಷೆಯ ತ
ರಲು ಯತ್ನವ ಮಾಡಿ ಭಾಂಡವ
ತೊಳೆದು ಹೊೞವೊಡೆ ಯಾಗಳೈವರು ಬ್ರಹ್ಮಪುರಿಯೊಳಗೆ || ೧೨

ಅವರಯಾಚಕವಿಪ್ರವೇಷವ
ನವರು ಕೈಕೊಂಡಲ್ಲಿ ಹಲಕೆಲ
ದಿವಸಗಳ ನೂಕಿದರು ಭಿಕ್ಷಾವಿಹಿತವೃತ್ತಿಯಲಿ |
ಪವನಸುತ ಹುಂಕಾರದಿಂದವೆ
ಸವೆನಿಸುತ ಬಹುಭಿಕ್ಷಭಕ್ಷ್ಯವ
ನವರ ನಾಲ್ವರ ಸರಿಯ ಭಿಕ್ಷವನೊಬ್ಬ ತಿರಿತಪನು || ೧೩

ತಂದಭಿಕ್ಷವನಾಗಳೈವರು
ಬಂದು ಹರಿಯೆಂದೆನುತ ವಂದಿಸಿ
ಯೆಂದು ಭಿಕ್ಷವ ಮಾತೆಗೀಯಲು ಯೆರಡು ಭಾಗೆಯನು |
ಒಂದು ಭಾಗ ವೃಕೋದರಂಗುೞಿ
ದೊಂದು ಭಾಗವ ತಾಯಿ ನಾಲ್ವರು
ನಂದನರು ವಿನಿಯೋಗಿಸುವೆರವನೀಶ ಕೇಳೆಂದ || ೧೪

ಸಿರಿಯ ಹೇೞ್ವೊಡೆ ಹಸ್ತಿನಾಪುರ
ದರಸುಗಳ ಸಂತಾನ ಶೌರ್ಯದ
ಪರಿಯ ಹೊಗೞ್ವೊಡೆ ಶಕ್ರಸೂರ್ಯಾದಿಗಳಿಗಿಂ [1] ಮಿಗಿಲು |

---

1 ನೋೞ್ಪರೆ ಶಕ್ರಸೂರ್ಯರ ತೇಜಕ್ಕುೞಿ, ಜ.

ತಿರಿದ ಕೂಳನು ತಾಯಿ ಹಸುಗೆಯ
ಲೆರಡುಭಾಗವ ಮಾಡಿ ಮಕ್ಕಳ
ಪೊರೆದಳನ್ನುಳಿದವರ ಪಾಡೇನರಸ ಕೇಳೆಂದ ॥ ೧೫

ವಿಪ್ರವೇಷದಿಂದ ಪಾಂಡವರ ಇರುವಿಕೆ.

ಉದಯದಿಂದವೆ ಮುನ್ನ ಸುಬ್ರಾ
ಹ್ಮದ ಮುಹೂರ್ತದೊಳೆದ್ದು ಜನನಿಯ
ಪದಯುಗಕ್ಕಭಿನಮಿಸಿ ಮಧುಮರ್ದನನ ನೆನೆಯುತಲಿ ।
ನದಿಯ ತಟದಲಿ ಕುಳ್ಳಿತ್ತೈವರು
ಸದನಕಲ್ಲಿಂದೈದಿ ಶೌರಿಯ
ಮುದದಿ ನೆನೆಯುತಲವರು ಸಂಧ್ಯಾಮಠಕೆ ನಡೆತಂದು ॥ ೧೬

ವಿದಿತಸಂಧ್ಯೋಪಾಸ್ತಿಜಪನಿಯ
ಮದ ಪುರಾಣಶ್ರವಣ ಮಧ್ಯಾ
ಹ್ನದಲಿ ಭಿಕ್ಷಾಟನಗಳವರಿಗೆ ನಿತ್ಯವಾಯ್ತೆಂದು ।
ಸದನಕೈತಂದಲ್ಲಿ ಭೀಮನು
ಮುದದಿ ದೇವಾರ್ಚನೆಯ ಮಾಡಿಯೆ
ಪದುಮನಾಭಾರ್ಪಿತದೊಳನ್ನವನಾಗ ಭುಂಜಿಸುವ ॥ ೧೭

ಎನಲು ಜನಮೇಜಯನು ಕೇಳಿದ
ಮುನಿವರೋತ್ತಮ ಭೀಮಸೇನನು
ವನುಜರನು ತಾ ಕೂಡಿ ಭಿಕ್ಷವ ತಾರನೇಕೆನಲು ।
ಅನಿಲಜನ ಭಿಕ್ಷಾಟನಕೆ ಯಮ
ತನುಜ ತಾನಂಜಿದನು ಭೀಮನ
ವಿನಯ ಮಿಗೆ ಬೋಳೈಸಿ ನುಡಿದನು ನೀನು ಭಿಕ್ಷವನು ॥ ೧೮

ತರಲು ಬೇಡೈ ತಮ್ಮ ನಮ್ಮಯ
ಯಿರವನಱಿದಪರೆಂದು ಧರ್ಮಜ [1]

---

[1] ಕುರುಕುಲಾಧಿಪನಱಿವನೆಂದನು, ಜ.

ನುರುಹಿ ಸುಟ್ಟೆವು ನಾವು ಕೌರವಖಳಪುರೋಚನನ ।
ಉರುಹಿದೆವು ಅವನಕ್ಕಸಹಿತಾ
ವುರುಹಿದೆವು ಅವಳಾತ್ಮಜರನೈ
ವರನು ನಾವಪರಾಧಗಂಡೆವು ನಾವು ಗುಪ್ತದಲಿ ॥ ೧೯

ಇರಲಿ ಬೇಕೈ ತಮ್ಮ ನಿನ್ನಯ
ತಿರಿಕೆಗಾವಂಜುವೆವು ಯೆಂದರೆ
ಮರುತಸುತ ತಾನುಂಬಪರಿಯೆಂತೆಂದು ಬೆಸಗೊಂಡ ।
ನಿರುತ ದೇವರ ನೆನೆಯುತಲಿ ನೀ
ನಿರುಳುಹಗಲಿಹುದಿಲ್ಲಿ ಮನೆಯಲಿ
ತಿರಿದು ಭಿಕ್ಷವ ತಂದು ಯಿಕ್ಕುವೆ ತಾನು ನಿನಗೆಂದ ॥ ೨೦

ಎನಲು ವಾಯುಜನೆಂದನಣ್ಣಗೆ
ಮುನಿಮತವು ಶ್ರುತಿಸಾರವಾದುದು
ಧನವನೇ ಕೊಳಬಾರದಣ್ಣನೆ ತಮ್ಮ ತಾನೊಮ್ಮೆ ।
ಅನುಜವಿಷಯವೆ ನಣ್ಣಮುದದಿಂ
ದನುಭವಿಸೆ ತಾ ಯೋಗ್ಯವೈ ಸಲೆ
ಯೆನಗೆ ನಿಮ್ಮಯ ಭಿಕ್ಷದನ್ನವು ನರಕಸಾಧನವು ॥ ೨೧

ನೀನು ಗುರುವಹೆ ಯೆನಗೆ ಸಾಕ್ಷಾ
ನ್ಮಾನನಿಧಿ ಪಾಂಡುವಿಗೆ ಸರಿಯೈ
ನಾನು ಕುಳಿತುಣೆ ನಿಮ್ಮ ಭಿಕ್ಷದಲನ್ನವುಂಬುದಕೆ ।
ತಾನಱಿದು ಗುರುವಿಷಯವುಂಬೆನೆ
ಯೇನೆನಲು ಯುಮತನಯನೆಂದನು
ನಾನು ತಂದನ್ನವನು ಜನನಿಯು ಹಂಚೆ ಭೋಜನವ ॥ ೨೨

ನಾನು ಮಾಡುವೆ ನೀನು ನಿನ್ನಯ
ಸೂನುವಿನ ಸರಿ ಮೂವರನುಜರು
ಹಾನಿ ಯಿಲ್ಲೈ ಯಿವರ ಭಿಕ್ಷದ ಯುನ್ನವುಡಿಂಬಲು ।

ಮಾನನಿಧಿ ವರಮುಖ್ಯಧರ್ಮ
ಜ್ಞಾನಸಿದ್ಧನೆ ಯೆಂದು ತಮ್ಮನ
ತಾನೆ ಹೊಗಳಿದ ಕೇಳು ಜನಮೇಜಯ ಮಹೀಪಾಲ ॥ ೧೩

ಸ್ವಾರ್ಜನದ ಧನಜೀವಿ ಯುತ್ತಮ
ನಾಜನಕಧನಜೀವಿ ಮಧ್ಯಮ
ನಾಜನನಿಧನವಧಮವೆಂಬುದು ಸಕಲಸ್ಮೃತಿನಿಕರ ।
ಈಜಗಜ್ಜೀವರಲಿ ತಾನವ
ಭಾಜನನು ನರಕಕ್ಕೆ ಯಿಹದಲಿ
ಯಿಾಜಗದ ನರರೊಳಗೆ ಯಧಮಾಧಮನು ಕೇಳೆಂದ ॥ ೧೪

ಎಂದು ಮನೆಯಲಿ ತಾಯ ಸಂಗಡ
ಲಂದು ಮೂವರು ಸಹಜರಶನವ
ತಂದು ಕೊಡಲಿಕ್ಕೊಂಡು ಬಡವಾಗಿಹನು ಕಲಿ ಭೀಮ ।
ತಂದು ತಾಯಿಗೆ ಗೊಡುವನಾಯುಮ
ನಂದನನು ತಾ ತಂದ ಭಿಕ್ಷವ
ನಂದು ಭೋಜನಮಾಡಲೀಪರಿ ಮಾಸವೈದಾಗೆ ॥ ೧೫

ಭೋಜನೋತ್ತರವೇಳೆಯಲಿ ನೃಪ
ರಾಜವಾರ್ತಾಕಥನದಿಂದ ಮ
ಹಾಜನಂಗಳೊಳೊಪ್ಪುತಿರ್ದರು ನಿಜವಿನೋದದಲಿ ।
ರಾಜತನವನು ಮೆಱೆದರಾದ್ವಿಜ
ರಾಜತನವನು ಮೆಱೆವರುನ್ನತ
ರಾಜರಾಜರ ನೀತಿಯಿದು ಭೂಪಾಲ ಕೇಳೆಂದ ॥ ೧೬

ಆಗ ಆರ್ತಧ್ವನಿ ಶ್ರವಣ.

ಇರುತಿರಲು ಮಾಸಾಂತವಾಱಕೆ [1]
ನೆರಮನೆಯ ಶೋಕಾರ್ತರವದು

1 ಇರಲಿರಲು. ಷಣ್ಮಾಸದೊಳಗಾ, ಖ.

ಬ್ಬರವು ಹಿರಿದಾಗಲಿಕೆ ನಾವಿದ ತಿಳಿಯಬೇಕೆನುತ ।
ಮರುತಸುತನಾಕುಂತಿಗೆಂದನು
ಧರಣಿಯಮರರುಪದ್ರಗೇಳಿಯೆ
ಪರಿಹರಿಸದೆಮಗಿರಲು ಬಾರದು ಯೆನಲು ಬೇಗದಲಿ ॥ ೨೭

ವರಜನನಿ ನಂದನನ ಮಾತಿಗೆ
ಪರಮಹರುಷಿತೆಯಾಗಿ ಬೇಗದಿ
ಧರಣಿಯಮರರಿಗೇನುಪದ್ರವೆನುತ್ತ ಹರಿಯೆನುತ ।

ಬ್ರಾಹ್ಮಣನನ್ನು ಕುರಿತು ಕುಂತಿಯ ಪ್ರಶ್ನೆ.

ಭರದಲೈತಂದಕಟ ಭೂಸುರ
ವರವಿರೋಧವಿದೇನು ದುಃಖೋ
ತ್ಕರುಷವಾಕಸ್ಮಿಕವಿದೆಂದಳು ಕುಂತಿ ಖೇದದಲಿ ॥ ೨೮

ನಾಳಿದೇನೈ ಯೀಮಹೋತ್ಸವ
ದೇೞಿಗೆಯ ಭರವೆಸವು ಖರ ನಿ
ವ್ಮಾಲಯದೊಳು ವ್ಯಾಕುಲತೆ ಹೊಸತೆಂದಳಾಕುಂತಿ [1] ।
ಹೇೞಿರೈ ನಿಮಗಾದವಸ್ಥೆಯ
ಕೇಳಲಾಗದೆ ಯೆನಲು ದ್ವಿಜನದ
ಹೇೞಿ ಫಲವೇನವ್ವ ಯೆಂದನು ಸುಯ್ದು ದುಗುಡದಲಿ ॥ ೨೯

ಅಲತಾಂಗಿಯ ಕರೆದು ಬಳಯಿಕೆ
ಕಾಲುದೊಳಸಿಯು [2] ಬೞಿಕ ಕುಂತಿಗೆ
ಹೇೞಿದನು ತನಗಾದ ಖೇದವ ಪೂರ್ವದಪರವನು ।

---

1 ನಾಳೆ ವೈವಾಹೋತ್ಸವದ ದೆ
ಕ್ಖಾಳವಿದು ಮೊದಲೀವಸಂತದ
ಬಾಲಕಿಯರೋಳಿಯ ಮಡೆಯುಲಿ ಸಿಡಿಲು ಸುೞಿದುದೆನೆ, ಜ.

2 ಕಾಲಿಗೆಱಗಿಯು, ಗ.

ಕೇಳುವುದು ವರವಿಪ್ರರುಪಹತಿ
ಯೇಟಿಗೆಯುನಿನ್ನೀನ ಹೇಟುವೆ
ಹೇಟಬಾರದು ಕೇಳಬಾರದು ಯೆಂದನಾದ್ವಿಜನು ॥ ೩೦

ಹೇಟಬೇಹುದು ತನ್ನರಿಷ್ಟವ
ನಾಳಗೊಳ್ಳದ ಸುಜನನಿಕರಕೆ
ಕೇಳಬೇಹುದು ದೀನರಹವಿಪ್ರೇಂದ್ರ[1] ರುಪಹತಿಯು ।
ಹೇಟು ನೀನೆಲೆ ವಿಪ್ರತಾನಿದ
ಕೇಳಿ ದುಃಖಿತೆಯಾಗಲಾಗದೆ
ಕೇಳ್ನದುಃಖಂ ಪಂಚಭಿಸ್ಸಹ ಯೆನ್ನದೇ ಲೋಕ[2] ॥ ೩೧

ವಿಪ್ರನು ಅಸುರನ ವಾರ್ತೆಯನ್ನು ಹೇಳಿದುದು.

ತಾಯೆ ಕೇಳೀ ವಿಪ್ರಪುರದೊಳ
ಗಾಯು ವುಂಟೆನಗೆಂದು ರಕ್ಕಸ
ನಾಯಿ ಕಾದಿಹುದೂರಹೊಱಗಣ ಶೈಲಶಿಖರದಲಿ ।
ಆಯುಕೊಬ್ಬನ ಮನೆಮನೆಗೆ ಮೀ
ಲಾಯು ಮಹಿಷದ್ವಯುಸಹಿತ ನಿ
ರ್ದಾಯುದಲಿ ಹನ್ನೆರಡುಖಂಡುಗದಕ್ಕಿಯೋಗರವ ॥ ೩೨

ಇನಿತುವೆನು ಮನೆಮನೆಯು ಭಾರಿಯು
ದಿನಕೆ ತೆತ್ತೊಡೆ ತುಷ್ಟಿಯಲ್ಲದೆ
ದಿನಕೆ ನುಂಗುವೆನೂರಸೀಪರಿ ಹಲವು ಕಾಲದಲಿ ।
ದನುಜಗೀವೆವು ತಾವು ಭೂಸುರ
ಜನವು ಬ್ರಾಹ್ಮರ ಮನೆಮನೆಗೆಯಾ
ಮನುಜನಾರಿಗೆ ಬಹುದು ಹನ್ನೆರಡಾಗೆ ಮಾಸಗಳು ॥ ೩೩

---

1 ವಿನಯು ವಿಪ್ರರಚಾತ, ಕ. ಖ, 2 ವಚನ, ಚ. ಜ.

ಎನಗೆ ಬಂದುದು ಮಾರಿ ನಾಳಿನ
ದಿನದ ಮುದಯಕ್ಕದಕೆ ತನ್ನಯ
ತನುಜ ತಾನುತ್ತದಂತೆ ಮಾನಿಸರಿಲ್ಲ ತನಗೆಂದ ।
ವನಿತೆಯೊಬ್ಬಳು ತನಗೆ ಕನ್ಯಕೆ
ತನುಜನೊಬ್ಬನು ತಾವು ನಾಲ್ವರು
ದನುಜಕಾರ್ಯಕ್ಕಿಬ್ಬರಿಲ್ಲವು ವನಿತೆ ಸುತಸಹಿತ ॥ ೩೪

ಮಗನನೀವೊಡೆ[1] ಪಾರಲೌಕಿಕ
ವಿಗಡವಹುದಪಕೀರ್ತಿ ತನ್ನನು
ತೆಗೆವುದೈಹಿಕದಲ್ಲಿ ಬಳಿಕೀ[2] ಸಂತತಿಚ್ಛೇದ ।
ಹಗೆಯು ಮೊಡಲಿಗೆ ತನ್ನನಿಕ್ಕುವೆ
ಸೊಗಡಿಸದೆ ನೂಕುವೆನದೆಂದರೆ[3]
ನಗುತ ಕುಂತೀದೇವಿ ನುಡಿದಳು ವಿಪ್ರ ಕೇಳೆಂದು ॥ ೩೫

ವಿಪ್ರನಿಗೆ ಕುಂತಿಯು ಅಭಯದಾನ.

ಐಸಲೇ ನಿಮಗಾದವಸ್ಥೆಯು
ದೇಸು ಘನ ನೀವಂಜಬೇಡಿ ಮ
ಹಾಸುರನ ಬಾಣಸದ ಬಿಯ್ಯಕೆ ರಪಣವುಂಟೆನಗೆ ।
ಏಸು ಖಂಡುಗದಕ್ಕಿಯೋಗರ
ವೈಸು ಸೀನಳವಡಿಸು ಮೇಲುಂ
ಟೈಸು ಸಾಧನವಸ್ತುವನು ತೆಗಿಸೆಂದಳಾ ಕುಂತಿ ॥ ೩೬

ತಿರುಗಿ ಸಿಮಿತ್ರರೊಳಗೆ ಕೂಟಿನು
ತಿರಿದು ಸಲಹುವೆ ಯೆನ್ನ ಮಕ್ಕಳ
ಪರಿಯು ನಾನೇನೆಂಬ ಸಾಹಸಸತ್ವದುನ್ನತಿಯು ।

---

1 ಮಗನನೀವೆನ್ನ, ಚ. 2 ಮುಂಪಣ, ಚ.

3 ಬಗೆಯುದೆನ್ನೊಡಲಸುರಘಾತಿಗೆ ನಿಗೆ ವಿಭಾಡಿಸಿ ಕೊಡುವೆನೆಂದೆಸೆ, ಚ.

ಹೊರೆವುತಿಹೆನವರೊಳಗದೊಬ್ಬನು
ಪರಮಶಾಂತನು ಮರಳಿ ಬೇಡನು
ಹಿರಿಯರಡಿಯಿಟ್ಟಱಿಯರಿಬ್ಬರು ಕಾಡನೊಬ್ಬನನು ॥ ೩೭

ಸುತರು ನಾಲ್ವರು ಸಾಧುಮಕ್ಕಳು
ಸ್ಥಿತಗನೊಬ್ಬನು ಮಣಿದು ನಿಲ್ಲನು
ಯತಿಬಳನು ಬಹುಭೋಜಿ ಯಾತನ ಸಲಹಲಾನಾರೆ ।
ಅತಿಬಳನ ನಿಮಗೀವೆನಾತನ
ಗತಿಯು ಪರಿ ವಿಪರೀತ ತಾನಾ
ಸುತನ ನಿಲಿಸಲಿಕಾರೆನೀವೆನು ನಿಮ್ಮ ಪಾಲಿಗೆಯು ॥ ೩೮

ವರಸುತನ ನಿಮಗೀವೆ ನಾನೀ
ವರುಷದಲಿ ಮಾಡುವ ಸಮಗ್ರವ
ವರಸುಧಾನ್ನವ ರಚಿಸು ಸುತನನು ಯೀವೆ ನಿಮಗೀಗ ।
ಹುರುಳನಱಿಯೆನು ಹೊರೆಯಲಾರೆನು
ಮರುಚಲಾತನನವನನೀವೆನು
ನೆರಹಲಾರೆನು ಕೊಬನೆಂದಳು ಕುಂತಿ ನಸುನಗುತ ॥ ೩೯

ಸಾಕಲಾರೆನು ಮಗನನಾತನ
ನೂಕುವೆನು ನಿನ್ನ ಸುರಕೃತ್ಯಕೆ [1]
ಸಾಕು ತನಗುಳಿದವರೆ ನಾಲುವರೆನಲು ದ್ವಿಜನದಕೆ ।
ಸಾಕಲಾರದೆ ಮಗನನುರಿಯೊಳು
ನೂಕಿದವರುಂಟೇ ಮಹಾಸತಿ
ಯಾಕೆವಾಳತನಕ್ಕೆ ನಮಿಸಿದೆನೆನುತ ಕೈಮುಗಿದ ॥ ೪೦

ಮರುಳಲಾ ಭೂಸುರನೆ ತನ್ನಯ
ನಿರುತ ನುಡಿಯೇ ತಥ್ಯನಿಜವೈ

---

1 ನಿಮ್ಮ ಸುರಸೂಟಕ, ಚ.

ತರಿಸು ಬಂಡಿಯನಡಕು [1] ಭಕ್ಷ್ಯವ ಸೋಪದಂಶಕವ |
ತರಿಸು ಘೃತಕುಂಭಗಳನೊದವಿಸು
ಹರವಿಗಳ ಪಾಲ್ಮೊಸರನೆನೆ ಭೂ
ಸುರನು ಕುಂತಿಗೆ ಕೈಮುಗಿದು ನೀ ತಾಯೆ ಕೇಳೆಂದ || ೪೧

ಎರವು ಮುಯಿ ಮುಟ್ಟುಂಟು ವಸ್ತ್ರಾಂ [2]
ತ್ತರದೊಳಗೆ ಭಾವಿಸಲು ಮಕ್ಕಳ
ನೆರವ ಕೊಡುವರ ತಾಯಿ ಮಾರಿಯು ಬಾಯ್ಗೆ ಸವಿಯಾಗಿ [3] |
ನೆರವಿ ನಗದೇನಮ್ಮ ನಿಹಪರ
ವೆರಡಱಲಿ ಹೊಱವೊಳಯಹುದು ನಿ
ಷ್ಕರುಣಿಯುಕಟಾ ತಾಯೆ ನೀ ದಿಟ ಮನುಜೆ ಯಲ್ಲೆಂದ || ೪೨

ಏನನಿತ್ತು ದಧೀಚಿ ಲೋಗರ
ಹಾನಿಯನು ಕಾಯ್ದನು ಶಿಬಿಯು ತಾ
ನೇನನಿತ್ತನು ಹೇಱರೇ ಜೀಮೂತವಾಹನನು |
ಏನು ಮಾಡಿವನೆಂದು ನೀನದ
ನೇನುವೆನು ಕೇಳ್ದಱಿಯಲಾ ಮ
ತ್ತೇನುವೆನು ನಿನ್ನವಸರಕೆ ಕೊಳ್ಳೆಂದಳಾಕುಂತಿ || ೪೩

ಆವನರ್ಥಪರಾರ್ಥದಲಿ ಸಂ
ಜೀವನವನೈದಿತು ಪರಾರ್ಥದೊ
ಳಾವನಸು ನಿರ್ವಾಹಗಂಡುದು ಲೋಕಮೂಱಱಲಿ |
ಆವಿರಿಂಚಿಪುರಂದರಾದಿಕ
ದೇವತತಿ ನೀವಿಬ್ಬರೇ ಸಂ
ಭಾವನೀಯರು ಕೇಳ್ಮಹೀಸುರ ಯೆಂದಳಾಕುಂತಿ || ೪೪

---

1 ಬ್ರಾಹ್ಮಣ ವೃಥಾ ವಿಸ್ತರಣವಾಕ್ಯವೆ ತನ್ನ ನುಡಿ ಸಂವರಿಸು ಬಂಡಿಯ ನಡೆಸು, ಚ.

2 ವಸ್ತ್ರಾ, ಚ. 3 ಕೊಟ್ಟವರುಂಟೆ ಮಾರಿಯು ಬಾಯ್ಗೆ ತುತ್ತಾಗಿ, ಖ.

ಬಳುಹಿನಲಿ ಭೂಸುರನ ಚಿತ್ತವ
ತಿಳುಹಿ ಬಂದಳು ಮನೆಗೆ ಭೀಮನ
ಕೆಲಕೆ ಕರೆವಳು ಹೇಳಿದಳು ಹೇರಾಳದೌತಣವ ।
ಉಲಿದು ಮನದಲಿ ಭೀಮ ಭುಜವ
ಪ್ಪಳಿಸಿದನು ಯಮನಂದನಾದಿಗ
ಳುಟಿದ ನಾಲ್ವರು ಭಿಕ್ಷವೃತ್ತಿಗದ್ದೆಯ್ದಿ ಪುರದೊಳಗೆ ॥ ೪೫

ಆಗ ಬರುತಲು ಬ್ರಹ್ಮಪುರಿಯೊಳು
ರಾಗದಲಿ ಶ್ರೀಹರಿಯು ಸನೆವ್ರತ
ಬೇಗದಲವರು ಕೇರಿಕೇರಿಯು ನಡುವೆ ಬರುತಿರಲು ।
ರಾಗದಲಿ ಬೀಡಾರಕೈದಿಯೆ
ಯಾಗ ಮಗಗದ ಹೇಪೆ ಹಿಗ್ಗಿದ
ನಾಗ ನಾಲ್ವರು ಬಂದು ತಾಯಿಗೆ ತಂದ ಭಿಕ್ಷವನು ॥ ೪೬

ಕೊಟ್ಟು ಕೇಳಿದರಾಗ ಜನನಿಯು
ಬೊಟ್ಟದೇನೌ ಭೀಮ ಭಾಳದ
ಬೊಟ್ಟನಲು ತಾ ಕೊಟ್ಟೆ ಭೂಸುರವಿಷಯುಕೀತನನು ।
ಕೊಟ್ಟೆ ತಾನೆನೆ ಹಾಯ್ದು ನಾಲ್ವರ
ಹೊಟ್ಟೆಯೊಳಗುರಿ ಬಟಿಕ ನೀವಿದ
ಕೊಟ್ಟರೇಕೌ ತಾಯೆ ಭೀಮನನೇನ ಮಾಡಿದಿರಿ ॥ ೪೭

ನಮ್ಮೊಳೊಬ್ಬನ ಕೊಡದೆ ಕಾದಿರಿ
ಸುಮ್ಮನೇತಕೆ ತಾಯೆ ಭೀಮನ
ಸೊಮ್ಮ ಕೊಲುವರೆ ನಮ್ಮ ಭಾಗ್ಯವನೆನುತ ಹಲುಬಿದರು ।
ಬೊಮ್ಮರಕ್ಕಸಗೀವರೇ ಯಿಾ
ಹೆಮ್ಮಗನ ನೀ ಕೊಟ್ಟೆಯಾದರೆ
ನಮ್ಮ ಕಾವ ಮುಕುಂದ ಬಲ್ಲನು ನಿಮ್ಮ ಮಾತುಗಳ ॥ ೪೮

ತಾಯೆ ಮಿಾಱಲು ಬಹುದೆ ಯೆಂದರೆ
ವಾಯುಜನು ತಾನೆಂದು ಸಂಕಟ
ದಾಯ ನಿಮಗೇಕೆಂದನೀಗಳ್ ಸಾಕು ಬಿಡಿ ಯೆಂದ |
ತಾಯೆ ಕೊಟ್ಟುದು ತನಗೆ ತಾನದ
ಕಾಯುಗತಿಗನುಸಾರಿ ಯಾದವ
ರಾಯ ಹೊಣೆಯಾಗಿರಲು ಲಕ್ಷ್ಯವೆ ದೈತ್ಯಕೋಟಿಗಳು || ೪೯

ನಿರುತವನು ತಾವ್ ನುಡಿದು ಪವಡಿಸಿ
ಭರದಿ ನಿದ್ರೆಯೊಳಿರಲಿಕಾಗಲೆ [1]
ಯಿರಳು ತೊಡಗಿತು ವಿಪ್ರಭವನದ ಪಾಕಮಯರಭಸ |
ಹೊರೆದಳಮ್ಮನು ತಾಯಿ ಕುಂತಿಯು
ಹರುಷದಲಿ ಪಾರಣೆಯ ಹೊತ್ತಿನೊ
ಳರಸು ನಾಳಿನೊಳಾನೆನುತ ಹಿಗ್ಗಿದನು ಕಲಿಭೀಮ || ೫೦

ಪರಿಪರಿಯ ಬಹುಭಕ್ಷ್ಯಪಾಕದ
ಪರಿಮಳದ ಶಾಕಾದಿಗಳ ವ
ಗ್ಗರಣೆಗಳ ಸೌರಭಕೆ ತಿಳಿದುದು ನಿದ್ರೆ ಪವನಜನ |
ತರಣಿ ಸುೞಿದನು ಪೂರ್ವ ಶೈಲದ
ಶಿರದ ಕೊನೆಯಲಿ ಭೀಮ ಕುಂತಿಯ
ಕರೆದು ಕಳುಹಿದನಾಮಹೀಸುರಗೃಹಕೆ ವಹಿಲದಲಿ || ೫೧

ಕುಂತಿಯು ಅಪ್ಪಣೆಯಂತೆ ಆಹಾರಪದಾರ್ಥವನ್ನು ಸಿದ್ಧಪಡಿಸುವಿಕೆ.

ಏನು ಬಂದಿರಿ ತಾಯೆ ಕಾರಿಯ
ವೇನೆನಲು ನೀ ಹೂಡು ಭಂಡಿಯ
ದೇನು ಜಂಜಡ ಭಕ್ಷ್ಯಭೋಜನ ಹಿಡಿಸು ಬೇಗದಲಿ |
ಭಾನುವುದಯಂಗೈದನೆನೆ ಸು

1 ಪುರಳುಗಳು ನೀವೆಂಬವರ ಚಪ್ಪರಿಸಿದನು ಕಲಿಭೀಮನಾನದು, ಚ.

ಮ್ಮಾನದಲಿ ಸಾಧನಸಮಗ್ರವ
ಸೂನು ಸಹಿತಡಕಿದಳು ಭಾರಿಯ ಭಂಡಿ ಜಡಿಯಲಿಕೆ ॥ ೫೦

ಜೋಡಿಸಲು ತಾ ಕುಂತಿ ಯೆಂದಳು
ಮಾಡಿಸುವುದೆನ್ನಾತ್ಮಜಗೆ ನೀ
ನೋಡಿ ಭೋಜನದನುವ ನಿಂಗೆ ಮನದಣಿವ ಹಾಗೆಂದು ।
ಮಾಡುವದು ಬಟಿಕೆಲ್ಲ ಭಂಡಿಯ
ಹೂಡುವುದು ನೀನೆನಲು ಭೂಸುರ
ಮಾಡುವೆವು ನಿಮ್ಮಾತ್ಮಜಗೆ ಮೊದಲೆನಲು ಬೇಗದಲಿ ॥ ೫೩

ನಳನಳಿಪ ಬಹುವಿಧದ ಭಕ್ಷ್ಯಾ
ವಳಿಯ ಹೆಡಗೆಗಳೋರಣಿಸಿ ಮಂ
ಡಳಿಸಿ ಹೂಡಿದ ಹಾಲು ತುಪ್ಪದ ಹರವಿಯೋಜೆಯಲಿ ।
ಬಟಿಕ ಮುಚ್ಚಿದ ವಿವಿಧಶಾಖಾ
ವಳಿಯ ಬೋನದ ಬಿಗಿದ ಕುಣಿಕಿಲ
ಕಳವೆಯಕ್ಕಿಯ ಕೂಟರಾಸಿಯ ಭಂಡಿ ಜೋಡಿಸಿತು ॥ ೫೪

ದೈತ್ಯನನ್ನು ಸಂಹರಿಸೆಂದು ಕುಂತಿಯು ಆಶೀರ್ವಾದ.

ಮರಳಿ ಬಂದಳು ಕುಂತಿ ಭೀಮನ
ಕರೆದಳೀಷ್ಟೈ ಪಾರಣೆಗೆ ಕಾ
ತರಿಸದಿರು ಬಕನೊಡನೆ ಮೆಟಿವುದು ಸತ್ವದನುವರಿಯ ।
ಭರವನಱಿಯದೆ ಭೀಮ ಮಾಡದಿ [1]
ರುಜುವಣೆಯುನಱಿದಾನುವುದು ಸಂ
ಹರಿಸು ದೈತ್ಯನನೆಂದು ತಾಯ್ ಹರಸಿದಳು ನಂದನನ ॥ ೫೫

ನೆನೆವುದೈ ನಮ್ಮೊಡೆಯ ಮಧುಸೂ
ದನನ ಚರಣವನೆಂದು ಕಳುಹಿದೊ
ಡನಿಲಜನು ಹರುಷದಲಿ ಜನನಿಯ ಪದಕೆ ನಮಿಸಿದನು ।

---

1 ಭರವ ಬಱದೇ ಬೀಯವಮಾಡದಿ, ಖ.

ಮನದಿ ಹರಿಯನು ನೆನೆದು ದರ್ಭೆಯ
ನನುಕರಿಸಿ ಶ್ರೀಗೋಪಿಚಂದನ
ವಿನುತತಿಲಕವ ಧರಿಸಿ ಕುಂತಿಯ ಚರಣರೇಣುವನು ॥ ೫೬

ಶಿರವ ತುಂಬಿಯೆ ಧರ್ಮಪುತ್ರನ
ಚರಣಕೆರಗಿಯು ಭೀಮ ಜನನಿಯ
ನಿರುತವಾಕ್ಯಾಶ್ರಯದಿ ಬಂದನು ಭೂಪ ಕೇಳೆಂದ ।
ಹರುಷ ಮಿಗೆ ಹರಿತಂದು ವಿಪ್ರನ
ವರಗೃಹದ ಪಾಕವನು ಮುದದಲಿ
ಹರಿಯೊಳರ್ಪಿಸಿ ಭೀಮ ಪಾರಣೆಯನ್ನು ಮಾಡಿದನು ॥ ೫೭

ಮರುತಸುತನಾಪೋಶಗೊಳುತಲಿ
ನಿರುತ ಪ್ರಾಣಾಹುತಿಯ ನಡೆಸಲು
ಸರಿಯಿತ್ತೈ ಸರ್ವಾನ್ನ ಷಡುರಸಘೃತವು ಮೊದಲಾಗಿ ।
ಪರಿಹರಿಸಿ ಕೊಂಡಿರಲು ಭೂಸುರ
ವರಯುವತಿ ಯಿನ್ನೇನ ಬಡಿಸುವೊ
ಡರಿದು ತಾನೆನುತಿರಲು ಕುಂತೀದೇವಿ ನಡೆತಂದು ॥ ೫೮

ಮರುತಜನ ರೂಪನರಿದೊರಳಿನ
ಹೊಟಿಯ ತವುಡನು ತಂದು ಕೈಯ್ಯಲಿ
ನಿರುತವೀಯಲು ಮೆಲಿದು ತೇಗುತ ದಣಿದು ಕೈತೊಳದ ।
ಧರಣಿಪತಿ ಕೇಳ್ ತಾಯಿ ಯಿಕ್ಕಿದ
ನಿರುತ ತವುಡೇ ಪಥ್ಯ ಧರೆಯಲಿ
ಪರರು ನೀಡಿದ್ದಮೃತ ವಿಷ ಮಕ್ಕಳಿಗೆ ಕೇಳೆಂದ ॥ ೫೯

ಹರಸಿ ಸುತನನು ಕಳುಹೆ ಭಂಡಿಯ
ಹರಿದು ಸೆಳದೇರಿದನು ತಾ ಬಲು
ಹುರಿಯ ಹಗ್ಗವ ಹಿಡಿದು ಜಡಿದನು ಹೋರಿಕೋಣಗಳ ।

ಮರುತಜನು ಹೊಡೆಯಲಿಕೆ ಶಕಟವು
ಪುರದ ಹೊಱಯಿಕೆ ಜನಸಮೂಹವು
ನೆರೆದು ನೋಡುತಲೊಬ್ಬರೊಬ್ಬರಿಗಂದು ತಮ್ಮೊಳಗೆ ॥ ೬೦
ಪುರದೊಳಗೆ ಭಿಕ್ಷಾನ್ನತಿಂದ್ಯೈ
ವರು ಮಹಾಪಂಡಿತರು ನಿರ್ಧರ
ಪುರುಷರವರೊಳಗೊಬ್ಬನನು ನಮ್ಮೂರ ದಾನವಗೆ ।
ಪರಿವಿಡಿಯ ಭೋಜನಕೆ ತಾಯಾ
ದರಿಸಿ ಭೂಸುರಗೀಗ ಕೊಟ್ಟಳು
ಹಿರಿದು ಕೌತುಕವೆನುತ ಮುತ್ತಿತು ಪವನನಂದನನ ॥ ೬೧
ಪೌರಜನವೈತರಲು ಭಂಡಿಯ
ನೂರ ಹೊಱವಂಟಿಸಿದರೆಲ್ಲರು
ದೂರದಲ್ಲಿರಿ ಸಾವೆ ತಾನೆನೆ ಸಾಕು ದೈತ್ಯನಲಿ ।

ಭೀಮನು ಬಕನಿದ್ದೆಡೆಗೆ ಹೋಗುವಿಕೆ.

ಸಾಱಿ ನೀವೆಂದೆನುತ ಹೂಡಿದ
ಹೋರಿಗೋಣನನಬ್ಬರಿಸಿ ರಣ
ಧೀರ ಮಾರುತಿ ಮಿಕ್ಕು ನಡೆಸಿದನಸುರನಿದ್ದೆಡೆಗೆ ॥ ೬೨
ಹರಿಸಿ ಹಳ್ಳವ ದಾಂಟ ಭೀಮನು
ಪರುಠವಿಸಿ ಯೊಂದನುವ ಕಂಡನು
ಸುರವಿರೋಧಿಯನುಂಡು ಕೊಲುವೆನೊ ಕೊಂದು ಭೋಜನವ ।
ನಿರುತ ನಾ ಮಾಡುವೆನೊ ಯೆನುತಲಿ
ಸುಱಿದನಡೆಯಲಿ ಶಕಟದನ್ನವ
ಸುರವಿರೋಧಿಯು ಕಂಡಪಾಕವು ಬಾರದುಣಲೆನುತ ॥ ೬೩

ಸಮಸ್ತ ಪದಾರ್ಥವನ್ನು ತಿಂದು ದೈತ್ಯನನ್ನು ಕರೆಯುವಿಕ.

ಕೆಡೆಹಿ ಭಂಡಿಯ ಪಾಕವೆಲ್ಲವ
ನೊಡೆಯಗರ್ಪಿಸಿ ಭೀಮ ಬಟಿಕದ

ಹೊಡೆದ ಮೌನದಲೈದಿ ಹಳ್ಳದ ತಡಿಯುಲವನಾಗ ।
ಅಡಿಗಡಿಗೆ ತೇಗುತಲಿ ಪಾರಣೆ
ಯೆಡೆದೆಱಹುಗುಂದಿರ್ದ ತನ್ನನು
ಪಡೆದು ತಾ ಸಂಪೂರ್ಣವಾಡಿದನರಸ ಕೇಳೆಂದ ॥ ೬೪

ಎಡೆಯುಲೇ ಭಕ್ಷ್ಯಾದಿಗಳ ಬಱಿ
ಹೆಡಗೆ ಯುಽಟಿದುವು ಸುಱಿದವೊಸರನು
ಕುಡಿದು ತುಪ್ಪವ ಹಾಲ ಪರವಿಯ ಪಾಯಸಂಗಳನು ।
ಬಿಡದೆ ಮುದ್ದೆಯ ಕೊಳುತಲುಂಡನು
ಕುಡಿದನಾಗಱವಟಿಕೆ ಯುದಕವ
ಹೊಡೆದನೈ ಹನ್ನೆರಡುಖಂಡುಗದಕ್ಕಿಯೋಗರವ ॥ ೬೫

ತಡೆಯುದೆಲ್ಲವನುಂಡು ಹಳ್ಳದ
ಕಡೆಯುಲೇ ಕೈದೊಳೆದು ಕಂಡನು
ನುಡಿದನೆಲವೋ ಕುನ್ನಿ ಕೂಟಿದೆ ತಿನ್ನು ಬಾಯೆನುತ ।
ತೊಡಕೆಯುಲಿ ಕಲುವುಳ್ಳ ತುಂಬಿಯೆ
ಬಿಡದೆ ಬುತ್ತಿಯನೊಂದು ಕೈಯ್ಯಲಿ
ಹಿಡಿದು ಬಂದನು ದೈತ್ಯನಲ್ಲಿಗೆ ಭೀಮ ಬೇಗದಲಿ ॥ ೬೬

ಕಂಡು ಖಳ ಬೆಱಗಾದನಿವನು
ದಂಡತನವಚರಿಯುಲಾ ಹರಿ
ಖಂಡಪರಶುಗಳಳುಕುವರು ತನ್ನೊಡನೆ ಪಳಚುವೊಡೆ ।
ಭಂಡಿ ತುಂಬಿದ ಕೂಟನೆಲ್ಲವ [1]
ನುಂಡು ಕಾಱಲಿ [2] ಯೂರ ವಿಪ್ರರ
ಹಿಂಡುವೆನು ಯಿವಸಹಿತೆನುತ ಮುರಿದೆದ್ದನಮರಾರಿ ॥ ೬೭

ಮತ್ತೆ ಶೇಷಾನ್ನದಲಿ ತೋಱಿಹ
ತುತ್ತುಗಳ ತೂಗುತ್ತ ಮಾರುತಿ

---

[1] ನಿವನಿಂ, ಖ. [2] ದಂಡ ಹೋಗಲಿ, ಖ

ಮೆತ್ತಿಕೊಂಡನು ಬಾಯೊಳವನನು ಬೆರಳಲೇಡಿಸುತ ।
ಇತ್ತಲೆನ್ನಯ ಹಸಿವು ಹೆಚ್ಚಿತು
ಹೊತ್ತು ಹೋದಬಲಿನಲಿ ಕೂಡಿದು
ದೆತ್ತಲಕಟಾ ವಿಧಿ ಯೆನುತ ಮುರಿದೆದ್ದನಮರಾರಿ ॥ ೬೮

ಎರಡುಕೈಗಳನೆತ್ತಿ ಮುಷ್ಟಿಯೊ
ಳಱಗಿದನು ನಡುಬೆನ್ನನೇನಂ
ದಱಿಯನಿತ್ತಲು ಭೀಮ ಬಲುತುತ್ತುಗಳ ತೋಟಿಯಲಿ ।
ಮರನ ಮುಱಿದೆಱಗಿದರೆ ಪುನರಪಿ
ಮುಱಿದು ನೋಡುತ ನಿಲ್ಲು ಬಹೆನುಚಿ
ವರೆ ಗೆಲಸ ಪೂರಯಿಸಲೆಂದನು ನಗುತ ಕಲಿಭೀಮ ॥ ೬೯

ಬಕ ಭೀಮರ ದ್ವಂದ್ವಯುದ್ಧ

ಗುದ್ದುಗಳ ಮಳೆಗಱೆಯೆ ಕೌರವ
ದೊದ್ದ ಕಾಱನು ಕಾಣನವನನು
ಪೊದ್ದಿಸಿದ ಹೊಲದತ್ತ ಬುತ್ತಿಯನುಂಡು ನಿಂದಿದನ ।
ಗೆದ್ದು ಹರಿವೆನು ಪುರಕೆ ಯಿವನನು
ಬುದ್ಧಿಯಲಿ ಕಳುಹಿದರ ನುಂಗುವೆ
ಸಿದ್ಧವಿದು ತಾನೆನುತ ಖಳ ಮನದೊಳಗೆ ಮೊಱೆದೆಂದ ॥ ೭೦

ಅರಸ ಕೇಳೈ ನಿಮ್ಮ ಭೀಮನ
ಪರಿಯ ಹೊಸಪರಿ ಭಂಡಿತುಂಬಿದ
ಸರಕನೆಲ್ಲವ ಸಂತವಿಟ್ಟನು ತನ್ನ ಜಠರದಲಿ ।
ವರಸಮಾಧಾನದಲಿ ಕೈತೊಳೆ
ದುಱವಣಿಪ ತೇಗಿನ ತರಂಗದ
ಪರಬಲಾಂತಕನೆದ್ದು ನಿಂದನು ಸಿಂಹನಾದದಲಿ ॥ ೭೧

ಉಂಡೆವೈ ಸಮ ಚಿತ್ತದಲಿ ನಾವ್
ಕೊಂಡಿರೈ ಕಾಳಗವ ನಡೆಯಲು

ಹಿಂಡುವಿರೆಲೈ ನಾವು ಸಹಿತೀಪೂರ ಹಾರುವರ ।
ಉಂಡೆಲೈ ಹಲಕಾಲಕಿಂದಿನ
ವುಂಡದೂಟಕಣಾ ನಿಧಾನವು
ಖಂಡಪರಶುವಿನಾಣೆನುತ ಮದವೇಱಿದನು ಭೀಮ ॥ ೨೨

ಉಱಿವಣಿಸಿ ತಾ ಭೀಮನಾಗಲು
ವುರವ ತಿವಿದನು ಖಳನನೆಲವೋ
ನಿರುತ ನಿನಗಾರುಂಟು ಕದನಕೆ ಕರೆಸು ಬೇಗದಲಿ ।
ಹರಿಪರಾಯಣರೆಂದವರು ಯಾ
ಸುರರಿಗಂಜುವರಲ್ಲ ಸರ್ವರು
ಮುರವಿರೋಧಿಯ ಕರುಣಬಲದಲಿ ಭೀಮನಿಂತೆಂದ ॥ ೨೩

ಕೆಡಹದಿದ್ದೊಡೆ ನಿನ್ನನೀಗಳ
ಮೃಡನಪದದಾಣಧಿಕವಿಪ್ರರ
ಕೆಡಹಿ ನೀಗಿದೆ ತೊಡೆವೆ ನಿನ್ನಯ ಭಾಳದಕ್ಷರವ ।
ಬಿಡೆನು ಬಾ ಯೆನಲವನು ಬೊಬ್ಬಿಡು
ತಿಡುತಲೈದಿದ ಕಲ್ಲು ಗುಂಡಿನ
ಲಡಸಿ ನಿಂದಿರೆ ಭೀಮಸೇನಗೆ ನುಡಿದನವ ನಗುತ ॥ ೨೪

ಖಾತಿಗೊಳ್ಳನು ಮುನ್ನವೇ ನಿನ
ಗೋತು ಕೊಟ್ಟನು ತನ್ನ ಹೊಯ್ಗಳ
ನಾತನೀತನು ಬಟಿಕ ಮುನಿದಿವನೇನ ಮಾಡುವನು ।
ಈತನೆದ್ದನು ಗಜಱಿ ಬಟಿಕಿನೊ
ಳಾತನಿದಿರೆದ್ದನು ಸುರಾರಿಯು
ವಾತಜನ ಹೋರಟೆಗೆ ಹೆಡೆ ತಗ್ಗಿದುದು ವಾಸುಗಿಯ ॥ ೨೫

ಆತಕೊಳ್ಳದನೆನುತ ತಿವಿಯಲಿ
ಕಾತ ಕೊಟ್ಟನು ತನ್ನ ಭುಜವನು

ಮಾತುಗಳಲೇನೆನುತ ಪವನಜ ತಿವಿಯಲನುವಾದ |
ಕಾತರಿಸಿ ಗುದ್ದಲಿಕೆ ನೆತ್ತಿಯು
ನಾತ ತಿವಿದನು ಭೀಮನುರವನು
ಭೀತಿಯಲಿ ಜಗ ನಡುಗೆ ಮೇಲಣ ಸುರರು ಬೆದಱಿದರು || ೭೬

ಬಳಿಕ ಭೀಮನ ಬಾಹುಸತ್ತ್ವವ
ನಳವಿಯಲಿ ತಾನಱಿದು ಹಾಪುದ್ದನು
ಬಳಿಲಿ ಕಿಕ್ಕಱಿಗಿಱಿದು ವನದೊಳಗಾಗಲೋಡಿದನು |
ಪಱುವದಲಿ ತಾ ನೋಡಿ ಬೇಗದಿ
ಜಲದಲಡಗಿದೊಡವನನಱಸಿದ
ನಿರುತ ಮಾರುತತನಯ ಕಾಣದೆ ಹಳ್ಳವನು ತೊಱಲಿ || ೭೭

ಬಳಿಕ ಕಂಡನು ಮುಂದೆ ಗಣಪನ
ನೆಲೆಯುಮಾಸುತ ಬಕನ ಬಟ್ಟೆಯು
ನೆಲೆಯು ತೋಱ್ಕೆ ಪರಶಿವನ ಮೇಲಾಣೆ ತೋಱದಿರೆ [1] |
ನೆಲದೊಳಱಸುವೆನೆನಲು ಪಾರ್ವತಿ
ಮಲಸಮುದ್ಭವನಂಜಿ ಮೆಲ್ಲನೆ
ನೆಲೆಯು ತೋಱುವ ದನುಜ ಹೊಕ್ಕಿಹ ಠಾವ ಬೆರಳಿನಲು || ೭೮

ತೋಱಲಿಕೆ ವಾಯುಜನದಾಕ್ಷಣ
ವಾರುತ್ಯೆದಿದ ಕೆಱೆಯ ನೀರನು
ಹಾಱಿಸಿದನೊಕ್ಕುಡುತೆಯಾಗಲಿಕವನು ಕೆಡೆದಿರಲು |
ಚೀಱಿದನು ಬ್ರಹ್ಮಾಂಡ ವೊಡೆಯು
ಲ್ಕಾರುಬಟೆಯಲಿ ಹಿಡಿಯಲವನನು
ಮಾರುತಾತ್ಮಜ ಕುಡುತೆಯುದಕವ ಮತ್ತೆ ಕೆಱೆಯೊಳಗೆ || ೭೯

ಸೇರಿಸಿಯೆ ಬಳಿಕವನ ಹಿಡಿತಂ
ದೋರಣಿಸಿ ಬಳಿಕವಗೆ ನುಡಿದನು

1 ತೋರಾ ತೋಱದಿದ್ದರೆ ನಿನ್ನನೀನಿಂತು, ಕ. ಜ,

ಧಾರುಣಿಯು ಮೇಲಿನ್ನು ನಿನ್ನಯ ಸರಿಗಡಾರೆನುತ ।
ಧೀರಭೀಮನು ಬಿಟ್ಟೋಡಾಗಲು
ಸಾಱು ಸಾಱೆನುತವನು ಬಂದಾ
ಮಾರುತಾತ್ಮಜಗೆಂದ ನಮ್ಮಯ ಯುದ್ಧರಂಗವನು ॥ ೮೦

ಎಱಗಲಿಕೆ ಬೞಿಕೊಬ್ಬರೊಬ್ಬರು
ಯುಱವಣಿಸಿ ಮಿಗೆ ಮಲ್ಲವಿದ್ಯದ
ಪರಿಯ ತೋಱುತ ಬಕವೃಕೋದರಯುದ್ಧದದ್ಭುತವ ।
ಸುರರು ವಿದ್ಯಾಧರರು ಮೆಚ್ಚಲಿಕ
ವರು ಕಾದಿದರಂದು ಕೋಪದಿ
ನುಱಿಕುಲಾದ್ರಿಗಳ್ಳದೆ ಹುಡಿಹುಡಿಯಾಗಲುಱವಣಿಸಿ ॥ ೮೧

ಹಿಡಿದರೊಬ್ಬರನೊಬ್ಬರುರದಲಿ
ಹೊಡೆದು ಹಿಂಗಿದರವರು ಹೆಮ್ಮರ
ನೊಡೆದು ಹೊಯ್ದಾಡಿದರು ತಿವಿದರು ತೋಳ ಬಲುಹಿನಲಿ ।
ಕೆಡಹಿದನು ಕಲಿ ಭೀಮನವನನು
ಗಗ್ಗಡದಲೆಱಗಿದನುಂಡ ಕೂೞಿನ
ಕಡುಹ ತೋಱೆಂದೊಡಱಿ ತುಡುಕಿದನನಿಲನಂದನನ ॥ ೮೨

ಸಿಕ್ಕಿದನು ಕಲಿಭೀಮನೆನೆ ಕ
ಯ್ಯಿಕ್ಕಿಕೊಟ್ಟನು ಮೆಯ್ಯನಸುರನ
ಹೊಕ್ಕು ತಿವಿದನು ತಿರಿಸಿ ಬದಿಯನು ನುಗ್ಗುನುಸಿಯಾಗೆ ।

ಬಕನ ಸಂಹಾರ.

ಬಿಕ್ಕುಳಿನ ತಾಳಿಗೆಯ ಮೂಗಿನೊ
ಳೊಕ್ಕವುಸರಿನ ಖಳನ ಬಿಗಿದುಱಿ
ಡೊಕ್ಕರಿಸಿ ಹಿಡಿದಿಳೆಯೊಳಪ್ಪಳಿಸಿದನು ಕಲಿ ಭೀಮ ॥ ೮೩

ಕೊಂದು ದನುಜನ ಹೆಣನ ಭಂಡಿಯ
ಹಿಂದೆ ಬಂಧಿಸಿ ಪುರದ ಬಾಹೆಗೆ

ತಂದು ಬಿಸುಟನು ತನತನಗೆ ಜನಜಾಲ ಜೋಡಿಯಲಿ ।
ಬಂದು ಕಂಡುದು ನಮ್ಮ ಭೂಸುರ
ವೃಂದ ಧನ್ಯರು ವಿಪ್ರಜಾತಿಗೆ
ಸಂದುದಿಂದಗ್ಗಳಿಕೆ ಯೆಂದುದು ನೆರೆದ ಪೌರಜನ ॥ ೪

ಬಕನ ಸಂಹಾರವಾದ ಬಳಿಕ ವಿಪ್ರರು ಭೀಮನನ್ನು ಸ್ತುತಿಸುವಿಕೆ.

ಇದಿರುಗೊಂಡರು ಧೀರಭೀಮನ
ಸದನವನು ಹೊಗಿಸಿದರು ಹರುಷದಿ
ವಿದಿತಭೂಸುರರೈದೆ ನುಡಿದರು ಭೀಮಸೇನಂಗೆ ।
ವಧಿಸಿ ಬಕನನು ನಮ್ಮ ರಕ್ಷಿಸಿ
ವಿದಿತದಿವಸದ ಪರಮಪಾಕವ
ಮುದದಿ ನೀವೇ ಕೊಂಬುದೆಂದರೆ ಭೀಮನಿಂತೆಂದ ॥ ೫

ವೀರನಾರಾಯಣಗದರ್ಪಿಸಿ
ಭೂರಿಭೋಜನ ಮಾಡಿ ನೀವಿದ
ನಾರು ನಿಲಿಸದೆ ಸಕಲಜಂಗಮರೂಪಗಿಕ್ಕುವುದು ।
ಧಾರುಣೀಪತಿ ಧರ್ಮಸುತ ತಾ
ಹಾರಯಿಸಿ ಯಿಹುದೆಂದು ಕುಂತೀ
ನಾರಿ ತಾ ಪತಿಕರಿಸೆ ಪಾರ್ಥನು ಚಲುವಮತವೆಂದ ॥ ೬

ಧೀರರೈವರು ಮುದದಿ ಮನ್ನಿಸಿ
ಧಾರುಣಿವ್ರಾತವನು ವರಕಲಿ
ಮಾರುತಾತ್ಮಜ ಕರವ ಜೋಡಿಸಿ ಯೆಂದ ವಿಪ್ರರಿಗೆ ।
ಊರು ನಿಮಗಿದು ಸರ್ವಮಾನ್ಯವು
ಧಾರುಣೀಸುರರಂಜದಿರಿ ನಿಮ
ಗಾರು ನಿವ್ವಿಾಯಗ್ರಹಾರಕೆ ಮುಸಿವರಿಲ್ಲೆಂದ ॥ ೭

ಎಂದು ಭೂಸುರಜನಕೆ ಧಾರೆಯ
ನಂದೆ ಯೆಱೆದನು ಬಳಿಕ ವಿಪ್ರರ

ವೃಂದವನು ಕಳುಹಿದನು ಮಾರುತನಂದನನೊಲವಿನಲಿ ।
ಅಂದಿಗಾಯಿತದರ್ಧವತ್ಸರ
ಬಂದು ಪಾಂಡವರೇಕಚಕ್ರಕೆ
ಮುಂದಣುತ್ತರಕಥೆಯ ಕೇಳ್ಳೈ ರಾಯ ಸೀನೆಂದ ॥ ೮೮

ರಾಯಯೋಗ್ಯವು ನಮ್ಮ ಪುರವರ
ಕಾಯಿತೈ ಪರಿತೋಷ ನಿಮ್ಮಿಂ
ದಾಯಿತೈ ಸುಕ್ಷೇಮ ವಿಪ್ರಸ್ತೋಮ ವಿಂತೆಂದು ।
ಆಯು ಸಿರಿ ನಿಮಗಕ್ಕೆ ವರಚ
ಕ್ರಾಯುಧನ ಕೃಪೆಯಿಂದಲೀಗಳ
ರಾಯ ಗದುಗಿನ ವೀರನಾರಾಯಣನ ಕರುಣದಲಿ ॥ ೮೯

ಎನುತಲಾ ಬಹುಧಾನ್ಯ ನಗರಿಯ
ಜನವು ಸಂತೋಷದಲಿ ಕುಂತೀ
ತನುಜರಿಗೆ ಬಹುಹರಕೆಗೊಡುತಲಿ ದ್ವಿಜರು ಬೀಳ್ಕೊಂಡು ।
ಮನುಜವೈರಿಗೆ ನಮ್ಮಬಂಧನ
ದನುವ ತೊಲಗಿಸಿದಧಿಕಸಹಸಿಗಳ
ಳನುವಿನಲಿ ಪಾಲಿಸುಗೆ ನಾರಾಯಣನು ಯಿವರುಗಳ ॥ ೯೦

ಈ ಯಮಾನುಷಶಕ್ತಿ ಯಿದು ಸುರ
ರಾಯಯೋಗ್ಯವು ನಮ್ಮ ವಿಪ್ರನಿ
ಕಾಯಕಿದು ಸಾಮಾನ್ಯವೇ ನಮ್ಮಗ್ರಹಾರವನು ।
ಕಾಯಿದವರೀಗೆಂದು ವಿಪುಳ
ಶ್ರೀಯ ಪದ್ಮಜಸೋಮಧರನಾ
ರಾಯಣರು ಕೊಡಲೆಂದು ಹರಸಿದುದಾ ಜನಸ್ತೋಮ ॥ ೯೧

ಇಪ್ಪತ್ತುಮೂರನೆಯ ಸಂಧಿ ಮುಗಿದುದು.

ಇಪ್ಪತ್ತನಾಲ್ಕನೆಯ ಸಂಧಿ.

ಸೂಚನೆ.

ವೀರಕುಂತೀತನುಜರಿರುಳಂ
ಗಾರವರ್ಮನ ಗೆಲಿದು ಹೊಕ್ಕರು
ಧಾರುಣೀಸುರವೇಷದಲಿ ಪಾಂಚಾಲಪುರವರವ ॥

ಅರಸ ಕೇಳೈ ಕಲಿ ಬಕಾಸುರ
ಹರಣಸಮನಂತರದೊಳಾ
ಪುರವರದೊಳಿದ್ದರು ವಿಮಳವಿಪ್ರಸ್ತೋಮದೊಡಗೂಡಿ ।

ಪ್ರವಾಸಿಯಾದ ಬ್ರಾಹ್ಮಣನ ದರ್ಶನ ಮತ್ತು ಭಾಷಣ.

ವರುಷ ತುಂಬಿತು ನಮ್ಮ ಹಸ್ತಿನ
ಪುರವ ಹೊಱವಂಟಂದಿನಲಿ ಯೆಂ
ದರಸ ಕುಂತೀದೇವಿಗೆಂದನು ಭೂಪ ಕೇಳೆಂದ ॥ ೧

ಆಸಮಯದಲಿ ಬಂದನೊಬ್ಬನು
ಭೂಸುರನು ಸುಕುತೂಹಳನು ಬಹು
ದೇಶಪರ್ಯಟನಪ್ರವಾಸಾಭ್ಯಾಸಶಿಕ್ಷೆಯಲಿ ।
ಗ್ರಾಸಯಾಚಕನಾಗಿ ತನ್ನ ನಿ
ವಾಸದಲಿ ಪರಿತುಷ್ಟನಾದ ಮ
ಹೀಸುರನ ಮಾತಾಡಿಸಿದನಂದರಸ ವಿನಯದಲಿ ॥ ೨

ಎತ್ತಣಿಂದಲಿ ಬರವು ಬೞಿಕಿ
ನ್ನೆತ್ತ ಗಮನವು ಪೂರ್ವಸುಕೃತದ

ಹೊತ್ತಿದಿಂದಿನದಿವಸವಿದೆಲಾ ಸುಜನಸಂಸರ್ಗ ।
ಉತ್ತರೋತ್ತರಸಿದ್ಧಿಯಿಲ್ಲಿಂ
ದೆತ್ತ ನಿಮಗೆನೆ ಹಸ್ತಿನಾಪುರ
ದತ್ತಣಿಂದವೆ ಬಂದೆವಾವುದು ದೇಶ ನಿಮಗೆಂದ ॥ ೩

ನಾವು ನಿಮ್ಮೋಪಾದಿಯಲಿ ತೀ
ರ್ಥಾವಲೋಕನಪರರು ಭಿಕ್ಷಾ
ಜೀವಿಗಳು ನೀವೇಸು ದಿನ ಗಜಪುರಿಯು ಹೊಱವಂಟು ।
ಆವನಲ್ಲಿಗೆ ಪತಿ ಯುಧಿಷ್ಠಿರ
ದೇವನೋ ದುರ್ಯೋಧನನೊ ಮೇ
ಣಾವುದತಿಶಯ ವುಂಟು ಕೌರವಪಾಂಡುತನಯರಲಿ ॥ ೪

ಮರುಳುಗಳಲಾ ನಮ್ಮನಾಡಿಸಿ
ಮರುಳು ಮಾಡುವ ಪರಿಯೊ ಪಾಂಡವ
ರರಗಿನರಮನೆಯಲ್ಲಿ ಬೆಂದರು ಲೋಕ ವೞಿಯಲಿಕೆ ।
ಅರಸ ಕೌರವರಾಯನಾತನ
ಸಿರಿಯನಾತನ ಬಲುಹನಾತನ
ಯಿರವನಭಿವರ್ಣಿಸುವೊಡಾವನು ವಿಪ್ರ ಕೇಳೆಂದ ॥ ೫

ದುರ್ಯೋಧನನ ಐಶ್ವರ್ಯವರ್ಣನೆ.

ಓಲಗಕೆ ಬರುತಿಪ್ಪ ಕರಿಗಳ
ಕೀಳುದಾನದಿನೆಸೆವ ತುಂಬಿಯು
ಲೋಲಭೂಪರ ರತ್ನಭೂಷಣವ್ಯಸೆ ರಜದಿಂದ ।
ಮೇಲೆ ಹುಡಿ ಯಿಡೆ ಹೊಡೆವ ನಾನಾ
ಕಾಳ ಶಂಖವು ಭೇರಿತಂಬಟ
ಮೇಲುದನಿ ಮುಚ್ಚುವುದು ಲೋಕದ ಕರ್ಣಕೋಟರವ ॥ ೬

ಅವನಿಪಗೆ ಮಂತ್ರಾಕ್ಷತೆ ಮಹಿಸು
ರವರರು ತರಲು ಬೀಯ್ಯವಹುದು ಗ

ಜವು ತ್ರಿತಯಸಾವಿರಕೆ ಗ್ರಾಸವು ದಿವಸದಿವಸದಲಿ ।
ಅವರ ಬೆರಳಿಂ ಬದ್ಧದೂರ್ವೆಯು
ನಿವಹ ಮೋಹುಗಳಹವು ಹಯಕುಲ
ನಿವಹವೈಸಾವಿರಕೆ ಕೌರವರಾಯನೈಶ್ವರ್ಯ ॥ ೭

ಹವಣಿಸಲು ಬಹುದೆಂದೊಡಾರಿಗೆ
ಭುವನದಲಿ ನೃಪರುಂಟೆ ಕೌರವ
ರವರ ಸರಿಸಕೆ ಯಿಲ್ಲ ಯಮರಾಸುರಮನುಷ್ಯರಲಿ ।
ಅವರ ಮಾತನು ಕೇಳಿ ನಗುತಾ
ಪವನಸುತ ನಸುನಗುತ ವಿಪ್ರಗೆ
ಜವನ ಸುತ ಸಹಿತೆಂದರಾಗಲು ತಮ್ಮನಱುಹಿಸದೆ ॥ ೮

ಅಕಟ ಪಾಂಡವರೞಿದರೇ ಬಾ
ಧಕರೆ ಪರರಿಗೆ ಲೇಸಿನಲಿ ಕಂ
ಟಕವು ದುಗ್ಧವಿಷಂಗಳಲಿ ಹಾವಿಂಗೆ ಹಾನಿ ಯಲೆ ।
ವಿಕಳಪುಣ್ಯರು ನಿಲಲಿ ಕುರುರಾ
ಜಕದೊಳಗೆ ಭೀಷ್ಮಾದಿವೃದ್ಧ
ಪ್ರಕರಗುರುಕೃಪಗುರುಸುತಾದ್ಯರು ಕುಶಲರೇ ಯೆಂದ ॥ ೯

ದ್ರೌಪದೀ ಸ್ವಯಂವರವೃತಾಂತವನ್ನು ಹೇಳುವಿಕೆ.

ಗುರುಕೃಪಾದಿಸಮಸ್ತಪುರಜನ
ಪರಿಜನಕೆ ಸುಕ್ಷೇಮ ದ್ರುಪದನ
ವರಕುಮಾರಿಯ ಮದುವೆ ಗಡ ಪಾಂಚಾಲದೇಶದಲಿ [1] ।
ನೆರೆವುತಿದೆ ನಾನಾದಿಗಂತದ
ಧರಣಿಪತಿಗಳು ಭೂಮಿಯಲಿ ಬರೆ
ಭರಿತದಕ್ಷಿಣೆಯುಂಟು ಭೋಜನಸಹಿತ ನಮಗೆಂದ ॥ ೧೦

---

1 ನಗರದಲಿ, ಚ.

ಸಾಬಲಿದ ನೃಪಕನ್ಯಕೆಗೆ ವರ
ನಾರು ಲಗ್ನವಿದೆಂದು ಬೞಿಕಾ
ರಾರು ಬಂದರು ಭೂಪತಿಗಳಂದರಸ ವಿನಯದಲಿ ।
ಭೂರಿಯಲಿ ನಮಗುಂಟೆ ಮೃಷ್ಟಾ
ಹಾರದಕ್ಷಿಣೆ ನಮ್ಮಭೀಷ್ಟ ವಿ
ಹಾರವಾರ್ತೆ ಯಿದೆಂದು ಧರ್ಮಜ ನುಡಿದನಾದ್ವಿಜಗೆ ॥ ೧೧

ಇವರು ಕಪಟೋಪಾಧ್ಯರೆಂಬುದ
ನವರು ಬಲ್ಲರೆ ಭೂಮಿದೇವ
ಪ್ರವರರೈ ಸಲೆ ಯೆಂದು ಬಗೆದನು ಪಾಂಡುನಂದನರ ।
ಅವನಿಯಲಿ ಪಾತಾಳದಲಿ ಸುರ
ಭವನದಲಿ ಪಾಂಚಾಲತನುಜೆಗೆ
ಯುವತಿಯರು ಸರಿಯಿಲ್ಲ ವೆಂಬುದ ಕೇಳ್ದ ನಾನೆಂದ ॥ ೧೨

ಪಾಂಡುಪುತ್ರರು ಹೋದರೆಂದು ಸ್ವಯಂವರಕ್ಕಾಗಿ ದ್ರುಪದನ ಪ್ರಯತ್ನ.

ಆಕೆಗೆಣೆಯಹ ವರನನೀನರ
ಲೋಕದಲಿ ನಾ ಕಾಣೆನರ್ಜುನ
ನೀಕುಮಾರಿಗೆ ರಮಣನೆಂದೇ ಮನದ ಸಂಕಲ್ಪ ।
ಈಕೆಯುಪದೆಶೆಯುದಯದಲಿ ಕುಂ
ತೀಕುಮಾರಕರನಲಮುಖದಲಿ
ನಾಕದಲಿ ನೆಲೆಗೊಂಡರೆಂದುಮ್ಮಳಿಸುವನು ದ್ರುಪದ ॥ ೧೩

ಉಮ್ಮಳಿಸಿ ದ್ರುಪದಾಂಕ ಮುನ್ನಿನ
ಕರ್ಮವನು ಪರುಠವಿಸಿ ಶಂಕರ
ನೆಮ್ಮ ಮಗಳಿಗೆ ವರವ ಕೊಟ್ಟನು ಪಾರ್ಥ ಪತಿಯೆಂದು ।
ಇಮ್ಮೆ ನುಡಿ ಶಿವಗಿಲ್ಲ ವೆನುತಲಿ
ವೊಮ್ಮೆ ದ್ರುಪದನು ಶಿವನ ಧ್ಯಾನಿಸಿ
ಹೆಮ್ಮಗಳ ಯಿನ್ನಾರಿಗೀವೆನೆನಲ್ಕೆ ಶಶಿಮೌಳಿ ॥ ೧೪

ಬಂದು ದ್ರುಪದಗೆ ನಿನ್ನ ಮಗಳಿಗೆ
ಯಿಂದು ಪತಿಯಿಲ್ಲೆಂದು ಒಱಲಿದೇ
ಮಂದಮತಿ ನೀನಾಗದಿರು ಕೊಳ್ಳೆಂದು ಕರುಣಿಸಿದ ।
ಬಂದು ಧನುವೆನು ಬಾಣಪಂಚಕ
ದಿಂದ ಮತ್ಸ್ಯದ ಯಂತ್ರವೆನು ತಾ
ನೊಂದು ಭಾರಿಯೆ ಯೆಚ್ಚೊಡಾತನೆ ರಮಣನಹನೆಂದ ॥ ೧೫

ಎಂದು ಶಿವ ಕರುಣಿಸಿದ ಚಾಪವೆ
ನಂದು ತಾನದು ಮಂದರಾಚಲ
ದಿಂದ ತೂಕಿಯೆ ವರಪಿನಾಕವ ಕೊಟ್ಟನಾಶಿವನು ।
ಎಂದು ಹರ ಕೊಟ್ಟುದನು ದ್ರುಪದನು
ತಂದು ಮಂದಿರಕಿರಿಸಿ ಬಚ್ಚಿಕರ
ವಿಂದನಾಭನ ನೆನೆದ ಪಾಂಡವನೃಪರ ರಕ್ಷಿಪುದು ॥ ೧೬

ದ್ರುಪದನ ಚಿಂತೆ.

ಎಂದು ಮನದುಗುಡದಲಿ ತಾ ಗೋ
ವಿಂದನಂಘ್ರಿಯ ದೂಱುತಿಪ್ಪನ
ಯಿಂದುಧರ ನುಡಿದುದನು ಸಲಿಸುವುದೆಂದು ಚಿಂತಿಸಿದ ।
ಬಂದೆರಡು ಬೋಳವನು ಕಾಯದೆ
ಕೊಂದೆಲ್ಲೈ ಗೋವಿಂದ ಕುಂತೀ
ನಂದನರನಕಟೆನುತ ದ್ರುಪದನು ಮತ್ತೆ ಮನದೊಳಗೆ ॥ ೧೭

ಬಂದ ನೆನೆವನು ಸರ್ವಥಾ ಗೋ
ವಿಂದ ಕುಂತೀನಂದನರಿಗಾ
ವೊಂದು ಬಾಧೆಯನವರಿಗಿಕ್ಕನು ಪಾಂಡುಪುತ್ರರಿಗೆ ।
ಎಂದು ಮನದಲಿ ಹಿಡಿವ ಸಂಶಯ
ವೊಂದನಾಗಳು ಪಾಂಡುಪುತ್ರರ
ಛಂದವನು ತಾನಱಿಯುದಾಗಳು ದ್ರುಪದಭೂಪಾಲ ॥ ೧೮

ಜ್ವಲನನುಱೆ[1] ನುಂಗಿದನೊ ಮೇಣಿಂ
ಜಲಿಸಿ ಬಿಟ್ಟನೊ ಬಲ್ಲನಾವನು
ಕಲುಷಹೃದಯನು ಕಮಲನಾಭನು ಪಾಂಡುನಂದನರ ।
ಸುಳಿವಗೋಚರವಕಟ ಘೂಹೆಗ
ಳಳಿವ ಹರಯುವೆ ಶಿವ ಶಿವಾಯೆಂ
ದಳಲು ದೊರೆಯಲಿ ಮುಳುಗಿ ಮೂಡುವನೆಂದು ಪಾಂಚಾಲ ॥

ಅರಸ ಕೇಳ್ವನು ಶಕುನ ದೈವ
ಜ್ಞರೊಳಗುಪಶ್ರುತಿಗಳಲಿ ಋಷಿಗಳ
ಪರಮಸಿದ್ಧಾಂತದಲಿ ಮಂತ್ರಾವೇಶರಚನೆಯಲಿ ।
ಧರೆಯೊಳೀಗಲು ಪಾಂಡುಸುತಸಂ
ಚರಣವುಂಟೆನು ಸತ್ಯವೆಂದುಪ
ಚರಿಸಿ ನುಡಿದು ಪುರೋಹಿತನು ಸಂತೈಸುವನು ನೃಪನ ॥ ೨೦

ಅನೇಕ ರಾಜರುಗಳಿಗೆ ಪತ್ರಿಕಾಪ್ರೇಷಣ.

ಸರಸಿಜಾನನೆ ನೋಡಿ ನೃಪರಲಿ
ವರಿಸುವಳು ವಲ್ಲಭರನೆಂದುಪ
ಚರಿಸುವುದು ಸವಿಮಾತುಗಳ ಸಾರಾಯಸೋನೆಯಲಿ ।
ಬರಿಸುವುದು ಬಹುಕುಲದ ಭೂಮೀ
ಶ್ವರರನವರೊಳು ಪುಣ್ಯದಲಿ ಗೋ
ಚರಿಸಲೀಗರುವೆಯರ ದೇವಿಗೆ ಪಾಂಡುನಂದನರು ॥ ೨೧

ಅದೊಡೀಮಗುವಿನ ಮಹಾಪು
ಣ್ಯೋದಯದ ಫಲವೈಸಲೆ ಬರೆ
ಮೇದಿನೀಶ್ವರರೆಲ್ಲರಿಗೆ ಲೇಖಾರ್ಥ ಸಂಗತಿಯ ।
ಸೋದರರು ಸಹಿತಾಸುಯೋಧನ
ನಾದಿಯಾದ ಸಮಸ್ತನೃಪರು ವಿ
ವಾದವಿಲ್ಲದೆ ಬರಲಿ ಕಟ್ಟಿಸು ಪಾವುಡವನೆಂದ ॥ ೨೨

1 ಜಲನಸಖ, ಖ.

ಬರೆದನೋಲೆಗಳಖಿಳಭೂಮೀ
ಶ್ವರರಿಗುಡುಗೊರೆಸಹಿತ ದೂತರು
ಹರಿದರುತ್ತರಪೂರ್ವದಕ್ಷಿಣಪಶ್ಚಿಮಂಗಳಿಗೆ ।
ಧರೆಯ ಕನ್ಯಾಜನಶಿರೋಮಣಿ
ವರದ್ರುಪದತನುಜೆಯ ಸ್ವಯಂ
ವರಕರಸುಗಳು ಬಹುದೆಂದು ವಾಚಿಸಿತಖಿಳಲೋಕಾರ್ಥ ॥ ೨೩

ಮಾಡಿದರೆ ಶತಯಜ್ಞವನು ಕೈ
ಗೂಡುವಳು ಶಚಿ ಮುಖಸಹಸ್ರವ
ನಾಡಿ ಮೋಹ ಜನಿಸಿದರೆ ಬಹಳೇ ದ್ರೌಪದೀದೇವಿ ।
ನೋಡುವೆವು ನಡೆ ಜನ್ಮಶತವಲಿ
ಕೂಡೆ ಹೆಚ್ಚಿದ ಪುಣ್ಯಫಲ ಕೈ
ಗೂಡುವೊಡೆ ತಪ್ಪೇನೆನುತ ನೆರೆದುದು ನೃಪಸ್ತೋಮ ॥ ೨೪

ಆಪುರೋಹಿತವಚನದಲಿ ನಿ
ರ್ವಾಪಿತಾಂತರ್ವ್ಯಥೆಯಲವನಿಪ
ನಾಪುರೋಪಾಂತರದ ಸುತ್ತಲು ಮೂರುಯೋಜನದ ।
ತೋಪಿನಲಿ ಕಟ್ಟಿಸಿದನಗ್ಗವ
ಭೂಪರಿಗೆ ಭವನವನು ಕೇಳೈ
ದ್ರೌಪದಿಯ ವೈವಾಹರಚನೆಯ ರಾಮಣೀಯಕವ ॥ ೨೫

ಬ್ರಾಹ್ಮಣರೆಲ್ಲರೂ ಪ್ರಯಾಣ ನಿಶ್ಚಯಿಸುವಿಕೆ.

ನೆರೆದಿಹರು ನಾನಾದಿಗಂತದ
ಧರಣಿಪರು ಕನ್ಯಾರ್ಥಿಗಳು ಭೂ
ಸುರಸಮೂಹದ ಸಾಲು ಮಿಕ್ಕಿದುದು ದಕ್ಷಿಣಾರ್ಥಿಗಳ ।
ಎರಡರೊಳು ನಿಮಗೇನು ಕನ್ಯಾ
ವರಣವೊ ವರದಕ್ಷಿಣಾರ್ಥವೊ
ಬರವು ನಿಮಗುಂಟೇನೆನುತ ದ್ವಿಜನಿವರ ಬೆಸಗೊಂಡ ॥ ೨೬

ಈಸು ಪರಿಯಲಿ ನಮ್ಮ ನೀವುಪ
ಹಾಸವಾಡವಿರಿಂದು ನಮಗೆ ಮ
ಹೀಶಕನ್ಯಾರ್ಥಿತ್ವದಲಿ ನಾವೇಕೆ * ನೃಪರೇಕೆ ।
ಲೇಸು ನಿಮ್ಮೊಡನಾವು ಬಹೆವ್ಯೆ
ಭೂಸುರರ ನೆರವುಂಟಲೇ ಶುಭ
ವಾಸವನು ಬೆಸಗೊಂಬೆವೆಂದನು ಧರ್ಮನಂದನನು ॥ ೧೭

ಅವರು ಬಟಿಕ ನಿಜಪ್ರಯೋಜನ
ಭವನಕೈದಿದರಖಿಳ ವಾರ್ತಾ
ವಿವರಣವ್ಯಾಖ್ಯಾನಸಮನಂತರದ ಸಮಯದಲಿ ।
ಇವರು ತಮ್ಮೊಳಗೆಂದರೆಮಗೀ
ಯುವನಿಸುರಪುರದಲ್ಲಿ ವೇದ
ಶ್ರವಣದಲ್ಲಿ ನಿರೀಕ್ಷಿಸುವುದಾದ್ರುಪದಪಟ್ಟಣವ ॥ ೧೮

ಆಲತಾಂಗಿಯ ಮದುವೆಗವನೀ
ಪಾಲವರ್ಗದ ಬರವು ಗಡ ಹರ
ನೊಟಿಗದ ಹೆಚ್ಚಾಳು ಮಕರಧ್ವಜನ ಮೌಳಿ ಗಡ ।
ಮೇಳವೇ ಕಿವಿಗಳಿಗೆ ಹಂಗಹ
ವಾಲಿಗಳ ಪರಿವಿಡಿಯಲೆವೆಗಳು
ಸಾಲುವವೆ ಯೆಂದ್ಯೆವರಾಳೋಚಿಸಿದರಡಿಗಡಿಗೆ ॥ ೧೯

ಆಗ ಪಾಂಡುಪುತ್ರರಿಗೆ ನಾನಾವಿಧಶಕುನ.

ಅರಸ ಚಿತ್ತೈಕ್ಯಸಮಳಲಗ್ನಾಂ
ತರದೊಳಿವರುದಯದಲಿಹೊಱವಂ
ಟರು ಸುವಿದ್ಯಾಪರಿಣತರು ಪಂಡಿತರ ಗಡಣದಲಿ ।
ಬರುತ ಕಂಡರು ಕಳಸಕನ್ನಡಿ
ವರಯುವತಿಖಗಮೃಗದ ಬಲಸು
ಸ್ವರಸುಗಂಧಾನಿಳಸುಸಂಪದಸಾರಶಕುನಗಳ ॥ ೨೦

* ಹಾಸ್ಯವಾಡದಿರಾವು ಭಿಕ್ಷುಕರ್ರೈಸಲೇ ಕನ್ಯಾರ್ಥಿಗಳು ನಾವೇಕೆ *

ಚಾರುಶಕುನವಿದುತ್ತರೋತ್ತರ
ವಾರಿಗಿದು ಫಲಿಸುವುದೊ ನಮ್ಮೊಳು
ಹಾರುವರ ಹುಲುವೊತ್ತ ಕನ್ಯಾಲಾಭಫಲವಿದಕೆ ।
ಭೂರಿಭಾಗ್ಯರು ನಮ್ಮ ವಿಪ್ರರೊ
ಳಾರೆನುತ ತಚ್ಛಕುನಫಲವಿ
ಸ್ತಾರವನು ವಿವರಿಸುತ ನಡೆದುದು ಭೂಸುರವ್ರಾತ ॥ ೩೧

ಧರಣಿಯುಮರರ ಗಡಣದಲಿ ನಾ
ಲ್ಕೆರಡು ಪಯಣವ ಬರುತ ಪಥದಲಿ
ವರಮುನಿಗಳಾಶ್ರಮದೊಳಗೆ ಪರಾಶರಾತ್ಮಜನ ।
ದರುಶನವ ಮಾಡಿದರು ಶಕುನದ
ನಿರುತವನು ವಿಸ್ತರಿಸಿ ಕೇಳಲು
ಕರುಣಿಸಿದ ನಿಮಗಹುದು ಬಾಸಿಗವೆಂದು ಬೀಳ್ಕೊಟ್ಟ ॥ ೩೦

ಗಮನಭರದಲಿ ಭಾರಿಯುಧ್ವ
ಶ್ರಮವ ನೋಡದೆ ಭೂಮಿಪರು ಬರ [1]
ಲಮಳಬುಧಜನ ಮಿಕ್ಕು ನಡೆದುದು ಮುಂದೆ ಸಂದಣಿಸಿ [2] ।
ದ್ಯುಮಣಿ ಕೈಸೆಱೆಯಾದನತ್ತಲು
ಭ್ರಮಣದಲಿ ಜೆಱಗಾಗೆ ಭೂಪೋ
ತ್ತಮರು ಬಂದರು ಬಹಳಗಹನದೊಳರ್ಧರಾತ್ರದಲಿ ॥ ೩೩

ಮುಂದೆ ಪಾರ್ಥನ ಬೀಸುಗೊಳ್ಳಿಗ
ಳಿಂದ ತಮದೊಡ್ಡೋಡೆ ಬೆಳಗಿನ
ಹಿಂದೆ ಕುಂತೀದೇವಿ ಧರ್ಮಜನಕುಲಸಹದೇವ ।
ಹಿಂದೆ ಭೀಮನ ಕಯ್ಯ ಕೊಳ್ಳಿಯು
ಬಿಂದು ವೆಳಗಿನಲನಿಬರಟವೀ
ವೃಂದದಲಿ ಬರುತಿರ್ದರಿರುಳವನೀಶ ಕೇಳೆಂದ ॥ ೩೪

---

1 ನಭದಲಿ, ಚ. 2 ತವುದಚಾವಡಿಯಿಕ್ಕಿದರೆ ಗತಿಚಾಪಳವ ಬಿಡದೆ, ಚ.

ಅಂದು ಪಾಂಡವರೈವರಾಗಿರಿ
ಕಂದರದ ಮೇಲಿಳಿದು ಬರೆಬರೆ
ಮುಂದೆ ತಾವ್ ಗೀರ್ವಾಣಗಂಗೆಯು ಕಂಡರೈ ಬಳಿಕ ।
ವಿಂಧ್ಯಪರ್ವತದಲ್ಲಿ ಕುಂತೀ
ನಂದನರು ಬರಬರಲು ರಾತ್ರಿಯೊ
ಳಂದು ಮೂಡಿದ ಪೂರ್ವಭಾಗದೊಳರ್ಧರಾತ್ರದಲಿ ॥ ೩೫

ಬರುತ ಕಂಡನು ಮುಂದೆ ಗಂಧ
ರ್ವರ ವಧೂನಿಕುರುಂಬವನು ನೇ
ವುರದ ಝಣರವದ ಕಂಕಣರಭಸಝೇಂಕೃತಿಯು ।
ಮೆರದ ಕಂಗಳ ಬೆಳಗಿನಲಿ ತಮ
ದಿರುಳು ಬೀತುದು ಬೆಸೆವುದಾಗಳ್
ಕುರುಳ ಕಾಳಗೆಯಿಂದ ಕಾಂತಾವರಕದಂಬದಲಿ ॥ ೩೬

ಅಲ್ಲಿ ಬಂದ ಸುಂದರಿಯರ ವರ್ಣನೆ

ಲಲಿತತನುಕಾಂತಿಗಳ ಮೊಗೆದರು
ತಿಳಿಗೊಳನಜಲವೆಂದು ಕಂಗಳ
ಹೊಳೆಯು ಮಿಅಮಿಾನೆಂದು ಹೆಕ್ಕಳಿಸಿದರು ಹಿಡಿಹಿನಲಿ ।
ಅಲರಿದಂಬುಜವೆಂದು ವದನಕೆ
ನಿಲುಕಿ ತುಂಬೆಗಳಂದು ಕುರುಳಿಂ
ಗಳುಕಿ ಕೈಗಳ ತೆಗೆದರಲ್ಲಿಯು ಮುಗುದಖಚರಿಯರು ॥ ೩೭

ಅವರ ಮುಖಕಾಂತಿಗಳಲಂಗ
ಛವಿಗಳಲಿ ಕಂಕಣದ ಹಾರದ
ವಿವಿಧ ರತ್ನಾಭರಣಕಿರಣದ ಲಲಿತಲಹರಿಯುಲಿ ।
ಸವೆದುದಗ್ಗದ ತಿಮಿರವನಿಬರ
ನಿವರ ಕಂಡರು ಜಲವಿಹಾರವ
ದಿವಿಜಸತಿಯರಲಾಯೆನುತ ಬರುತಿರ್ದರಡವಿಯುಲಿ ॥

ನಾರಿಯರು ಕಂಡರು ಸುಲಜ್ಜಾ
ಭಾರದಲಿ ತಡಿಗಳಿಗೆ ಹಾಯ್ದರು
ಸೀಱೆಗಳ ತೆಱೆವಿಡಿದರಂಗೋಪಾಂಗಲತೆಗಳಿಗೆ ।
ಆರಿವರು ನಡುವಿರುಳು ದರ್ಪವಿ
ಕಾರದಲಿ ಕೈಕೊಳ್ವರೆನುತಂ
ಗಾರವರ್ಣನು ಧನುವ ಕೊಂಡನು ದಿಟ್ಟಿಸಿದನಿವರ [1] ॥ ೩೯

ಗಂಧರ್ವ ಮತ್ತು ಅರ್ಜುನರ ಸಂವಾದ.

ಈಸು ಭರದಲಿ ಗಮನವೆಲ್ಲಿಗೆ
ದೇಶಕಾಲವ ನೋಡದೀಸ
ರ್ವಾಸುರದ ಸಂರಂಭವೇನೆನೆ ಪಾರ್ಥನಸುನಗುತ ।
ದೇಶವಿದು ವನ ಕಾಲ ನಡುವಿರು
ಳ್ಳ ಸಲೆ ನಿಜಕಾರ್ಯಸಂಗತಿ
ಗೋಸುಗವೆ ಬರವೆಂದನರ್ಜುನ ಖಚರರಾಜಂಗೆ ॥ ೪೦

ಎನಲು ಪಾರ್ಥನ ಮಾತ ಕೇಳಿಯೆ
ಕನಲಿ ಸುರನಾಯಕನು ತನ್ನಯ
ವಿನುತವನಿತಾಸ್ತೋಮಲಜ್ಜೆಯ ಕಂಡು ಕೋಪದಲಿ ।
ತನುವ ಸಂಪರಿಸುತ್ತ ಫಲ್ಗುನ
ನನುವ ಕಂಡಳುಕುತ್ತ ಮನದಲಿ
ಮನುಜರಿವರಾರೆನುತ ನುಡಿದನು ವಿಜಯನಿದಿರಿನಲಿ ॥ ೪೧

ಪಾಂಡವರ ಮೇಲೆ ಗಂಧರ್ವನ ಬಾಣಪ್ರಯೋಗ.

ನರರು ಸುೞಿವುದು ಪೂರ್ವಭಾಗದೊ
ಳಿರುಳಿನುತ್ತರಭಾಗವಿದು ಖೇ
ಚರರು ಸುೞಿವುದು ಸೀಮೆ ಚತುರಾನನನ ಸೃಷ್ಟಿಯಲಿ ।
ಇರುಳಿನುತ್ತರಭಾಗದಲಿ ಸೀಮ್

---

[1] ನುತಿಸಿದನು ನಂನ, ಚ.

ನರರು ಸುಟಿವುದ್ದಂಡದರ್ಪ
ಜ್ವರಿತರಿವಕೌಷಧಿಯು ನೆರೆವೆನೆನುತ್ತ ತೆಗೆದೆಚ್ಚ ॥ ೪೨

ಅರ್ಜುನನ ಆಗ್ನೇಯಾಸ್ತ್ರದಿಂದ ರಥವು ಹೋಗಲು ಹೆಂಡತಿಯು ಪ್ರಾರ್ಥನೆ.

ಕನಲಿ ಫಲುಗುಣನಾದೊಡಿದ ಕೊ
ಳ್ಳೆನುತ ಕೊಳ್ಳಿಯೊಳಟ್ಟನಗ್ನಿಯು
ನೆನೆದು ಮಂತ್ರಿಸಲುರಿಮುಖದ ಕಬ್ಬೊಗೆಯು ಮಬ್ಬಿನಲಿ ।
ಹೊನಲುಗಿಡಿಗಳ ತಗಡುರಿಯು ಕೊಂ
ಡಿನಲಿ ಮುತ್ತಿತು ರಥವನಾತನ
ತನುವನಾತನ ಧನುವನಾತನ ಸರಳಸಾಯಕವ ॥ ೪೩

ಉರಿದುದಾರಥವವನ ಮೆಯ್ಯಲಿ
ಕರಿಕುವರಿ ದುಡುಹಾಯ್ದು [1] ಪೊಕ್ಕನು
ಸರಸಿಯನು ಶಿಖಿಯೊಡನೆ ಹೊಕ್ಕುದು ನೀರ ನೆಱೆ ಸುಱಿದು ।
ತರುಣಿ ಹೋ ಹೋ ಕೆಟ್ಟೆನೆಂದ
ಬ್ಬರಿಸಲಾಗಂಧರ್ವನಂಗನೆ
ಹರಿದಳಡಗ್ಗೆಯಿಂದ ಸಂಪರಿಸುತ್ತ ಬಿಡುಮುಡಿಯ ॥ ೪೪

ಬಂದು ಯಮನಂದನನ ಚರಣ
ದ್ವಂದ್ವದಲಿ ಚಾಚಿದಳು ನೊಸಲನು
ತಂದೆ ಕರುಣಿಸು ಕಾಂತಭಿಕ್ಷವ ಕರುಣಿಸೆಂದೆನುತ ।
ಮುಂದು ವರಿಯದಿರೆಲೆ ಧನಂಜಯ
ಕೊಂದರೆನ್ನಾಣೀಕೆಯಾಳ್ದನ
ತಂದು ಕೊಡುವುದು ಬೇಗದುಪಸಂಹರಿಸು ಶಿಖಿಶರವ ॥ ೪೫

ಧರ್ಮರಾಯನ ಅಪ್ಪಣೆಯಂತೆ ಆಗ್ನೇಯಾಸ್ತ್ರವನ್ನು ತೆಗೆದುದು.

ಎನೆ ಹಸಾದ ವೆನುತ್ತ ನಿಮಿಷದೊ
ಳನಲಬಾಣವ ತೆಗೆದ [2] ನಿತ್ತಲು

1 ತರಲೋಡಿ, ಖ ಚ. 2 ನೆನು ನಂದಿಸಿದ, ಚ.

ಮನದ ಸುಮ್ಮಾನದಲಿ ಲಜ್ಜಾವನತಮುಖನಾಗಿ ।
ಮನುಜರಿವರಲ್ಲಾರು ನೋಡುವೆ
ನೆನುತ ಹತ್ತಿರೆ ಬಂದು ನೀವಾ
ರಿನಿತುಸಾಹಸಮಲ್ಲರೆನುತರ್ಜುನನ ಬೆಸಗೊಂಡ ॥ ೪೬

ನರರು ವೈದೇಶಿಗರು ಕಾರ್ಯಾ
ತುರರು ನಾವೆನಲರ್ಜುನನುಪ
ಚರಿಸಿ ವಿನಯಗುಣಾಭಿಮುಖದಲಿ ನಗುತ ಬೆಸಗೊಳಲು [1] ।

ಗಂಧರ್ವಾರ್ಜುನರ ಸ್ನೇಹ ಮತ್ತು ಭಾಷಣ.

ಧರೆಯೊಳುಂಟೇ ಪಾಂಡುಸುತರೆಂ
ಬರಸುಗಳ ನೀ ಕೇಳ ಬಲ್ಲೈ
ನಿರುತನಾವವರೆಂದು ನುಡಿದನು ನಗುತ ಕಲಿಪಾರ್ಥ ॥ ೪೭

ಶಿವಶಿವಾದೊಡೆ ಯಮಪುರಂದರ
ಪವನನಶ್ವಿನಿದೇವರಿಗೆ ಸಂ
ಭವಿಸದವರೈ ನೀವೆಮಗೆ ಸಂಭಾವನೀಯರಲ ।
ಇವೆ ಸಹಸ್ರತುರಂಗದಿವ್ಯಾ
ಸ್ತ್ರವವೆನರ್ಘ್ಯಾಭರಣರತ್ನ
ಪ್ರವರವಿವೆ ಕಾರುಣ್ಯದಲಿ ಕೈಕೊಂಬುದಿವನೆಂದ ॥ ೪೮

ಬಂದವೆಮಗಿವು ನಿಮ್ಮ ನಾವ್ ಬೇ
ಱೊಂದು ಕಾಣೆವು ಪರಮಬಾಂಧವ
ರಿಂದು ಮೊದಲಾಗೆಮಗೆ ನೀನೇ ಮೌಲ್ಯಧನವೆನುತ ।
ಅಂದು ಬಳಿಕರ್ಜುನನಗೆ ನಿಮಗೇ
ಕಿಂದು ಭೂಸುರವೇಷವೆನಲಾ
ಗೆಂದು ಪಾರ್ಥನು ತಮ್ಮ ಪೂರ್ವಾಪರದ ಸಂಗತಿಯ ॥ ೪೯

---

1 ಕ್ಲೀವರನಂಪಲೆಯ್ಯ, ಚ.

ಎಂದು ನಿಜವನು ಹೇಳಿ ರಾಯರ
ವೃಂದವನು ನೋಡುವೆವು ದ್ರುಪದ
ನಂದನೆಯ ವೈವಾಹರಚನೆಯೊಳಾಸ್ವಯಂವರವ ।
ಇಂದು ನೋಡುವೆವೆಂದು ಭೂಸುರ
ರಂದದಲಿ ನಾವ್ ನಟಿಸಿದೆವು ಕೇ
ಳೆಂದು ಗಂಧರ್ವಂಗೆ ಹೇಳಿದ ಪಾರ್ಥ ಪರುಷದಲಿ ॥ ೫೦

ಇವು ಮದೀಯಸುವಸ್ತು ನಿನ್ನಯ
ಭವನದೊಳಗಿರಲೊಂದುಸಮಯದೊ
ಳವನು ತರಿಸುವೆವೆಂದು ಬಳಿಕಂಗಾರವರ್ಮನಲಿ ।
ಇವರು ವಿನಯವ ಮಾಡಿ ಗಮನೋ
ತ್ಸವದೊಳಿರೆ ಗಂಧರ್ವ ನಸುನಗು
ತವರಿಗೆಂದನು ಧರ್ಮಶಾಸ್ತ್ರದ ಸಾರಸಂಗತಿಯ ॥ ೫೧

ಇವರು ಸೇವೆಯ ಮಾಡಿ ಗಮನೋ
ತ್ಸವದೊಳಿರೆ ನಾನಿವರಿಗರುಪುವೆ
ಭವಮನೋಹರಧರ್ಮಶಾಸ್ತ್ರದ ಸಾರವೇಳ್ದಪೆನು ।
ಅವನಿಪತಿ ಚಿತ್ರೃಸು ಗಂಧ
ರ್ವನಿಳೆಯಲಿ ಮನವೊಲಿದ ಬಳಿಕಂ
ತವರಿಗರುಹಿದ ಧರ್ಮಶಾಸ್ತ್ರದ ಸಾರಸಂಗತಿಯ ॥ ೫೨

ಮುನಿಯಲಾಗದು ಪಾರ್ಥ ನಿಮ್ಮಯ
ಘನತರದ ವಿಕ್ರಮಕೆ ದಿವಿಜರು
ದನುಜರುರಗರು ನೆರೆಯರುಳಿದೀಮನುಜರೇನಹರು [1] ।
ಅನುಪಮಾಸಕ್ಷತ್ರತೇಜಕೆ
ವಿನುತವಿಮಲಬ್ರಹ್ಮತೇಜೋ
ಘನಸಮಾರಸಹಾಯವಾಗಲಸಾಧ್ಯವೇನೆಂದ ॥ ೫೩

1 ನೆರೆಯರಿನ್ನೀನರರ ಪಾಡೇನು, ಖ.

ಅರಸ ನಿಮ್ಮಯ ಪೂರ್ವದಲಿ ಸಂ
ವರಣನೆಂಬನು ಸೂರ್ಯಪುತ್ರಿಗೆ
ಮರುಳುಗೊಂಡನು ಮಱೆದು ಕಳೆದನು ರಾಜವೈಭವವ ।
ಸರಸಿರುಹಸಖನಾತ್ಮಜೆಯು ವರ
ಸರಸಿಯಲಿ ಜಲಕ್ರೀಡೆಯಾಡಲು
ಧರಣಿಪತಿ ಕಂಡಱಲಿ ಕಾಮದೆ ವಿಕಳಗೊಂಡಿರಲು ॥ ೫೪

ನಿರುತ ಪಾರ್ಥಿವತೇಜದಲಿ ಗೋ
ಚರಿಸತ್ಯೈ ಬೆರೆದುದು ವಿವಾಹೋ
ತ್ಕರುಷವಾಯಿತು ವರವಸಿಷ್ಠನ ಬ್ರಹ್ಮಸತ್ವದಲಿ [1] ।
ಧರಣಿಸುರರಿಂಗಿದಿರೆ ಸ್ವರ್ಗದ
ಸುರರು ನರರುಗಳೆಂದು ಭೂಸುರ
ವರಕಥೆಯ ವಿಸ್ತರಿಸಿ ಹೇೞಿದ ಪಾರ್ಥಗೊಲವಿನಲಿ ॥ ೫೫

ಆವಸಿಷ್ಠನ ಕೌಶಿಕನ ಯು
ದ್ಧಾವಲಂಬವನೇನನೆಂಬೆನು
ದೇವಕುಲವಂಜುವುದು ವಿಶ್ವಾಮಿತ್ರನುಬ್ಬಟೆಗೆ ।
ಆವಿವಿಧಮಂತ್ರಾಸ್ತ್ರವನು ಶತ
ಸಾವಿರವನಾಬ್ರಹ್ಮದಂಡದ
ಡಾವರದಲೇ ಗೆದ್ದನೊಬ್ಬ ವಸಿಷ್ಠಮುನಿಯೆಂದ ॥ ೫೬

ಎನಲು ತಾ ನರವರವಸಿಷ್ಠಂ
ಗಿನಿತು ಸತ್ವವಿದೇನದೆಂದರೆ
ಘನವನಱಿಯಲು ಪಾರ್ಥ ರುಷಿಗಳ ತಪದ ಬಲುಹುಗಳ ।
ತನತನಗೆ ಮುನಿವರರು ದೇವರ
ಜನವ ಶಾಪಿಸಲೊಬ್ಬರೊಬ್ಬರಿ
ಗನುಸರಿಸಿ ಗಜಱಿಸಿತು ತತ್ಕ್ಷಣ ಪಾರ್ಥ ಕೇಳೆಂದ ॥ ೫೭

---

1 ವಾಯಿತು ವಸಿಷ್ಠಗವಮಲಬ್ರಹ್ಮವಿದ್ಯೆಯಲಿ, ಖ.

ಒದಗಲಾರದೆ ತನ್ನ ಸುಕ್ಷೇ
ತ್ರದ ಮಹತ್ತ್ವವ ಬಿಟ್ಟು ಬ್ರಾಹ್ಮ
ಣ್ಯದಲಿ ಹೊಕ್ಕನು ಬಳಿಕ ವಿಶ್ವಾಮಿತ್ರಮುನಿ ಯೆಂದು |
ಅವನಿ ನಿಂಮಿಾಕ್ಷತ್ರತೇಜದೊ
ಳುದಿತವಿಮಲಕ್ಷತ್ರದೊಳು ತಾ
ವಿದಿತವಿಮಲಬ್ರಹ್ಮತೇಜವಿದೆಂದನರ್ಜುನಗೆ || ೫೮

ವಸಿಷ್ಠಾಶ್ರಮಕ್ಕೆ ವಿಶ್ವಾಮಿತ್ರನ ಆಗಮನ

ವರವಸಿಷ್ಠಾಶ್ರಮಕೆ ಗಾಧಿಯ
ವರಸುತನು ತಾ ಬಂದನಲ್ಲಿಗೆ
ತುರಗವಿಪ್ಪತ್ತೈದುಲಕ್ಷದ ಮೃಗದ ಕೇಳಿಯಲಿ |
ಬರಲು ವಿಶ್ವಾಮಿತ್ರ ಮುನಿಯನು
ಕರೆದು ನಮ್ಮಾಶ್ರಮದೊಳನ್ನವ
ಧರಿಸಬೇಹುದದೆಂದೊಡೆಲ್ಲರಿಗಹುದೆ ಹೇಳೆಂದ || ೫೯

ವಸಿಷ್ಠರು ಸರ್ವರಿಗೂ ಆದರಪೂರ್ವಕಭೋಜನವಮಾಡಿಸಿದುದು.

ಏಳುಜನವಿರಲೆನ್ನ ಪಙ್ಕ್ತಿಯ
ಲೈಸಿರಲಿ ಭೋಜನವ ಮಾಡುವೆ
ನೀಸಕಿಕ್ಕದೆ ವೊಬ್ಬನುಣಲಿಕೆ ಬಹುದೆ ಹೇಳೆಂದ |
ಐಸೆ ನಿನ್ನಯ ಪಂತಿಕಾಱಱು
ಸುಜನಸಹಿತೆಮಗೆ ಕರುಣಿಸು
ವಾಸುದೇವಾರ್ಪಿತವನಿಕ್ಕುವೆನೆಂದು ಕೈಕೊಳಿಸಿ || ೬೦
ಜಾವವರೆ ಯಾಗಲಿಕೆ ಮುನಿಪತಿ
ಭಾವಿಸಿದನಾಕಾಮಧೇನುವ
ತಾ ವಸಿಷ್ಠಾಶ್ರಮಕೆ ಬಂದುದು ಧೇನು ಬೆಸಸೆನುತ |
ನಾವು ವಿಶ್ವಾಮಿತ್ರರಾಜರಿ
ಗೀವೆವನ್ನವನೀಗಲೆಂದರೆ
ಜಾವಕಾಯಿತು ರತ್ನಖಚಿತದ ದಿವ್ಯಮಂಟಪವು || ೬೧

ಮೇಲೆ ಯಿಪ್ಪತ್ತೈದುಲಕ್ಷದ
ಸಾಲ ಹರಿವಾಣದಲಿ ಲಕ್ಷ್ಮೀ
ಲೋಲಗರ್ಪಿಸಿದನ್ನ ಬಡಿಸಿತು ಸುರರ ನೊರೆಬಾಯು ।
ಏಳಿಸುವದಿವ್ಯಾನ್ನದೆಡೆಗಳಿ
ಗಾಳುಸಹಿತೈತಂದು ನೃಪಜನ
ದೋಳಿಯಲಿ ಭೋಜನವ ಮಾಡಿದನರಸ ಕೇಳೆಂದ ॥ ೬೦

ಮಾಡಿದಾಕ್ಷಣ ಮಂಟಪಂಗಳ
ರೂಡಿಯಲಿ ಕೈಗಟ್ಟಿ ಕೊಂಡರು
ನೀಡಿದರು ವೀಳಯವ ಪುಷ್ಪಸುರತ್ನ ಭೂಷಣವ ।
ನೀಡಿದನು ದೇವಾಂಗವಸ್ತ್ರವ
ನಾಡುಗಾವಳಿಗೈದೆ ಕೊಡಲಿಕೆ
ನೋಡಿದನು ಮುನಿವರವಸಿಷ್ಠನ ಸಿರಿಯು ಸಡಗರವ ॥ ೬೧

ಕೂಡೆ ತಾವೆಡೆಯಾಡಿ ಹೇಱದ
ಮಾಡುವವರಾದೇವವಧುಗಳ
ನೋಡಿ ಮೂಗಿನ ಮೇಲೆ ಬೆರಳನ್ನಿಟ್ಟು ಬೆಱಗಾದ ।
ನೋಡಿರೈ ಭಿಕ್ಷುಕನ ಸಿರಿಯನು
ನೋಡಿರೈ ಮಂತ್ರಿಗಳದೆಂದರೆ
ನೋಡಿದೆವು ಜೀಯೆಂದು ನುಡಿದುದು ಮಂತ್ರಿಸಂದೋಹ ॥ ೬೨

ನೋಡಿರೈ ಹುಲುಗುಡಿಸಿಲಾತನ
ರೂಡಿವಿಭವಗಳಿದಕೆ ಕಾರಣವು
ನಾಡೆ ಏನೆನಲೊಳಗಣಾಕಳ ಯಿದಕೆ ಕಾರಣವು ।
ಬೇಡುವುದು ನೀವದನೆ ಯೆಂದನು
ನಾಡಿಗೊಡೆಯನದೊಬ್ಬ ಮುನಿಪಗೆ
ಬೇಡಿದನು ಸುರಧೇನು ವಾದುದನರಸ ಕೇಳೆಂದ ॥ ೬೩

ಎಲೆ ವಸಿಷ್ಠರೆ ಯೆಮಗೆ ನಿಮ್ಮಯ
ಬಱಿಯ ಧೇನುವ ಕೊಡುವುದೆಂದರೆ

ತಲೆಯ ತೂಗುತಲೆಂದನಿದು ಕರ ಲೇಸುಲೇಸೆನುತ ।
ಎಲೆಲೆ ವಿಶ್ವಾಮಿತ್ರ ಕೇಳ್ಳೈ
ಬೞಿಯ ಧೇನುವನಿಂದ್ರನೀಗಳು
ಕಳುಹಿಸಿದನೆಮಗಿಲ್ಲವೆಂದಿದನೆರವನಾಗೆಂದು ॥ ೬೬

ಎನಲು ಸುಮ್ಮನೆ ವನಜನಾಭನ
ನೆನೆಯುತಿರಿ ಸಾಕಿನ್ನು ಕುಳ್ಳಿರಿ
ಯೆನಲಿಕಾಗಳೆ ಯಾತ ಕರೆಸಿದ ಕಾಮಧೇನುವನು ।
ಜನಪ ಕೇಳದ್ಭುತವನಾಗಳು
ಮುನಿಪ ವಿಶ್ವಾಮಿತ್ರನಾಕ್ಷಣ
ಮನೆಯೊಳಾಕಳ ಕರೆಸಿದನು ತಾ ಹೊೞಿಯಿಕೊಯ್ಯಲಿಕೆ ॥ ೬೭

ಮರಳಿ ಬಹಲೆಳೆಯಲಿಕೆ ಪುನರಪಿ
ಕೊರಳಗೋಣುವನಿಕ್ಕಿ ಹೊಡೆಸಿದ
ಮರಳಿ ವಿಶ್ವಾಮಿತ್ರನಾಕಳ ಹಸಿಯ ಬಡಿಗೆಯಲಿ ।
ಧರಣಿಯಲಿ ಬೆಂಡಾಗಿ ಕೆಡೆದುದು
ಸುರಿವ ರುಧಿರದ ಬಾಸುೞಿಂದವೆ
ಹಿರಿದು ಚಿಂತಿಸಿ ತನ್ನ ಮಂತ್ರಿಯ ಕರದು ಬೆಸಗೊಂಡ ॥ ೬೮

ನಡೆಯದಾಕಳು ಬುದ್ಧಿಯನಿದಕೆ
ಕೊಡಿ ಯೆನಲು ಬೞಿಕವನು ಹೇೞಿದ
ನೊಡೆಯರೇ ಬಳಗಿಹುದದೀಕೆಯ ವತ್ಸವೆಂದೆನಲು ।
ತಡೆಯದಾವತ್ಸವನು ಕರೆಸಲಿ
ಕಡಿಯನಿಡದಿರಲಿನ್ನು ಮುಂದಕೆ
ಬಿಡಿಸಿದನು ವತ್ಸಕವನಾಕಳ ಮುಂದೆ ಕೋಪದಲಿ ॥ ೬೯

ಮಗನ ಬಡಿಯಲಿಕೀಕೆ ನೊಂದಳು
ಬಗೆದುದಿಲ್ಲೈ ತನ್ನ ಹೊಡೆಗಳ
ಮೊಗವ ನೋಡಿದಳಾವಸಿಷ್ಠನನೇನು ಗತಿಯೆನುತ ।

ಮಗನ ಬಡಿಯುತಲಾದುರಾತ್ಮರು
ನಗುತಲಿಪ್ಪರು ತನಗನುಜ್ಞೆಯು
ಸೊಗಸಿದುದ ಕೊಡಿ ಯೆನಲು ನೀನೇ ಬಲ್ಲ ಪರಿ ಮಾಡು ॥ ೭೦

ಕಾಮಧೇನುವಿನಿಂದ ಜನಿಸಿದ ರಾಕ್ಷಸರು ವಿಶ್ವಾಮಿತ್ರನ ಸೈನ್ಯವನ್ನು ಸಂಹರಿಸುವಿಕೆ

ಎನಲು ಗರ್ಜಿಸುತೆದ್ದು ಸಗಣವ
ನನುಕರಿಸಿ ಗಾತ್ರವನು ಹೊಯ್ಯಲು
ಜನಪ ಕೇಳೈ ಮ್ಲೇಚ್ಛರಾಕ್ಷಸಕೋಟಿಯೈವತ್ತು ।
ಜನಿಸಿದುದು ತಾವ್ ಬ್ರಹ್ಮದಂಡವ
ನನುಕರಿಸಿ ಹಿಡಿದೈದೆ ಗಾಧಿಯ
ತನುಜಸೈನ್ಯವ ನುಗ್ಗು ಮಾಡಿದರವರು ಕ್ಷಣದೊಳಗೆ ॥ ೭೧

ಮುನಿಪ ವಿಶ್ವಾಮಿತ್ರನಸ್ತ್ರವ
ಧನುವ ಹುಡಿಗುಟ್ಟಿದರು ಬಳಿಕಾ
ಮುನಿಯ ಸೈನ್ಯವು ತಾಯ್ಗೆ ಮಕ್ಕಳದಾಗಲೋಡಿದುದು ।
ವನವ ಹೊಕ್ಕುದು ಬಳಿಕ ತಮ್ಮಯ
ಜನಪನನು ಕೊಂಡೊಯ್ದರಿಬ್ಬರು
ಜನಪ ನಡೆಯೈ ನಗರಕೈದುವುದೆಂದೊಡಿಂತೆಂದ ॥ ೭೨

ಜನಪಜಾತವನೈದೆ ದಹಿಸುವೆ
ನನಲಗಾಹುತಿಯಿಕ್ಕಿ ಯೀಗಳ
ಜನಿಸುವೆನು ಬ್ರಾಹ್ಮಣ್ಯದೊಳಯಿಕೆ ಯಿರದೆ ನಮ್ಮವನು ।

ವಿಶ್ವಾಮಿತ್ರನ ತಪಸ್ಸು

ವನವ ಹೊಗಿಸಿತು ದ್ವಿಜನ ಗೋಮಯ
ವೆನುತ ವಿಶ್ವಾಮಿತ್ರನಾದಿನ
ವನದೊಳಗೆ ತಃ ತೀವ್ರತಪವನು ಮಾಡಲನುವಾದ ॥ ೭೩

ಬದಗಲಾರದೆ ತನ್ನ ಸತ್ಕ್ಷಾ
ತ್ರದ ಮಹತ್ತ್ವವ ಬಿಟ್ಟು ಬ್ರಾಹ್ಮಣ
ಪದವ ಹೊಕ್ಕನು ಬಳಿಕ ಗಾಧಿಯ ತನುಜ ತಾನಂದು ।
ಅದಱಿನಿಂದೀಕ್ಷತ್ರತೇಜದೊ
ಳುದಿತ ವಿದಿತಬ್ರಹ್ಮವಾದೊಡೆ
ಸದರ ಬಳಿಕದು ಚೋದ್ಯ ಕೌತುಕವೆಂದನರ್ಜುನಗೆ ॥ ೭೪

ಬಳಿಕ ವಿಶ್ವಾಮಿತ್ರ ತಪವ
ನ್ನಿಳೆಗೆ ಕೌತುಕವಾಗೆ ಮಾಡಿದ
ನೊಲಿದು ವತ್ಸರವಾದುವೆಂದಿಗೆ ಸಹಸ್ರ ಹದಿನಾಲ್ಕು ।

ಬ್ರಹ್ಮಾದಿಗಳು ಬಂದು ವರವನ್ನು ಕೊಟ್ಟುದು

ನಳಿನಸಂಭವಮುಖ್ಯನಾಕಜ
ರೊಲಿದು ಬಂದರು ಮುನಿಯು ಬಳಿಗಾ
ಗೆಲೆಲೆ ಮುನಿಪತಿ ಬೇಡು ನೀ ವರವೆಂದೊಡಿಂತೆಂದ ॥ ೭೫

ಎನಗೆ ವರ ಬೇಱೀಕೆ ಯೆನ್ನನು
ಮನವೊಲಿದು ವರಬ್ರಹ್ಮಋಷಿ ಯೆಂ
ದೆನಿಪುದೆಂದರೆ ತನತನಗೆ ವರಬ್ರಹ್ಮಋಷಿ ಯೆನಲು ।
ಎನಲು ನೀವೆನಲೊಪ್ಪಿನೀಗಳು
ಮುನಿವಸಿಷ್ಠನೆ ಯೆಂದೊಡಹುದೆನೆ
ವನಜಸಂಭವೆ ಕರೆದು ನುಡಿಯೆ ವಸಿಷ್ಠನಿಂತೆಂದ ॥ ೭೬

ಮನೆಮನೆಗೆ ವರಬ್ರಹ್ಮಋಷಿಗಳು
ಜನಿಸುವರೆ ಹೇಲೆನಲು ನಾಕಜ
ಜನಸಹಿತ ಚತುರಾನನನು ತಾ ತಿರುಗಿ ಹೋಗುತಲು ।
ಮುನಿಗಳಿವರತ್ಯಧಿಕರಿಬ್ಬರೆ
ಯೆನುತ ತಿರುಗಿದ ಬಳಿಕ ವಿತ್ತಲು
ಜನಪ ಕೇಳ್ಕೈ ಮುನಿಪ ವಿಶ್ವಾಮಿತ್ರನುಬ್ಬಟೆಯು ॥ ೭೭

ಎನಲು ಫಲುಗುಣ ನುಡಿದನಂದಾ
ವಿನಯನಿಧಿ ಯಂಗಾರವರ್ಮಗೆ
ಮುನಿಪವಿಶ್ವಾಮಿತ್ರನೆಂತೈ ಬ್ರಹ್ಮಋಷಿ ಯೆನಿಸಿ ।
ಮುನಿವರರೊಳತ್ಯಧಿಕನೆನಿಸಿದ
ನನಿತುವನು ನೀ ಪೇಳ್ವುದೆನಗೆನೆ
ವನಜನಾಭನ ನೆನೆಯುತೆಂದನು ವೀರನರಯಣನ ॥ ೭೮

ಇಪ್ಪತ್ತನಾಲ್ಕನೆಯ ಸಂಧಿ ಮುಗಿದುದು

ಇಪ್ಪತ್ತೈದನೆಯ ಸಂಧಿ

ಸೂಚನೆ

ಮುನಿಗಳನುಪಮಕಥೆಯನಂದಾ
ಗನಿಮಿಷರ ಪರಿಭವವ ಕುಂತೀ
ತನುಜರಿಂಗಂಗಾರವರ್ಮನು ಪೇಳ್ದನುಚಿತದಲಿ ॥

ಒಬ್ಬ ರಾಜನು ಬಂದು ತನ್ನ ದೇಶದಲ್ಲಿ ಅನಾವೃಷ್ಟಿಯನ್ನು
ಸೂಚಿಸುವಿಕೆ

ಕೇಳು ಜನಮೇಜಯಧರಿತ್ರೀ
ಪಾಲ ವೊಂದಿನ ವರವಸಿಷ್ಠವೆ
ರಾಲಯಕ್ಕಳವಡಿಸಿ ಭೂಪತಿ ಬಂದು ಮೆಯ್ಯಿಕ್ಕಿ ।
ಮೇಲೆ ಪಂಪಾಶ್ರಮದಲಾಗುರು
ಲೋಲನಿರೆ ಬಿನ್ನಹವ ಮಾಡಿದ
ಕಾಲ ಪೋದುದು ತನ್ನ ದೇಶದ ಮೇಲೆ ಮಳೆ ಯಿಲ್ಲ ॥ ೧

ಇಂದು ನೀವಿದಕೊಂದು ಯಜ್ಞವ
ಬಂದು ಕರುಣಿಸಿ ವೃಷ್ಟಿಯುಶ್ಯ್ವವ
ಸಂಧಿಸುವುದೆಂದೆನುತ ಬಿನ್ನಹಕಾಗಿ ಬೀಟ್ಕೊಟ್ಟು ।
ಅಂದು ಕಳುಹಿಸಿ ಕೊಂಡು ಬರುತಿರೆ
ಸಂದನಪರಾಂಬುಧಿಗೆ ಸೂರ್ಯನು
ಬಂದರಾಗ ವಸಿಷ್ಠಗೋತ್ರದ ಸುತರು ನೂಱೆಂಟು ॥ ೨

ಮತ್ತೆ ಬಹುಗೋತ್ರಂಗಳಖಿಳರು
ಚಿತ್ತವಿಸಿ ಸಂಧ್ಯಾದಿಕರ್ಮವ
ವಿಸ್ತರಿಸಿ ಭರದಿಂದ ಮಾಡಿದ ಭೂಸುರೋತ್ತಮರ ।
ವೊತ್ತ ವಿರುಪಾಕ್ಷಂಗೆ ವಂದಿಸಿ
ವೊತ್ತಿ ಬರುತಿರಲಾಸುದಾಸನ
ಪುತ್ರಕನು ಕಾನನದಿ ಕಾಣದೆ ನುಡಿದನವರೊಡನೆ ॥ ೩

ಕೂಡಿ ಮುದದಿಂ ಬರುತ ದಾರಿಯೊ
ಳೀಡಿರಿವ ಪೆರ್ಬಿದಿರ ಮೆಳೆಯುಲಿ
ರೂಢಿಗುರುವಿನ ಸುತರನಱಿಯದೆ ಮಾರ್ಗ ಬಿಡಿ ಯೆನುತ ।
ರೂಢಿಪತಿ ಕೆರಳಲಿಕೆ ವಿಪ್ರರು
ನೋಡಿ ನುಡಿದರು ವೇದಶಾಸ್ತ್ರದ
ಪಾಡನಱಿದೀ ಮಾರ್ಗ ತಮ್ಮದು ಬೇಡ ನಿಲ್ಲೆಂದು ॥ ೪

ಮಾರ್ಗ ತನ್ನದು ತನ್ನ ದೇಶದ
ಮಾರ್ಗವಾಗಿಯೆ ಬಿಡಲು ಪೇಟದೆ
ನಾರ್ಗಳವ ತಾ ಕಾಣೆ ನೆನುತಿರಲಿಕ್ಕೆ ರೂಢಿಯಲಿ ।
ಮಾರ್ಗವೆಱಿಯದ ನೃಪಗೆ ವಿಶ್ವದ
ಮಾರ್ಗದೋಱಿಯು ಮುನಿಯು ಮಕ್ಕಳು
ಮಾರ್ಗವೆಱುಹಿದರರಸ ವಿಶ್ವದ ದೇವರಪುದೆನಲು ॥ ೫

ವೇದಶಾಸ್ತ್ರಪುರಾಣ ಕೇಳುತ
ಲಾದಿಯಲಿ ಸಕಲಮಹಮಾರ್ಗಕೆ
ಮೇದಿನೀಸುರರೊಡೆಯರೆಂದೇ ಸಾಧಿಸಿಹುವೆಂದು |
ಆದರದಿ ಜಪತಪಪುರಾಣದ
ಹಾದಿಯುಳಿಯದೆ ತೀರ್ಥಯಾತ್ರೆಯ
ನಾದರಿಸಿದಾಶೂದ್ರ ಬೀಳುವನಘಮಹಾಬ್ಧಿಯೊಳು ॥ ೬

ಬೀಳುವನು ಸನ್ಯಾಸಮಾಡಲು
ಕಾಲಪುರವರಕರಸ ದೀಕ್ಷೆಯ
ಲಾಲಿಸಿಯೆ ಗುರುವಾಗಿ ಯಾಚಿಸಿ ಘಳಿಸಿ ಭಿಕ್ಷವನು |
ಮೇಲೆ ಕಂಡಾದ್ವಿಜರು ಹೇಳಿದ
ವೇಳೆಯನು ಕೆಡೆ ನುಡಿದು ವಾದಿಪ
ಖೂಳ ನೃಪನಹ ಬಿಟ್ಟು ಮತ್ತದ ತನ್ನ ಜಾಣೆನಲಿ ॥ ೭

ಎನಲು ಹಯದಿಂದಿಳಿದು ವಂದಿಸೆ
ವಿನುತಗುರುಪುತ್ರಕರನಾಗಾ
ಮನವ ಕೌಶಿಕ ಕಂಡನಂತರ್ಧಾನನೇಮದಲಿ |
ಮನವ ಕೆಡಿಸಿದ ನೃಪನನಾಕ್ಷಣ
ಕನಲಿಸಿಯೆ ತಾ ಮನವ ಕೆಡಿಸಿಯೆ
ಮುನಿಯೆ ಮನವಾವರಿಸಲಾತನು ಗುರುಸುತಾದಿಗಳ ॥ ೮

ನೋಯಿಸುತ ತುರಗವನು ಹಾಯಿಸಿ
ರಾಯ ಹೋಗಲಿಕವರು ಶಪಿಸಲು
ನ್ಯಾಯ ಮಾರ್ಗವ ಮಱೆದು ನಡೆದನು ಹಲವುಕಾಲದಲಿ |
ರಾಯ ಪಂಪಾಧಿಪನನಱಿಯದೆ
ನೋಯುತಿರು ಯಕ್ಷೇಶನಾಗದೆ
ಕಾಯಕಲ್ಮಷದಿಂದ ರಾಕ್ಷಸನಾಗಿ ತಿರುಗುತಿರು ॥ ೯

ದನುಜನಾಗಿರೆಲೆಲವೊ ಯೆನುತಲಿ
ಮುನಿಸುತರು ತೆರಳಿದರದೊಂದಿನ
ಮನೆಯುಲ್ಯೆದಲಿಕಲ್ಲೆಯಾಯಿತು ಬೊಬ್ಬೆಯಬ್ಬರದ ।
ಧನವ ದಸ್ಯುಗಳೊಯ್ದರೆನಲಿಕೆ
ಕನಲಿ ಪುನರಪಿ ತಿರುಗಿ ದಸ್ಯುಗ
ಳನಿತುವನು ಸಂಹರಿಸಿ ಯಾತನು ಮನೆಗೆ ಬರುತಿರಲು ॥ ೧೦

ಬರಲು ದಾರಿಯೊಳೊಬ್ಬ ಬ್ರಾಹ್ಮಣ
ಪುರವರೇಶನ ಕಂಡು ಬೇಡಿದ
ವರಸುಭೋಜನವಾಮುನೀಶ್ವರನವನ ಕೆಡಿಸಲಿಕೆ ।
ಧರಣಿಪತಿ ಕೇಳವರ ಕೆಡಿಸಲು
ವರವಸಿಷ್ಠಾತ್ಮಜರನೆಲ್ಲರ
ಪರಿಹರಿಸಬೇಕೆಂದು ಹರುಷದಿ ಮುನಿಪ ಕೌಶಿಕನು ॥ ೧೧

ಆತಗಘ್ರಾಸನವ ಕೊಟ್ಟು ಸು
ಖಾತಿ ಮಿಗೆ ಯುಂಡರಸ ಪವಡಿಸಿ
ಯಾತನಿರೆ ಭೂದೇವ ಹಸಿದಿರಲೆರಡು ಯಾಮಗಳು ।
ಭೂತಳೇಶನ ಮನೆಯೊಳಗಿರುಳ
ತೀತವಾಗಲಿಕಾಗಳಾತನ
ಪ್ರೀತಿಕರ ಪಡಿಸಣಿಯು ಕಂಡನು ಮುನಿಪ ಹಸಿದಿರುತ ॥ ೧೨

ಎಲವೊ ನಮ್ಮ ಸುದಾಸಪುತ್ರನು
ಬಲುಹಿನಲಿ ಹಸಿದಿರಿಸಿ ಕೊಂದನು
ಹುಳುಕನನು ಸೀ ಕೇಳಿ ಬಿಡಿಸಾ ಬಾಯುಬಂಧನವೆ ।
ಅಳುಕಿ ಭೂಪನನವನೆ ಯೆಬ್ಬಿಸಿ
ಯೆಲೆ ಮಹೀಪತಿ ನೀವು ವಿಪ್ರಂ
ಗೊಲಿದು ನುಡಿದಿರೆ ಗ್ರಾಸನಾತಗೆ ಕೊಟ್ಟಿರೇ ಯೆಂದ ॥ ೧೩

ಹಾರುವಂಗಾಣತಿಯ ಕರುಣಿಪು
ದೋರಣಿಸಿ ಯೆನೆ ಭೂಪನೆಂದನು
ಹಾರುವಂಗುಣಲಿಕ್ಕು ಶೂಲದ ಮೇಧ್ಯಮಾಂಸವನು ।
ಸಾಱು ನೀನೆನುತರಸ ಪವಡಿಸಿ
ಮಾಱಿ ತಾಮಸದಿಂದ ತನ್ನಯ
ಕಾರಣವೆ ತಾ ಮಱೆದ ಕೃತ್ಯಾಕೃತ್ಯವೆಂಬುದನು ॥ ೧೪

ಪವಡಿಸಲು ಪಡಿಸಣಿಯು ನಡುಗುತ
ಲವನಿಸುರನೆಡೆಗೈದಿ ಯಿತನ
ನವನಿಪಾಲನ ಮನೆಯ ಹುಗಿಸಿಯೆ ಯಿರುಳು ದಸ್ಯುಗಳ ।
ಸವಡಿ ಸೂಲಕ್ಕೈದಲೊಬ್ಬನೆ
ಶಿವನ ನೆನೆವುತ ಬಂದು ಕಳ್ಳರ
ನಿವಹದಲಿ ಕಂಡವನ ತೊಡೆಯನು ಕೊಯ್ದು ಕತ್ತಿಯಲಿ ॥ ೧೫

ಕಕ್ಕಡಿಗಡಿದಟ್ಟುಘೃತದಿಂ
ದಿಕ್ಕಲಾ ಭೂಸುರನು ಕೋಪಿಸಿ
ನಕ್ಕು ನುಡಿದಪನೆಲವೊ ಬ್ರಾಹ್ಮಣನಳುಕಿ ಶೂದ್ರನನು ।
ಕಕ್ಕುಲಿತೆ ಗೊಂಡಣಲಿ ಬೇಡಿದೊ
ಡಿಕ್ಕದಿರಿ ನರಮಾಂಸವಿಂದೆಲೆ
ಸಿಕ್ಕಿದೆನು ಮರುಳಾಗಿ ಶೂದ್ರನ ಕಷ್ಟಭೋಜನಕೆ ॥ ೧೬

ಸದ್ಯಘೃತದಲಿ ಕ್ಷೀರವಾದೊಡೆ
ಹೊದ್ದುವುದು ಶೂದ್ರಾನ್ನವಾದುದ
ಕರ್ಧರಾತ್ರದ ಮೇಲೆ ಶೂದ್ರರ ಮನೆಯ ಮಧ್ಯದಲಿ ।
ಶುದ್ಧರಾಕ್ಷಸರನ್ನವಿದ ತಾ
ಶುದ್ಧಭೂಸುರರುಂಬರೇ ಶಿವ
ನಿದ್ದಗೆಯ್ಯುವೆ ನೃಪನು ರಾಕ್ಷಸನಾಗಿ ಹೞುವದಲಿ ॥ ೧೭

ತಾನು ರಾತ್ರಿಯುದೋಷದನ್ನವೆ
ನೀನರೇಶ್ವರನಿಂದ ಬೇಡಲು
ತಾನಯೋಗ್ಯದ ಮಾಂಸವಿಕ್ಕದ ಮನುಜಖಂಡವನು ।
ದಾನವರಿಗೀಪರಿಯಲನ್ನವ
ತಾನು ಕೊಡಲಿಕ್ಕವರು ಭುಜಿಪರು
ಮಾನವರಿಗೌಷಧಿಯನಿಕ್ಕಲು ತುಷ್ಟಿಯಿದಱಿಂದ ॥ ೧೮

ಮಾನನಿಧಿ ಕೇಳಮರನಿಕರ
ಕ್ಕೇನನಿಕ್ಕಲು ವಹ್ನಿಮುಖದ
ಲ್ಲಾಸುರೇಶ್ವರರಹರು ತುಷ್ಟರು ವರಗುಣತ್ರಯರು ।
ಏನುವಿಲ್ಲದೆ ತನಗೆ ಮಾನವ
ಜಾನುವನ್ನುಣಲಿಕ್ಕೆ ಹೇೞಿದ
ಮಾನವನು ಶತಜನ್ಮ ಜನಿಸಲಿ ರಾಕ್ಷಸಾಂಗದಲಿ ॥ ೧೯

ತಾನು ಜನಿಸಲಿ ತನ್ನ ಗುರುವಿನ
ಸೂನುಗಳ ನೆಱೆ ನುಂಗಲೀಕ್ಷಣ
ಕಾನನದ ಕಡು ಹೊಲೆಯನಾಗಿರಲೆಂದನಾಮುನಿಪ ।
ಈನರೇಶ್ವರ ಮರ್ತ್ಯಜಾತಿಯು
ಮಾನವರ ನೆಱೆ ನುಂಗಲೆನುತಿರೆ
ಮೌನದಲಿ ಕೌಶಿಕನು ತಿರುಗಿದ ಮೇಘಮಾರ್ಗದಲಿ ॥ ೨೦

ಎಂದು ಭೂಸುರ ತೆರಳಲಾನೃಪ
ನಂದು ರಾಕ್ಷಸನಾಗಿ ನರರನು
ತಿಂದು ತೇಗುತ ಹೋದನಡವಿಗೆ ನಿಮಿಷಮಾತ್ರದಲಿ ।
ಬಂದು ಪ್ರಾತಸ್ಸ್ನಾನಕಾಲಕೆ
ಸಂದನಾತಿರಿಕುಳಿಗಳಾಡುವ
ಯಿಂದುಶೇಖರನಿದಿರೊಳೊಪ್ಪುವ ಹ್ರಾದಿನಿಯ ತಡಿಗೆ ॥ ೨೧

ಅಂದು ತುಂಗೆಯು ತಡಿಯುಲಾಗುರು
ನಂದನರ ನೆಱೆ ನುಂಗಿ ರಾಕ್ಷಸ
ವೃಂದ ಗೂಡಿದ ಸಾಸುದಾಸನ ಸುತನು ಕೇಳೆಂದ ।
ನಂದಿಮುಖದಲಿ ದ್ವಿಜವಸಿಷ್ಠನು
ಮಿಂದು ಪರ್ಜನ್ಯಾಂಗ ಹೋಮವ
ಸಂದ ಕರಕಟ್ಟುಗಳ ನೋಳವಿಸಿರುತ ಕೇಳದನು ॥ ೨೨

ಮುನಿಪ ವಿಶ್ವಾಮಿತ್ರನುಂಡುದ
ಕಿನಿತು ಫಲ ಮಾಡಿದನು ಮುನ್ನಿನ
ಮನಕತಕೆ ಕಡೆಯಾಯ್ತು ವಿಶ್ವಾಮಿತ್ರ ತಪವೆದಕೆ ।
ತನುಜರಟೆಯುಲಿಕಾಱುತಿಂಗಳ
ದಿನವ ಕಳದಾಬಲಿಯು ಮಾಡಿಯೆ
ಘನತರದ ಖತಿಗೊಂಡು ಪುತ್ರರಿಗೇನು ಗತಿಯೆನುತ ॥ ೨೩

ಆಗ ದುಃಖದಿಂದ ವಸಿಷ್ಠರ ದೇಹತ್ಯಾಗಪ್ರಯತ್ನ.

ಇರದೆ ಶ್ರುತಿಸದ್ವಾಕ್ಯ ಧರೆಯುಲಿ
ಪರಮಋಷಿಮತವೆಂದು ತನುವನು
ಪರಿಹರಿಪ ಧೃತಿಯ್ಯೈದಿ ಹೊಕ್ಕನು ಘೋರಕಾನನವ ।
ಬರುತ ಮೇರುವನೇಱಿ [1] ಬೀೞಲು
ಧರಣಿ ಹತ್ತಿಯು ಶಯನದಂದದಿ
ವರಮುನಿಗೆ ತಾನಾಗಿ ತನ್ನನು ರಕ್ಷಿಸುವರಾರು ॥ ೨೪

ತನ್ನ ಸಿರಿ ನಿಮ್ಮಿಬ್ಬರಿಂದವೆ
ಮನ್ನಿಸುವೆನಾನಿಮ್ಮ ಭೂಸುರ
ರೆನ್ನ ಮೇಲಸು ಬಿಟ್ಟರಾದರೆ ತಾನಫಲಳೆಂದು [2] ।
ತನ್ನ ಕೈಮುಗಿದಿಳುಹಿ ಕಳುಹಲು

1 ಮಂದರವೇಱಿ, ಕ ಖ. ಜ.   2 ತಾನುನಿಷ್ಫಲಳು, ಕ ಖ.

ಖಿನ್ನತೆಯೆ[1] ಗಂಗಾಂಬುವಿಗಿೞಿಯೆ
ಚನ್ನೆ ನೆಲೆಯಾಗಿರ್ದಳಾಕ್ಷಣ ಮುನಿಪನಿದಿರಾಗಿ ॥ ೨೫

ಕರವ ಜೋಡಿಸಿ ನುಡಿದಳಾತಗೆ
ಧರೆಯಲತಿಪಾವನೆಯು ನಿಮ್ಮಿಂ
ನಿರುತದಲಿ ಗೋಬ್ರಾಹ್ಮರಿಂದವೆ ತನ್ನ ಸಿರಿ ಮಾನ ।
ವರುಣನರಸಿಯು ಮಾತ ಕೇಳಿಯೆ
ವರಹುತಾಶನಗಿಕ್ಕಿ ಕಳೆವೆನು
ವರಕುಮಾರಕರಿಲ್ಲದಂಗವನೆನುತ ಬರುತಿರ್ದ ॥ ೨೬

ಆವನೊಬ್ಬನು ಪೂರ್ವಜನ್ಮದ
ಜೀವಜಾತಿಗೆ ಮನುಜನಾಗಿರು
ತೋವಿ ಯಿಷ್ಟಾನ್ನವನು ನೀಡದೆ ಪಙ್ಕ್ತಿಭೇದದಲಿ ।
ಆವನುಂಬುವೆನವನು ಪುತ್ರರ
ನೋವಿ ಕಾಣನು ಕಂಡಸುತರನು
ಸಾವಕಾಂಬುವೆನವನು ವಿಪ್ರರ ಸದನಗೊಂಡವನು ॥ ೨೭

ತನ್ನ ಮನೆಗೆ ಬಂದು ಸೊಸೆಯು ಗರ್ಭಿಣಿಯೆಂದು ತಿಳಿಯುವಿಕೆ.

ಎನುತ ತನ್ನಾಲಯಕೆ ತಿಂಗಳ
ದಿನ ಸವೆಯೆ ಪೊಗಲಲ್ಲಿ ತನುಜನ
ವನಿತೆ ಗರ್ಭಿಣಿಯಾಗಿ ಮೆಱೆದಳು ಪೂರ್ಣಗರ್ಭದಲಿ ।
ಮುನಿಪನಾಕೆಯು ಗರ್ಭಲಕ್ಷಣ[2]
ದನುವ ಯೋಚಿಸಿ ನೋಡಿ ಕಂಡನು
ಘನಕೃಪಾಂಬುಧಿ ಕೃಷ್ಣರಾಯನ ಚರಣವಾರ್ತೆಯನು ॥ ೨೮

ಹುಟ್ಟಿದಮಗನಿಗೆ ಪರಾಶರನೆಂದು ಹೆಸರಿಡುವಿಕೆ.

ತನುಜ ಜನಿಸುವನೆನುತ ತನ್ನಯ
ತನುವಿನಾಸೆಯು ಹಿಡಿದು ಮುನಿಪತಿ

1 ಮನ್ನಿಸುವ, ಕ. ಖ. 2 ದಬಳನ, ಗ. ಜ.

ವಿನಯ ಮಿಗೆ ಸಂತೋಷವೈದಿದ ಪುತ್ರಗಾತ್ಮಜನು ।
ಜನಿಸಲಿಕೆ ಕಂಡಾವಸಿಷ್ಠನ
ಘನತೆ ಮಿಗೆ [1] ಶೋಕಾಗ್ನಿ ನಂದಿತು
ವಿನುತ ಕೃತಯುಗ ಮೊದಲ ಮನುವಿನ ನಾಲ್ಕುಚೌಕಡಿಯ ॥

ದಿನದಲುದವಿಸಿದಾತಗೋವಿನ
ಲನುನಯದಿ ಪರನಾಮವೆನು ಸುತ [2]
ತನುಜಗಿಡಿಸಿದನಿವ ಪರಾಶರಮುನಿಪನೆಂದೆಂಬ ।
ವಿನುತ ಘನಶೋಕಾಂಬುರಾಶಿಯ
ತನುಜಸುತ ಪರಿಹರಿಸೆ ಜನಿಸಿದ
ತನಗೆ ತನ್ನಯ ಕುಲಸಹಿತ ಯಿಹಪರಕೆ ಹರುಷಿಸಿದ ॥ ೩೦

ಆ ಪರಾಶರನು ತನ್ನ ತಂದೆಯ ನಾಶವನ್ನು ಕೇಳಿ ಕೋಪಿಸುವಿಕೆ.

ಎನುತಲಾಮುನಿ ಯಿರಲು ಕತಿಪಯ
ದಿನದೊಳಾಗ ಪರಾಶರನು ತ
ಜ್ಜನನಿಗುಸುರಿದ ತಮ್ಮ ತಂದೆಯ ಸುಳಿವ ತಾ ಕಾಣೆ ।
ಎನಲಿಕಾಸತಿ ನಿಮ್ಮ ತಂದೆಯ
ನನುಜರೆಲ್ಲರಿನೊಮ್ಮೆ [3] ಸಹಿತವೆ
ದನುಜ ನುಂಗಿದನೀವಸಿಷ್ಠನು ನಿಮ್ಮ ಮುತ್ತಯನು ॥ ೩೧

ಕೇಳಿ ಕೋಪಾಟೋಪದಿಂದವೆ
ಕಾಲಯಮನಂದದಲಿ ಯಿಾಸುರ
ಜಾಲವೆಲ್ಲವ ಧರಣಿನದಿನಕ್ಷತ್ರಮೊದಲಾಗಿ ।
ಏಪೆರಡುಲೋಕಗಳನೀಗಳೆ
ಬೇಳುವೆನು ಹದಿನಾಲ್ಕುಸಮಿಧೆಯ
ಜಾಲದುರಿಯಲಿ [4] ತನ್ನ ತಂದೆಯ ದನುಜ ನುಂಗಲಿಕೆ ॥ ೩೨

---

1 ಘನತಿಮಿರ, ಗ. ಘ.
2 ಕರಣವ, ಕ. ಖ.
3 ರೈವತ್ತೆರಡು, ಕ. ಖ.
4 ಮಾಡಿತ, ಕ. ಖ.

ನಿರಪರಾಧಿಗಳಾದ ಭೂಸುರ
ವರರಿಗಹಿತವ ಮಾಡೆ ನೋಳ್ಪೀ
ಸುರವರೇಶ್ವರ ಮುಖ್ಯನಾಕಜರಡ್ಡ ಬೀಳುವರೆ ।
ಸರಸಿಜಾಸನನಾಜ್ಞೆ ಮೀಱಿದ
ದುರುಳರನು ನೆಱೆ ಸುಡುವೆನೆಂದಾ
ವರಪರಾಶರನಿರವನಱಿದು ವಸಿಷ್ಠನೈತಂದ ॥ ೨೨

ಮೊಮ್ಮಗನ ಕೋಪವನ್ನು ಶಮನಮಾಡುವಿಕೆ.

ಹೋಮಿಸದಿರಕಟಕಟ ದೇವ
ಸ್ತೋಮದಲಿ ಕೈವಲ್ಯಸಾಧನ
ಪ್ರೇಮ ಕರವೆಂದೆನುತ ಕೈವಿಡಿದೆಳೆದನಾಹುತಿಯ ।
ಆಮಹಾಪ್ರಳಯಾಗ್ನಿ ಕೋಪದ
ಸೋಮಶೇಖರ ಹೊಸೆವುತನುಪಮ
ಪ್ರೇಮದಲಿ ಬೊಬ್ಬಿಟ್ಟನಂಗೈತಳದ ನೊಸಲಿನಲಿ ॥ ೨೪

ಇಟ್ಟು ತೆರಳಲಿಕಗ್ನಿ ಮೊಱೆಯಿಡೆ
ಕೊಟ್ಟನಾಗ ವಸಿಷ್ಠನನಲಗೆ
ಸುಟ್ಟು ಕಳೆ ಮುಂದೇಱು ಚೌಕಡಿಯಾಗೆ ಪುರಮುಱಿ ।
ಕೊಟ್ಟನಾತಂಗಭಯುವನ್ನು
ತ್ಕೃಷ್ಟ ಮೊಮ್ಮಂಗೆಂದ ಲೋಕವ
ನಟ್ಟ ಸರಿಯುವುದೆಂದು ಹೇಳಿದನೊಂದು ಸತ್ಕಥೆಯ ॥ ೨೫

ತಾಳಜಂಘನ ಕಥೆ.

ಮುನ್ನ ಕೇಳ್ಯ ತಾಳಜಂಘನು
ತನ್ನ ಕೋಶದ್ರವಿಣವೆಲ್ಲವ
ಮನ್ನಿಸದೆ ಬ್ರಾಹ್ಮಣರಿಗಿತ್ತನು ನಿತ್ಯವಿಧಿಯಿಂದ ।
ಹೊನ್ನನೊಂದನು ಭೂಮಿದೇವಿಯ

ಕನ್ನೆಯಲಿ ತಾನಿಡದೆ [1] ಭೂಸುರ
ರುನ್ನತಿಯನೇ ಬಯಸುತಿಪ್ಪನು ಹಲವುಕಾಲದಲಿ ‖ ೩೬

ಮರಣವಾಯಿತು ನೃಪತಿಗಾಗಳು
ಸುರವಧೂವ್ರಾತದಲಿ ಸ್ವರ್ಗದ
ಸಿರಿಗೆ ಸಂದನು ಮುನ್ನ ಮಾಡಿದ ಪುಣ್ಯಫಲದಿಂದ ।
ಸರಿಯಲಾತನ ಸುತರು ವಿಪ್ರರ
ಪರಿಹರಿಸಿ ತಮ್ಮಾಪ್ತಮಂತ್ರಿಯ
ಕರೆದು ಕೇಳ್ದರು ತಮ್ಮ ಜನಕನ ಕೋಶವೇನಾಯ್ತು ‖ ೩೭

ವರುಷವಿಪ್ಪತ್ತೇಳುಸಾವಿರ
ಧರಣಿಯಾಳಿದನೇಳುಖಂಡವ
ಪರಿವಿಡಿಯಲಾಳಿದನು ಹೇಮವ್ರಾತವೇನಾಯ್ತು ।
ಧರಣಿಪತಿ ಯೆನಿತಪ್ರದೇಶದ
ಧರಣಿಸುರರಿಂಗಿತ್ತು ಸಂತತ
ವಿರಿಸುವನು ಬಳಿಗೈಯ್ಯಲಾಭಂಡಾರಸದನವನು ‖ ೩೮

ವಿಪ್ರರಿಗೆ ದ್ರವ್ಯ ಸೇರಿರುವುದೆಂದು ಕೇಳಿ ಬ್ರಾಹ್ಮಣರನ್ನು ಹಿಂಸಿಸುವಿಕೆ.

ಮಿತಿಗಳಿಲ್ಲದ ವಸ್ತು ಸಂತತಿ
ಕ್ಷಿತಿಯೊಳದೆ ಭೂದೇವರಾಶ್ರಮ
ತತಿಯೊಳನಲಾನೃಪತಿ ಬ್ರಾಹ್ಮರ ಸುಲಿಯಲನುವಾದ ।
ಪಿತನ ಪುಣ್ಯಸಮುದ್ರಸೇತುವೆ
ಸುತನೊಡೆಯಲನ್ಯಾಗಲಾಕ್ಷಣ
ಕ್ಷಿತಿಸುರರು ನೆಱೆ ಕೇಳಿ ನಡುಗುತಲಂದು ಗಜಬಜಿಸಿ ‖ ೩೯

ಕೆಲಬರೋಡಿದರಂದು ತಮ್ಮಯ
ಕುಲಸಹಿತ ಹಿಮವಂತಕಾಗಿಯೆ

1 ಕನ್ನೆಯಲಿ ಭಯಬೇಡ, ಕ. ಖ.

ಕೆಲಬರಡಗಿರೆ ಹಿಡಿದು ಕೊಂಡರು ಕೋಟಿಸಂಖ್ಯೆಯಲಿ ।
ಕೊಲಿಸಿದವರರಸಿಯರನೆಲ್ಲರ
ನೆಳತರಿಸಿ ಸೆಜೆ ಯಿಕ್ಕಿ ಗರ್ಭಿಣಿ
ಬಳಗವನು ಬೇಱಿರಿಸಿ ಗರ್ಭಗಳಿಲ್ಲದಬಲೆಯರ ॥ ೪೦

ಕಳುಹಿದನು ಬಲ್ಲತ್ತಲವರ
ನ್ನುೞಿದ ಯುವತಿಯು ಜನರನೆಲ್ಲರ
ತಿಳಿದು ನವಮಾಸಂಗಳರಿಸಿಯೆ ಪುತ್ರಮಾತೆಯನು ।
ಕಳುಹುವನು ಪುತ್ರಿಕರನಾಕ್ಷಣ
ಕೊಲಿಸುವನು ಪೆಣ್ಣಾಗಿ ಪೆತ್ತಳ
ಕಳುಹಿಸುವನದನಱಿತು ಗಾಧಿಯ ತನುಜೆ ಗರ್ಭವನು ॥ ೪೧

ಯೋಗದಲಿ ತನ್ನಾತ್ಮಗರ್ಭವ
ಬೇಗದಲಿ ಕೊಡದಿರಿಸಿ ಬೆಳಸಲಿ
ಕಾಗ ನಿಲ್ಲದೆ ಸತಿಗೆ ಜಠರದ ಗರ್ಭ ಬಯಲಾಗೆ ।
ಈಗಳೀಕೆಯ ಗರ್ಭವೇೞಯಿತು
ಹೋಗ ಹೇೞೆನಲಬಲೆ ಹರುಷದಿ
ಬೇಗದಲಿ ಭಾರ್ಗವನ ತಂದೆಯವರ ವರಾಶ್ರಮಕೆ ॥ ೪೨

ಬರಲಿಕಾಕೆಯ ಮುನಿಪ ಕಂಡನು
ಹರುಷದಲಿ ಯೂವೌನಭಾರ್ಗವ
ನರಸಿಯನು ಕೊಂಡೊಯ್ದು ಕೇಳಿದ ಗರ್ಭನಿರ್ಣಯವ ।
ವರತನೂಜನನೇನ ಮಾಡಿದೆ
ಧರಿಸಿದೆನು ಜಾನುವಿಗೆ ನಿಮ್ಮಯ
ವರಸುತನನೆಂದಾಪ್ರಪಂಚವ ತಿಳುಹಲತಿಮುದದಿ ॥ ೪೩

ಇರವ ವೈಶಂಪಾಯನಗ್ರದ
ಧರಣಿಪತಿ ಕೇಳಿದನು ಗಾಧಿಯ
ವರಸುತೆಯೊಳಾಗರ್ಭನಿರ್ಣಯವಾದಸಂಗ್ರಹದ ।

ಪರಿವಿಡಿಯ ತನಗಱುಪಬೇಕೆನೆ
ಯರಸಗುಸುರಿದ ನಾಪ್ರಪಂಚವ
ಹರುಷದಲ್ಲೀಸತ್ಯವತಿಯು ತನುಜನ ಕೃಪೆಯಿಂದ ॥ ೪೪

ವರವಿವಾಹವ ಮೌನಭಾರ್ಗವ
ನೆರೆದು ಗಾಧಿಯ ಸುತೆಯ ನಿರಿಸಿಯೆ
ವರತಪೋವನಕೈದಲಾಸತಿ ತನ್ನತವರಿನಲಿ ।
ಇರಲು ಬಹುದಿನ ಸವೆಯೆ ಗಾಧಿಯ
ಯರಸಿ ಸುತೆಯಳ ಕಂಡು ದುಗುಡದ
ಭರದಲಿರುತಲಿ ಮೌನಭಾರ್ಗವ ದೇವಯೋಗದಲಿ ॥ ೪೫

ಬರಲು ಕಂಡಳು ಹರುಷಪುಳಕದಿ
ವರಸುತೆಯನಾಪತಿಯ ಹೊರೆಯ
ಕ್ಕಿರುಳು ಕಳುಹಲು ಕಂಡು ಪತಿಯಾ ಚರಣಕೆಱಗಿದಳು ।
ವರಮುನಿಯೆ ತನಗೊಬ್ಬ ಪುತ್ರನು
ನಿರುತ ಜನಿಸುವ ತನ್ನ ಮಾತೆಗೆ
ವರತಪೋನಿಧಿ ತನುಜ ಸಮನಿಪ ಕೃಪೆಯ ಕರುಣಿಪುದು ॥ ೪೬

ತಾಯಿ ಕಲಿಸಿದ ಬುದ್ಧಿಯೊದವಿನ
ದಾಯದಲಿ ಬಿನ್ನವಿಸೆ ರಾತ್ರಿಯು
ಬೀಯುವಾಗಲಿಯೆಂದು ಪತಿ ಸತಿಗಱುಪಲು ನೇಸರಿನ ।
ಕಾಯದಳ ವುದಯಿಸಲು ಮುನಿಪತಿ
ಯಾಯುವತಿ ಸಹ ತರಣಿಪುತ್ರಿಯ
ತೋಯದಲಿ ಕಡು ಮಿಂದು ಶುಚಿಯಾಗಿರಲು ಹರುಷದಲಿ ॥ ೪೭

ಆಕೆ ಮುನ್ನತಿಭಕ್ತಿಭಾವದಿ
ಲೋಕನಾಥನ ಭಜಿಸಿಯಲ್ಲದ
ನೇಕವಿಧಿಯಲಿ ಮಕರವಾಘನ ಮಾಡೆ ಶಿವವರವ ।

ನಾಕಜರು ನಲಿಯಲ್ಕೆ ಕೊಟ್ಟನ
ದಾಕೆಗಗ್ಗದ ಪಿಂಡವೆರಡ
ನ್ನೀಕವೆಳಗರ್ಭಾಂಡಮಧ್ಯದೊಳಧಿಕತೇಜಸಿನ ॥ ೪೮

ಪುತ್ರಪಿಂಡವ ಕೊಟ್ಟು ಸತಿಯಳ
ಚಿತ್ತವನು ಹರುಷಿಸಿಯೆ ತಿರುಗಿದ
ನತ್ತ ಮುನ್ನಿನ ವರತಪೋವನಕೆ ಮುನಿಕುಲತಿಲಕ ।
ಇತ್ತ ಬಂದಳು ತನ್ನ ಜನನಿಯು
ಹಸ್ತದಲ್ಲಾ ಪಿಂಡವೆರಡ
ನ್ನಿತ್ತಿರಲು ಮಱುದಿವಸ ಕೊಂಡರು ತಾಯಿ ತನುಜೆಯರು ॥ ೪೯

ತಾಯಿ ಬಡಮನದಿಂದ ತನ್ನಯ
ದಾಯದಲಿ ಬಂದಿರ್ದ ಪಿಂಡದೊ
ಳಾಯತಾಕ್ಷಿಯು ಮಗಳಿಗಿತ್ತಳು ತನ್ನ ಪಿಂಡವನು ।
ಆಯೆರಡು ಪಿಂಡಗಳ ಪಲ್ಲಟ
ದಾಯದಲಿ ಜನಿಯಿಸಿದರಿಬ್ಬರು
ತಾಯಿ ಮಕ್ಕಳಿಗರಸ ಕೇಳ್ಳೈ ಮುನ್ನ ಕೌಶಿಕನು ॥ ೫೦

ತಾಯೊಳಗೆ ಪುತ್ರಿಕೆಯ ತೊಡೆಯೊಳು
ರಾಯನಾಜಮದಗ್ನಿ ಜನಿಸಿದ
ನಾಯುಗತಿಯಿಂ ವಿಂಧ್ಯಪರ್ವತಭೂಮಿಯೊಳಗೆಂದ ।
ರಾಯನಾಕ್ಷತ್ರವೀರ್ಯನಿಂದವೆ
ಸಾಯದಿರಲಿವನಂಶವೆಲ್ಲವ
ನಾಯುವಾಂಗಣಕಿರಿಸಲೆಂದಾದೇವನಾಜ್ಞೆಯಲಿ ॥ ೫೧

ಜಮದಗ್ನಿಋಷಿಗಳ ಉತ್ಪತ್ತಿ ಮತ್ತು ಅವರಿಗೆ ಕಾಮ
ಧೇನುವಿನ ಲಾಭ.

ಜನಿಸಿದನು ಪಾರ್ಥಿವದ ವತ್ಸರ
ಜನಪ ದಶಮಿಯು ದಿನದಲಾದಿಯೊ

ಳನನು ಹಸ್ತದೊಳಿರಲು ಚಂದ್ರನು ವಿಷ್ಣು[1] ತಾರೆಯಲಿ ।
ಮುನಿಪನೆಸೆಯಲು ನಾಮಕರಣವ
ತನತನಗೆ ಋಷಿಕುಲವು ಮಾಡಿಸೆ
ವಿನಯದಲಿ ತೊಡೆಯಿಂದ ಹುಟ್ಟಿದನೀತಗಿದು ನಾಮ ॥ ೫೦

ಜಾಮದಗ್ನಿಕನೆಂದು ಜಾನುವ
ಸೀಮೆಯಲಿ ಜನಿಸಿರಲಿಕ್ಕೈತಂ
ದಾಮಹಾಋಷಿಕುಲವು ಬ್ರಾಹ್ಮವನಾತಗಳವಡಿಸಿ ।
ಕಾಮಧೇನುವನಿತ್ತು ಬ್ರಾಹ್ಮಣ
ಸ್ತೋಮದಲಿ ಯಜ್ಞೋಪವೀತವ
ಹೋಮದಲ್ಲೀ ಜಾಮದಗ್ನಿಕವತ್ಸಗೋತ್ರಗಳ ॥ ೫೩

ಭೂಮಿಸುರರೀತನ ನಿದೇಶವ
ನೇಮದಲಿ ಕೈಕೊಳ್ಳದಾವನು
ಹೋಮಿಸುವನಾದ್ವಿಜನ ಹೋಮವು ಹೋಮವಲ್ಲೆಂದು ।
ಭೂಮಿಸುರರಾಮುನಿಗೆ ಭಿಕ್ಷವ
ನೀಮಿಸಿಯೆ ತಮತಮ್ಮ ತಪಸಿನ
ಭೂಮಿಗೈದಲು ಜಾಮದಗ್ನಿಯು ಜನನಿಯಂಗವನು ॥ ೫೪

ದಹಿಸಿ ಕಾಲಾಂತರಕೆ ಜನನಿಯು
ವಿಹಿತಕೃತ್ಯವ ಕಂಡು ಬ್ರಹ್ಮಕೆ
ಕುಹಕವಿಲ್ಲದೆ ಚರಿಸುತಿರ್ದನು ಹಲವುಕಾಲದಲಿ ।
ಮಹಿಪ ಕೇಳಾಗರ್ಭನಿರ್ಣಯ
ಬಹುಪರಾಕ್ರಮದಿಂದ ವಿಂಧ್ಯದ
ಗಹನದಲು ಬರಬರಲು ರೇಣುಕನೃಪತಿ ಕರೆತರಿಸಿ ॥ ೫೫

ರೇಣುಕಿಯು ವರಜಾಮದಗ್ನಿಯ
ಪ್ರಾಣವಲ್ಲಭೆಯಾಗಿ ಯಿರಲಿಕೆ

---

1 ವಿನುತ, ಗ. ಜ.

ಜಾಣಿನಲಿ ಭೃಗುಮುಖ್ಯಋಷಿಗಳಿಗೆಂದನಾಮುನಿಪ ।
ಕ್ಷೋಣಿಯುಲಿ ಬಹುಗೋತ್ರವೆಲ್ಲವು
ಕ್ಷೀಣವಾದುವದೇಕೆ ವಿಪ್ರರ
ಕಾಣಬಾರದೆನುತ್ತ ಕಣ್ವಾಂಗಿರಸರುಸುರಿದರು ॥ ೫೬

ತಾಳಜಂಘನ ಪುತ್ರನೊಬ್ಬನು
ಕಾಲನಾದನು ವಿಪ್ರಜಾತಿಗೆ
ಕೇಳಿ ನೆಚಿ ಕಾಲಾಗ್ನಿರುದ್ರನ ಯಿರವ ಕೈಕೊಂಡ ।
ಯೇಟಿನಿಮ್ಮಡಿಸಿರ್ದ ಲೋಕಕೆ
ಬಾಳುವೀಕ್ಷತ್ರಿಯರ ವೊತ್ತಕೆ
ಹೇಬುವೆನು ಹೇರಾಳಹಬ್ಬವನೆಂದು ನಿಂದಿರಲು ॥ ೫೭

ಹಿರಿಯರಾತನ ನೀತಿಯಿಂದವೆ
ನಿರುತ ನಿಲಿಸಿಯೆ ವೊಬ್ಬ ಹಲಬರ
ಧರಣಿಯುಲಿ ಕೊಲಲಿಲ್ಲ ಕೊಂದರೆ ವರುಷ ಬಾರದದು ।
ಹಿರಿದು ವುಹಿ ದುರ್ಭಿಕ್ಷ ಕಾಂಬುದು
ಪರಮವುತವಿದು ಶಂಭುಶಾಸನ
ಬರೆದಿಹುದು ಬ್ರಾಹ್ಮಣರಿಗಹಿತವ ಮಾಡಿದಾನೃಪನ ॥ ೫೮

ಇನಿತು ಸಂತಾನವನು ಧರಣಿಯು
ಲನಿತುವನು ಸಂಹರಿಸಿ ಕೊಡುವನು
ವನಜಲೋಚನ ವುುಂದೆ ಯಿಪ್ಪತ್ತೊಂದು ಖೇಪೆಯುಲಿ ।
ಎನಲು ಮಧುರೋಕ್ತಿಯುಲಿ ಮನ್ನಿಸಿ
ಮುನಿಪನಾಕ್ಷಣ ತನ್ನ ಕೋಪವ
ಘನಮಹಾರಣ್ಯದಲಿ ಬಿಸುಟನು ಬಿಸುಡೆ ದಾವಾಗ್ನಿ ॥ ೫೯

ಇನಿತು ಜನಿಯಿಸಿತೆಂದರುಂಧತಿ
ತನುಜನಾತ್ಮಜಗಾವಸಿಷ್ಠನು
ಘನಪ್ರಪಂಚವ ತಿಳುಹಿ ಬಿಡಿಸಿದ ವಿಶ್ವದುಪಟಳವ ।

ಇನಿತನಿತಿಹಾಸೋಕ್ತಿಯಲ್ಲವ
ನನುನಯದೊಳಂಗಾರಪರ್ಣನು
ವಿನಯದಲಿ ಪಾಂಡವರಿಗಱುಹಿದನೆಂದನಾಮುನಿಪ ॥ ೬೦

ತಮ್ಮ ಪುತ್ರರ ಕರ್ಮಫಲವಿದು
ನಿಮ್ಮ ಜನಕಾದ್ಯರನು ನುಂಗಿತು
ಕರ್ಮವಶವನು ಲೋಕ ಮೀಱ[1] ಲಿಕಳವೆ ಯಿಹಪರಕೆ ।
ಧರ್ಮವಲ್ಲನೆ ಯೀ ಪರಾಶರ
ಕರ್ಮಸಾಕ್ಷಿಯ ಮಾಡಿ ಕೋಪದಿ
ಶರ್ಮವರ್ಮರನುರುಹಿ ತಿರುಗಿದನಾಮಹಾತಪಕೆ ॥ ೬೧

ತೀವ್ರತೇಜವ ಹಾಯ್ಕಿ ಜನಿಯಿಸಿ
ತಾವಿಧಾತ್ರವಿಹಿತವ ತಾಳ್ದುಱೆ
ಯೀವಸುಂಧರೆಯೊಳಗೆ ಬಡಬಾನಳವು ದುಹಸ್ಸವು[2] ।
ದೇವದಾನವರದನು ಮೀಱುವ
ಜೀವರಲ್ಲನೆ ಪಾರ್ಥ ಭೂಮಿಯ
ದೇವರಿಗದಾರಿದಿರು ಕೌಶಲಮಲ್ಲನೊಲುಮೆಯಲಿ ॥ ೬೨

ಬೞಿಕ ಮುನಿಪವಸಿಷ್ಠ ವೊಮ್ಮನ
ನೊಲಿದು ಹರಸಿದ ಧರ್ಮಶೀಲನ
ನಿಲಿಸಿದನು ಮನೆಯೊಳಗೆ ಮಂಗಳವಿಭವಶೋಭೆಯಲಿ ।
ಒಲಿದು ಜ್ಯೋತಿಷ್ಟೋಮಯಾಗವ
ನಿಳಯದಲಿ ವಿರಚಿಸಿಯೆ ಮುನಿಕುಲ
ತಿಲಕನಿದ್ದನು ಬಹುದಿವಸ ವಿರುಪಾಕ್ಷಸೇವೆಯಲಿ ॥ ೬೩

ಅರಸ ಕೇಳೈ ಧರಣಿಸುರರಿಗೆ
ಹಿರಿದು ಗೋಚರವೇನದೆನುತಲಿ
ನರಗೆ ನೆಱೆ ಗಂಧರ್ವ ತಿಳುಹಿದ ದ್ವಿಜಮಹೋನ್ನತಿಯ ।

---

1 ಕಾಯು, ಕ. ಖ. 2 ನದೆಂದೆಂಬು, ಕ. ಖ.

ಸುರನದೀತೀರದಲು ರಾತ್ರಿಯು
ನೆರವಿಯುಲು ವಿಸ್ತರಿಸಿ ಪಾಂಡವ
ರರಸಗಱುಹಿದನಂದು ಕಥೆಯ ಸಹಸ್ರಬಾಹುವಿನ ॥ ೭೪

ವರಕಥೆಯನಾದ್ಯಂತದಿಂದವೆ
ವಿರಚಿಸಿದ ಮಧುರೋಕ್ತಿ ಸಾರದೊ
ಳುರುಮಹಾಮುನಿ ಪರಶುರಾಮನು ಕಾರ್ತವೀರ್ಯನಲಿ ।
ಧರೆಯುಲಿಪ್ಪತ್ತೊಂದುಖೇಪೆಯು
ಧರಣಿಪರ ನಿಃಕ್ಷತ್ರ ಮಾಡಿದ
ಪರಿಯನಭಿವರ್ಣಿಸಿದನಾಬ್ರಹ್ಮಾಂಡತೀ [1] ರ್ಥದಲಿ ॥ ೬೫

ಕೇಳದುದ ನೆಱೆ ತಿಳುಹಿ ಸ್ವರ್ಗದೊ
ಳಾಲಯಕೆ ತಿರುಗಿದನು ಲಕ್ಷ್ಮೀ
ಲೋಲ ಮೆಚ್ಚಲು ನಿಮ್ಮ ಪಾಂಡವರಾಯರೈವರನು ।
ಏೞಿಗೆಯುಲಿರಿಸುವನು ಪುಣ್ಯದ
ಮಾಳಿಗೆಗೆ ನೂಕುವನು ಕೌರವ
ಕಾಲ ಗದುಗಿನ ವೀರನಾರಾಯಣನು ಕರುಣದಲಿ ॥ ೬೬

ಇಪ್ಪತ್ತ್ರೈದನೆಯ ಸಂಧಿ ಮುಗಿದುದು.

ಇಪ್ಪತ್ತಾರನೆಯ ಸಂಧಿ.

ಸೂಚನೆ.

ವರಮಹಾಸಂವರ್ತಗೋತ್ರದ
ನಿರುತವಿಪ್ಪತ್ತೊಂದು ಭೂಪರ
ಪರಶುರಾಮನು ಕೊಂದ ಹೈಹಯಭೂಪನೊದಲಾಗೆ ॥

---

1 ಬ್ರಾಹ್ಮಣ್ಯತೀರ್ಥ, ಖ.

ಕಾರ್ತವೀರ್ಯನ ಉತ್ಪತ್ತಿಕ್ರಮ.

ಕೇಳು ಜನಮೇಜಯ ಧರಿತ್ರೀ
ಪಾಲ ವೊಂದಿನದಲ್ಲಿ ತಕ್ಷಕ
ಲೋಲಲೋಚನೆ ಸುದತಿ [1] ಋತುಮತಿಯಾಗಿ ಬರುತಿರಲು ।
ಏೞನೆಯ ಪಾತಾಳದಿಂದವೆ
ಕಾಲವಶದಿಂದುರಗ ನಿಂದಿರ
ನಾಲಯದೊಳಿರುತಿರಲದೊಂದಾನೊಂದು ಕಾರಣದಿ ॥ [2] ೧

ಉರಗನರಸಿಯು ಪತಿಯ ಕಾಣದೆ
ಪರವಶದಿ ಪತಿವಿರಹದಿಂದವೆ
ಸರಸಿರುಹಮುಖಿ ಬಂದಳೊಂದಿನ ಹರುಷದುಬ್ಬಿನಲಿ ।
ತರಣಿಬಿಂಬವ ತಗುಳ್ದು ಬೆರಳ್ಗಳ
ನೆರವಿಯಲಿ ನೇಸರಿನ ತೇಜವ
ವರಮುಖಿಯು ಬೇಱಿರಿಸಿ ಯಿರಲಿಕೆ ಸೂರ್ಯ ಹಯವೊಂದು॥

ಉರಗನರಸಿಯು ಕಂಡು ತನ್ನಯ
ತಿರುಪ ಮಾಣದೆ ಸೋತು ವೀರ್ಯವ
ಸುರಿಸಲಾಕೆಯು ನೋಂತು ಧರಿಸಿದಳೊಬ್ಬ ಪುತ್ರನನು ।
ಧರಿಸಲಿಕೆ [3] ವರಕಾರ್ತವೀರ್ಯನು
ಧರೆಯೊಳಗೆ [4] ಜನಿಸಿದನು ಸಾವಿರ
ವರದಳಾಂಶುಗಳೆಲೆಯೆ ಸಾವಿರಭುಜದ ತೋಳಿನಲಿ ॥ ೨

ಭುಜವು ಸಾವಿರ ಪಿತನ ಪಕ್ಷವ
ದಜಗರನ ನೆಱಿ ಜಾತಿಗಾಗಳು
ತ್ರಿಜಗವೆಱಿಯಲು ಪಾದ ಸಾವಿರ ತಾಯಿತಂದೆಗಳ ।
ಸುಜನಮತವಿದು ತಂದೆಯುಂಗದೆ

---

1 ಪರವೆ, ಕ. ಖ. 2 ಳಡಗಿರಲು ಸರ್ಪಾಧ್ವರದಕಾಲದಲ್ಲಿ, ಕ. ಖ.
3 ಭರವಸದಿ, ಖ. 4 ಉರಗಿಯಲ್ಲಿ, ಜ.

ವಿಜಿತನಾದೊಡೆ ಪುತ್ರನುತ್ತಮ
ನಿಜವ ಕೇಳ್ಳೆ ತಾಯ ಹೋತವ ಮಧ್ಯಮಾನುಷನು ॥ ೪

ಅವಧರಿಸು ಪಿತೃಮಾತೃದೇಹವ
ವಿವರಿಸಲು ಹೋಲದವನೆಲ್ಲಾ
ಯುವನಿಯಲಿ ಹೊಱಗೆಂದು ನುಡಿವರು ರಾಯ ಕೇಳಂತು ।
ಅವನಿಪತಿ ಕೇಳಾಕೆ ವಿಪ್ರರ
ನವನಮಿಯಿಸುತ ನೋಡಿ ನೋಡಿಯೆ
ಮಮತೆಯಲಿ ತಾ ಪೆತ್ತು ಕಳುಹಿದಳಾಮಹೀಪತಿಗೆ ॥ ೫

ಆಮಹೀಪತಿಯುರಸ ವಿಪ್ರ
ಸ್ತೋಮವನು ಕಡಿಖಂಡಮಾಡಿದ
ನಾಮಹಾಪಾತಕವದಾತನ ಕುಲವ ಕ್ಷಯಮಾಡೆ ।
ಭೂಮಿಪತಿ ತನ್ನಂತ್ಯಕಾಲದ
ಸೀಮೆಯಲಿ ನಿಲಿಸಿದನು ಕಂಡತಿ
ಪ್ರೇಮದಲಿ ಸಾರಥಿಯ ಮಾಡುತ ತಾಳಜಂಘನನು ॥ ೬

ಆತನನು ತನ್ನಖಿಳರಾಜ್ಯಕೆ
ನೀತಿಯಲಿ ನಿಲಿಸಿದನು ಬೞಕತಿ
ಪ್ರೀತಿಯಲಿ ಕಡೆಗಾಣದಿದ್ದನು ಹಲವು ಕಾಲದಲಿ ।
ಪಾತಕಿಗೆ ಪರಮಾಯುವೆಂಬುದು
ನೀತಿಯಾಯಿತು ನೃಪತಿ ರೌರವ
ವ್ರಾತದಲಿ ಬಹುದಿನಕೆ ಬಿದ್ದನು ಕೃತಮಹಾವೀರ್ಯ ॥ ೭

ಕಾರ್ತವೀರ್ಯನ ಆಳ್ವಿಕೆಯಲ್ಲಿ ಪರಶುರಾಮನ ಜನನ.

ಖ್ಯಾತಿಯಲ್ಲಾ ಕಾರ್ತವೀರ್ಯನು
ಭೂತಳವನಾಳುತಲಿ ಬಹುದಿನ
ವ್ರಾತ ಸವೆಯಲಿಕತ್ತಲಾಜಮದಗ್ನಿ ರೇಣುಕೆಯ ।

ನೀತಿಯಲಿ ಹಿಂದಖಿಳಜನ್ಮದ
ಭೂತಳದ ಮೇಲಾವಿರಿಂಚಿಯು
ತಾತ ಹುಟ್ಟಿದ ಮಾಡಿ ನೆರಹಿದ ಪುಣ್ಯಫಲದಿಂದ ॥ ೮

ಮಾರ್ಗಶೀರುಷ ಮಾಸದಪರದ
ಭಾಗ ಷಷ್ಠಿಯು ಭಾನುವಾರದ
ಲಾರ್ಗಳದಲಾಭಗಣಪಿತೃಗಣಚರಣಮೂಱನೆಯು ।
ಕರ್ಗಣೆಯು ಕೂರಸಿಯು ಬಲುಹನು
ಕಾರ್ಗೊಳಿಪ ಪರಶುವನು ಧರಿಸಿದ
ಭಾರ್ಗವಶ್ರೀರಾಮ ಜನಿಸಿದನವರ ಪುಣ್ಯದಲಿ ॥ ೯

ಪುಟ್ಟಿದನು ರೇಣುಕೆಯು ಗರ್ಭದಿ
ಘಟ್ಟಿಪ್ರಕಟಿತವಾಯ್ತು ಲೋಕದ
ದುಷ್ಟಮಾರಿಯೊಳಾಯ್ತುವಿಕ್ರಮ ವಿಪ್ರಜಾತಿಗೆಲ ।
ಶಿಷ್ಟಕರ್ಮದ್ವಾರವದು ನೆಱೆ
ಸೃಷ್ಟಿಯಲಿ ಮೆಱೆಯಲಿಕೆ ದೈತ್ಯಘ
ರಟ್ಟ ಬಂದನು ದಿವ್ಯರೂಪದಿ ಸೂತಿಕಾಗೃಹಕೆ ॥ ೧೦

ಬರಲಿಕಾಜಮದಗ್ನಿದೇವನು
ನಿರುತಗುಣನಾಮದಲಿ ನಾಮವ
ಕರೆದು ಕತಿಪಯದಿನಕೆ ಮೌಂಜಿಯು ಕಟ್ಟ ಪರಿವಿಡಿಯೆ ।
ಕರಣವೃತ್ತಿಯು ಕರ್ಮಸಾರವ
ನೊರೆದು ತಾ ತ್ರಿವಿಧದಲಿ ನಿಲಿಸಿದ
ಪರಮಹರುಷದಲಿರಲಿಕೊಂದಿನಕಾಮಹೀಪತಿಯು ॥ ೧೧

ಜಮದಗ್ನಿಋಷಿಗಳ ಆಶ್ರಮಕ್ಕೆ ಕಾರ್ತವೀರ್ಯನ ಆಗಮನ.

ವರಪುರೇಶ್ವರ ತನ್ನ ಸೇನೆಯು
ನೆರಹಿ ಪಾರಡಿಯಾಡುತಲ್ಲಿಗೆ
ಸರಿದು ಬಂದನು ಜಾಮದಗ್ನಿಯ ವರತಪೋವನಕೆ ।

ಅರಸನನು ಕಂಡರ್ಘ್ಯಪಾದ್ಯೋ
ತ್ಕರದಿ ಮನ್ನಿಸಿ ಯಜ್ಞಶೇಷದ
ವರಹವಿಸ್ಸಿನಲಿಂದು ತಮ್ಮಾಶ್ರಮದ ಮಧ್ಯದಲಿ ॥ ೧೨

ವಸಿಷ್ಠರ ಇಷ್ಟದಂತೆ ಕಾರ್ತವೀರ್ಯನು ಭೋಜನಕ್ಕೆ ನಿಲ್ಲುವಿಕೆ.

ನಿರುತದಾರೋಗಣೆಯ ಮಾಡಿಯೆ
ಮರಳಿ ಬಿಜಮಾಡೆನಲು ಭೂಪತಿ
ವರಮುನಿಪಗಿಂತೆಂದ ತನ್ನಯ ಸೈನ್ಯವಿದನುಳಿದು ।
ಧರಣಿಯಲಿ ನೃಪನೊಬ್ಬನುಂಬನೆ
ಪುರಕೆ ನೇಮವ ಕೊಡಲಿ ಪೇಹುದು
ತರಹರಿಸ ಬೇಡೆಂದು ಬಿನ್ನಹ ಮಾಡಿದನು ಮುನಿಗೆ ॥ ೧೩

ಏಸು ನಿಮ್ಮಯ ಗುಣದ ಗಣನೆಯ
ನೈಸರಲಿ ತನ್ನಾಶ್ರಮದ ನಿ
ರ್ದೋಷದನ್ನವನುಂಡು ಮರಳುವುದೆಂದನಾಮುನಿಪ ।
ಈಸು ಸಂಗ್ರಹವೇಕೆ ನಿಮ್ಮಯ
ದಾಸವರ್ಗವು ನಮ್ಮ ಕುಲವಿ
ನ್ಯಾಸ ವೆಂದೆನುತಂಘ್ರಿಗೆಱಗಿದ ಮುನಿಗೆ ವಿನಯದಲಿ ॥ ೧೪

ಅಡಿಗೆಱಗಿದಾನೃಪತಿಯುಂಗವ
ತಡವರಿಸಲಾನೃಪನ ಕಾಯವು
ಝಡಿತೆಯಲಿ ವಜ್ರಾಂಗವಾದುದು ಮುನಿಯ ಕರ ಸೋಂಕೆ ।
ಒಡಬಡಿಸಿದಾಕ್ಷಣವೆ ಮನೆಯ
ಲ್ಲಡೆಯ ಮಾಡಿದ ನೃಪನ ಪಾಡಿಯ
ಪಡಿತಳಿಸಿ ತತ್ಸೈನ್ಯಸಾಗರಕೊಂದು ನಿಮಿಷದಲಿ ॥ ೧೫

ನೋಡಿ ಕರೆತಂದಮೃತಭೋಜನ
ಮಾಡಿಸಿದ ಸುರವಧುಗಳಿಂದವೆ
ಕೂಡೆ ಯೆಡೆಯಮಾಡುತಲೆ ಬಡಿಸಲಿಕವರು ಸಿಂಗರಿಸಿ ।

ಋಷಿಪತಿ ಸತ್ಕರಿಸಿ ವಂಶದ
ಪಾಡಳಿದು ಪ್ರಣಮಿಕ್ಕಿ ಕಳುಹಿದ
ಬೀಡ ಪೊಕ್ಕಲ್ಲಿರುತ ಮಕುಟವ ತೂಗಿ ಬೆಱಗಾದ ॥ ೧೬

ಬಳಿಕ ಋಷಿಯು ಕಾಮಧೇನುವನ್ನು ಅಪೇಕ್ಷಿಸುವಿಕೆ.

ನೋಡಿರೇ ಬಡದ್ವಿಜನ ಸಡಗರ
ಋಷಿಪರ ನೇಳಿಸಿತದೀತನ
ಗಾಢಸಿರಿ ಯಿದಕೇನು ಕಾರಣವೆಂದನಾನೃಪತಿ ।
ಋಷಿಯಲಿ ಬ್ರಹ್ಮಸ್ವಕಾವನು
ನೋಡಿ ಮಱುಗುವನವನು ತನ್ನಯ
ಕೇಡ ತರವನು ನಿಮಿಷಮಾತ್ರದೊಳೆಂದ ಗಂಧರ್ವ ॥ ೧೭

ಅರಸ ನೆಱೆ ಬಿಸುಸುಯಿಲ ಸುಯಿವುತ
ಪುರಕೆ ತೆರಳದೆ ಯಿರಲಿಕಾತನ
ವರಪುರೋಹಿತನೆಂದನಾತನ ಸಿರಿಯು ಸಾಧನವ ।
ನಿರುತವೇಸಿದಕೊಳಗಣಾಕಳು
ಸಿರಿಗೆ ಸದರವು ಜೀಯ ಯೆನಲಿಕೆ
ಪರಮಪುರುಷವ ತಾಳ್ದು ಭೂಪತಿ ಯಹುದೆಲೇ ಯೆಂದ ॥ ೧೮

ಎನುತ ಧೇನುವ ಬೇಡಕಳುಹಿದ
ಜನಪನಾಕ್ಷಣ ವುಂಡ ಕಯ್ಯಾಸು
ಮುನಿಗೆ ತೋಱಿದೊಡಾತನಾಗಳು ವರಸಮಾಧಿಯಲಿ ।
ದನುಜಹರನಲಿ ಮುನಿಪ ಧ್ಯಾನವ
ನನುಕರಿಸಿ ಯಿಹನೆನಲು ಕೋಪಿಸಿ
ಮುನಿಯು ಕೊಂಡೆಮಗೇನು ಕಾರಣ ಗೋವ ತಹುದೆಂದ ॥ ೧೯

ತನ್ನ ಸೈನಿಕರಿಂದ ಧೇನುವನ್ನು ಅಪಹರಿಸುವಿಕೆ.

ಧೇನುವನು ತೆಗೆಯಲಿಕೆ ತನ್ನಯ
ಸೇನೆಯಧಿಪನ ಕಳುಹಿ ಮುನಿಪನ

ಧೇನುವನು ಕೆಡೆ ಕಟ್ಟಿ ತೆಗೆಯಲು ಮುನಿಪ ಕಣ್ದೆಱೆದು ।
ಆನರೇಂದ್ರಂಗೀಯದಗ್ರದ
ಧೇನುಗೊರಳನ ಬಿಡದೆ ಧರ್ಮದ
ಸೂನುವಾಗಿಹ ತಾಯ ಕೊಡದಿರೆ ನೃಪನು ಕೋಪದಲಿ ॥ ೨೦

ಎದ್ದು ತಾನೈತಂದು ಸೇನೆಯ
ದೊದ್ದೆಗವಿಸಿದ ಮುನಿವರಾಶ್ರಮ
ಕಿದ್ದ ಗೃಹಮಂಡಲವ ಕೊಂಡರು ಸೂಱೆಗರು ನೃಪನ ।
ತಿದ್ದಿ ತಾತನ ಮನೆಯಲುಂಡುದ
ಕದ್ದಿದರು ತಮ್ಮನ್ವಯಂಗಳ
ನೆದ್ದು ಪೋದರು ನೃಪತಿ ಮುನಿಯನು ಖಡ್ಗಹಸ್ತದಲಿ ॥ ೨೧

ಶಿರವರಿದರಾರೇಣುಕಾತ್ಮಜೆ
ಯುರವನಿಪ್ಪತ್ತೊಂದು ಸೂೞಿಲಿ
ಕರದಿ ಬಡಿಯಲು ಬಂದು ಕಂಡನು ದೈತ್ಯಭಂಜಕನು ।
ವರಮುನಿಪನೌಪಾಸನಾಂಗಕೆ
ನೆರಹಿ ತಂದನು ಯಜ್ಞಬರ್ಹಿಯ
ಪರಶುರಾಮನು ಕಂಡನೀರೌರವದ ಕೌತುಕವ ॥ ೨೨

ಶಿರವರಿದು ತಜ್ಜನಕ ಜನನಿಯ
ವುರದ ತಾಪೋತ್ಕರವನಗ್ರದ
ಪರಮಧೇನುವ ಕಟ್ಟಿ ತೆರಳುವ ನೃಪನ ಸಡಗರವ ।
ನಿರುತವನು ನೆಱೆ ಕಂಡು ಜನನಿಯ
ಕರವಿಡಿದು ನೆಱೆ ನುಡಿದ ನಿಮ್ಮಯ
ವುರವ ಕಟ್ಟಿದ ಕರದ ಯಿಪತ್ತೊಂದು ಸೂೞಿಂಗೆ ॥ ೨೩

ಧರಣಿಯಲ್ಲೀನೃಪನ ವಂಶವ
ತಱಿವೆನಿಪ್ಪತ್ತೊಂದು ಭಾರಿಯು
ಪರಶುಗೊಂಡೈದಿದನು ನೃಪತಿಯ ಸೈನ್ಯಸಾಗರಕೆ ।

ಧರಣಿಪನನೊತ್ತಲಿಕೆ ತೆರಳಿದ
ಪರಿಗಣಿತವೈವತ್ತು ಕೋಟಿಯು
ಕರಿಯು ಘಟೆಗಳ ಕೊಯ್ದು ಹಾಯ್ದನು ಸಮಿಧೆಗೊಪಲಿಯಲಿ ॥

ಆವನವತಾರಗಳು ಬ್ರಾಹ್ಮಣ
ದೇವಗೊಲಿಯದ ವಿಗ್ರಹಂಗಳ
ನಾವ ಮಾಬ್ದಿಪನವನಿ ನಿಃಕ್ಷತ್ರವನು ಮಾಡಲಿಕೆ ।
ದೇವನವತರಿಸಿದರೆ ವಿಕ್ರಮ
ದೇವಿಯರ ವಿಗಡಿಸುವ ದುಷ್ಕರ
ದಾವವನದಾವಾಗ್ನಿಯಾಗಿಯೆ ಲೋಕರಕ್ಷಕನು ॥ ೨೫

ಆವಿಗಡಕತ್ಸೈನ್ಯರಾಶಿಯು
ಭಾವಿಸದೆ ಕುಡಿದಿರುವ ಬಡಬನ
ತಾವರದಲಹಿಯಾಗಿ ಹೊಯ್ದನು ದೇವ ನಿಮಿಷದಲಿ ।
ಭೂವಧೂವಲ್ಲಭನ ಮಧ್ಯದೊ
ಳಾವನಿದಿರಾವವನ ಕೊಡಲಿಯು
ಕಾವಿನಲಿ ಕೊಂದಖಿಳನಾಯಕವಾಡಿಮೊದಲಾಗಿ ॥ ೨೬

ಯುದ್ಧವರ್ಣನೆ

ಧಾಟಿಗೊಂಡವರೊಳಗೆ ಮುನ್ನಿನ
ಕಾಲನೇಮಿಯ ಪರಿಯ ಕದನವ
ಹೋಲಿಸಲು ಬಹುದಲ್ಲಿ ರಿಪುನೃಪನವರ ಕಾಳಗಕೆ ।
ಆಲಿಸೈ ಯಂಧಾಸುರಾರಿಯ
ಕಾಳಗವೆ ಮಧುಕೈಟಭರ ಹಿ
ಯ್ಯಾಳಿ ಹಿಂಗಿತು ಪರಶುರಾಮನ ತೋಳ ಬಲುಹಿನಲಿ ॥ ೨೭

ಕೋಪದಲು ರೇಣುಕೆಯು ಭೂಪನ
ಕೋಪವನು ನೆಱೆ ಕಂಡು ಬೇಗದಿ
ಮಾಪತಿಗೆ ಬಲವಾಗಿ ಬಂದಳು ರಾಮನಿದ್ದೆಡೆಗೆ ।

ಆಪುರಂದರಮುಖ್ಯನಾಕಜ
ಪಾಪರಹಿತನ ಯೆಡೆಗೆ ಮುನಿಪನ
ತಾಪಶಕ್ತಿಯೆ ಯೆದ್ದು ಪೊಕ್ಕಳು ರಣವನುಬವಣಿಸಿ ॥ ೨೮

ಅರೆರೆ ಮಾರಿಗೆ ಮಾರಿ ಜವನಂ
ಬೆರಸಿ ನುಂಗುವ ಮೃತ್ಯುನಿಕರವ
ನೊರಸಿ ಮುಕ್ಕುವ ಮೃತ್ಯುದೇವಿಯೊ ರೇಣುಕಾತ್ಮಜೆಯೊ ।
ವರಶರಾಸನದಿಂದ ಭೂಪನ
ಪರಿಕರವ ಸಂಹರಿಸಿ ಬಾಣದ
ವರುಷವನು ಕರೆಯಲಿಕೆ ನೋಯನು ನೃಪನು ಮಱೆದೊಮ್ಮೆ ॥

ಆಸತಿಯು ಪತಿಮುಷ್ಟಿಕರದಲಿ
ಶಾಶ್ವತವ ಮಾಡಿದನು ಕಾಯವ
ನಾಸುರದಿ ವಜ್ರಾಂಗವಾಯಿತು ಲೋಹ ಕಳುಕಿದರೆ ।
ಏಸು ಬಾಣವಲೆಚ್ಚೊಡೆಯು ನೆಱೆ
ಸೂಸಿದುವು ರೇಣುಕೆಯ ಮಾರ್ಗಣ
ದೈಸುವನು ಜಮದಗ್ನಿರಾಮನು ಕಂಡು ಮನದೊಳಗೆ ॥ ೩೦

ಕಾರ್ತವೀರ್ಯನ ಸಂಹಾರ.

ತಾಯ ನಿಲಿಸಿಯೆ ಪರಶುಗೊಡಲಿಯ
ಬಾಯ ಮಸೆವುತ ಬಂದು ಭೂಪನ
ದಾಯಿಗರ ಹರೆಗಡಿದು ಹಿಡಿದನು ಕಾರ್ತವೀರ್ಯಕನ ।
ಬಾಯ ಬಿಡೆ ಪಶುಗಳಲಿ ಯಜ್ಞದ
ದಾಯನಿಕರಕೆ ಕಟ್ಟುವಡೆದನು
ರಾಯ ನೊಂದನು ತಾ ಚತುರ್ಬಲ ವೋಡಿತಲ್ಲಲ್ಲಿ ॥ ೩೧

ಏಱಿಗೆಯೆ ವಜ್ರಾಂಗವಾದೊಡೆ
ಬಾಳಲೀಸದು ಪಾಪಕರ್ಮವು
ಕಾಲದಲಿ ಫಲವಿತ್ತು ಲಕ್ಷ್ಮೀಲೋಲ ಮುನಿಯಲಿಕೆ ।

ತೋಳಡವಿಯೊಳು ಪೊಕ್ಕು ಕೊಡಲಿಯು
ಜಾಳಿಸಿಯೆ ತಱಿದೊಟ್ಟಿ ಸಮಿಧೆಯು
ಮಾಳಗೆಯು ಮಾಡಿದನು ಸಾಸಿರಬಾಹುನೃಪತಿಯನು ॥ ೨೨
ಮತ್ತೆ ಕಡಿದನು ಶಿರವನಹಿತನ
ಹೊಟ್ಟೆಯನು ಚಪ್ಪಕಡಿಯ ಮಾಡಿಯು
ಕಟ್ಟಿ ಕೊಂಡಾಡಿದನು ಕೌಶಲಮಲ್ಲ ನಿಮಿಷದಲಿ ।
ಅಟ್ಟಿದನು ಜವಪುರಕೆ ನೃಪತಿಯ
ಕುಟ್ಟಿ ತಂದೆಯು ಹೊರೆಗೆ ಬಂದುತು
ಕೃಷ್ಟದೇವೋತ್ತಮನದೆತ್ತಿದ ಮುನಿಯು ನಿಮಿಷದಲಿ ॥ ೨೩
ಅಬ್ದವೆರಡೆನಲಲ್ಲಿ [1] ಪುಟ್ಟಿದ
ಶಬ್ದಬ್ರಹ್ಮಾತೀತನಂದಿಗೆ
ಲಬ್ಧವಾಯಿತ್ತಾಮಹೀಪತಿ ಪುರವರೇಶ್ವರಗೆ ।
ಅಬ್ದವದು ರಕ್ತಾಕ್ಷಿಯುಪರದ
ಹುಬ್ಬೆಯುಲಿ ರವಿ ಯಿರಲಿಕಾತನ
ಸರ್ಬಸೈನ್ಯದ ರಕ್ತದಿಂದವೆ ಹುಟ್ಟಿತಾನದಿಯು ॥ ೨೪

ಪರಶುರಾಮನು ಭೂಮಿಯನ್ನು ವಿಪ್ರರಿಗೆ ದಾನಮಾಡುವಿಕೆ.

ರೇಣುಕಾಸುತನಲ್ಲಿ ತಂದೆಯು
ಕಾಣಿಸಿದನಾಪರಶುರಾಮನು
ಗೋಣ ಕಡಿದಾನೃಪನ ಭೂಮಿಯು ಕೊಂಡು ಪರುಷದಲಿ ।
ಕ್ಷೋಣಿಸುರರಿಂಗೀಯೆ ಭೂಪನ
ರಾಣಿ ಕೋಪದಿ ತನ್ನಗಂಡನ
ಪ್ರಾಣಗೊಂಡನ ಕೊಲುವ ಮುಂಡೆಯು ಮಾಣಿ ಮಗನೆನುತ॥೨೫

ಆವಂಶದಲ್ಲಿ ಹುಟ್ಟಿದ ಸೌವೀರ ರಾಜನ ಸಂಹಾರ.

ಧ್ಯಾನವಿಡಿದಿರೆ ಸೂರ್ಯದೇವರಿ
ಗಾನದೀತೀರದಲಿ ತಿಂಗಳು

---

[1] ವೆರಡೇಱಿರಲಿ, ಕ. ಖ.

ಮಾನಿನಿ ಯಿರಲು ರವಿಯು ರಮಿಸಲಿಕೊಬ್ಬ ಸೌವೀರ |
ಮಾನಿನಿಗೆ ನವಮಾಸ ತೀರಲು
ದಾನವನ ಯಾವೇಶದಿಂದವೆ
ಮಾನವೇಂದ್ರತೆ ಯೆಯ್ದಿ ತಂದೆಯು ರಾಜ್ಯಗೆಯ್ಯುತಿರೆ || ೨೬

ಧರಣಿಸುರರುಂಬಗ್ರಹಾರವ
ಪರಿಹರಿಸಿ ಭೂಸುರರನೆಲ್ಲರ
ಹಿರಿದು ಕಾಡಿಯೆ ಪರಶುರಾಮನ ಮೇಲೆ ದಂಡಾಯ್ತು |
ನೆರಹಿದನು ಹದಿನೆಂಟುಕೋಟಿಯ
ಕರಿಘಟಾವಳಿ ಸೈನ್ಯಸಾಗರ
ವೆರಸಿ ಹೇಮಾಚಲಕೆ ಬಂದನು ಬಂದು [1] ಮುತ್ತಿದನು || ೨೭

ಮುತ್ತಲಿಕೆ ತೆತ್ತೀಸಕೋಟಿಗ
ಳತ್ತ ನಡುಗಲು ಪರಶುರಾಮನು
ಹೊತ್ತು ಕೊಡಲಿಯ ಕೊಂಡು ನಡೆದನು ಕರಿಯ ಕಾನನಕೆ |
ಚಿತ್ತವಿಸು ನಿಮಿಷಾರ್ಧದಲಿ ನೆಱೆ
ಮುತ್ತಿದಿಭಗಳ ಕಡಿದು ಜೋದರ
ಮೃತ್ಯುಲೋಕವ ಹೊಗಿಸಿ ಕೊಂದನು ಸೌರವೀರ್ಯನನು||೨೮

ಅವನ ದೇಶವ ಮರಳಿ ಭೂಸುರ
ನಿವಹಕಿತ್ತರೆ ಕೆಲವು ದಿವಸಕೆ
ಯುವತಿ ಸೌವೀರಕಗೆ ತನಯನ ಮಾಳ್ಪ ಭರವಸದಿ |
ಭವಣಿಗೆಯುಲೈತಂದು ಸೋಮೋ
ದ್ಭವೆಯ ತೀರದಲೆಸಗಿ ತಪವನು
ಯುವನದಲಿ ಶಶಿಗೆಸಗೆ ರಮಿಸಿದನಾಸುರೂಪಿಯನು || ೨೯

ಶಶಿವೀರ್ಯಜನನ ಮತ್ತು ಅವನ ಸಂಹಾರ.

ರಮಿಸಲಿಕೆ ಶಶಿವೀರ್ಯ ಜನಿಸಿದ
ಪ್ರಮದೆಯಲಿ ನವಮಾಸ ತೀರಲು

---

1 ಬಂದಾಗೊಡನೆ, ಖ.

ಕುಮತಿಯನು ಕೊಂಡೊಯ್ದು ಸಲಹಲಿಕೇೞುವತ್ಸರವು |
ಗಮಿಸಿ ತಂದೆಯು ಪುರವನಾಳ್ದನು
ನಿಮಿಷದೊಳಗಾಕ್ರಮಿಸಿ ಸೇನೆಯ
ನಮಿತವಿಲ್ಲದೆ ಸರಹಿ ಬ್ರಾಹ್ಮರ ದೇಶವೀವುತಲಿ ॥ ೪೦

ಬಂದು ರೇಣುಕೆಯ ಸುತನಾಶ್ರಮ
ಕಂದ- ಧಾೞಿಯನಿಡಲು ಕೊಡಲಿಯ
ಕಂಧರಿಗನ್ಯೈತಂದು ನೃಪತಿಯ ದೞವ ಬೞಿಕೆಯ್ದು |
ಮಂದಮತಿಯನು ಕಡಿದು ಭೂಸುರ
ವೃಂದಕಿಳಯನು ಕೊಟ್ಟು ವಿಪ್ರರ
ಹಿಂದೆ ಕಾಯಲು ವಿಪ್ರಮನ್ನೆಯನಧಿಕಪೌರುಷವ ॥ ೪೧

ಮರ್ತ್ಯನನು ನೆಱೆ ಸೃಜಿಸಿ ಕೊಟ್ಟರೆ
ವೃತ್ತಿಯಲಿ ಭೂಸುರರ ಸಲಹಲು
ಮತ್ತೆಯಾತನ ಸತಿಯು ಪುತ್ರನ ಪಡೆಯಬೇಕೆನುತ |
ಪೃಥ್ವಿಯನು ತಿರಗುತಲಿ ನರ್ಮದೆ
ಯತ್ತ ಬಂದಾಕುಜನ ಧ್ಯಾನದಿ
ವೃತ್ತಗುರುಕುಚೆ ಯಿರಲು ಕಂಡನು ಸತಿಯ ಭೂಮಿಜನು ॥ ೪೨

ರಮಿಸಲಿಕೆ ನೆಱೆ ಭೌಮವೀರ್ಯನು
ಕುಮತಿಯಲಿ ಬಂದ್ಯೈಯ್ಯನಾಳ್ದ
ಚೆಮಿಮಹಾಮಂಡಲವ ಕೊಂಡನು ಕಂಡು ಮನ್ನೆಯರ |
ನಿಮಿಷದಲಿ ಭೂಸುರರನೆಲ್ಲರ
ಪ್ರಮದೆಯರ ಸೆಱೆ ಪಿಡಿದು ಹಿಂದಣ
ಕ್ರಮದಲೆ ಬ್ರಾಹ್ಮಣರ ಭಂಗಿಸಿ ಪರಶುರಾಮನನು ॥ ೪೩

ಅರಸುತೈತಂದಲ್ಲಿ ಪರ್ವತ
ದಿರುಬಿನಲಿ ಕಾಳಗವ ಕೊಟ್ಟನು
ತಱಿದು ಬಿಸುಟನು ಯವನಸೇನೆಯನವನ ಸಿರಿ ಸಹಿತ |

ತಿರುಗಿ ಬ್ರಾಹ್ಮರ ನೆರಹಿ ಧಾರೆಯು
ನೆಱೆದು ಭೂಮಿಯ ಮರಳಿ ಕೊಟ್ಟನು
ಸೆಱೆಯ ಬಿಡಿಸಿಯೆ ಕೋಟಿಕಾಸ್ಯನದೆಂಬ ಮನ್ನೆಯನ ॥ ೪೪

ಸೃಜಿಸಿ ವಿಪ್ರರ ಯಜನಯಾಜನ
ತ್ರಿಜಗದಲಿ ಮೆಱೆಯಲಿಕೆ ಬಹುಗಜ
ಬಜಿಕೆ ಯಿಲ್ಲದೆ ಯಿರಲಿಕಾತನ ಸತಿಯು ಸೌಮ್ಯನನು ।

ಬುಧವೀರ್ಯನ ಜನನ ಮತ್ತು ಸಂಹಾರ.

ಭಜಿಸಲಿಕೆ ಬಂದೈದೆ ರಮಿಸಿದ
ಕುಜಜ ಸತಿಯಳಿಗಾಗ ಜನಿಸಿದ
ಭುಜಬಲಾನ್ವಿತನಪ್ಪ ಪುತ್ರನು ನಿರುತಬುಧವೀರ್ಯ ॥ ೪೫

ಜನಿಸಿ ತಂದೆಯು ಪುರವ ಹೊಕ್ಕಂ
ತನಿತು ಬ್ರಾಹ್ಮರ ವೃತ್ತಿ ಭೂಮಿಯ
ಜನಪನಪಹರಿಸೈದೆ ಕಾಹಿನ ಮನ್ನೆಯಾದಿಗಳ ।
ತನುಗಡಿದು ಹೇಮಾದ್ರಿಯಲ್ಲಿಗೆ
ಘನಚತುರ್ಬಲದಿಂದ ಬಂದನು
ಮುನಿಶಿರೋಮಣಿಪರಶುರಾಮನ ವಾಸವನಕಾಗಿ ॥ ೪೬

ಬಂದು ಕೋಳಾಹಳದ ಕದನವ
ನಂದು ಮಾಡಲು ಕೇಳಿ ಕೊಡಲಿಯಿ
ನಂದದಲಿ ಮೋಹಿಸಿಯೆ ಭೂಪನ ಸೈನ್ಯಸಾಗರವ ।
ನಂದಿಸಿಯೆ ನಿಮಿಷಾರ್ಧದಲಿ ಯಮ
ಮಂದಿರಕೆ ನಡೆಗೊಳಿಸಿ ಮುಖಜರ
ಮಂದಿಗಿತ್ತನು ಸಕಲಭೂಮಿಯ ಜಾಮದಗ್ನಿಕನು ॥ ೪೭

ಅರಸನಂತಕಪುರಕೆ ಸಲಲಿ
ಕ್ಕರಸಿ ಪುತ್ರನ ಪಡೆವೆನೆಂದಾ
ದರಿಸಿ ಮಂದಾಕಿನಿಯ ಹೊರೆಯಲಿ ಜೀವನನು ಭಜಿಸಿ ।

ಜೀವವೀರ್ಯನ ಜನನ ಮತ್ತು ಅವರ ಸಂಹಾರ

ಇರಲಿಕಾಸುರಗುರುವು ಸತಿಯುಳ
ಹೊರೆಗೆ ಬಂದುಱೆ ನೆರೆಯಲಾಗಳು
ಪರಿವಿಡಿಯೆ ನವಮಾಸ ತೀರಲು ಜೀವವೀರ್ಯಕನು ॥ ೪೮

ಜನಿಸಿ ಕಾಲಾಂತರಕೆ ತಂದೆಯು
ವಿನುತರಾಜ್ಯವ ಕೊಂಡು ಬ್ರಾಹ್ಮರ
ಜನವ ಸುಲಿವುತ ದೇಶಗಾಹಿನ ಮನ್ನೆಯಾದಿಗಳ ।
ಅನಿತುವನು ಸಂಹರಿಸಿ ರೇಣುಕೆ
ತನಯನಲ್ಲಿಗೆ ಧಾಟಿಮಾಡಿಯೆ
ಘನಮಹಾಸೈನ್ಯದಲಿ ಮುತ್ತಿದನಾಮಹಾಶ್ರಮವ ॥ ೪೯

ಮುತ್ತಲಿಕೆ ಜಮದಗ್ನಿರಾಮನು
ಮತ್ತೆ ಕೊಡಲಿಯ ಮಸೆದು ಹೊಕ್ಕನು
ಚಿತ್ತವಿಸು ನೆಱೆ ಕಡಿದನಾತನ ಸೈನ್ಯಕಾನನವ ।
ಅತ್ತ ನೂಕಿದ ಯಮನ ನಗರಿಗೆ
ಮುತ್ತಿ ಕಾದುವ ನೃಪನ ಶಿರವನು
ಕಿತ್ತು ಬಿಸುಟನು ನಿಮಿಷಮಾತ್ರದೊಳರಸ ಕೇಳೆಂದ ॥ ೫೦

ಬಳಿಕ ಬ್ರಾಹ್ಮಣರಖಿಲನಾಱಿಸಿ
ನಿಳಯವನು ನೆಱೆ ಕೊಟ್ಟು ಬ್ರಾಹ್ಮರ
ಬಳಗವನು ಕೈಕೊಳಿಸಿ ಕಾಯಲಿಕೊಬ್ಬ ಮನ್ನೆಯನ ।
ಬಲುಹನುಳ್ಳನನಿತ್ತು ಬ್ರಾಹ್ಮರ
ಸಲಹಿದನು ಹಲಕಾಲಕಾತನ
ಲಲನೆ ಹೋದಳು ತಪಕೆ ಗಂಗಾತೀರಕೊಲವಿನಲಿ ॥ ೫೧

ಭಾರ್ಗವೀರ್ಯನ ಜನನ ಅವನ ಸಂಹಾರ.

ತಪವನಾಚರಿಸಲ್ಕೆಯುಶನನು
ಜಪಸಮಾಧಿಯೊಳಿಪ್ಪ ಕಂಸನು

ಕವಿಯು ತತ್‌ಕ್ಷಣ ರಮಿಸೆ ಜನಿಸಿದನುಶನವೀರ್ಯಕನು ।
ಉಪನಿಷತ್ಕರ್ಮದಲಿ ಕೋವಿದ
ಗುಪನಯನವೊದಲಾಗಲುದ್ವಾ
ಹಪರಕರ್ಮವ ಮಾಡಲೈದಿದ ಪಿತನ ಪುರವರವ ॥ ೫೦

ಬಂದು ಮನ್ನೆಯಗುಲವ ನುಱುಹದೆ
ಕೊಂದು ವಿಪ್ರರ ವಹಿಯನಳುಕದೆ
ಯಂದು ಕೊಂಡನು ಶುಕ್ರವೀರ್ಯನು ನಿಮಿಷಮಾತ್ರದಲಿ ।
ಸಂಧಿಸಿಯೆ ಸೇನೆಯನು ರೇಣುಕೆ
ನಂದನನನರಸುತಲಿ ಯುಶನನ
ಕಂದ ಹೊಕ್ಕನು ಪರಶುರಾಮನ ವರತಪೋವನವ ॥ ೫೩

ಹೊಗಲು ಕ್ಷತ್ರಿಯಕಟಕಭಂಜನ
ಬಿಗಿದು ಶಂಖಧ್ವಾನ ಮಾಡಿಯೆ
ಜಗ ನಡುಗೆ ಬಂದೈದೆ ಹೊಕ್ಕನು ನೃಪನ ವಾಹಿನಿಯ ।
ಬಗೆಯದರಿವೋಹರವ ಕಡಿವುತ
ಜಗದ ವಲ್ಲಭ ಪರಶುರಾಮನು
ನಗುತ ವಿಪ್ರಕ್ಷಯನ ಕಡಿದನು ನಿಮಿಷಮಾತ್ರದಲಿ ॥ ೫೪

ಕಡಿದು ವೇದೋದ್ಧಾರ ಮಾಡಿಯೆ
ಪೊಡವಿಯನು ಭೂಸುರರಿಗಿತ್ತುಱಿ
ಯೊಡೆಯನನು ತಿರಿ ಬೇಡೆ ಕೊಟ್ಟನದೊಬ್ಬ ಮನ್ನಿಯನ ।
ನಡೆವುತಿದ್ದುದು ಹಲವುಕಾಲವು
ಬಿಡದೆ ಕೃತಯುಗದಪರಭಾಗಕೆ
ಮಡದಿ ಬಂದಳು ಗರುಡಗಂಗೆಯ ತೀರಕರಸುತಲಿ ॥ ೫೫

ಮಂದವೀರ್ಯನ ಜನನ ಮತ್ತು ಸಂಹಾರ.

ಬರಲಿಕಾಕೆಯ ರೂಪುವಿಭ್ರಮ
ಕುರುವಣಿಸಿ ನೆಱಿ ಶೌರಿ ರಮಿಸಿದೊ

ಧರಿಸಿ ಪೆತ್ತಳು ಮಂದವೀರ್ಯನನೂರ್ಜಿತೋರ್ಜಿತನ |
ಧರಣಿಯಲಿ ದಿನ ಸವೆಯಲಾತನು
ಪುರುವೆಣಿಸಿ ತನ್ನಾತ್ಮಜನಕನ
ಪುರವ ಹೊಕ್ಕನು ಹೊಕ್ಕು ಕೊಂದನು ಮನ್ನೆಯಾದಿಗಳ || ೫೬

ಕೊಂದು ಭೂಸುರಜನರನನಿಬರ
ಚಂದಗೆಡಿಸಿಯೆ ವಿಪ್ರರಿಳೆಯನು
ಮಂದಮತಿ ಕೈಕೊಂಡು ಕವರಿದನವರ ಹಿರಿದಾಗಿ |
ಮುಂದುಗೆಡಿಸಿಯೆ ಯಿರಲಿಕಾಗೋ
ವಿಂದನೊಲಿಯಲಿಕವನು ಸೇನೆಯ
ಮಂದಿಯಲಿ ಭಾರ್ಗವನನರಸುತ ತೀವ್ರಕೋಪದಲಿ || ೫೭

ಬಂದು ಭಾರ್ಗವರಾಮಚಂದ್ರನ
ಸಂದ ಭುಜಬಲವಳಿಯದಾತನು
ಮುಂದೆ ಮೋಹರಿಸಿರಲಿಕೆದ್ದನು ದೈತ್ಯದಾವಾಗ್ನಿ |
ಮಂದವೀರ್ಯನ ಮೇಲೆ ಹಾಯಿದು
ಸಂದುಸಂದಿಗೆ ಕಡಿದು ವಿಪ್ರರ
ಮಂದಿಗಿತ್ತನು ಮಹಿಯ ಪುನರಪಿ ಯವರ ಕಾಹಿಂಗೆ || ೫೮

ಕಳುಹಿದನು ಮನ್ನೆಯನನಾಕ್ಷಣ
ನಳಿನನಾಭನ ಬಲುಹನುಳ್ಳನ
ಕೆಲವುಕಾಲಾಂತರಕೆ ಸೌರಿಯ ಸುತನ ಸತಿ ಮುಟ್ಟಿದು |
ಇಳೆಯಲುಟಿಯುಗ್ರದಲಿ ತಪವನು
ಲಲನೆ ಮಾಡಲಿಕಾಗ ಕೋಮಲ
ಕಳೆಯ ಕಂಡಾರಾಹು ರಮಿಸಲಿಕೊಬ್ಬನತಿಬಳನು || ೫೯

ರಾಹುವೀರ್ಯನ ಜನನ ಅವನ ಸಂಹಾರ

ಜನಿಸಿದನು ನವಮಾಸ ತೀರಲು
ಜನನಿ ಸಾಕಿದಳಹಿಯನನ್ವಿತ

ಜನಪಕುಲಕಧಿಪತಿಯು ಮಾಡಲು ರಾಹುವೀರ್ಯಾರ್ಕನ ।
ವಿನುತಕ್ಷತ್ರಿಯಕುಲದ ದೀಕ್ಷೆಯು
ಜನಪ ಕೊಂಡೈದಿವನು ತಂದೆಯು
ಯನಿತು ರಾಜ್ಯವನಾಳ್ವ ವಿಪ್ರರ ಮಹಿಯು ಕೈಕೊಳುತ ॥ ೬೦

ಕೊಲುತ ಮನ್ನೆಯು ಜಾತಿಯಾದುದ
ಸುಲಿದು ವಿಪ್ರನಿಕಾಯಮಾದುದ
ತುಳಿದು ದೇಶಾಂತರವ ಮಾಡಿಯೆ ಪರಶುರಾಮನನು ।
ತಿಳಿಯಲಱಿಯದೆ ವಿಪ್ರಜಾತಿಯು
ಬಳಗದಿರಿಕೆಯನೆಂದು ಕೊಲ್ಲುತ
ಬಲುಹಮಾಡದೆ ಬಂದು ಕಂಡನು ಜಗದ ವಲ್ಲಭನ ॥ ೬೧

ಕಂಡು ಕೈಮಾಡಲಿಕೆ ಕೊಡಲಿಯು
ಕೊಂಡು ಕೈಯೊಡನೆದ್ದು ಕಾದಿದ
ಗಂಡುಗಲಿ ಹದಿಮೂಱುದಿವಸವು ಭೂತಳಾಗ್ರದಲಿ ।
ತುಂಡಿಸಿದ ಕಡುಗೋಪದಿಂದವೆ
ದಿಂಡುದಱಿದನು ವಿಪ್ರತಂಡವ
ಹಿಂಡಿದನೆ ಯಿವನೆಂಪು ಕೊಂದನು ರಾಹುವೀರ್ಯಾರ್ಕನ ॥ ೬೨

ಕೊಂದು ಪುನರಪಿ ದ್ವಿಜರಿಗವನಿಯ
ನಂದು ಧಾರೆಯನೆಱೆದು ವಿಪ್ರರ
ಮಂದಿಯನು ಸಂತೈಸಿ ಕಳುಹಿದ ಪರಶುರಾಮಮುನಿ ।
ಕಂದಿದುಜ್ವಲಮುಖದ ಭೂಸುರ
ವೃಂದವನು ಕಾಯಲಿಕೆ ತತ್ಕ್ಷಣ
ಸಂಧಿಸಿಯೆ ನೆಱೆ ಸೃಜಿಸಿ ಕೊಟ್ಟನು ವಿಪ್ರವಿಧುವೆಂಬ ॥ ೬೩

ಕಡುಗಲಿಯು ಕಳುಹಿಸಲಿಕಾತನು
ಪೊಡವಿಸುರರಾಜ್ಞೆಯಲಿ ದೇಶವ
ಬಿಡದೆ ಕಾಯುತ್ತಿರಲಿಕಾತನ ಮಡದಿ ಕೋಪದಲಿ ।

ಕ್ಷತ್ರವೀರ್ಯಾರ್ಜುನನ ಅವನ ಸಂಹಾರ.

ಪಡೆವೆನೊಬ್ಬ ಸುಪುತ್ರಘನವನು
ಬಿಡದೆ ಬ್ರಾಹ್ಮರಿಗಹಿತಮಾಡುವ
ಪ್ರೌಢವಿಪರನುದ್ಧರಿಪನಾಗಲಿ ಯೆನುತ ಶಶಿವದನೆ ॥ ೬೪

ಕ್ಷತ್ರವನು ಧ್ಯಾನಿಸಲಿಕಾತನು
ಸೋತು ರಮಿಸಲಿಕಾಕೆಗಾಯಿತು
ಪ್ರೀತಿಯಲಿ ಕಾಲಂಗೆ ಸೆಣಸುವ ಸುತನ ಗರ್ಭವದು ।
ಭೂತಳಕೆ ನವಮಾಸ ತೀರಲಿ
ಕಾತ ಹುಟ್ಟಿದ ಕ್ಷತ್ರವೀರ್ಯನು
ಪಾತಕದ ಕಡುಹೊಳೆಯು[1] ಗರ್ಭದ ಫಲದ ಬಳವಿಗೆಯು ॥ ೬೫

ಉದಯಿಸಿತು ಕಾಲಾಂತರಾಳ
ಕ್ಕದಟುತನದಲಿ ಬಂದು ಬ್ರಾಹ್ಮರ
ಸದೆಬಡಿದು ಮನ್ನೆಯರ ತಂಡವ ಕಡಿದು ಮಹಿಯಾಳಿ ।
ಮುದದಿ ಚೋಳನ ಮಗಳ ಮದುವೆಯ
ಸದನದಲ್ಲೆಳೆತಂದು ಪರಿಣಯ
ವಿಧಿಯೊಳಾವನು ನಿಮಿಷಮಾತ್ರದೊಳರಸ ಕೇಳೆಂದ ॥ ೬೬

ಬಳಿಕ ಕತಿಪಯದಿನಕೆ ಕಾಲನ
ಹೊಳಲನರಸುತಪರಶುರಾಮನ
ನಿಳಯಕ್ಕೈದಿದ ಚಾತುರಂಗದ ಸೈನ್ಯಸಾಗರದಿ ।
ಅಳುಕಿಸಿದ ಋಷ್ಯಾಶ್ರಮಂಗಳ
ನಳುಕಕೇಳಿಯೆ ಜಾಮದಗ್ನಿಯು
ಕುಲಶಿರೋಮಣಿ ಬಂದು ತಾಗಿದನವನ ಮೋಹರವ ॥ ೬೭

ತಾಗಿ ಕಡಿದೊಟ್ಟಿದನು ಕೊಡಲಿಯ
ಬಾಗಿನಲಿ ಬಹುಚಾತುರಂಗವ

1 ನಡುಹೊಳೆಯು, ಕ. ಖ.

ನೀಗಿಸಿತು ನೆಱೆ ಕೇತುವೀರ್ಯನ ಕೊಂದ ನಿಮಿಷದಲಿ ।
ಮೇಗೆ ನಾಕಜರೈದೆ ಪುಷ್ಪವ
ನಾಗ ಸುರಿದರು ಕೊಡಲಿಯೊಡೆಯಗೆ
ರಾಗವಲಿ ಶರಣೆಂದು ಹರದರು ಗಗನರಂಗದಲಿ ॥ ೧೮

ಬಳಿಕ ವಿಪ್ರನಿಕಾಯವೆಲ್ಲವ
ನಿಳೆಯುದಲಿ ಮೇಳೈಸಿ ಧಾರೆಯು
ನಳಿನಸಂಭವ ಮೆಚ್ಚ ಲೆಱೆದನು ಸಕಲವಿಪ್ರರಿಗೆ ।
ಕಳುಹಿದನು ಮುನ್ನಾಳ್ದ ಭೂಮಿಗೆ
ಕಳುಹಿ ಕಾಯಲಿಕೊಬ್ಬ ಮನ್ನೆಯ
ಬಲುಹನುಳ್ಳನ ಕೊಟ್ಟ ಬ್ರಾಹ್ಮರ ಸಲಹುತಿರೆ ಬಳಿಕ ॥ ೧೯

ಕೇತು ವೀರ್ಯನ ಸತಿ ಪತೀಹಿತ
ಭೂತಳಕೆ ಬಲುಹುಳ್ಳ ಪುತ್ರನು
ಜಾತನಾಗನೆ ಯೆಂದು ಪೂರ್ವದಿಶಾಧಿನಾಯಕನ ।

ಇಂದ್ರ ವೀರ್ಯಜನನ ಅವನ ಸಂಹಾರ

ಓತು ರಾಜಮಹೇಂದ್ರದೇಶದಿ
ಖ್ಯಾತಗಂಗಾಬ್ಧಿಯಲಿ ಧ್ಯಾನವ
ನಾತಗೀಯಲಿಕಿಂದ್ರ ಬಂದನು ರಮಿಸಿದನು ಸತಿಯ ॥ ೨೦

ರಮಿಸಿ ಯಮರಾವತಿಗೆ ಗಮಿಸಲು
ಕುಮತಿಗಾದುದು ಗರ್ಭ ಶಕ್ರನ
ನಮರನಿಕರವು ಕಂಡು ಜಱೆದುದು ವಿಪ್ರಕಂಟಕನ ।
ಸುಮನಸೇಶ್ವರನಿತ್ತತನಯನ
ಕ್ರಮದಿ ನೆಱೆ ನವಮಾಸ ತೀರಲು
ನಿಮಿಷದಲಿ ಜನಿಯಿಸಿದನಿಂದ್ರನ ವೀರ್ಯ ಮಹಿತಳಕೆ ॥ ೨೧

ಜನಿಸಿ ತಂದೆಯ ಛಲವ ಮರಳಿಪೆ
ನೆನುತ ದ್ರಾವಿಡಪತಿಯು ತನುಜೆಯ

ಜನಪನುದ್ವಾಹಿಸಿಯೆ ಬ್ರಾಹ್ಮರ ಶಾಸನಂಗಳನು ।
ಎನಿತು ಯಿದ್ದವನೆಲ್ಲ ಗಳಿಸಿದ
ಧನವ ವಿಪ್ರಸ್ವಾಪಹಾರವ
ತನಗೆ ಮಾಡಿದನಪರಭಾಗವನಾಯುಮಾಂಗಣಕೆ ॥ ೨೨

ಮಾಡಿಕೊಂಡಲ್ಲಿಂದ ಸೇನೆಯು
ಗಾಢದಲಿ ಯಮನಲ್ಲಿಗೈದಿದ
ನೋಡಿರೇ ಯೀದುಷ್ಟಮತಿಗಳ ಬಯಕೆಯುನ್ನತಿಯ ।
ರೂಢಿ ವಿಶ್ವಂಭರನ ವೈರವ
ಮಾಡಿ ಬದುಕುವೆನೆಂಬ ಕಷ್ಟರ
ಕೇಡು ಸೂಚಿಯನೇನನೆಂಬೆನು ಭೂಪ ಕೇಳೆಂದ ॥ ೨೩

ಬಳಿಕ ಕಾಲಾಂತರಕೆ ಮುನಿಕುಲ
ತಿಲಕ ವಿಪ್ರನಿಕಾಯಕಾಸ್ಪದ
ಬಲಿಮಥನಗಿದಿರಾಂತು ನಿಂದನು ರೇಣುಕಾಸುತಗೆ ।
ಕಲಿಮುಖಾವಿರ್ಭೂತಚೇತನ
ಬಳಗವಂಶೋದ್ಧಾರನಾಗಲಿ
ಕಳುಕದವ ಕೈಮಾಡಲಾಕ್ಷಣ ಪರಶುಧರ ಕಂಡು ॥ ೨೪

ಕೊಡಲಿಯನ್ನೆಡಗಯ್ಯಲೊರಸುತ
ಕಡಿದನಾಸೈನ್ಯವನು ಭೂಪನ
ನಡುವನಿಕ್ಕಡಿಮಾಡಿ ಬಿಸುಟನು ನಿಮಿಷಮಾತ್ರದಲಿ ।
ಕಡಿವಡೆದುದಕ್ಷೋಹಿಣಿಬಲವದು
ವೊಡೆಯಗೆಂದೊಡಲೊಕ್ಕಲಾಯಿತು
ಪೊಡವಿಯನು ಭೂಸುರರಿಗಿತ್ತನು ಮತ್ತೆ ಮೇಳೈಸಿ ॥ ೨೫

ಅಖಿಲನಾರಿಸಿ ಮತ್ತೆ ಮನ್ನೆಯ
ಗುಲವ ಸೃಜಿಸಿಯೆ ವಿಪ್ರವರ್ಗವ
ಕಳುಹಿದನು ಕರುಣಾಳು ಮನ್ನಿಸಿ ಭೂಮಿಯಾಳಿಕೆ ।

ಹಲವುಕಾಲವನಾಳುತಿರಲಿಕೆ
ಲಲನೆ ಕೋಪದಲಿಂದ್ರವೀರ್ಯನ
ಕುಲಕೆ ಪುತ್ರನ ಪಡೆವೆನೆಂದಳು ತಾಂಮ್ರಪರ್ಣಿಯಲಿ ‖ ೩೬

ಅಗ್ನಿವೀರ್ಯನ ಜನನ ಅವನ ಸಂಹಾರ.

ತಪವನಾಚರಿಸಲಿಕೆ ಶೂಲಿಯು
ಕೃಪೆಯಿ ಸ್ವಾಹಾವತಿಯ ವಲ್ಲಭ
ತಪವ ಕಂಡತ್ಯಂತ ಪ್ರೀತಿಯೊಳಾಕೆಯೊಡನಿರ್ದ ।
ಸಫಲವಾಯ್ತೆನಗೆಂದು ಮಾನಿನಿ
ಜಪಿಸುತಿರೆ ನವಮಾಸ ತೀರಲು
ವಿಪುಳಭುಜಬಲ ಜನಿಸೆ ಹಾಯ್ದನು ವಹ್ನಿ ನಿಮಿಷದಲಿ ‖ ೩೭

ಪೆತ್ತಳಾಕೆಯು ವಹ್ನಿವೀರ್ಯನ
ಮತ್ತೆ ಕಾಲಾಂತರಕೆ ತಂದಳು
ಚಿತ್ತವಿಸು ತನ್ನರಸನಾಳುವದೇಶದರಮನೆಗೆ ।
ಮತ್ತೆ ಕೊಂಡನು ಸುತನು ಭೂಸುರ
ಸತ್ತಮರವರ ಮಂಡಳೋರ್ವಿಯ
ನರ್ಥವನು ನೆಱೆ ಸುಲಿದುಕೊಂಡನು ಮನ್ನೆಯಾದಿಗಳ ‖ ೩೮

ಕೊಂದು ಬಹುದಿನ ರಾಜ್ಯವಾಡುತ
ಲಂದು ಪರಿಣಯವಾದ ಪಾಂಡ್ಯನ
ನಂದನೆಯಲಿರುತೊಡನೆ ಬಂದನು ನೃಪಕುಲಾಂತಕನ ।
ಮಂದಿರವನರಸುತ್ತ ಸೇನೆಯ
ಮಂದಿಯೊಡನಾಶ್ರಮವ ಕಡಿವುತ
ಬಂದು ಕೋಳಾಹಳವ ಮಾಡುವ ನೃಪನ ಸಡಗರವ ‖ ೩೯

ಕಾಲಯಮ ಗೋಳಿಕರ ಕುಲಗಿಳ
ಕೇಳಿ ಪರಶುವ ಮಸೆದು ಹೊಕ್ಕನು
ತೋಳ್ರಡ ನೆಱೆ ತಱಿದು ಕೆತ್ತಿದನವನ ನೆತ್ತಿಯನು ।

ಕಾಲಪುರಕಿತ್ತವನ ಸೇನೆಯು
ಜಾಳಿಸಿಯೆ ಮರಳ್ದವನಿಸುರರನು
ಪಾಲಿಸಿದ ಸರ್ವಸ್ವವಿತ್ತನು ಪೂರ್ವರೂಢಿಯಲಿ ॥ ೮೦

ಕಳುಹಿದನು ಭೂಸುರರನೆಲ್ಲರ
ತಲಹಿನಲಿ ಮನ್ನಿಯನನೊಬ್ಬನ
ಬಲುಹನುಳ್ಳನ ಕೊಟ್ಟುದೇಶವ ಕಾಯಲೆಂದಂದು ।
ಕಳುಹಲಿಕೆ ಹತ್ತೆಂಟುಸಾವಿರ
ಗಳಿತವಾಯ್ತಬ್ದಗಳ ಕಡೆಯಲಿ
ಕಳವಳಿಸಿ ಯಾಯಗ್ನಿವೀರ್ಯನ ಲಲನೆ ಕೋಪದಲಿ ॥ ೮೧

ಯಮವೀರ್ಯ ಜನನ ಮತ್ತು ಅವನ ಸಂಹಾರ.

ಗಂಡನಂತಕಪುರಕೆ ಹೋಗಲು
ರಂಡೆ ಪುತ್ರನ ಪಡೆವೆನೆಂದಾ
ದಂಡಿಯಲಿ ಕಾಳಿಂದಿತೀರದಲಧಿಕತಪಸುಗಳ ।
ಕೊಂಡೆಸಗೆ ವೈವಸ್ವತೇಶ್ವರ
ಕಂಡು ರಮಿಸಿದನಲ್ಲಿಯಾಕೆಯು
ಗಂಡನ ಪರೋಕ್ಷದಲಿ ಜನಿಸಿದ ಮತ್ತೆಗೋಳಕನು ॥ ೮೨

ತೀವಿದುದು ದಶಮಾಸವಾಕೆಗೆ
ಭೂವನಿತೆಗೆಸಕಾದ ನಾತನು
ಮೀವಿ ತನ್ನಯ ಪೂರ್ವಕರ್ಮದ ಘೋರಬಂಧನಕೆ ।
ಓವಿ ತರೆ ಸಮವರ್ತಿವೀರ್ಯನ
ನಾವಿಧಾತ್ರನು ನೋಡಿ ತಂದೆಯು
ತಾವನರಸುತ ಬಂದು ಹೊಕ್ಕನು ತನ್ನ ಪಟ್ಟಣವ ॥ ೮೩

ಬಂದು ಕತಿಪಯದಿನಕೆ ಹೈಹಯ
ಮಂದಿರೇಶನ ಮಗಳ ತರಿಸಿಯೆ
ಮಿಂದನ್ನೆ ವೈವಾಹಗೇಹದೊಳಧಿಕ ಹರುಷದಲಿ ।

ಬಂದು ಬ್ರಾಹ್ಮರ ಭೂಮಿಯೆಲ್ಲವ
ನಂದು ಕೊಂಡುಱೆ ವಿಪ್ರನಿಕರದ
ಮಂದಿಯನೆ ನೆಱೆ ಸುಲಿದು ಮನ್ನೆಯ ಜಾತಿಯಾದುದನು ॥ ೮೪

ಕೊಂದು ಕಾಲಾಂತರಕೆ ಭೂಸುರ
ವೃಂದವೈರಿಯು ಪರಶುರಾಮನ
ಚಂದವಱಿಯದೆ ಬಂದು ಹಳಚಿದನಾಪತಂಗಗಳ ।
ಗೊಂದಣವೆದುರಿಯೊಳಗೆ ಮೊಗ್ಗುವ
ಚಂದದಲಿ ಮುಗುಧಭಟ ಜೀವವು
ಕುಂದಿಸಿದುದಾಭ್ರಮರಪರಿಮಳಚಂಪಕೋರ್ವಿಯಲಿ ॥ ೮೫

ಗಂಡುಮಱೆ [1] ಗುಹ್ಯದಲಿ ಸಂಗವ
ಕೊಂಡು ಸಾವೆಂದದಲಿ ಜಿಹ್ವೆಯ
ತಂಡದಲಿ ನೆಱೆ ನೋವ ಮತ್ಸ್ಯಗಳಂತೆ ನಿಮಿಷದಲಿ ।
ಗಂಡುಗಲಿ ಕೋದಂಡರುದ್ರನ
ಖಂಡಪರಶುವಿನಿಕ್ಕೆ ತನ್ನಯ
ಪೆಂಡತಿಯ ಕಡೆಗಿರಿಸಿ ಹಾಯ್ದಪನಾಯಮಾಂಗಣಕೆ ॥ ೮೬

ಬೞಿಕ ಮುನಿಮೌಳಿಗಳ ಚರಣವ
ನೊಲಿದು ಮಹಿಮಾನಿನಿಯ ಬ್ರಾಹ್ಮರ
ಬಳಗಕಿತ್ತುಱೆ ಕೊಟ್ಟನವರಿಂಗೊಬ್ಬ ಮನ್ನೆಯನ ।
ಕಳುಹಿದನು ಕಾಯಲಿಕೆ ದೇಶವ
ಕೆಲವು ಕಾಲಾಂತರದಲಾತನ
ಲಲನೆ ಬಂದಳು ತಪಕೆ ಪುತ್ರನ ಪಡೆವೆನೆಂದೆನುತ ॥ ೮೭

ನಿರುತಿವೀರ್ಯನ ಜನನ ಮತ್ತು ಅವನ ಸಂಹಾರ.

ಬರುತ ನಿರುತಿಯ ಕಂಡು ಮಾನಿನಿ
ಹರುಷದಲಿ ಮಿಂದಿರಲಿಕಾವಧು

---

1 ಗಂಡುಖಱೆ, ಜ.   ಗಂಡುಸೆರಿ, ಖ.   ಗಂಡುಪರಿ, ಗ

ಪುರುಷನಿಲ್ಲದೆ ಯಿರಲಿಕಾತ ವ್ಯೋಮದಿಂದಿಳಿದು ।
ಬೆರಸಿದನು ಕೃಷ್ಣಾವತೀಶ್ವರ
ವರಿಸಲಾಯತಿಗೆಂಟುತಿಂಗಳು
ಸರಿಯಲುದಿಯಿಸಿದೊಬ್ಬ ಪುತ್ರನು ನಿರುತಿವೀರ್ಯಕನು ॥ ೮೮

ಆತ ಕತಿಪಯದಿನಕೆ ತಂದೆಯು
ಭೂತಳಕೆ ಬಂದಿಱಿದು ಮನ್ನೆಯ
ಜಾತವನು ಕಡಿದಖಿಳಭೂಸರದೇಶವಾದುದನು ।
ಪ್ರೀತಿಯಲಿ ಕೊಂಡವರ ಕವರಿ ಯ
ನೀತಿಯಲಿ ನೆಱೆ ರಾಜ್ಯವಾಳುತ
ತಾತನನು ಜನ ಪೊಗಳೆ ಚೌರಾದೇಶದೀಶ್ವರನ ॥ ೮೯

ಮಗಳನೇ ಕೈಕೊಂಡು ತಂದೆಯು
ಹಗೆಯ ಸಾಧಿಸಲೆಂದು ಮುನಿಪನ
ಮಗಗೆ ಧಾಟಿಯ ನಿಟ್ಟ ಸೈನ್ಯಾಂಬುಧಿಯು ರಭಸದಲಿ ।
ಜಗವು ಕಂಪಿಸೆ ಪರಶುರಾಮನ
ವಿಗಡವನು ನೆಱೆಯಱಿಯದಲ್ಲಿಗೆ
ಸೊಗಸಿ ಮುತ್ತಲು ಮೇಘವನಿಲನ ಕಾದಿದಂತಾಯ್ತು ॥ ೯೦

ನಿಮಿಷದಲಿ ತತ್ಸೈನ್ಯರಾಶಿಯು
ಯಮಪುರಾಂತರಕಟ್ಟಿ ಭೂಪನ
ಸಮರದೊಳು ಮಿಗೆ ಕಡಿದು ಕೊಡಲಿಯಲವನ ಕೈಕಾಲ ।
ಅಮಿತಕರುಣಾಸಿಂಧು ಬ್ರಾಹ್ಮರ
ಸಮತಳಿಸಿ ಮಗುಳಿವನಿಯೆಲ್ಲವ
ಕ್ರಮಕೆ ಸಾಧನಮಾಡಿ ನೀಡಿದನವರಿಗತಿಮುದವ ॥ ೯೧

ಧರಿಸಿ ದೇಶವ ಕಾಯಲಟ್ಟಿದ
ಪರಶುರಾಮನದೊಬ್ಬ ಮನ್ನೆಯ
ತರದ ಕಡುಹಿನ ವೀರನುನ್ನತಿಯಾತ್ರಿಗರ್ತನನು ।

ಧರಣಿಸುರರವರಗ್ರಹಾರವ
ಭರದಿ ಕಾವುತ್ತಿರಲಿಕಾತನ
ಯುರಸಿ ಪುತ್ರನ ಪಡೆದು ಬ್ರಾಹ್ಮರವೂರನೆಲ್ಲವನು ॥ ೯೦

ಪರಿಹರಿಸಿ ಪರಿವಾರಕೀವೆನು
ಧರೆಯು ದೇವರು ದೇಶವಾಳಲಿ
ಕರಸಿ ಯುಬ್ಬಸಗೊಂಡು ಗಂಗಾತೀರದೇಶದಲಿ ।

ವರುಣವೀರ್ಯನ ಜನನ ಮತ್ತು ಸಂಹಾರ.

ಬರುತಿರಲು ಜಲರಾಶಿಯಧಿಪನು
ಸರಸಿರುಹಮುಖಿಯನ್ನು ರಮಿಸಿಯೆ
ವರುಣ ಹಾಯ್ದನು ತನ್ನ ಗಂಗಾವತಿಯು ಗೃಹದೆಡೆಗ ॥ ೯೩

ಚನ್ನೆಯಲಿ ಗೋಳಕನು ಪುಟ್ಟಲಿ
ಕನ್ನೆನಾಡುಗಳಾಳುತಾತನು
ತನ್ನ ತಂದೆಯು ಪುರವ ಹೊಕ್ಕನು ಕಾಲ ಕೈಗೂಡೆ ।
ಜನ್ನವಿಕ್ಕುವ ದ್ವಿಜರ ತಾಮಸ
ಗುನ್ನಿ ಸುಲಿವುತ ದೇಶವೆಲ್ಲವ
ಮನ್ನಿಸದೆ ಕರಕಡಿದು ಕೊಂದನು ಮನ್ನೆಯಾದಿಗಳ ॥ ೯೪

ಕೊಂದು ನೆರಹಿದ ವರುಣವೀರ್ಯಕ
ನಂದು ಸೇನಾಂಬುಧಿಯೊಳಾಕ್ಷಣ
ಸಂದಣಿಸಿ ಸೌರಾಷ್ಟ್ರದೇಶದ ನೃಪನ ನಂದನೆಯು ।
ತಂದು ಮಧುರೋಕ್ತಿಯಲಿ ಗೋಳಕ
ಬಂದು ಕನ್ನೆಯು ನೆರೆದು ಬೇಗದಿ
ಬಂದನಾ ನೃಪಕಾಲಯಮನನೆ ಯುರಸುತೊಲವಿನಲಿ ॥ ೯೫

ಬಂದು ಭಾರ್ಗವರಾಮನಿದಿರಲಿ
ನಿಂದು ಕಾದಲಿಕಾತನಾಯುಷ
ಬೆಂದು ಹೋಯಿತದರಗು ವಹ್ನಿಯು ಸೋಕಿದಂದದಲಿ ।

ಸಂದನೈ ಯಮಪುರಕೆ ವರುಣನ
ನಂದನನು ಕಲಿಬಲಿಯು ಸಂಗದ
ಲಂದು ಪುನರಪಿ ಮಹಿಯು ಬ್ರಾಹ್ಮರಿಗಿತ್ತು ಸಲಹಿದನು ॥ ೯೬

ಹಿಂದೆ ಸೃಜಿಸಿಯೆ ಮತ್ತೆ ಮನ್ನೆಯ
ವೃಂದವನು ಭೂಸುರರ ಕಾಯಲಿ
ಕಂದು ಕಳುಹಲಿಕವನ ವಲ್ಲಭೆ ಕಾಲ ಹಲವಾಗೆ ।
ಹಿಂದೆ ಮೆಱೆಯದೆ ಬ್ರಾಹ್ಮರೆಲ್ಲರ
ಚಂದಗೆಡಿಸುವೆನೆನುತ ಛಲತಪ
ಕೆಂದು ಗಮಿಸಿಯೆ ಬರುತ ಬಟ್ಟೆಯೊಳಾಗಲಘವತಿಯು ॥ ೯೭

ಶ್ವಾಸ ವೀರ್ಯನ ಜನನ ಮತ್ತು ಅವನ ಸಂಹಾರ.

ತೀರದಲಿ ತಪದಿರಲು ಕಂಡಾ
ನಾರಿಯನ್ನು ಪವಮಾಯು [1] ರಮಿಸಿದ
ಧಾರುಣಿಗೆ ಜನಿಸಿದನು ಪುತ್ರನು ಮೂಸ ನವ ತೀರೆ ।
ಭಾರದಲ್ಲಾ ವಾಯು ತನ್ನಯ
ಪೂರಿಗೈದಲಿಕಾಕೆ ಪಡೆದಾ
ವೀರನನು ನವಮೂಸ ತೀರಲು ಶ್ವಾಸವೀರ್ಯನನು ॥ ೯೮

ಸಲಹಲಿಕೆ ಹಲಕಾಲವಾಗಲು
ಬಲುಹಿನಲಿ ಬಂದೈದಿ ತನ್ನಯ
ಹೊಟ್ಟಿಲ ಹೊಕ್ಕನು ತನ್ಮಹೀಪತಿ ನಿಮಿಷಮಾತ್ರದಲಿ ।
ಸುಲಿದು ಬ್ರಾಹ್ಮರ ಬಳಗವೆಲ್ಲವ
ಕೊಲೆಯ ಮಾಡಿದ ಮನ್ನೆಯರ್ಕಳ
ನಿಳಯದಲಿ ಚತುರಂಗದೇಶದ ನೃಪನ ನಂದನೆಯ ॥ ೯೯

ಮದುವೆಯಲಿ ಕೈಕೊಂಡು ಮಕ್ಕಳ
ಹದನ ಕಾಣೆನೆನುತ್ತ ಬ್ರಾಹ್ಮರ

1 ನಾರಿಯನು ಪವಮಾನ, ಖ, ಜ.

ಸದನ ಗೊಂಡವರೆಡೆಯು ಧಾತ್ರಿಯು ಮಾಡುತಡಿಗಡಿಗೆ ।
ತಿದಿಯನುಚಿತ ಭೂಸುರಾದಿಯು
ಸದೆಬಡಿದು ನಿರ್ವಿಪ್ರಮಾಡಿದ
ನದಟುತನದಲಿ ವಿಪ್ರನಿಕರವನ್ನೈದೆ ಗತಮಾಡಿ ॥ ೧೦೦

ಕೂಡೆ ನೆಱೆ ಚತುರಂಗಬಲದಲಿ
ಬೀಡಿಕೆಯ ಕೈಕೊಳ್ಳದಲ್ಲಿಗೆ
ಮೂಢ ಬಂದನು ಕೇಡಕರೆಯಲು ತನಗೆ ಬೇಗದಲಿ ।
ನೋಡಿರೇ ಸಂಗ್ರಾಮಭಾರ್ಗವ
ಮೂಢನನು ಕಾದಲಿಕೆ ಬಂದಪ
ನಾಡಿತಾತನ ಮೇಲೆ ಕೊಡಲಿಯು ರೇಣುಕಾತ್ಮಜನ ॥ ೧೦೧

ಗಾಢದಲಿ ನುಗ್ಗಾಗಿ ಸೇನೆಯು
ಕಾಡಕೂಡಿತು ತಾನು ಕಾಲನ
ರೂಢಿಗೈದಿದ ನಿಮಿಷಮಾತ್ರದೊಳಂದನಾಮುನಿಪ ।
ಕೂಡಲಿಕೆ ಕೈವಲ್ಯನಾಥನು
ರೂಢಿಸುರರನು ನೆರಹಿಕೊಟ್ಟನು
ರೂಢಿಯನು ಮರಳವರಿಗಗ್ಗದ ಮನ್ನೆಯಾದಿಗಳ ॥ ೧೦೨

ಕೊಟ್ಟು ಸಲಹುತ್ತಿರಲು ಪುತ್ರನ
ಪುಟ್ಟಿಸುವೆ ತಾನೆನುತ ಬಂದಳು
ದುಷ್ಟಮತದಿಂ ದ್ವಿಜರ ಹಾನಿಗೆ ನರ್ಮದಾಂಗಣಕೆ ।
ನಟ್ಟ ಮೀಯುತ್ತಿರಲಿಕಳಕಾ
ಧಿಪ ಕಂಡನು ಸತಿಯ ರೂಪು
ತ್ಕೃಷ್ಟವನು ತಾ ರಮಿಸಿ ಹಾಯ್ದನು ಮೇಘಮಾರ್ಗದಲಿ ॥ ೧೦೩

ಧನದವೀರ್ಯನ ಜನನ ಮತ್ತು ಅವನ ಸಂಹಾರ.

ಹಾಯಲಳಕಾಪುರಿಯ ಪ್ರೋಗಲಿ
ಕಾಯವತಿಗಾಗರ್ಭವಾಯಿತು

ಬೀಯುದಲಿ ನವಮಾಸತೀರಲು ದೇವನಾಜ್ಞೆಯಲಿ |
ಆಯುಗದ ಕಡೆಯಲ್ಲಿ ಸುತನತಿ
ಬೀಯುವಾಗದ ಮುನ್ನ ಜನಿಸಿದ
ಸಾಯಲು ಧನದವೀರ್ಯನಗ್ಗದ ಬಾಹುಬಲದಿಂದ | ೧೦೪

ಜನಿಸಿ ತಂದೆಯು ರಾಜಧಾನಿಯು
ನನಿತುವನು ನೆಱೆ ಕೊಂಡು ಬ್ರಾಹ್ಮರ
ಜನವ ನೆಱೆಯುಪಹರಿಸಿ ಭೂಮಿಯಲವರ ಬಾಧಿಸುತ |
ದಿನ ಸವೆಯೆ ಬಹು ಮನ್ನೆಯರ್ಕಳ
ನನಿತರಿದ್ದರ ಕೊಂದು ವಾಯಿಯು
ಜನಪತಿಯು ವರಸುತೆಯು ನೆರೆದನು ಪರಮಹರುಷದಲಿ * ||೧೦೫

ಅರಸ ಬಹುದಿನ ರಾಜ್ಯಮಾಡುತ
ಧರಣಿಯನು ನಿರ್ದ್ವಿಜವ ಮಾಡುತ
ತೆರಳಿ ಬಂದನು ಪರಶುರಾಮನ ವರತಪೋವನಕೆ |
ಬರಲು ಭಾರ್ಗವರಾಮನವರನು
ಪರಶು ಹತಿಯಿಂ ಕಡಿದು ಸೇನೆಯು
ಹರಹಿದನು ಕಾಲಂಗೆ ಹೊಸತಿನ ಬೋನವೆಸೆವಂತೆ || ೧೦೬

ಹರೆಗಡಿದು ಭೂಸುರರಿಗವನಿಯು
ಮರಳಿ ಧಾರೆಯು ನೆಱೆದು ಮನ್ನೆಯು
ಪರಮಸಾಹಸಿಯೆನಲಿಕವನನು ಸೃಜಿಸಿ ಕಳುಹಿದನು |
ಧರಣಿಸುರರಿಗೆ ಸೇವೆಗೈವುದು
ನಿರುತ ನೀನೆಂದವನ ಕಳುಹಲು
ವರುಷ ನೆಱೆ ನಾಲ್ಕೈದುಸಾವಿರ ಧರೆಗೆ ಗತವಾಗೆ || ೧೦೭

---

* ಅನುಕರಿಸಿ ರಥಪತ್ತಿವಾಹನ
ಜನಿತಬಲವನು ಬಹಳಸಂಧಿಸ
ಲನುವಶವ ಮಾಡಿದನು ಪೂರ್ವಾವನಿಯು ಸಂಪದವ, ಖ. * ||

ಆಗಲಿಕೆ ಧನಪತಿಜನಂಗನೆ [1]
ರಾಗದಲಿ ದ್ವಿಜಹತಿಯು ಮೋಪ್ಪಿತಿ
ವೇಗದಲಿ ರುತುದಿನದಿ ಬಂದಳು ಗಂಗೆಯುತ್ತರಕೆ ।
ಆಗಮೋಕ್ತಗಳಿಂದ [2] ಶೂಲಿಯು
ಭೋಗ ತನಗಳವಡಲು ಬೇಕೆಂ
ದಾಗ ಶಂಭುವ [3] ಧ್ಯಾನಮಾಡಲು ರುದ್ರನದನಱಿದು ॥ ೧೦೮

ಆವಧುವಿನಾಭಾವ ಶಂಕರ
ದೇವನಲಿ ನೆರೆ ಯೂರ್ಧ್ವರೇತನ
ಠಾವನಱಿಯದ ತ್ರಿದಶವಧುಜನರವಕೆ ನಸುನಗಲು ।
ದೇವನಾಗಲದೊಬ್ಬ ರಾಕ್ಷಸ
ಜೀವನನು ಕಳುಹಿದನು ಕಳುಹಲಿ
ಕಾವಧುವ ರಮಿಸಿದನು ಮೃತ್ಯುಂಜಯನ ರೂಪದಲಿ ॥ ೧೦೯

ದನುಜವೀರ್ಯನ ಜನನ ಮತ್ತು ಅವನ ಸಂಹಾರ.

ರಮಿಸೆ ಜನಿಸಿದ ದನುಜವೀರ್ಯನು
ಕುಮತಿಯಲಿ ನವಮಾಸ ತೀರಲಿ
ಅಮಿತಪೌರುಷದಿಂದ ಸೇನೆಯ ಬಲುಹ ಮೇಳೈಸಿ ।
ಕ್ರಮವ ಬಿಟ್ಟಕ್ರಮದಿ ಬ್ರಾಹ್ಮರ
ನಮಿಸದೆಲ್ಲರ ಸುಲಿದು ಸತಿಯರ
ಸಮುದಯವ ನೆಱೆ ವಿಡಿದು ಕೊಂದನು ಮಸ್ಕಯಾದಿಗಳ ॥೧೧೦

ಕೊಂದು ಕೊಡಲಿಯ ಮುನಿಗೆ ಧಾತ್ರಿಯ
ನಂದು ಮಾಡಿದ ಕೃತಯುಗಾಬ್ದವು
ಸಂದುದಾಹದಿನಾಱುಲಕ್ಷದ ಕಡೆಯ ವತ್ಸರವು ।

---

1 ಆಗಲಿಕೆ ಧನವೀರ್ಯನಂಗನೆ, ಕ. ಖ. ಜ.

2 ಆಗಮಾನ್ವಯದಿಂದ, ಕ. ಖ. 3 ಜಾರೆಯು, ಕ. ಖ.

ತಂದೆ ಕೇಳಾ ಘೋರವೀರ್ಯನು
ಬಂದು ಹಳಚಲಿಕಾಬ್ರಹದ್ಬಲ
ನಂದನೆಯು ಪತಿ ಬರಲು ಕೊಂದನು ನಿಮಿಷಮಾತ್ರದಲಿ ‖ ೧೧೧

ಪರಶುರಾಮನು ಕೊಂದು ಬ್ರಾಹ್ಮರ
ನೆರವಿ ಘೋರಾತ್ಮಜನ ರಾಜ್ಯದ
ಹರಹಗಿತ್ತು ದ್ವಿಜರ ಸೂಱೆಯನ್ನೈದೆ ಮರಳಿಸಿದ ।
ಧರಣಿಯುಮರರ ಸೇವೆಗಗ್ಗದ
ಪರಿವಿಡಿಯ ಮನ್ನೆಯರ ಸೃಜಿಸಿಯೆ
ಮರಳಿ ಕಳುಹಿದನಾ ಮಹಿಷ್ಮತಿಯ [1] ಪುರಕನಿಬರನು ‖ ೧೧೨

ಗುಹವೀರ್ಯಜನನ ಅವನ ಸಂಹಾರ.

ಕಳುಹಲಿಕೆ ಬಹುದಿವಸ ಬ್ರಾಹ್ಮಣ
ರಿಳೆಯನಾಳುತ್ತಿರಲಿಕಾತನ
ಲಲನೆ ಕೋಪದಿ ಬಂದು ಮಿಂದಳು ತುಂಗಭದ್ರೆಯಲಿ ।
ಜಲದೊಳಾಡುತ್ತಿರಲು ಕಂಡನು
ನಳಿನವದನೆಯನಾಗುಹಾಸುರ
ಬಲುಮೆಯಲಿ ರಮಿಸಿದನು ರಮಿಸಲಿಕೊಬ್ಬ ಜನಿಸಿದನು ‖ ೧೧೩

ಗೋಳಕನು ನವಮಾಸ ತೀರಲು
ಬಾಲೆಯಲಿ ಗುಹದನುಜವೀರ್ಯನು
ತೋಳ ಬಲುಹಿಂದಬ್ದಸಾವಿರ ತೀರೆ ಕೇರಳದ ।
ಕಾಳಕೇತುವ ಗೆಲಿಯಲಾತನ
ಬಾಲೆಯನು ನೆರೆದಖಿಳಸೇನೆಯ
ತೋಳ ಬಲದಿಂ ಬಂದು ಹೊಕ್ಕನು ತಂದೆಯಾಲಯವ ‖ ೧೧೪

ಹೊಕ್ಕು ಮನ್ನೆಯನಿಕರವೆನಿತುವ
ನೊಕ್ಕಲಿಕ್ಕಿಯೆ ಕೊಂದು ಬ್ರಾಹ್ಮರ

---

1 ಮಹೀಪತಿಯ, ಕ. ಖ.

ಮಕ್ಕಳನು ತಱಿದಿವರ ತೆವರಿಯೆ ರಾಜ್ಯವಾಡುತಲಿ ।
ಹೊಕ್ಕು ಬಹುದಿನದಿಂದ ರಾಜ್ಯದ
ಸೊಕ್ಕಿನಲಿ ನೆಱೆ ಬಂದು ಬ್ರಾಹ್ಮರ
ಮಕ್ಕಳಾಟಿಕೆ ಯಾಡಿ ಭಾರ್ಗವರಾಮಚಂದ್ರನಲಿ ॥ ೧೧೫

ತಱಿಸಿಕೊಂಡವನಾಗ ಜವಪುರ
ಕುರಳಿದನು ಬಱಿಕವನ ಭೂಮಿಯು
ನೆಱೆ ದಿಗಂತವ ದ್ವಿಜರಿಗಿತ್ತನು ವಿನಯಪರನಾಗಿ ।
ಪರಿವಿಡಿಯ ಮನ್ನೆಯರ ಸೃಜಿಸಿಯೆ
ಧರಣಿಯುಮರರಿಗಿತ್ತು ಕಳುಹಿದ
ಹಿರಿದು ಕಾಲದಲಿರಲಿಕಾತನ ಯುವತಿ ಕೋಪದಲಿ ॥ ೧೧೬

ಆಮಹಾವಿಮಲಪ್ರಹಾರಿಯು
ಸೀಮೆಯಲ್ಲಿರೆ ಕಾಕದಾನವ [1]
ಕಾಮಿನಿಯು ಕಡು ಕೋಮಲಾಂಗನೆ ಕಂಡು ರಮಿಸಿದನು ।

ಕಾಕವೀರ್ಯನ ಜನನ ಅವನ ಸಂಹಾರ.

ಭೂಮಿಯಲಿ ನವಮಾಸ ತೀರಲಿ
ಕಾಮಹಾಕಾಕಾಸುರಾತ್ಮಜ
ಸೋಮಶೇಖರದೇವಗಂಜದ ಬಾಹುಬಲದಿಂದ ॥ ೧೧೭

ಜನಿಸಿ ಕಾಲಾಂತರಕೆ ಹೈಹಯ [2]
ಜನಪತಿಯ ಸುತೆಯಲ್ಲಿ ನೆರೆದನು
ವಿನುತಬಲದಿಂ ಬಂದು ಹೊಕ್ಕನು ವರಮಹಿಷ್ಮತಿಯ ।
ಜನಪದವನಾಳುತಲಿ ಮನ್ನೆಯ
ಜನವ ಕೊಲಿಸಿಯೆ ವಿಪ್ರನಿಕರವ
ನನಿತುವನು ಸಂಹರಿಸಿ ಕೊಂಡನು ಮತ್ತೆ ಭೂಮಿಯನು ॥೧೧೮

1 ಕಾಕಕಾಸುರ, ಜ. ಕಂದಕಾಸುರ, ಕ. ಖ. 2 ವೈವೆಯು, ಕ. ಖ.

ಕೊಂಡು ಕಾಲಾಂತರಕೆ ಭಾರ್ಗವ
ಖಂಡಪರಶುವನೈದಿ ಯಾಹವ
ಚಂಡವಿಕ್ರಮನೊಡನೆ ಕಾದಲು ನಿಮಿಷಮಾತ್ರದಲಿ ।
ದಿಂಡುದಱಿದಱಿದವನ ಸೇನೆಯು
ಹಿಂಡ ಬಱಿಕೈದವನ ಕೊಂದನು
ಕಂಡ ಮುಖದಲಿ ಸೇನೆ ಹಾಯಿತು ವಿಪ್ರಘಾತಕನ ॥ ೧೧೯

ಕೊಂದು ಬ್ರಾಹ್ಮರ ಜನಕೆ ಭೂಮಿಯ
ನಂದು ಧಾರೆಯನೆಱೆದು ಕೊಟ್ಟನು
ಹಿಂದು ಗಳೆಯದೆ ಸೃಜಿಸಿ ಮನ್ನಯುಗಲಿಯನಸುರಾರಿ ।
ಬಂದು ಬಹುದಿನ ರಾಜ್ಯಮಾಡಲಿ
ಕಂದು ಹಿಂದಣಭೂಪನಂಗನೆ
ನೊಂದು ಮಂದಾಕಿನಿಯ ತೀರದೊಳಱಸಿ ಬಹುದಿನವು ॥ ೧೨೦

ಕೋಟಿಕಾಸ್ಯನ ಜನನ ಅವನ ಸಂಹಾರ.

ತಪವನೆಸಗಲು ಕಂಡು ರಾಕ್ಷಸ
ತಪಸಿ ರಮಿಸಲು ಕೋಟಿಕಾಸ್ಯನು
ತಪದ ಗತಿಯಲಿ ಜನಿಸೆ ಕಾಲಾಂತರದಲಾಸುರದ ।
ವಿಪ್ರಚಿತ್ತಿಯ ಸುತೆಯ ನೆರೆದತಿ
ದರ್ಪದಲಿ ಬಂದಯ್ಯನಾಳುವ
ವಿಪುಳಮಹಿಯನು ಕೊಂಡು ವಿಪ್ರರ ನೈದೆ ಹರೆಗಡಿದ ॥ ೧೨೧

ಮನ್ನಯರ ಕಡಿಖಂಡ ಮಾಡಿಯೆ
ಮುನ್ನ ನೆರಹಿದನಖಿಳಸೇನೆಯ
ಮನ್ನಿಸದೆ ನೆಱೆ ಕೋಟಿಕಾಸ್ಯನು ಬಂದು ಭಾರ್ಗವನ ।
ಇನ್ನು ಬಾ ಯೆಂದೆನುತಲಾಖಿಳ
ನುನ್ನತಾಸ್ತ್ರವನೆಸೆಯಲಾಮುನಿ
ಸನ್ನೆಯಲಿ ಹರಿದೈಯ್ದಿ ಹೊಕ್ಕನು ಸೈನ್ಯಶರಧಿಯನು ॥ ೧೨೨

ಕಡಿದು ಕೊಡಲಿಯ ಮೊನೆಯೊಳನಿತುವ
ಬಿಡದೆ ತಱಿದನು ಕೋಟಿಕಾಸ್ಯನ
ಕೆಡಹಿ ಯಿಪ್ಪತ್ತೊಂದು ಖೇಪೆಯಿ [1] ನೃಪರ ತೀರಿಸಿದ ।
ಮೃಡಪಿತಾಮಿಹ ತಾಯಿಗೆಂದುದ
ಕಡೆಗೆ ಸಲಿಸಿದ ವಿಪ್ರನಿಕರಕೆ
ಪೊಡವಿಯೆಲ್ಲವ ಕೊಟ್ಟು ಕಳುಹಿದನಧಿಕಹರುಷದಲಿ ॥ ೧೩

ಅವರ ಸೇವೆಯ ಮಾಡಲತಿಬಳ
ರವನಿಕೇತುಗಳೆಂಬ ಮನ್ನೆಯ
ನಿವಹವನು ಸೃಜಿಸಿದನು ದೇಶವ ಕಾಯೆ ಪರಶುಧರ ।
ರವಿಶಶಿಗಳಂಬರಕೆ ತಿರುಗುವ
ಭುವನಕಾಸ್ಪದ ಮೇರು ಪರ್ವತ
ವವನಿಗೆಸದಿಹ ಕಾಲಪರಿಯಂತರವು ಧಾರೆಯನು ॥ ೧೪

ಎಱೆದು ಭೂಸುರತತಿಯ ರಕ್ಷಿಸಿ
ಮೆಱೆಯೆ ನೃಪಕುಲಕಾಲಭೈರವ
ಕಱೆವ ಕರುಣವ ವಿಪ್ರನಿಕರದ ಮೇಲೆ ಮನಮುಟ್ಟಿ ।
ತಱಿದನಾಗೋಳಕರ ವಂಶವ
ನೆಱೆ ದಿಗಂತದ ಧರಣಿಯುಮರಾ
ಳ್ವರಿಗಳನು ಸಂಹರಿಸಿ ನಿಷ್ಕಂಟಕದಿ ಪಾಲಿಸಿದ ॥ ೧೫

ಕೋಟಿಕಾಸ್ಯಜನ ಜನನ ಅವನ ಸಂಹಾರ.

ಪಾಲಿಸಲಿಕಾಕೋಟಿಕಾಸ್ಯನ
ಬಾಲೆಯಲಿ ಬಹುದಿವಸಕೊಬ್ಬನು
ಕಾಳರಕ್ಕಸನೆನಿಸಿ ಹುಟ್ಟಿದನತುಳಭುಜಬಲನು ।
ಕೇಳದನು ನಿಃಕ್ಷತ್ರವಾದುದ

1 ಸೂಡೊಳು, ಜ.

ಮೇಲೆ ಭೂಸುರರೊಸಗೆಯಾದುದ
ಕಾಳು ಮಾಡುವೆನೆಂದು ಮಾಡಿದ ತಪವ ಶಿವಪದಕೆ ॥ ೧೬

ಏನೆಲವೊ ತಪಕೇನ ಬೇಡುವೆ
ನೀನೆನಲು ತಾ ದನುಜನುಸುರಿದ
ತಾನು ಬೇಡುವೆ ಪರಶುರಾಮನ ಗೆಲ್ಲುವ ಸತ್ವವನು ।
ಆನದೀಧರನೆಂದನಗ್ಗದ
ದಾನವನೆ ಹರಿಗಾಯುಧಂಗಳ
ನೇನು ಮಾಡಲಿ ಕವಿಯುವಾತನ ದಿವ್ಯರೂಪಗಳ ॥ ೧೭

ಬಂದಖಿಲ ಗೆಲಲಱಿಯನೊಬ್ಬನೆ
ಬಂದು [1] ಕಾದಲು ನೆರೆಯದೆನಲಿಕೆ [2]
ತಂದೆಯುದು ಸಾಕೆನುತ ಮರಳಿದ ಪರಶುಧರನೆಡೆಗೆ ।
ಬಂದನೇಕಾಂಗದಲಿ ಕಾದುವೆ
ನೆಂದು ತುಂಗಾನದಿಯ ತೀರದ
ಮಂದಿರದೊಳೆಸೆದಿರ್ದನಿದಿರಲಿ ಹರಿಹರಾಕೃತಿಯ ॥ ೧೮

ಕಂಡು ಕಾದಲಿಕಾ ಗುಹಾಸುರ
ದಿಂಡೆಯನ ಕೆಡೆಯಿಱಿದು ಶೂಲಿಯ
ಮಂಡನವ ಕೈಕೊಂಡು ಕೊಂದನು ಕೋಟಿಕಾಸ್ಯಜನ ।
ಕೊಂಡು ಹರಿಹರರೂಪಿನಾಕ್ಷಣ
ಚಂಡನೃಪಕುಲಕಾಲಭೈರವ
ಪುಂಡರೀಕಾಂಬಕನು ನಾರಾಯಣನು ತೋಱಿಸಿದ ॥ ೧೯

ಇಪ್ಪತ್ತಾರನೆಯ ಸಂಧಿ ಮುಗಿದುದು.

---

1 ಖಂದು, ಜ. 2 ನೆನಲಿಕೆ, ಜ.

ಇಪ್ಪತ್ತೇಳನೆಯ ಸಂಧಿ.

ಸೂಚನೆ.

ಕಳುಹಿದನು ಧೌಮ್ಯಾಶ್ರಮಕ್ಕಾ
ಗೊಲಿದು ಮೋಹನಬಾಣತಂತ್ರವ
ತಿಳುಹಿ ತೆರಳಿದ ಸುರರ ಗಾಯಕ ಪಾಂಡುತನಯರಿಗೆ ||

ಅಂಗಾರವರ್ಮನು ಪಾಂಡವರಿಗೆ ಮಾಡಿದ ಹಿತೋಪದೇಶ

ಕೇಳು ಜನಮೇಜಯಧರಿತ್ರೀ
ಪಾಲ ಬಳಿಕಂಗಾರವರ್ಮನು
ಹೇಳಿದನು ಹಿರಿದಾದ ಕಥನವನಿರುಳು ಗಂಗೆಯುಲಿ |
ಆಲಿಸೈ ಮುಂದತಿಶಯೋಕ್ತಿಯ
ಲೋಲವಿಪ್ರೋತ್ತಮರನೊಬ್ಬರ
ಪಾಲಿಸದೆ ಸಂಗಡವು ತಿರಗಲು ಸಲ್ಲ ನೃಪಕುಲಕೆ || ೧

ಅರಸ ಕೇಳೈ ಧರಣಿಸುರರಿಗೆ
ಹಿರಿದು ಗೋಚರವೇನು ವಿಶ್ವಂ
ಭರನೆ ಒಲಿದರೆ ನೀವು ಬೆನ್ನಿನಲೊಬ್ಬ ಭೂಸುರನ |
ವರಪುರೋಹಿತರೆಂದು ನೀವಾ
ದರಿಸಿ ಚರಿಸುವುದೆತ್ತಲಾದರೆ
ಪರಮಮತವಿದೆ ಯೆನಲು ಕೇಳಿದರಂದು ತಾವಾಗ || ೨

ಧೌಮ್ಯರ ಬಳಿ ಹೋಗುವುದೆಂದು ಪಾಂಡವರಿಗೆ ಹೇಳುವಿಕೆ.

ಹಿತಪುರೋಹಿತನಪ್ಪ ಭೂಸುರ
ತತಿಯೊಳಾರೆನೆ ಕೇಳಿ ತಿಳುಹಿದ
ನತಿಶಯುವಲಾ ಧೌಮ್ಯನಾದರೆ ಯೆನಲಿಕವರೆಡೆಯು |

ಗತಿಯನಱಿಯವೆ ಯೆನಲಿಕಾಗಲೆ
ಯತಿಶಯದಲಾವರವಸಿಷ್ಠನ
ಸುತೆ ಸುಮಿತ್ರೆಯ ಸುತನು ಸೌಭರಯಣುಗ ಬಹುನಿಗಮ ॥ ೩

ಆತ ಧರ್ಮಾಚಾಗಮಂತ್ರವ
ನಾತ ಬಲ್ಲನು ದೈವಸಾರವ
ನಾತನನು ನೀವಾವ ಪರಿಯಲಿ ನಿಮ್ಮ ಕುಲಗುರುವ ।
ನೀತಿಯಲಿ ನೆರೆಮಾಡಿಕೊಂಬುವು
ದಾತನಾಶ್ರಮವಿಲ್ಲಿಗದು ಹರಿ
ಜಾತೆಯಾಚೆಯಲಿಹುದು ತಾ ಹತ್ತೆಂಟುಯೋಜನದಿ ॥ ೪

ಆವಿರಿಂಚಾದಿಗಳು ಸೇವಿಪ
ದೇವಗಂಗಾನದಿಯ ತೀರದ
ಠಾವಿನಲಿ ಸಂಸಾರಪಾರವ ಮಾಳ್ಪತೀರ್ಥದಲಿ ।
ಭಾವದಲಿ ಭಜಿಸುವನ ನೀವಿಂ
ದಾವಪರಿಯಲ್ಲೊಲಿಸಿ ಕೊಂಡೊಡೆ
ಭೂವಧೂವಲ್ಲಭರು ತೃಣಸಮವಾಗಿ ವರ್ತಿಪರು ॥ ೫

ಈಧರಾಧೀಶ್ವರರ ಶಸ್ತ್ರದ
ಬಾಧೆ ತಪ್ಪುವುದಾವಿಧಾತ್ರನ
ಹಾದಿಯಲಿ ಮಿಗೆ ಧೌಮ್ಯಮುನಿಯೊಳದಾರು ಸರಿ ಯೆಂದ ।
ಆಧುರಾಂಗಣದಲ್ಲಿ ಬಲ್ಲಿದ
ರಾಧೆಯನ ಬಿಲುವಿದ್ಯ ಧೌಮ್ಯನ
ನಾದರಿಸಿದವಗಳುಕಿ ನಿಲುವುದು ಪಾರ್ಥ ಕೇಳೆಂದ ॥ ೬

ಬೇಡಿಕೊಂಡಾಶ್ರೇಷ್ಠವಾದುದ
ರೂಢಿಯೊಳಗತ್ಯಧಿಕವಾದುವ
ಪಾಡು ಪಡಿ ನೆಱೆಯಿಲ್ಲದಸ್ತ್ರವ ನೊಂದ ತಾನಿತ್ತ ।

ರೂಡಿಸಿದ ಸಮ್ಮೋಹನಾಸ್ತ್ರದ
ಪಾಡಱಿದು ಕಲಿಪಾರ್ಥಗಿತ್ತನು
ಬೇಡದಾತಗೆ ಪರಮಹರುಷದಿ ಪಾತ್ರವಹುದೆಂದು ॥ ೭

ಕೊಡಲು ಕೈಯೊಡನಾತನೊಲ್ಲದೆ
ಕಡೆಗೆ ಸಾಱಲಿಕಾತನಾಗಳ
ಯುಡಿಗೆಱಗಿ ಕೈಗೊಳಿಸಿ ಕೊಟ್ಟನು ಮೋಹನಾಸ್ತ್ರವನು ।
ಪಡೆದು ಪಾರ್ಥನ ವಹ್ನಿಯಸ್ತ್ರವ
ಪೊಡವಿಗಿಳುಹಿಯೆ ಹತ್ತುಸಾವಿರ
ತಡೆಯುದವ ಕೈಗೊಳಿಸಿ ಕೊಟ್ಟನು ಕಾಮಕರ್ಣಗಳ ॥ ೮

ಬಂದು ತಾಳೋತ್ಸೇಧರಾಶಿಯು
ತಂದು ಸುರಿದನು ರತ್ನಕೋಶವ
ನಂದವರು ಕೈಕೊಂಡು ಕೊಟ್ಟರು ಹಿಂದಕವನಾಗ ।
ಇಂದು ಮೊದಲಾಗಿನ್ನು ತಮ್ಮಯು
ಬಂಧು ಪರಮಪ್ರಿಯನು ನೀ ನಡೆ
ಯೆಂದು ಕಳುಹಿದೊಡಾತನರಸಿಯು ಸಹಿತ ಮನ್ನಿಸಿದ ॥ ೯

ಇಳೆಯೊಳೊಂದಿನ ವರಪುರೋಹಿತ
ಕುಲಗಳಿಲ್ಲದೆ ಕ್ಷತ್ರಿಯಾತ್ಮಜ
ನಿಳಯುವನು ಪೊಱಮಂಟಲಾಗದದೊಂದು ಕ್ಷಣವೆಂದು ।
ಲಲನೆಯುರ ನೆಱೆ ಕೊಂಡು ಗಂಗಾ
ಜಲದೊಳಂತರ್ಧಾನವೈದಲು
ನಳಿನಬಾಂಧವನುದಯವಾದನು ಪೂರ್ವಶೈಲದಲಿ ॥ ೧೦

ಪಾಂಡವರು ಧೌಮ್ಯರ ಆಶ್ರಮಕ್ಕೆ ಹೋಗುವಿಕೆ.

ಬಳಿಕ ಪಾಂಡವರೈವರವ್ವೆಯು
ಬಳಿಲಿಸದೆ ಧೌಮ್ಯಾಶ್ರಮಕ್ಕೈಯು

ತಿಳಿದು ಬಂದರು ಶೈಶಿರಾಂತ್ಯದ ಮಾಸದಂತದಲಿ |
ನಳಿನನಾಭನ ನೆನೆಯುತಿರಲೊಂ
ದೊಲವಿನಲಿ ಬಟ್ರಿಕಾಮುನೀಶ್ವರ
ನಿಳಯಕಿವರನು ಕರೆಸಿ ಕೇಳಿದ ನೀವದಾರೆನುತ ॥ ೧೧

ಕೇಳಲಿಕೆ ಸಾಷ್ಟಾಂಗವೆಱಗಿಯು
ಲಾಲಿಸೈ ತಾಂ ಪಾಂಡುಪುತ್ರರು
ಬಾಲಕರು ನೀವೆಮ್ಮ ಕುಲಗುರುವಾಗಿ ರಕ್ಷಿಪುದು |
ಮೇಲು ಹರುಷದಲರ್ಘ್ಯಪಾದ್ಯವ
ಲೋಲರಿಗೆ ನೆಱೆ ಯಿತ್ತು ಕುಂತಿಯು
ಕಾಲಿಗೆಱಗಿಸಿ ನುಡಿದನವರಿಗೆ ತನ್ನ ಮನದನುವ ॥ ೧೨

ಧರಣಿಯಲಿ ಪಾಂಡವರು ತಮ್ಮಯ
ವರಪುರೋಹಿತಕೆಮ್ಮ ಕೊಳ್ಳರೆ
ಪರಿಪರಿಯಲಿದೆ ಹಾರುತಿದ್ದೆನು ಸಿಮ್ಮನೈವರನು |
ನಿರುತ ಬಯಸಿದ ಬಯಕೆ ಸಾರಿತು
ಹರುಷದಲಿ ಪಾಂಡವರಿಗಗ್ರದ
ವರಪುರೋಹಿತೆಗೊಂಡೆ ನಾ ಮಧುಸೂದನಾಜ್ಞೆಯಲಿ ॥ ೧೩

ಕಾಲ ಕೈಗೂಡಿದರೆ ಬ್ರಾಹ್ಮರು
ಲೋಲರೇ ದೊರಕುವರು ಪುಣ್ಯದ
ಲೇಟ್ರಿಗೆಯು ಪರಿ ಮೇಲು ನೋಟವ ನೋಡಿಸುವನೆಂದ |

ಧೌಮ್ಯರು ಪಾಂಡವರೆಂದು ತಿಳಿದು ಪೌರೋಹಿತ್ಯವನ್ನೊಪ್ಪಿಕೆ.

ಆಲಿಸೈ ನಿಮ್ಮವರ ಭಾಗ್ಯದ
ಕಾಲದೇಷ್ಟ್ಗೆಯು ಧೌಮ್ಯನಾಕ್ಷಣ
ಕೇಳಿ ಸಂಕ್ರಮಿಸಿದನು ಪಾಂಡವವರಪುರೋಹಿತವ ॥ ೧೪

ಬಟಿಕ ಮೆಱುದಿನ ತೆರಳಿ ಗಂಗೆಯ
ಬಟಿಗೆ ಬಂದರು ಪರಮಸುಖದಲಿ
ಬಟಿಕಲಾ ಪಾಂಚಾಲದೇಶದ ಪ್ರೊಱಲಿಗೈದಿದರು * |
ನಳಿನನಾಭನ ಕರುಣದಳತೆಯ
ತಿಳಿದು ಪ್ರೊಂಪುಳಿಯಾಗಿ ಧೌಮ್ಯನ
ಬಟಿಗೆ ಬಂದರು ಪರಮಸುಖದಲಿ ಕುಂತಿಯಾತ್ಮಜರು || ೧೫

ಪಾಂಡವರು ಧೌಮ್ಯರಿಂದ ಕೂಡಿ ಬರುವಾಗ ಆದ ಸುಶಕುನಗಳು.

ಬರುತ ಬಟ್ಟೆಯೊಳೆಡಕೆ ಹಂಗನು
ಹರಿಣ ಬಲದಲಿ ತೋಱಿ ಹಾಯಿತು
ಹರಿಣಿ ಭಾರದ್ವಾಜ ನುಡಿಸಿತು ನಕುಲಶಿಖಿಸಹಿತ |
ಕರಿಯು ಹಕ್ಕಿಯು ಕಾಮಮಿಥುನದ
ಹರುಷದಲಿ ಪಿಂಗಲಿಗಳಿರ್ದುವು
ಪರಮಸುಖದಲಿ ಜಕ್ಕವಕ್ಕಿಯು ಯುಗ್ಮ ನಲಿಯುತಿರೆ || ೧೬

ಅರಸ ಕೇಳ್ಳೆ ಮುಂದೆ ಮಾರ್ಗಂ
ತರಕೆ ಶಕುನದ ಸೊಗಸು ನೆಱೆ ಗೋ
ಚರಿಸಲಾವಿಂಧ್ಯಗಿರಿಯ ಘನಾಟವಿಯ ಮಧ್ಯದಲಿ |
ಅರಸರೈವರಿಗಿಂದು ದ್ರೌಪದಿ
ಯರಸಿಯಹಳೆಂದೊಡನೆ ಮನದಲಿ
ಹರುಷಿಸಿದನಾಧೌಮ್ಯನಾಗಳು ಶಕುನಸಂತತಿಗೆ || ೧೭

ಸುಳಿಯಿತಗರದ ಗಂಧಪರಿಮಳ
ಹಱುವಿನಲಿ ಕಿನ್ನರರ ಗಾನದ
ಲಲಿತಕೌಶಿಕೆ ನವವಸಂತದ ದೇಶಿ ಮಧ್ಯಮದ |
ಕಳಸವಿಡಿದಬಲೆಯರ ಹೋಲುವ

---

* ಬಳಿಯಲಾ ಪಾಂಚಾಲದೇಶದ ಪೊಱಲಿಗೈದಿದರು ಪಾಂಡವರೈವರೊಂದಾಗಿ,* ಜ.

ತಳಿರ ಪುಷ್ಕರದಿಂದ ಬಕುಳದ
ನೆಳಲ ಸತ್ತಿಗೆ ಮಾಡಿಯಾಡುವ ಲತೆಯು ಬಳ್ಳಿಗಳ ॥ ೧೮

ಕಿತ್ತು ಬೇಱೊಂದೆರಡುಕರಿಗಳು
ಹೊತ್ತು ತೋರಣಗಂತೆ ಯಿದ್ದುದು
ಹತ್ತಿರೈತರೆ ಪಾಂಡುಪುತ್ರರು ಬರುತ ಬಟ್ಟೆಯುಲಿ ।
ಭಿತ್ತಿ ಚಿತ್ರಿಸಿದಂತೆ ಪೂಷನ
ಮೊತ್ತವಿಕ್ಕೆಲವಲ್ಲಿ ಬಟ್ಟೆಯು
ಬೆತ್ತ ಬಿದರುಗಳವು ವಿಷಾಣದ ಗೇಣದಂದದಲಿ ॥ ೧೯

ಪಾಂಡವರಿಗೆ ಶಾಲಿಹೋತ್ರನ ಪರಿಚಯ ಮತ್ತು ಅಶ್ವವಿದ್ಯಾಲಾಭ.

ಬರಲಿಕಿದಿರೊಳು ಶಾಲಿಹೋತ್ರನ
ವರಮುನಿಪನಾಶ್ರಮವ ಕಂಡರು
ಕರೆದು ಕೇಳಲು ಧೌಮ್ಯನಾಮುನಿಗವರನಱುಹಿಸಿದ ।
ಹರಿಯು ಸೋದರಭಾವ ಧರ್ಮಜ
ನುರುವೃಕೋದರ ಪಾರ್ಥಮೊದಲಾ
ದರಸಗಳು ಮೈದುನರು ಮೂವರು ಕುಂತಿಮಾದ್ರಿಜರು ॥ ೨೦

ಅಱುಹಲತಿಮನ್ನಿಸಿಯೆ ಪಾಂಡವ
ರರಸಗತಿಹರುಷದಲಿ ತತ್ಕ್ಷಣ
ಪರಮಸಿದ್ಧಾಂತವನು ತಿಳಿಹಿದ ದ್ಯೂತಕೌಶಲವ ।
ಪರರ ಜಯಿಸುವ ಸಾರ ನೆರದಿಹ
ವರಗೃಹದ ದಶಚೌಕವೆರಡಱ
ಪರಿಯು ಥಾಳವು ತನಗೆ ಬೀಱುವ ಲಕ್ಷ್ಯಭೇದನವ ॥ ೨೧

ಧ್ಯಾನಿಸುವ ಮಂತ್ರಾಕ್ಷರಂಗಳ
ತಾನು ಮೂವತ್ತೆರಡುಮಾತ್ರ
ಜ್ಞಾನವನು ತೋಱುವನು ಕಾಂಚೀಪುರವರೇಶ್ವರಿಯು (?) ।

ಆನಿರೂಢಿಯನಱುಹಿ ಪಾರ್ಥ[1]ಗೆ
ತಾನೊಲಿದು ನೆಱೆ ಯಶ್ವಹೃದಯ
ಜ್ಞಾನವನು ಕರುಣಿಸಿದನುಚಕ್ಷುಶ್ರವನು ಮೊದಲಾಗೆ ॥ ೨೨

ಈಧರಿತ್ರಿಯಲಶ್ವಹೃದಯವ
ನೋದಿಸಿದ ಹದಿನಾಱುಮಾತ್ರೆಯ
ನಾದಯಾಂಬುಧಿ ಬಾದರಾಯಣ ತನಗೆ ಸೂಚಿಸಿದ ।
ಹಾದಿಯಲಿ ಪಾಂಡವರಿಗಱುಹಿದ
ವೇದನಿಧಿ ತಾ ಶಾಲಿಹೋತ್ರಕ
ನಾದಧೀಚಿಯಲಱಿದ ಗೌತರಣಿಕದ ವಿದ್ಯೆಗಳ (?) ॥ ೨೩

ಹೇೞೆ ಬೞಿಕಾಸೂಪಶಾಸ್ತ್ರವ
ನಾಲಯವನಱುಹಿದನು ವಾಯುಜ
ಗೇೞಿಗೆಯಲಾಗವರ ಕಳುಹಿದ ಸ್ವಸ್ತಿವಚನದಲಿ ।
ಬೀೞುಕೊಂಡರು ಪಾಂಡವರ್ ಸಿರಿ
ಲೋಲನಂಘ್ರಿಯ ನೆನೆದು ದ್ರುಪದನ
ಬಾಲೆಗೋಸುಗ ವ್ಯಾಸನಾಜ್ಞೆಯ ಧರಿಸಿದರು ಬರುತ ॥ ೨೪

ಇಪ್ಪತ್ತೇಳನೆಯಸಂಧಿ ಮುಗಿದುದು

ಚೈತ್ರರಥಪರ್ವ ಮುಗಿದುದು

---

1 ನಕುಲ, ಖ.

ಇಪ್ಪತ್ತೆಂಟನೆಯ ಸಂಧಿ

ಸೂಚನೆ

ಧರಣಿಪತಿ ನಿಜಸುತೆಯ ರೂಪೋ
ತ್ಕರದ ಸೌಭಾಗ್ಯದ ನಿರಂತರ
ಪರಮಶೋಭಾನುಗುಣದಲಿ [1] ರಚಿಸಿದನು ಪಟ್ಟಣವ ||

ಪಾಂಚಾಲಪುರವರ್ಣನೆ

ಭೂಮಿಪತಿ ಕೇಳ್ ನಿಮ್ಮ ಪಿತನ ಪಿ
ತಾಮಹರು ಧೌಮ್ಯಾಶ್ರಮಕೆ ಬಂ
ದಾಮುನೀಂದ್ರನ ಕರೆದುಕೊಂಡರು [2] ಖಚರ [3] ವಚನದಲಿ |
ರಾಮಣೀಯಕವಪ್ಪ ಶಕುನ
ಸ್ತೋಮವನು ವಿವರಿಸುತ ಹೊಕ್ಕರು
ಭೂಮಿಲಂಬದ ನೃಪರ ನೆರವಿಯ ದ್ರುಪದಪಟ್ಟಣವ || ೧

ಭರದಿನೈತಂದಖಿಳಭೂಮೀ
ಶ್ವರರ ಘನಚತುರಂಗಪದಹತ
ಧರಣಿನಿರ್ಗತರೇಣುಪಟಲದ ರಾಗಸಂಗದಲಿ |
ಅರುಣಮಯವಾಯ್ತಖಿಳಜಗವೀ
ಸರಸಿಜಾಕ್ಷಿಯ ನೆನೆದು ಸಚರಾ
ಚರದ ಮುಖದಲಿ ರಾಗರಸ ವುಬ್ಬಿಸಿದಂದದಲಿ || ೨

ತರಣಿಗುಂಟೇ ಸಮಯವನಿಲಗೆ
ತೆರಹುಗೊಡುವವರಾರು ಗಗನೇ
ಚರರ ಗಮನಸ್ತಂಭವೆತ್ತಣ ಮಾತು ಖಗಕುಲಕೆ |

---

1 ರುಚಿರವೆನೆ, ಟ. ರಚನೆಯಲಿ, ಚ. ಜ.   2 ಮಧುರ, ಖ.

3 ಕೊಡಿಕೊಂಡರು ಚ, ಟ.

ನೆರೆದ ಪಲ್ಲವಸತ್ತಿಗೆಯು ಝು
ಲ್ಲರಿಯ ಸಿಂಧದ ಸೆಳೆಯ ಘನಸೀ
ಗುರಿಯ ಸಬಳದಸಾಲಚಮರಂಗಳ ವಿಡಾಯಿಯಲಿ ॥ ೩

* ಚತುರುದಧಿಪರಿವಲಯದವನೀ
ಪತಿಗಳೇಕಾಮಿಷ [1] ವಿರೋಧ
ಸ್ಥಿತಿಯ ನೋಡದೆ ನೂಕಿ ನಡೆದರು ದ್ರುಪದಪುರಿಗಾಗಿ ।
ಅತಿಬಲರು ಬಹುರಾಜಬಲಪ
ದ್ಧತಿಗಳನು ನೋಡುತ್ತ ಬಂದರು
ಕೃತಕವಿಪ್ರೋತ್ತಮರು ಭಿಕ್ಷಾವಿಹಿತವೃತ್ತಿಯಲಿ ॥ ೪

ತುಱುಗಿದುದು ಪಾಂಚಾಲನಗರಿಯು
ಹೊಱವಳಯದಲಿ ಜಲಧಿಮಧ್ಯದ
ಕುಱುವವೋ ಪಟ್ಟಣವೊ ಪೇಣೆನೆ ದೈವಗತಿಗಳಲಿ ।
ಉಱುಬಿದೊಡೆ ಪಾಂಚಾಲಭೂಪತಿ
ತಱುಬಲಾಪನೆ ಮಾವತನವಿದು
ಬಱಿದೆ ಹೋಗದೆನುತ್ತ ಬಂದನು ಧರ್ಮಸುತ ನಗುತ ॥ ೫

ಪುರದೊಳಗೆ ಹೇರಾಳಹಬ್ಬದ [2]
ಹರಹಿನಲಿ ಬೀಡಾರ ಭಿಕ್ಷಾ
ಚರಿತರಿಗೆ ಯೆಲ್ಲಿಯದು [3] ಗುಡಿಗೂಡಾರಸಂತತಿಗೆ ।
ಅರಸುಗಳು ನಾವಲ್ಲ ಭವನಾಂ
ತರವದೇಕೆಮಗೆಂದು ಘಟಬಂ
ಧುರದ ಶಾಲೆಯ ಹೊಕ್ಕರಿವರು ಕುಲಾಲಮಂದಿರದಿ ॥ ೬

---

* ಈ ಸ್ಥಳದಲ್ಲಿ ಪದ್ಯಗಳನ್ನು ಬೇರೇ ವೃತ್ತದಲ್ಲಿರುವದರಿಂದು ಬಹು ಪುಸ್ತಕದಲ್ಲಿಲ್ಲದ್ದರಿಂದೂ ಬಿಟ್ಟಿದೆ.

1 ಕಾಮಿಸಿ, ಚ. ಖ. 2 ಹೆಚ್ಚಿದ, ಖ. 3 ದೊರಕುವುದೆ, ಚ.

ನೋಡಿ ಹೊಸಭಾಂಡವ ಕುಲಾಲನ
ಬೇಡಿಕೊಂಡರು ತಾವು ನಾಲ್ವರು
ಕೂಡಿ ಭೀಮನ ತಾಯ ಸಂಗಡ ಹಿಂದೆ ಯಿರಿಸಿದರು |
ಬೇಡಿ ತಹೆವಿನ್ನಿಂತು ಭಿಕ್ಷವ
ನೋಡಿ ಯೆನುತಲಿ ಧರ್ಮಫಲುಗಣ
ರೂಢಿಯಮಳರು ಬರುತಲಿರಲುಟ್ಟದವರ ಪಾಡೇನು ॥ ೭

ಕೂಡೆ ಹೊಸಭಾಂಡದಲಿ ಭಿಕ್ಷವ
ಬೇಡಿ ತೊಟಲಿದರಿವರು ರಾಯರ
ಬೀಡು ಬಿಡುತಿರ್ದುದು ಬಹಳ ನಿಸ್ಸಾಳರಭಸದಲಿ |
ಬೀಡಿವರಿಗಿದು ನೆಲನಿವರಿಗಿದು
ಮಾಡಿದರಮನೆ ಯಿವರಿಗಿದು ಕರು
ಮಾಡವಿವರಿಗಿದೆಂದು ಪರುಠವಿಸಿದನು ಪಾಂಚಾಲ ॥ ೮

ಕೇರಿಕೇರಿಯು ಬೀದಿಗಳ ಪ
ನ್ನೀರಚಳೆಯದ ಕಳಸಕನ್ನಡಿ
ಯೋರಣದ ಸೂಸಕದ ಮುತ್ತಿನ ಮಕರತೋರಣದ [1] |
ಓರಣದ ಹೊಂಗಳಸದಖಿಳಾ
ಗಾರಪಜ್ಜೆಯು ಸೋಮವೀಧಿಯು
ಸೂರವೀಧಿಯು ಶೋಭೆಯಲಿ ರಚಿಸಿದರು ಪಟ್ಟಣವ ॥ ೯

ತೀವಿದುವು ಹೊಂಗೆಲಸಗತಿಯಲಿ
ಲೋವೆಗಳು ಚೈತನ್ಯಮಯಚಿ
ತ್ರಾವಳಿಯ ಬೆಸುಗೆಗಳಲೆಸೆದುವು ಭವನಭಿತ್ತಿಗಳು |
ಹೂವಿನರಳಿನ ಹರಹಿನಲಿ ರ
ತ್ನಾವಳಿಗಳೊಪ್ಪಿದುವಗರುಧೂ
ಮಾವಳಿಯ ಧಾಳಿಯಲಿ ಮಘಮಘಿಸಿದುದು ಮೇಘಚಯ ॥ ೧೦

---

1 ಪಂಗವೋಲೆಗಳ, ಕ.

ಕಾರಣೆಯ ಕುಂಕುಮದ ಸಾದಿನ
ಸಾರಣೆಯ ನೆಲಗಟ್ಟುಗಳ ಕ
ರ್ಪೂರಧೂಳಿಯ ಹೊರೆವುಗಳ ಪನ್ನೀರ ಪಕ್ಕಲೆಯ |
ಚಾರುಚಳೆಯದ ಕೆಸರಿಡುವ ಕ
ಸ್ತೂರಿಗಳ ಪೂರಾಯಪರಿಮಳ
ಭಾರದಲಿ ಬಿಱುಗಾಳಿ ಕುಸಿದುದು ಹೇಳಲೇನೆಂದ || ೧೧

ಮೇಲುಕಟ್ಟಿನ ದಿವ್ಯಚಿತ್ರದು
ಕೂಲನಿಚಯದ ಲೋವೆಗಳ ಬ
ಲ್ಲಾಳದಡ್ಡಿಯೊಳಡೆಗಡೆಗೆ ರಂಜಿಸುವ ಪಟ್ಟೆಗಳ |
ಮೇಲು ಹೊದಿಗೆಯ ಕಪ್ಪುರದ ಹೊಸ[1]
ಬಾಳೆಗಳ ಮಳಯಜದ ಕಂಭದ
ಸಾಲುಗಳೊಳೊಪ್ಪಿದುದು ಚಪ್ಪರವೆರಡುಯೋಜನದ || ೧೨

ಬಿಗಿದ ಮಣಿಮುತ್ತುಗಳ ಬಿಂಗಾ
ರಿಗಳ ಬಿಡಯದ ಚಮರ ಹೊಂಗೆ
ಜ್ಜೆಗಳ ಮುಕುರದ ಘಂಟೆಗಳ ಬಂಧುರದ ಬಾಸಿಗದ |
ಸುಗಮ[2] ಬಂಧದ ಬಣ್ಣಸರದೋ
ಳಿಗಳ ಕಂಭದ ವಜ್ರಮಯಧಾ
ರೆಗಳಲೆಸೆದುದು ಭದ್ರಮಂಟಪದಮಳಮಣಿಭವನ || ೧೩

ಕೀಲಿಸಿದ ಪಟ್ಟೆಗಳ ದಿವ್ಯದು
ಕೂಲದಲಿ ಹೊಂಬಾಳ ತೆಱೆಗಳ
ಚೂಳಿಕೆಯ ಕನ್ನಡಿಯ ತೋರಣಥದೆರಡುಪಕ್ಕದಲಿ |
ಮೇಲು ಮುತ್ತಿನ ಸೂಸಕದ ನೇ
ಪಾಳಚಮರಿಯಡಾಳಿಗಳ ಸಂ
ಪಾಳಿಯಲಿ ಪರುಠವಿಸಿದರು [3] ವೈವಾಹಮಂಟಪವ || ೧೪

---

1 ಹೊಂ ಕ.ಖ. 2 ಸುಗುಣ, ಚ. 3 ಮೇಳದಲಿ ಸಮುತಳಿಸಿದರು. ಚ.

ವರಜವಾದಿಯ ಶೃಂಗವನು ಕ
ರ್ಪುರದ ತೈಲಾದಿಗಳ ಸಾದಿನ
ಭರಣಿಗಳ ಮೃಗನಾಭಿಗಳನಡಕಿದರು ಭಂಡಿಯಲಿ |
ಸುರಿಸುರಿದು ಹಂತಿಗಳ ಹೊಂಗೊ
ಪ್ಪರಿಗೆ ತುಂಬಿದುವೆಂದು ಗಂಧದ
ಹಿರಿಯ ರಂಜಣಿಗೆಗಳು ಹಿಡಿದುವು ಸುತ್ತುವಳಯದಲಿ ‖ ೧೫

ಹೊಳೆವ ಭಿತ್ತಿಯ ಸಾಲಭಂಜಿಕೆ
ಗಳಲಿ ಮೌಕ್ತಿಕವಜ್ರಮಣಿ ಮಂ
ಗಳಮಹಾರಶ್ಮಿಯಲಿ ರಚನೆಯ ಚಿತ್ರಪತ್ರದಲಿ |
ಇಳೆಗಿಳಿದ ಮಣಿಪುಷ್ಪಕವೊ ತಾ
ನಳಿನಮಿತ್ರನ ರಥವೊ ಮೇಣಿದು
ಜಲಧಿಶಯನನ ಸೆಜ್ಜೆಯೋ ತಾನರಿಯೆನಿದನೆಂದ ‖ ೧೬

ಝಳವೆ ಝೊಂಪಿಸಿ ಬೀಸಿದುವು ತಂ
ಬೆಲರ,ಬೀಸಣಿಗೆಗಳು ಪರಿಮಳ
ಕಲಿತಮಕರಂದದಲಿ ಸಾದಿನ ತುಹಿನರೇಣುಗಳ |
ಸುಳಿವ ಸುತ್ತಣ ಸಾಲಭಂಜಿಕೆ
ಗಳಲಿ ಸೂತ್ರಿಸಿ ರಚಿಸಿದರು ಮಂ
ಗಳದ ರಿಂಗಣ ಝೂಡಿಸಿತು ವೈವಾಹರಚನೆಯಲಿ ‖ ೧೭

ಬಳಿದ ಸುಧೆಗಳ ಬಾವಿಗಳ ಪ
ಕ್ಕಲೆಯ ಪನ್ನೀರುಗಳ ಹಿಡಿದುವು
ಹೊಳೆವ ಕೈರಾಟಣದ ಕಾಂಚನಮಯದ ದೋಣಿಗಳ |
ತಳುಕು ಬಿಗಿದುವು ಕೊಪ್ಪರಿಗೆಗಳ
ವಳಯದಲಿ ನವಯಂತ್ರಗಳ ಪು
ತ್ತಳಿಗಳೇ ನೀಡುವುವು ಬೇಡಿದವರಿಗೆ ವಸ್ತುಗಳ ‖ ೧೮

1ನುಂಟಪವ, ಚ.

ಏಕವಿಧದ ನವಾಯಿಯುಲಿ ಮೊ
ಲೋಕದತಿಶಯವೆಸ್ತುರಚನಾ
ಸೌಕುಮಾರಿಯ ದರುಶನಕೆ ಸಾಕಾರವೆಂಬಂತೆ |
ಏಕಮಯಮತವಿಶ್ವಕರ್ಮರ
ವ್ಯಾಕರಣಪಾಂಡಿತ್ಯಸುಗುಣಾ[1]
ನೀಕವಿದರೊಂದೊರಗೆ ಬಹುದೇ ಭದ್ರಮಂಟಪದ ॥ ೧೯

ವಿವಿಧವೀಣಾವಾದ್ಯಕೋಮಲ
ರವದ ಮಧುರಮೃದಂಗತತಿಗಳ
ರವಣೆಗಳ ನಟ್ಟುವಿಗರುಗ್ಗಡಣೆಯ ಗಡಾವಣೆಯ |
ನವವಿಧದ ವೈತಾಳಿಕರ ವರ
ಯುವತಿಯರ ಭಾರಣೆಯ ಭೂಷಣ
ರವದ ಮೇಳವು ಮುತ್ತಿ ಮುಸುಕಿತು ಚಾರುಮಂಟಪವ ॥ ೨೦

ಅವನಿಪತಿಗಳ ಬಿರುದ ಪಾಡಿನ
ನಿವಹನಿರ್ಘೋಷಣೆಯ ಕಹಳಾ
ರವವು ಮೊಳಗಿತು ಕೂಡೆ ಮೇಳವಿಸಿತ್ತು ಮಂಟಪದಿ |
ಭುವನದೊಳು ತನಗಧಿಕಬಲದಲಿ
ಹವಣಿಸಲಿಕೆಣೆಯಿಲ್ಲ ವೆಂಬೀ
ರವದ ಕಹಳೆಯ ನಾದವೆಸೆಯಿತು ನೃಪವರರ ಮುಂದೆ ॥ ೨೧

ತಾಳಗತಿ[2] ಸನ್ಮೋ[3] ಹನದ ಮೆಟೆ
ಗಾಲವೊ ಬದಗಿದ ರಸಾಳಿಯ
ಕಾಲುವೆಯೊ ನವರಸದ ಬಂಧದ[4] ಸಾರಸಂಗತಿಯೊ |
ಆಲಿಗಳಿಗಾಯುಷ್ಯಫಲ ಬೇ[4]
ತಾಳಿಗಳ[5] ನರ್ತನವೊ ಸೊಗಸಿನ
ಮೇಳವಣೆ ಗಳ ಬೇಂಟೆಯಾಯಿತು ದ್ರುಪದಪುರಿಯೊಳಗೆ[6] ॥ ೨೨

---

1 ವ್ಯಾಕರಣಲಕ್ಷಣದ ಲಕ್ಷ್ಯಾ, ಚ, 2 ಸಾಳಗದ, ಚ. 3 ಗೀತವೊ, ಚ.
4 ಕಾವ್ಯಬಂಧದ, ಚ. 5 ಜೇ, ಚ. 6 ವಾಳವೋ, ಚ,
7 ಮೇಳವಣೆಗಳ ಪಾಟಯಾದುದುಜನದ ಕಣ್ತನಕೆ, ಜ.

ತೀವಿದುದು ಹೊಱವಳಯದಲಿ ನಾ
ನಾವಿಧದ ಕಥನವು ಕಥಾರ್ಥವು
ಭಾವಕರು ದ್ರಾವಕಸುವಾಕರು ಮಲ್ಲಚಿತ್ರಕರು ।

ವಿವಾಹಕ್ಕಾಗಿ ಜನಮೇಳನ

ಕೋವಿದರು ಕರುಷಕರು ಪಣ್ಯಾ
ಜೀವಿವಾಮನಮೂಕಬಧಿರಾಂ
ಧಾವಗಳಿಗಳೊದಗಿದರು ಸಕಲದಿಶಾಸಮಾಗತರು ॥ ೧೩

ಕವಿಗಮಕಿವಾದಿಗಳು ವಾಗ್ಮಿ
ಪ್ರವರಯಾಜ್ಞಿಕಮಾಂತ್ರಿಕರು ವೈ
ಷ್ಣವಮಹೇಶ್ವರಜೈನಭೈರವಬುದ್ಧಲಿಂಗಿಗಳು ।
ವಿವಿಧವರ್ಣಾಶ್ರಮ [2] ಸುಧರ್ಮ
ವ್ಯವಹರಣನಿಷ್ಠರು ವಿವಾಹೋ
ತ್ಸವವಿಲೋಕನಕೌತುಕಿಗಳೊದಗಿದರಸಂಖ್ಯಾತ ॥ ೧೪

ಗಣಿತವಂತರ ನೆರವಿ ಸುಬ್ರಾ
ಹ್ಮಣರ ಸಭ್ಯಶ್ರೋತ್ರಿಯರ ವೈದಿಕಕ
ರಣಶೋಭಾನ್ವಿತರ ವಿಮಳಬ್ರಹ್ಮಚಾರಿಗಳ । [3]
ಪ್ರಣುತಋುಷಿಗಳ ಮುನಿವರರ ಸಂ
ದಣಿಸಿತಖಿಳದಿಗಂತರದ ಧಾ
ರುಣಿಯ ಸುಜನವ್ರಾತ ನೆರೆದುದು ದ್ರುಪದನಗರಿಯಲಿ ॥ ೧೫

ಅರಸ ಕೇಳೈ ಮೇಲೆ ವಿದ್ಯಾ
ಧರಮಹೋರಗಯಕ್ಷರಾಕ್ಷಸ
ಗರುಡಕಿನ್ನರಸಿದ್ಧವಸುಗಂಧರ್ವಭೂತಗಣ ।

---

1 ವೈಷ್ಣವರು ಶೈವರು ಬೌದ್ಧಜಿನ ಭೈರವಸುಶಕ್ತಿಗಳು, ಕ ಖ.
2 ವಿವಿಧ ಸತ್ಯವ್ರತ, ಖ. 3 ವಿಮಲಬ್ರಹ್ಮಋುಷಿಸಮುರು, ಚ.

ವರಮರುದ್ಗಣ ರುದ್ರಮನುಭಾ
ಸ್ಕರಸುಧಾಕರತಾರಕಾಗ್ರಹ
ಸುರಪಮುಖದಿಕ್ಪಾಲತತಿ ನೆರೆದುದು ವಿಮಾನದಲಿ ॥ ೧೬

ಚಾರಣರ ಕೈವಾರ ತುಂಬರು
ನಾರದರ ಸಂಗೀತ ರಂಭೆಯ
ಚಾರುನರ್ತನ ಚಿತ್ರರಥನ ಮೃದಂಗಮೃದುಶಬುದ ।
ಆರುಭಟೆ ಮಿಗಲಳ್ಳಿರಿಯೆ ಜಂ
ಭಾರಿಯೋಲಗದಲಿ ತದೀಯಮ
ಹಾರಭಸ ತಾನೆಸೆಯೆ ಸಿರಿ ಪ್ರತಿಬಿಂಬವಾಯ್ತೆಂದ ॥ ೧೭

ದೇವಸಭೆ ತಾ ಬ್ರಹ್ಮಸಭೆ ಸುಮ
ಹಾವಿಳಾಸದ ರಾಜಸಭೆಗಳು
ತಾವು ಮೇಳೈದುವು ದ್ರುಪದರಾಜನ ರಾಜಭವನದಲಿ ।
ಆವಿಳಾಸಕದಾರು ಸರಿ ದೊರೆ
ದೇವದಾನವದನುಜಭುಜಗರೊ
ಳಾವಿಲಾಸವು ಸರಿಗೆ ಬಾರದು ದ್ರೌಪದೀಪಿತನ ॥ ೧೮

ಭಾಗಕೆಣೆಯಾರುಂಟು ಪಾಂಡವ
ರಾಗ ತಾವ್ ಭಿಕ್ಷಾನ್ನಮಾಡುವ
ರಾಗದಲಿ ಪುರವರವ ನೋಡುತ ಮುಖ್ಯಸಭೆಗಳನು ।
ಬಾಗಿ ಧನುವನು ನೋಡಿ ಧರ್ಮದ
ವೇಗದಲು ಬರುತಿರ್ದರಾಗಳು
ಯೋಗಚರಿತರು ಪಾಂಡುಪುತ್ರರು ದ್ರುಪದಪುರಿಯೊಳಗೆ ॥ ೧೯

ರಚಿಸಿದರು ಮಂಟಪವನವರವ
ರುಚಿತವೃತ್ತಿಯಿನವನಿಪಾಲರ
ನಿಚಯವನು ಮನ್ನಿಸಿದನಿವರನು ವಿಪ್ರಸಭೆಯೊಳಗೆ ।

ಆಗ ಪಾಂಡವರ ವಿಷಯದಲ್ಲಿ ದ್ರುಪದನ ಚಿಂತೆ

ಪ್ರಚುರಮಣಿ ಯಿದೆ ಪದ್ಮರಾಗದ
ರುಚಿರರತ್ನವು ಜಾತರೂಪದಿ
ಖಚಿತವಾದೊಡೆ ಪುಣ್ಯವೆನುತಾ ದ್ರುಪದ ಚಿಂತಿಸಿದ ॥ ೩೦

ದೇವರೆನಗಾಪಾಂಡುಪುತ್ರರ
ನೋವಿ ಕೊಟ್ಟೊಡೆ ಹರುಷವೆನುತಾ
ಭಾವದಲಿ ದ್ರುಪದನೃಪದೇವರ ನೆನೆಯುತಿಂತೆಂದ ।
ಈವಧುವಿಗಿಂನವರ ಕಾಣೆನು
ದೇವರೆಂದಾಪಾಂಡುಪುತ್ರರ
ಕಾವನಾದೊಡೆ ಯೆನ್ನ ಪುಣ್ಯಕದಾರು ಸರಿಯೆಂದ ॥ ೩೧

ಬಟಕವರು ಕೌಂತೇಯರಾಗಳು
ಹೊಟಲೊಳಗೆ ಭಿಕ್ಷಾನ್ನವೆತ್ತಿಯೆ
ಘಟಲನೈತಂದವರು ಹೊಕ್ಕು ಕುಲಾಲವೆಂದಿರವ ।
ಬಳಗೆ ದೇವಾರ್ಚನೆಯ ಮಾಡಿಯೆ
ನಳಿನನಾಭಾರ್ಪಿತವೆನುಂಡರು
ನಲಿಯುತಲಿ ತಾವೆಂದು ಪಾಂಡವರರಸ ಕೇಳೆಂದ ॥ ೩೨

ಇರುಳು ನೂಕಿದರಲ್ಲಿ ಮಱುದಿನ
ತರಣಿಗರ್ಘ್ಯವನಿತ್ತು ವಿಹಿತದಿ
ಭರದನುಷ್ಠಾನವನು ಮಾಡಿಯೆ ಬಟಕ ಪುರದೊಳಗೆ ।
ಧರಣಿಸುರಗೃಹದೊಳಗೆ ಭಿಕ್ಷವ
ತಿರಿದು ತಂದರು ಮತ್ತೆ ಮಾತೆಯು
ಕರದಲರ್ಪಿಸಿ ಬಟಕ ಭೋಜನಮಾಡಿ ಹರುಷದಲಿ ॥ ೩೩

ಉಂಡು ದ್ರುಪದಾಲಯದ ಭೂಸುರ
ಹಿಂಡಿನಲಿ ಭಾವದಲಿ ಕುಳಿತಿರೆ
ಗಂಡುಗಲಿಗಳು ಮೆಱೆದರಾದ್ವಿಜರಾಜಸಭೆಯೊಳಗೆ ।

ಹೆಂಡಿರೊಳಗತ್ಯುತ್ತಮೋತ್ತಮೆ
ಗಂಡರಿಗೆ ಅತ್ಯಧಮೆ ಪಾಂಡವ
ಗಂಡರನು ಬಯಸುವಳ ಪರಿಯನು ಮತ್ತೆ ಕೇಳೆಂದ ॥ ೨೪

ಇಪ್ಪತ್ತೆಂಟನೆಯ ಸಂಧಿ ಮುಗಿದುದು.

ಇಪ್ಪತ್ತೊಂಬತ್ತನೆಯ ಸಂಧಿ.

ಸೂಚನೆ

ಕಮಲಮುಖಿ ನಡೆತಂದಳಂದಿನ
ಕಮಲೆ ಯೆನೆ ಪಾಂಚಾಲಸುತೆ ನಿಜ
ರಮಣರನು ನೋಡಿದಳು ಪೃಥ್ವೀಪಾಲಸಭೆಯೊಳಗೆ ॥

ವಿವಾಹಪ್ರಾರಂಭ ಮತ್ತು ರಾಜರ ಸಮಾಗಮ.

ಅರಸ ಕೇಳ್ ನಾಂದೀಮುಖದ ವಿ
ಸ್ತರಣವಾದುದು ಪೂರ್ವವೇದಿಯ
ವರನಿಗಮನಿರ್ಘೋಷ ಪಸರಿಸಿತಖಿಳದಿಕುತಟವ ।
ಮರುದಿವಸ ಮಹಿಳಾಶಿರೋಮಣಿ
ಪರಮಸೌಭಾಗ್ಯದ ಸಮುದ್ರದ
ಸಿರಿಯ ಪರಿಣಯವೆಂದು ಸಾರಿತು ಪಾಳೆಯಂಗಳಲಿ ॥ ೧

ತಿಗುರ ಗೆಲುವುದು ವಶ್ಯತಿಲಕಾ
ಳಿಗಳನಿಡುವುದು ಮೋಹನದ ಮ
ದ್ದುಗಳ ಮಾಯೆಯ ಬೀಸುವುದು ಸೂಸುವುದು ಸೊಗಸುಗಳ ।

ಹಗಲು ಕಾಹಿನ ರೂಹುಗಳ ಗಾ
ಹುಗಳ ಮೆಱೆವುದು ಮನ್ಮಥನ ಕಾ
ಳಗದ ಖಾಡಾಖಾಡಿಯೆಂದರು ಹೊಯ್ದು ಡಂಗುರವ ॥ ೨

ಹರಸಿಕೊಂಡರು ಸಕಲಪೃಥ್ವೀ
ಶ್ವರರು ಮಾಯಾಪುರದ ಕಾಂಚೀ
ಪುರದ ಜಾಲಂಧರದ ವಿವಿಧಸ್ಥಾನದೇವತೆಗೆ ।
ಕರಿಮುಖನ ಕಜ್ಜಾಯದಲಿ ಸ
ತ್ಕರಿಸಿ ಸಂಶಯಭೇದಿ ಗರ್ವದ
ಹರುಷದಲಿ ಹೊಱವಂಟರೊಬ್ಬರನೊಬ್ಬರುರುವಣಿಸಿ ॥ ೩

ಉಬ್ಬು ಮುಱಿದುದು ರಾಯರೊಬ್ಬರ
ನೊಬ್ಬರೀಕ್ಷಿಸಿ ಚಲುವಿನಲಿ ಸಿರಿ
ಗೊಬ್ಬಿನಲಿ ಸಾಹಸಿಕೆಯಲಿ ಸೇನಾಸಮುದ್ರದಲಿ ।
ಒಬ್ಬರೊಬ್ಬರ ಶೌರ್ಯವೊಬ್ಬರ
ನೊಬ್ಬರೀಕ್ಷಿಸುವದಟುಕಂಗಳ
ಹಬ್ಬದಲಿ ಮನಸಂಚ ತಪ್ಪಿತಸಾಧ್ಯಚಿಂತೆಯಲಿ ॥ ೪

ಹೋರೆಗಳ ಹೊಳ್ಳಿರಿತ ಜೋಯಿಸ
ರಾರುಭಟೆಗಳ ಬಿಂಕ ಕೋವಿದ
ರೋರೆನುಡಿ ತಾ ಜಾಳುಜಪವೀನೃಪರ ಬೋಳವಿಸೆ ।
ಹಾರೈಸಿ ಪುಳಕಾಂಬುಗಳ ಶೃಂ
ಗಾರ ಮಿಗೆ ನೇವರಿಸುತೈತಂ
ದೋರಣಿಸಿದರು ಸಾಲಶೋಭಿತಸಿಂಹಪೀಠದಲಿ ॥ ೫

ಕೌರವರು ಯಾದವರು ಸಹಿತೀ
ಧಾರುಣಿಯ ಕ್ಷತ್ರೇಶವಂಶದ
ವೀರಪಾರ್ಥಿವವಿತತಿ ಕುಳ್ಳಿರ್ದುದು ಸುಗಾಢದಲಿ ।

ಸಾರಿ ಸೋದರಸಚಿವಮಂತ್ರಿಕು
ಮಾರಚಾಮರಹಡಪದೊಳಪರಿ
ವಾರ ಬಳಸಿದುದೊಬ್ಬರೊಬ್ಬರ ಸುತ್ತುವಳಯದಲಿ ॥ ೬

ಅಂಕೆ ಯಿದು ಪಾರ್ಥಿವರ ವಿಭವಾ
ಲಂಕೃತಿಯನದನೇನ ಹೇಳುವೆ
ನಂಕವಿದು ಕಳನೇಱಿತಾಹವವೆನಗೆ ತನಗೆನುತ ।
ಶಂಕರಾರಿಯ ಮಸೆದಲಗು ಮಾ
ಱಂಕದುಬ್ಬಿನ ಝುಂಕೆಯಂಕೆಯ
ಬಿಂಕವನು ವಿಸ್ತರಿಸುವೆನು ನರನಾಥ ಕೇಳೆಂದ ॥ ೭

ಬಳಿಕ ಧನುವನ್ನು ತರಿಸೆಂದು ಮಗನಿಗೆ ದ್ರುಪದನ ಅಪ್ಪಣೆ

ತರಿಸು ಧನುವನು ಯಂತ್ರಮತ್ಸ್ಯನ
ನಿರಿಸು ತಳುವದೆ ತಂಗಿಯ[1] ನಲಂ
ಕರಿಸು ದಂಡಿಗೆಯಿಂದ ತಾ ತೋಱಿಸು ಮಹೀಶ್ವರರ ।
ವರನ ವರಿಸಲು ಲಗ್ನವಿದೆ ಹ
ತ್ತಿರೆ ಯೆನುತ ಪಾಂಚಾಲಭೂಪತಿ
ಕರೆದು ಧೃಷ್ಟದ್ಯುಮ್ನನನು ಬೆಸಸಿದನು ಬೇಗದಲಿ ॥ ೮

ದ್ರೌಪದಿಯ ವರ್ಣನೆ

ಅರಸನಾಜ್ಞೆಯ ಮೇಲೆ ಶತಸಾ
ವಿರಸಿತಂಬಿನಿಯರು ಕುಮಾರಿಯ
ಹೊರೆಗೆ ಬಂದರು ತಿಗುರಿದರು ಕುಂಕುಮದಲವಯವವ ।
ಅರಸಿ ಮಜ್ಜನಮಾಡಿ ನೂತನ
ವರದುಕೂಲವನುಟ್ಟು ಸಖಿಯರ
ತರದ ನೆಱೆಯುಗ್ಗಡಣೆಯಲಿ ಬಂದಳು ನಿಜಾಲಯಕೆ ॥ ೯

1 ಸುತೆಯ ಜ

ಹೊರೆಯ ಸಖಿಯರ ನೋಟ ಮೈಯಲಿ
ಹರಿದು ಬೞಲದು ಚಿತ್ತವೀಕೆಯ
ಧರಿಸಿ ಕುಸಿಯದು ಕಿವಿಗಳಿಗೆ ಮೆಲ್ನುಡಿಯ ಸವಿಸವಿದು ।
ಅರುಚಿಯಾಗದು ನಾಸಿಕವು ಮೈ
ಪರಿಮಳದ ಪೂರದಲಿ ಗಂಧಾಂ
ತರವನಱಿಯದು ರೂಪನೇನೆಂಬೆನು ನಿತಂಬಿನಿಯ ॥ ೧೦

ಮೊಲೆಗಳಲಿ ಸಿಲುಕಿದೊಡೆ ನೋಟಕೆ
ಬೞಿಕಪುನರಾವೃತ್ತಿಯೇ ಕಂ
ಗಳಿಗೆ ಕಾಣಿಸಿದೊಡೆ ನಿಮೇಷಕೆ ಸಮಯವೆಲ್ಲಿಯದು ।
ಲಲಿತತನುಕಾಂತಿಗಳೊಳದ್ದರೆ
ಮುೞುಗಿ ತೆಗೆವವರಾರು ಜಘನ
ಸ್ಥಳಕೆ ಮುಱಿದೊಡೆ ಮರಳದೆಲೆ ಕಂಗಳಿಗೆ ಹುಸಿ ಯೆಂದ ॥ ೧೧

ಹೊಲಬುಗೆಡವೇ ಹೇಳವ ವಕ್ಷ
ಸ್ಥಳದೊಳಗೆ ಜನದೃಷ್ಟಿ ನಳಿತೋ
ಳ್ಗಳಲಿ ಸಿಲ್ಕುಗುವರ್ಗೆಳಗಿನಲಿ ಕಂದಳದ ಶೋಭೆಯಲಿ ।
ಸುಳಿದೊಡಲ್ಲಿಯೆ ನಿಲವು ದಶನಾ
ವಳಿಯ ಬಿಂಬಾಧರದ ಕದಪಿನ
ಚಲುವಿಕೆಗೆ ನರರಾಲಿ ನೆರೆಯುವು ಭೂಪ ಕೇಳೆಂದ ॥ ೧೨

ಅಸಿಯ ನಡುವಿನ ವೃತ್ತನಾಭಿಯ
ಮಿಸುಪ ಬಾಸೆಯ ತೋರವೊಲೆಗಳ
ಎಸೆವ ತೊಡೆಗಳ ಬಾಹುಜಂಘೆಯ ಚರಣಪಲ್ಲವದ ।
ಎಸಳುಗಂಗಳ ತೊಳಗಿ ಬೆಳಗುವ
ಮುಸುಡ ಕಾಂತಿಯ ಮುಡಿದ ಕುರುಳಿನ
ಬಿಸಜಗಂಧಿಯ ರೂಪನಭಿವರ್ಣಿಸುವರೊಡರಿದೆಂದ ॥ ೧೩

ಪೂಸುವೊಡೆ ಕಸ್ತುರಿಜವಾಜಿಗ
ಳೈಸಲೇ ಪರಿಮಳವು ಸುತ್ತಲು

ಸೂಸಿ ತನುಕಂಪಿನಲಿ ಮಘಮಘಿಸುವಳು ಯೋಜನವ |
ಈಸಮಸ್ತ ಮನುಷ್ಯಧರ್ಮದ
ದೋಷಗರ್ಭಿತಧಾತುಗಳ ವಿ
ನ್ಯಾಸವೇ ದ್ರೌಪದಿಯ ಭಾವದ ಭಂಗಿ ಬೇಱಿಂದ || ೧೪

ಬೆರಳ ಚಲುವಿಕೆಯಿಂದ ಮುದ್ರಿಕೆ
ಮೆಱೆಯೆ ಸೂಡಗನೇವುರಂಗಳು
ಕರಚರಣಸೌಂದರ್ಯದಲಿ ಬಲ್ಮೊಲೆಯ ಥಾಳಿನಲಿ |
ಕೊರಳ ಮುತ್ತಿನ ಹಾರ ಸುಮನೋ
ಹರದ ಕದಪುಗಳಿಂದ ಕರ್ಣಾ
ಭರಣ ವೊಪ್ಪಿದುವೇನನೆಂಬೆನು ರೂಪನಂಗನೆಯ || ೧೫

ಎಸೆವಧರರಾಗದಲಿ ಮಿಗೆ ರಂ
ಜಿಸುವವೋಲ್ ಮಾಣಿಕ್ಯ ಮೆಱೆದುದು
ದಶನ ದೀಧಿತಿಗಳಲಿ ಥಳಥಳಿಸಿದುವು ಮುತ್ತುಗಳು |
ಮಿಸುಪ ದೇಹಚ್ಛವಿಗಳಲಿ ಡಾ
ಳಿಸುವ ವೋಲ್ ಭೂಷಣದ ಹೇಮ
ಪ್ರಸರ ಹೊಳೆದುದು ಹೊಗೞ್ವ ಕವಿಯಾರಬುಜಲೋಚನೆಯ||೧೬

ಪರಿಮಳದ ಪರಮಾಣುಗಳ ಸಂ
ವರಿಸಿ ಮುಕ್ತಾಫಲದ ಕೆಂದಾವರೆಯ
ಮುಱಿದುಂಬಿಗಳ ವರ್ಣಾಂತರವನಳವಡಿಸಿ |
ಸರಸವೀಣಾಧ್ವನಿಯ ಹಂಸೆಯ
ಗರುವಗತಿಗಳನಾಯ್ದು ಮನ್ಮಥ
ವರವಿರಿಂಚನು ಸೃಜಿಸಿದನು ಪಾಂಚಾಲನಂದನೆಯ || ೧೭

ಸರಸಲಾವಣ್ಯಾಂಬುಮಯತನು
ಸರಸಿಯಲಿ ಮುೞುಗಿರ್ದ ಯೌವನ
ಕರಿಯ ಕುಂಭಸ್ಥಳವೊ ವಿಪುಳಪಯೋಧರ ದ್ವಯವೊ |

ತರಳನಯನವೊ ಶಫರಿಗಳೊ ತಾ
ವರೆಯೊ ಮುಖವೋ ತುಂಬಿಗಳೊ ನಿಖಿ
ಗುರುಳುಗಳೊ ಮಣಿಗಣವೊ ರದನವೊ ಚಿತ್ರವಾಯ್ತೆಂದ ‖ ೧೮

ರಾಜಸೂಯದ ಕ್ರತುವು ವೊಲು ಜಿತ
ರಾಜಮಂಡಲವಾಯ್ತು ಮುಖವಿದು
ರಾಜರಾಜನ ಪ್ರೋಲ್ದ ದಳಕಾಧಿ [1] ಕ್ಷಿತತ್ವದಲಿ ।
ರಾಜನುದ್ಯಾನದ ವೊಲಾಸ್ಯಸ
ರೋಜವಾಯ್ತು ತವೂಲಪತ್ರವಿ
ರಾಜಿತವು ಜನನೋಜಯ ಕ್ಷಿತಿಪಾಲ ಕೇಳೆಂದ ‖ ೧೯

ಜನಪ ಕೇಳುಪಲಾಲಿತಾಂಜನ
ಪನಿ ಜಿತಾಕ್ಷವಿಪಕ್ಷವಾದುವು
ವಿನುತಕರ್ಣಪ್ರಣಯವಲಿ [2] ವೃಷಸೇನವೈರದಲಿ ।
ಜನವಿಡಂಬನ ತಾರಕಾಮಂಡನ
ಕದರ್ಥಿತ ಕುಮುದವೆನೆ ಲೋ
ಚನಯುಗಳವೊಪ್ಪಿದುವು ವರಪಾಂಚಾಲನಂದನೆಯ ‖ ೨೦

ವಿನನೆಂಬೆನು ಮನಸಿಜನ ಮದ
ದಾನೆಯನು ಮನ್ಮಥನ ರತ್ನನಿ
ಧಾನವನು ದರ್ಪಣವನಂಗಜಯಂತ್ರಸೂತ್ರಕದ ।
ಮಾನಿನಿಯರಧಿದೈವವನು ವಿ
ಜ್ಞಾನಕನ್ಯಾಮಾತೃಭವನ
ಸ್ಥಾನವನು ತ್ರೈಲೋಕ್ಯಜನವಶ್ಯಮಂತ್ರಕವ ‖ ೨೧

ನಾರಿಯನು ಸಂಸಾರಸುಖಸಾ
ಕಾರಿಯನು ಜನನಯನಕಾರಾ
ಗಾರಿಯನು ಮುನಿಧೈರ್ಯಸರ್ವಸ್ವಾಪಹಾರಿಯನು ।

---

[1] ವೇ, ಚ.   [2] ಗಳು, ಖ. ಚ.

ಧೀರರಿಗೆ ಮೂಱಂಕವೆನು ವರ
ಪಾರಿಕಾಂಕ್ಷಿಯ ಚಿತ್ತ ಚೌ[1] ರ್ಯವಿ
ಹಾರಿ[2] ಯನು ದ್ರೌಪದಿಯನಭಿವರ್ಣಿಸುವೊಡರಿದೆಂದ ‖ ೨೨

ನಳಿನಮುಖಿಯರ ಸಕಲಸೃಷ್ಟಿಗೆ[3]
ಕಳಸವಿದು ಸೌಂದರ್ಯವಸನದ
ವಿಳಸವಿದು ಸೌಭಾಗ್ಯವೈಭವರತ್ನಕೋಶವಿದು ।
ಲಲನೆಯರ ಸೀಮಂತಮಣಿ ಜಗ
ದೊಳಗೆ ಸೊಬಗಿನ ಕಣಿ ತಪೋಧನ
ಕಲಭರಿಗೆ ಸ್ಮರಣಿ ರೂಪು ಮೆಱೆದುದು ದ್ರುಪದನಂದನೆಯ ‖ ೨೩

ಹೊಳೆಹೊಳೆದುದಾಭರಣರತ್ನಾ
ವಳಿಯ ರುಚಿ ಮಣಿರುಚಿಗಳನು ಮು
ಕ್ಕುಳಿಸಿತಂಗಚ್ಛವಿ ತದಂಗಪ್ರಭೆಯನಡೆಹಾಯ್ದು ।
ಥಳಥಳಿಸಿದುದು ವದನ ಮುಖವಂ
ಡಲದ ಕಾಂತಿಯನೊದೆದು ಕಂಗಳ
ಬೆಳಗು ವಿಸಟಂಬರಿದುದೇನೆಂಬೆನು ನಿತಂಬಿನಿಯ ‖ ೨೪

ಕಂಗಳಲಿ ಕುಡಿಹೊಳಹು[4] ಹುಬ್ಬಿನ
ಹೊಂಗಿನಲಿ ಭಂಜವಣೆ ಭಾವದ[5]
ಭಂಗಿಯಲಿ ಪತಿಕರಣೆ ವಿವಿಧಸಖೀಕದಂಬದಲಿ ।
ಇಂಗಿತದ ಬಿರಿಮುಗುಳ ಪರಿಮಳ
ವಂಗಹಾರವಿಲಾಸವಿಭ್ರಮ
ಭಂಗಿಗಳು ಬಿಬ್ಬೋಕಲಲಿತಾದಿಗಳು ದ್ರೌಪದಿಯ ‖ ೨೫

ವರವಸಂತನ ಬರವು ಜಾಜಿಯ
ಬಿರಿಮುಗುಳು ಮಱಿದುಂಬೆಗಳ ನಯ

---

1 ಶೌರ್ಯ, ಜ. 2 ಕಾರಿ, ಜ. 3 ದೃಷ್ಟಿಗೆ, ಚ. ಜ.
4 ಮೇಳ, ಚ. 5 ಭಾರಿಯ, ಚ.

ಸರದ ದನಿ ಕರಿಕಳಭಲೀಲೆ ನವೇಕ್ಷುರಸಧಾರೆ |
ಮೆಱೆವವೊಲ್ ಹೊಸಹೊಗರಜವ್ವನ
ಸಿರಿಯ ಜೋಡಣೆ ಜನಮನವನಾ
ವರಿಸಿದುದು ನಿಪ್ಪಸರದಲಿ ಪಾಂಚಾಲನಂದನೆಯ ‖ ೧೬

ಆರತಿಯನೆತ್ತಿದರು ಬೞಿಕ
ಪ್ಪಾರತಿಯ ಹಾಯ್ಕಿದರು ಮುತ್ತಿನ
ತೋರಸೇಸೆಯ ಸೂಸಿ ಹರಸಿ ಸುವಾಸಿನೀನಿಕರ |
ಚಾರುಮುಕುರವ ನೋಡಿ ನಿಂದಳು
ಭಾರಣೆಯ ಗರುವಾಯಿಯಲಿ ಜಂ
ಬೀರಫಲವನು ಕೊಂಡಳಂಗನೆ ವಿಪ್ರಮಂತ್ರದಲಿ ‖ ೧೭

ಮುಂದೆ ಪಾಯವಧಾರು ಸಖಿಯರ
ಸಂದಣಿಯ ಸಾಲಿನಲಿ ದಂಡಿಗೆ
ಗಿಂದುಮುಖಿ ಬಂದಳು ಸಿತಾಬ್ಜಕೆ ಲಕ್ಷ್ಮಿಯಂದದಲಿ |
ಹಿಂದು ಮುಂದಿಕ್ಕೆಲದ ನಾರೀ
ವೃಂದ ನೆರೆದುದು ವೀರಪಟಹದ
ದುಂದುಭಿಯ ತಂಬಟದ ರವವಳ್ಳಿಱಿದುದಂಬರವ ‖ ೧೮

ಸಾಲಝಲ್ಲರಿ ಮುಸುಕಿದುವು ಸಮ
ಪಾಳಿಯಲಿ ಸೀಗುರಿಗಳಾಡಿದು
ವಾಲಿಯವಗಾಹಿಸದು ನೆಲನೆನಿತನಿತುವಳಯದಲಿ [1] |
ಬಾಲೆಯರ ಮುಗುಧೆಯರ ನತಿಘಾ
ತಾಳೆಯರ ಕಡೆಗಣ್ಣ ನೋಟದ [2]
ಚಾಳೆಯರ ಚದುರೆಯರನಲ್ಲದೆ ಕಾಣೆ ನಾನೆಂದ ‖ ೧೯

ನಿಱಿದಲೆಯ ಚೊಲ್ಲೆಹದ ತುಂಬಿಯ
ನಿಱಿಗುರುಳ ಬೈತಲೆಯ ಮುತ್ತಿನ

---

1 ಡಾಳದ, ಕ. ಖ. 2 ವಾಲಿಗಳು ನೋಟಕದಲನಿತನಿತರಳವಿಯಲಿ, ಕ. ಖ.

ಹೆಱೆನೊಸಲ ನಿಡುಪುರ್ಬುಗಳ ಥಾಳಿಸುವ ಕದಪುಗಳ ।
ತುಱುಗೆವೆಯ ತನಿಹೊಳೆವ[1] ಕಂಗಳ
ಮೆಱೆವ ಸುಲಿಪಲ್ಲುಗಳೆಸೆವ ನು
ಣ್ಗೊರಳ ನಳಿತೋಳ್ಗಳ ನೀಱೆಯರೈದಿತೊಗ್ಗಿನಲಿ ॥ ೨೦

ತೋರಮೊಲೆಗಳ ನಳಿವ ನಡುವೊಱ
ವಾಱುಗಳ ನುಣ್ದೊಡೆಯ ಕಿಱುದೊಡೆ
ಯೋರಣದ ಹಾವುಗೆಯ ಹೆಜ್ಜೆಯ ಹಂಸೆಗಳ ಗತಿಯ ।
ನೀಱೆಯರ ಮೈಗಂಪುಗಳ ತನಿ
ಸೂಱೆಗೆಳಸುವ ತುಂಬಿಗಳ ಕೈ
ವಾರಗಳ ಕಡುಗರವೆಯರ ನೆರೆದುದು ಸಖೀನಿವಹ ॥ ೨೧

ಕೀಲಕಡಗದ ವಜ್ರಲಹರಿಯ
ಜೋಳೆಯದ ಕಂಕಣದ ರವೆಗಳ
ತೋಳಬಂದಿಯ ಕೊರಳ ತ್ರಿಸರದ ಬೆರಳ ಮುದ್ರಿಕೆಯ ।
ನೀಲರತುನದ ಪದಕಮಾಣಿಕ
ದೋಲೆಗಳ ಮೂಗತಿಯ ಮುತ್ತಿನ
ಮೇಲುಸಿಂಗಾರದ ಸಖೀಜನವೈದಿತೊಗ್ಗಿನಲಿ ॥ ೨೨

ವಿಲಸದೇಕಾವಳಿಯ ಮುತ್ತಿನ
ತಿಲಕ ಸೂಡಗ ಪಾಯವಟ್ಟದ
ಲಲಿತಬಂಧದ ವಜ್ರಬಿಂಬದ ತಾರಕಾವಳಿಯ ।
ಹೊಳೆವ ಕಾಂಚಿಯ ಕಿಂಕಿಣೀಸಂ
ಕುಳದ ನೇವುರ ವೀರಮುದ್ರಾ
ವಳಿಯ ಚರಣಾಭರಣದಬಲೆಯರೈದಿತೊಗ್ಗಿನಲಿ ॥ ೨೩

ಭ್ರೂಲತೆಯ ಬಿಲ್ಲಿನ ಕಟಾಕ್ಷದ
ಕೋಲಹೊದೆಗಳ ಬಾಸೆಗಳ ಕರ

---

1 ಸಿಟ್ಟೈಸಳ, ಕ.

ವಾಳಗಳ ಕತ್ತುರಿಯ ತಿಲಕದ ಹರಿಗೆಫಲಗೆಗಳ ।
ತೋಳುಗಳ ಲೌಡಿಗಳ ಸೆಳ್ಳುಗು
ರೋಳಿಗಳ ಸುರಗಿಗಳ ಮನ್ಮಥ
ನಾಳು ನಡೆದುದು ದ್ರೌಪದಿಯ ದಂಡಿಗೆಯ ಬಳಸಿನಲಿ [1] ॥ ೩೪

ವ್ರತಿಗಳಿಗೆ ಮೊನೆದೋಱುತಣ ಸು
ವ್ರತಿಗಳಿಗೆ ಬೀಱುತ ಸಮಾಧಿ
ಸ್ಥಿತರ ಮೂಗಿನ ಮೇಲಣಾಯುಧಧಾರೆಗಳನೆಳದು ।
ಶ್ರುತಿವಿಹಿತಸತ್ಕರ್ಮಿಗಳ ದೀ
ಕ್ಷಿತರ ಮತಿಯಲಿ ತಮ್ಮ ಮುದ್ರಾಂ
ಕಿತವ ಮಾಡುತ ಮಿಱಿ ನಡೆದುದು ಯುವತಿಜನಕಟಕ ॥ ೩೫

ಆರು ನಿಲುವರು ಸಂಮುಖಕೆ ಮದ
ನಾರಿಯರ್ಧದ ನಾರಿಯಾ ಹರಿಯು
ಹೇರುರದ ಹೆಂಗೂಸು ಬೊಮ್ಮನು ಮಗಳ ನೆಱಗೇಡಿ ।
ಘೋರವದು ಸುರಪತಿಯು ಕಥೆ ವ್ಯಾ
ಯಾರೆ ಹೊತ್ತನು ಮದನಮುದ್ರಾ
ಧಾರೆಯೆಂಬಂತೊದಱಿದುವು ಮುಂಗುಡಿಯ ಕಹಳಗಳು ॥ ೩೬

ತೋರಮೊಲೆಗಳ ದಂತಿಘಟೆಗಳ
ಚಾರುಜಘನದ ಜೋಡಿಸಿದ ಹೊಂ
ದೇರುಗಳ ಸುಳಿಗುರುಳುಗಳ ಝಲ್ಲರಿಯ ಜೋಡುಗಳ ।
ಚಾರುನಯನದ ಚಪಳಗತಿಗಳ
ವಾರುವಂಗಳ ಮೇಲುವೆಸನದ
ಸಾರಸಿಂಧದ ಸೇನೆ ನಡೆದುದು ಸತಿಯ ಬಳಸಿನಲಿ ॥ ೩೭

ಪಸರಿಸಿತು ತಂಬೆಲರು ಬೀಸಿತು
ಬಿಸಿಲ ಬಿಂಕ ಸರೋಜಸಂತತಿ
ಮುಸುಳಿದುವು ಮದವೇಱಿ ಮೆಱೆದುದು ತಾರಕಾನಿವಹ ।

---

1 ಚಲುಣಿಯಲಿ, ಕ. ಖ.

ಬಸರಿದುದು ಶಶಿಕಾಂತ ನೈದಿಲ
ಹಸರ ಹರಿದುದು ಚಕ್ರವಾಕದ
ಬೆಸುಗೆ ಸಡಲಿತು ಚಾರುಚಂದ್ರಾನನೆಯ ಬರವಿನಲಿ ॥ ೩೮

ಹೊಳೆವ ಕಂಗಳ ಬೆಳಗಿನಲಿ ಕ
ತ್ತಲಿಸಿದುದು ಕಾಮುಕರ ಮನ ತನು
ವಳಯಕಾಂತಿಯ ತಂಪಿನಲಿ ಬಾಡಿದುವು ಬುದ್ಧಿಗಳು ।
ಲಲಿತವಿಭ್ರಮದಿಂದಹಂಕೃತಿ
ಶಿಲೆಗಳೊಡೆದುವು ಮೋಹನದ ಹೊನ
ಲೊಳಗೆ ಹೊಳೆದಡಗಿದುದು ಚಿತ್ತ ಮಹಾಮಹೀಶ್ವರರ ॥ ೩೯

ತರುಣಿಯರ ನವನೀಲಮಣಿಗಳ
ಕುರುಳ ಕಬರಿಯ ಭರದ ವರಕ
ಸ್ತೂರಿಯ ತಿಲಕದ ಕಾಳಿಕೆಯ ಘನಕಾಂತಿಲಹರಿಗಳ ।
ಕೊರಳ ಹಾರದ ಕರ್ಣಪೂರದ
ಸರದ ಮೌಕ್ತಿಕರುಚಿಯ ಯಮುನಾ
ಸುರನದಿಯ ಸಂಗಮದೊಳಗೆ ಮುಳುಗಿತು ಜನಸ್ತೋಮ ॥ ೪೦

ಪರಿಮಳಕೆ ಮಿಗೆ ಕವಿವ ತುಂಬಿಗೆ
ಕೆರಳುವರು ಹುಬ್ಬಿನಲಿ ಪದನೇ
ವುರದ ಮೆಲ್ದನಿಗಳಿಗೆ ಮುತ್ತುವ ರಾಜಹಂಸೆಗಳ ।
ಹೊರೆಯ ಕೆಳದಿಗೆ ದೂಱುವರು ಕೈ
ಯರೆಗಿಳಿಗೆ ತಮ್ಮಧರಬಿಂಬಕೆ
ಮುಱಿಮುಱಿದು ಮುಖದಿರುಹುವರು ಮುಗ್ಧಾಂಗನಾನಿಕರ ॥

ಕಂಗಳೋರೆಯ ಥಾಳಿಸುವ ಹಾ
ಸಂಗಿಗಳ ಬಿಗುಹಿನದುಹಾರದ
ಭಂಗಿಗಳ ಬಲುವಿಟರ ಕರಣದ ಸಾರೆಗಳ ಸೆಱೆಯ ।

ಮುಂಗುಡಿಯ ನಿಜನಾರಿಯರ ಕವಿ
ವೆಂಗವೆಣೆಗಳ ಜೂಜುಗಾತಿಯ
ರಂಗನೆಯ ದಂಡಿಗೆಯ ಬೆತ್ತವಿಡಿದರು ವಿದಗ್ಧೆಯರು ॥ ೪೨

ಹಾವುಗೆಯ ಸೀಗುರಿಯ ವರಿಚಮ
ರಾವಳಿಯ ಕರ್ಪುರದ ಗಂಧದ
ಹೂವುಗಳ ಕತ್ತುರಿಯ ಸಾದುಜವಾದಿ ಕುಂಕುಮದ ।
ತೀವಿದನುಪಮಭಾಜನವ್ರಜ
ನಾವಳಿಯ ಕನ್ನಡಿಯ ವಿವಿಧಸ
ಖೀವಿಳಾಸಿನಿಯರ ಕದಂಬಕವೈದಿತೊಗ್ಗಿನಲಿ ॥ ೪೩

ಧರಣಿಪತಿ ಕೇಳ್ಸಕಲಪೃಥ್ವೀ
ಶ್ವರರ ಬಹಳಾಸ್ಥಾನದಲಿ ಮೋ
ಹರಿಸಿದರು ಮೋಹರದ ಮೋಡಾಮೋಡಿಯಬಲೆಯರು ।
ಅರಸುಗಳ ನಿಡುನೋಟವಲ್ಲಿಯ
ಗರುವೆಯರ ಕುಡಿನೋಟ ತಮ್ಮೊಳು
ಬೆರಸಿ ಹೊಯ್ದಾಡಿದುವು ಖಾಡಾಖಾಡಿಯುದ್ಧದಲಿ ॥ ೪೪

ದಾಯ ತಪ್ಪಿತು ಗರುವರಾಟ ವಿ
ಡಾಯಿಗೆಟ್ಟಿತು ಪಿಟರ ನೋಟ ನ
ಮಾಯಿಕಾಖರ ಕೂಟ [1] ಹುಸಿದುದು [2] ಮದನಶರಹತಿಗೆ ।
ಘಾಯವಡೆದುದು ಧೃತಿಯ ಘಾಟ ಥ
ಡಾಯ ಹೆಚ್ಚಿತು ಮತ್ತೆ ಬೇಟ ವ
ರಾಯತಾಕ್ಷಿಯ ಕೂಟಕೆಳಸುವ ಸಕಲಭೂಭುಜರ ॥ ೪೫

ಕೆಲಕಡೆಯ ಕೆಳದಿಯರ ಕಂಗಳ
ಹೊಳಹು ದುವ್ವಾಳಿಯಲಿ ಸುಮತಿ
ಸ್ಖಲಿತಕೆಂಧೂಳಿಯಲಿ ಮಾಸಿತು ಮನದ ಮಡಿವರ್ಗ ।

---

1 ಮಾಳ, ಟ.   2 ಕುಸಿದುದು, ಚ.

ಒಳಗೆ ಪೊತ್ತುವ ದಗೆಯ ಹೊರಳಿಯ
ತಳಿತ ಬಿಮ್ಮಿನ ಬಗೆಯ [1] ನೃಪಮಂ
ಡಳಿಯ ನೆನಹ [2] ನದೇನನೆಂಬೆನು ಭೂಪ ಕೇಳೆಂದ ॥ ೪೬

ಚಲುವಿಕೆಯ ಚೈತನ್ಯವೋ ಪರಿ
ಮಳದ ಪುತ್ಥಳಿಯೋ ಲತಾಂಗಿಯ
ಸುಳಿವೊ ಲಾವಣ್ಯಾಂಬುರಸಸಾಕಾರವಿಭ್ರಮವೊ ।
ಲಲಿತಶೃಂಗಾರಾಬ್ಧಿ ಮಥನೋ
ಚ್ಛಳಿತಸುಧೆಯೋ ಸಾಧಕರಿಗಿದು
ಫಲಿಸಿದರೆ ಕೃತಪುಣ್ಯರವರೆಂದುದು ಜನಸ್ತೋಮ ॥ ೪೭

ಈಕೆಯಂದುದಿಸಿರಲು ಮದನಂ
ಗೇಕೆ ದೇಹದ ಬೇಗೆಯಹುದು [3] ಪಿ
ನಾಕಿ ನೆಱೆ ವೈರಾಗ್ಯದಲಿ ಹೊಗುವನೆ ತಪೋವನವ ।
ಸಾಕು ಗೌತಮಮುನಿಯ ಮುಳಿಸಿನ
ಕಾಕುನುಡಿ ಫಲಿಸುವುದೆ ಯೆನುತಾ
ನಾಕಪತಿ ರಂಭಾದಿಸತಿಯರ ನೋಡುವನೆ ನಗುತ ॥ ೪೮

ತಂದರಾಪಾಂಚಾಲಿಯನು ಹೊ
ನ್ನಂದಣದಲಾಸ್ಥಾನಸೀಮೆಗೆ
ಮುಂದೆ ಸಿಂಹಾಸನದ ಸಾಲ ಮಹಾಮಹೀಶ್ವರರ ।
ಸಂದಣಿಯೊಳವರವರನಿವರಿವ
ರೆಂದು ತೋಱಿಸಬೇಕೆನುತ ನೃಪ
ನಂದನನು ಹೊದ್ದಿದನು ಕಮಲಾನನೆಯ ದಂಡಿಗೆಯ ॥ ೪೯

ಪಾಂಚಾಲಿಗೆ ರಾಜರನ್ನು ತೋರಿಸುವಿಕೆ.

ಇರಲು ಧೃಷ್ಟದ್ಯುಮ್ನನಾಗಲು
ಹರುಷ ಮಿಗೆ ದ್ರೌಪದಿಗೆ ನುಡಿದನು

---

1 ನಗೆಯು, ಚ. 2 ಮೌಳಿಯು, ಚ. 3 ತ್ಯಾಗವಹುದು, ಚ.

ಧರಣಿಪರ ನೀ ನೋಡು ತೋಱುವೆ ವರನೃಪೋತ್ತಮರ ।
ಪರಿವಿಡಿಯಲಂದಾಗ ಮಖಜೆಯ
ವರಸ್ವಯಂವರದೊಳಗೆ ಭೂಪರ
ನಱುಹಿಸಿದನಾತತ್ಸಹೋದರಿಗಂದು ವಿನಯದಲಿ ॥ ೫೦

ತಂಗಿ ನೋಡೌ ತಾಯೆ ನಿನ್ನಯ
ಕಂಗಳೊಲಿವೊಡೆ ಚಿತ್ತ ವಾರ್ಧಿತ
ರಂಗದಲಿ ತೂಗುವೊಡೆ ತೋಱುವೆನವನಿಪಾಲಕರ ।
ಇಂಗಿತದಲವರಂತರಂಗವ
ನಂಗವಟ್ಟದ ಬಳಕೆಯನು ಬಹಿ
ರಂಗದಲಿ ನೀನಱಿಯೆನುತ ನುಡಿದನು ನಿಜಾನುಜೆಗೆ ॥ ೫೧

ಈತ ದುರ್ಯೋಧನಮಹೀಪತಿ
ಯೀತ ದುಶ್ಶಾಸನನು ದುಸ್ಸಹ
ನೀತ ದುಶ್ಶಳನೀತ ದುರ್ಜಯನೀತ ಚಿತ್ರರಥ ।
ಈತ ದುರ್ಮದ ನೀತ ಚಿತ್ರಕ
ನೀತಗಳು ಕುರುವಂಶದಲಿ ವಿ
ಖ್ಯಾತರಬಲೆ ನಿರೀಕ್ಷಿಸೌ ಧೃತರಾಷ್ಟ್ರನಂದನರ ॥ ೫೨

ನೋಡಳವರನು ನುಡಿಸಳೀತನ
ಕೂಡೆ ಭಾವವದಲಿವರ ಕೊಡಹೀ
ಡಾಡಿದಳಲಾ ಯೆನುತ ಧೃಷ್ಟದ್ಯುಮ್ನ ನಸುನಗುತ ।
ನೋಡು ತಂಗಿ ವಿರಾಟನುತ್ತರ
ಗೂಡಿ ಕೀಚಕರನು ಶ್ರುತಾಯುಧ
ಮೂಡಣರಸುಗಳನು ರವಿಧ್ವಜರೋಚಕಮಾನಕರ ॥ ೫೩

ನೀಲ ಚಿತ್ರಾಯುಧನು ದಕ್ಷಿಣ
ಚೋಳಕೇರಳಪಾಂಡ್ಯಧರಣೀ
ಪಾಲಕರೊಳೀಚಂದ್ರಸೇನಸಮುದ್ರಸೇನಕರು ।

ಲೋಲವಂಗ [1] ಕಳಿಂಗಪೃಥ್ವೀ
ಪಾಲನೀತನು ಚೇಕಿತಾನನೃ
ಪಾಲನೀತನು ಭಾನುದತ್ತಮಹೀಶ ನೋಡೆಂದ ॥ ೫೪

ಇತ್ತಲೀಕ್ಷಿಸು ಪೌಂಡ್ರಕನ ಭಗ
ದತ್ತನನು ಕಾಂಭೋಜನನು ಹರ
ದತ್ತನನು ವರಹಂಸಡಿಬಿಕರ ಮದ್ರಭೂಪತಿಯ ।
ಇತ್ತ ನೋಡೌ ಮಗಧನೃಪತಾ
ಪೆತ್ತಮಗ ಸಹದೇವ ಬೃಹದ್ರಥ
ನಿತ್ತಲೀತನು ದಂಡಧಾರನೃಪಾಲ ನೋಡೆಂದ [2] ॥ ೫೫

ಭೂರಿ ಭೂರಿಶ್ರವನು ದಕ್ಷಿಣ
ವೀರಬಾಹ್ಲಿಕ ವಿಂದ ಚಿತ್ರಭ
ಗೀರಥನು ಚಿತ್ರಾಯು ನಿಯುತಾಯುಧ ಮಹೋದರರು [3] ।
ವೀರವೃದ್ಧಕ್ಷತ್ರಸೃಂಜಯ
ಚಾರುಭುಜಬಲಸೋಮದತ್ತಮ
ಹೀರಮಣರಿವರಿತ್ತಲಿದೆ ತರಳಾಕ್ಷಿ ನೋಡೆಂದ ॥ ೫೬

ಈತ ರುಕುಮಾಂಗದ ಜಯದ್ಬಲ
ನೀತ ಶ್ರುತಸೇನಾಚ್ಯುತಾಯುಧ
ರೀತ ದಂಡಾಯುಧನು ಮಾಳವನೀತ ಗೌಳಕನು ।
ಈತ ತಾ ನಿಯುತಾಯು ವೆಂಬವ
ನೀತನೇ ದೀರ್ಘಾಯುವೆಂಬವ
ನೀತನೇ ತಾ ದನುಜಲಂಬುಸನನುಜೆ ನೋಡಿವರ ॥ ೫೭

---

1 ಲೋಲನಯನೆ, ಚ.

2 ಇತ್ತಲು ಜರಾಸಂಧಮಣಿಮಾನಿತ್ತ ಸಹದೇವನು ಬೃಹದ್ರಥನಿತ್ತಲೀತನು ದಂಡಧಾರಕನೃಪನು ನೋಡೆಂದ, ಚ.

3 ನೃಪವರಜಯದ್ರಥವಿಶ್ರುತಾಯುಧರು, ಚ.

ಇತ್ತ ನೋಡಾ ಘೋಷತೇಜನ
ನಿತ್ತ ನೋಡಾ ಚೈದ್ಯರಾಜನ
ನಿತ್ತ ನೋಡಾ ದ್ರೋಣಪುತ್ರನ ಸೌಬಲಾತ್ಮಜನ |
ಇತ್ತ ನೋಡಾ ಸಾಲ್ವಭೂಪನ
ನಿತ್ತ ನೋಡಾ ಧೀರಕಾಶ್ಮಿರ
ಪೃಥ್ವಿಪತಿಯಾ ಶೈಬ್ಯಭೂಪನ ನೀನೃಪಸುತನ || ೫೮

ಭೂತಳದ ರವಿಯಂತೆ ಹೊಳಹೊಳ
ವಾತ ಕರ್ಣನು ತನುಜರೀತಂ
ಗೀತಗಳು ವೃಷಸೇನನಗ್ಗದ ಚಿತ್ರಸೇನಕರು |
ಈತನವನೇ ನೋಡೆನಲು ಭೂ
ವಾತಿಶಯಸಂಬಂಧಿಭಾವದ
ಲೀತನನು ನೋಡಿವಳು ತಿರುಹಿದಳಬಲೆ ಲೋಚನವ || ೫೯

ಉಕ್ಕಿದಾ ಕಿವಿವೇಟ ಕಂಬೇ
ಟಕ್ಕೆ ತಂದುದು ಕಂಗಳೀಕೆಯು
ಮುಕ್ಕುಳಿಸಿ ಮೈಸೋಂಕಿನಲಿ ಲಟಕಟಿಸಿದುದು ಹೃದಯ |
ಸಿಕ್ಕಿತಬಲಿಗೆ ಸೋತು ಸೊಕ್ಕಿನ
ಚುಕ್ಕಿಯೋ ಚಾಲನೆಯೊ ಸೃಷ್ಟಿಗ
ದಕ್ಕಜವೊ ತಾನೆನುತ ಚಿಂತಿಸಿತಾ ನೃಪವ್ರಾತ || ೬೦

ಇತ್ತ ನೋಡೌ ತಂಗಿ ಯದುಭೂ
ಪೋತ್ತಮನನಮರಾಳಿಕದಳೀ
ಮತ್ತಗಜವನ ನಿಖಿಳನಿಗಮಾವಳಿಶಿರೋಮಣಿಯ |
ಉತ್ತರೋತ್ತರರಮ್ಯಮೂರ್ತಿಯ
ನುತ್ತಮಾಮಲಕೀರ್ತಿಯನು ಮನ
ಹತ್ತುವೊಡೆ ತಳುವಿಲ್ಲ ಕೃಷ್ಣನ ವರಿಸು ನೀನೆಂದ || ೬೧

ಮದನನ್ನೆಯ್ವನು ಮೂಜಗವ ಮಾ
ಡಿದನ ತಾತನು ರೂಪು ವಿಭವವ
ನಿದಟಿೊಳಗೆ ನೀ ನೋಡಿಕೋ ಯಾದವಶಿರೋಮಣಿಯ |
ಸುದತಿಯರ ಸೇರುವೆಗಳನು ನೋ
ಡಿದರೆ ಧಾರುಣಿ ಲಕ್ಷ್ಮಿ ಕೃಷ್ಣನ
ಪದಜನಿತೆ ಭಾಗೀರಥಿಯು ಕಮಳಾಕ್ಷಿ ನೋಡೆಂದ [1] ‖ ೬೮

ಎನಲು ಬಕುತಿಯು ಭಾವರಸದಲಿ
ನೆನೆದು ಹೊಂಪುಳಿಯಾಗಿ ರೋಮಾಂ
ಚನದ ವ್ಯಯ್ಯಬ್ಧಿನಲಿ ತನುಪುಳಕಾಂಬುಪೂರದಲಿ |
ಮನದೊಳಗೆ ವಂದಿಸಿದಳನಗೀ
ತನಲಿ ಗುರುಭಾವನೆಯು ಮತಿ ಸಂ
ಜನಿಸಿತೇನೆಂದಱಿಯೆನೆಂದಳು ಕಮಲಮುಖಿ ನಗುತ ‖ ೬೭

ಹಿರಿಯನೀಕೃಷ್ಣಂಗೆ ನೀಲಾಂ
ಬರನ ನೋಡಾದೊಡೆ ಮುರಾರಿಯ
ಹಿರಿಯಮಗನನು ಲೋಕಮೂಱಱ ಬಂದಿಕಾಱಕನ |
ಹರನ ಕಡ್ಡಿಗೆ ಬಗೆಯನೆಂಬೀ
ಬಿರುದ ಮನ್ಮಥನೀತನೀತನ
ವರತನುಜನನಿರುದ್ಧನಿದು ಯದುರಾಜಕುಲವೆಂದ ‖ ೬೪

ಸಾರಣನು ಕಲಿಸಾಂಬನೀತನು
ಚಾರುದೀಪಕನೀತನಮಳಾ
ಕ್ರೂರಸತ್ಯಕನೀತ ಸಾತ್ಯಕಿ ಯಿಾತ ಕೃತವರ್ಮ |
ಸಾರವೋಜಯನೀತ ನೀತ ವಿ
ಡೂರಥಾದಿಸಮಸ್ತಯಾದವ
ವೀರರಿವಸಂಖ್ಯಾತ ಕೃಷ್ಣಕುಮಾರರಿವರೆಂದ ‖ ೬೫

1 ಯುಗವ ಸೋಲ್ವಸುತಿಹರಖುಜಾಕ್ಷೆಕೇಳೆಂದ, ಖ ಚ.

ಜಗವನಿಂದ್ರಿಯಕರಣವಿಷಯಾ
ದಿಗಳನೆಲ್ಲವ ನೊತ್ತಿ ಮುಖದಲಿ
ತೆಗೆದು ಶ್ರುತಿಶಿರದವುಲತತ್ವವನರಸುವಂದದಲಿ ।
ಬಗೆಯ ಬಯಕೆಯ ಸೊಗಸುಗಳ ದಾ
ಯಿಗನನರಸುತ ಕುಡಿತೆಗಣ್ಣಲಿ
ಮೊಗೆದು ಸೂಸಿದಳಂಬುಜಾನನೆ ಸಕಲನೃಪಕುಲವ ॥ ೬೬

ಕೆಲರು ಮದಿರಾಪಾಂಗದಲಿ ಕಂ
ಗಳ ಮರೀಚಿಯ ಬೆಳಗಿನಲಿ ಕೆಲ
ರೆಳನಗೆಯ ಸೊಂಪಿನಲಿ ಸಖಿಯರ ಮೇಳವಾತಿನಲಿ ।
ಲಲನೆ ನೋಡಿದಳವ್ವೆ ಸೊಗಸಿನ
ಲೊಲಿವ ಸಖಿಯರಿಗೆಂದಳೆಂದೊಳ
ಗೊಳಗೆ ಬೆಱತರು ಬಯಲ ಮದುವೆಯ ಬಾಯಸವಿಗಳಲಿ ॥ ೬೭

ಗರುವೆ ಯಿಂಗಿತವಱಿದು ದಂಡಿಗೆ
ಮುಱಿಯಲೊಡನೈದಿತ್ತು ರಾಯರ
ನರವಿ ಕಳುಹುತ ಕಂಗಳಲಿ ಕರಣೇಂದ್ರಿಯಂಗಳಲಿ ।
ಬಱಿಯ ಡಿಂಬದ ಡೊಂಬಿಯಲಿ ಕೇ
ಸರಿಯ ಪೀಠಾವಳಿಯಲಿರ್ದರು
ಧರಣಿಪರು ಮುರವೈರಿ ಗಂಗಾಸೂನು ಹೊಱತಾಗಿ ॥ ೬೮

ಮತ್ತೆಯುತ್ಕೃತ್ತಮರು ಕಳಶಜ
ನಿತ್ಯಶುಚಿ ತಾನುದ್ಧವಾಂಕನು
ಸತ್ಯಕೃಪಗುರುಸೂನು ಸತ್ಯಕಸೂನುಹೊಱಗಾಗಿ ।
ಚಿತ್ತವಿಸುವುದು ದೇವ ಸತ್ಯದ
ಲುತ್ತಮರ ಮನಹೋಗದಾಗಳ
ಸತ್ಯದಲಿ ದ್ರೌಪದಿಯ ರೂಪಿಂಗುೞಿದ ಭೂಭುಜರ ॥ ೬೯

ಮಡಿಸಿದೆಲೆ ಬೆರಳೊಳಗೆ ಬಾಯೊಳ
ಗಡಸಿದೆಲೆ ಬಾಯೊಳಗೆ ಸಚಿವರ
ನುಡಿಯ ಕೇಳರು ಸುಳಿಯ ಕಾಣರು ಲೋಚನಾಗ್ರದಲಿ ।
ಕಡುಮುಳಿದು ಕಂದರ್ಪಶರವವೆ
ಗಡಿಸೆ ಕೈಗಳನೊಡ್ಡಿ [1] ನೃಪರೆವೆ
ಮಿಡುಕದಿರ್ದರು ಹೊತ್ತ ದುಗುಡದ ಹಾಯ್ದ ಬೆಱಗಿನಲಿ [2] ॥೨೦

ರಾಯನೆಂದನು ಸಕಲಧರಣೀ
ರಾಯರನು ಮನ್ನಿಸದೆ ಮರಳಿದ
ಳಾಯತಾಕ್ಷಿ ಮಹಾಸ್ವಯಂವರದಲಿ ಮಹಾದೇವ ।
ಜೋಯಿಸರ ಹೋರೆಗಳ ಹೇಟಿಕೆ
ಹೋಯಿತೇ ಹೊಳ್ಳಾಗಿ ಪಾಂಡವ
ರಾಯರನು ತೋಱಿಸನೆ ಗದುಗಿನ ವೀರನಾರಯಣ ॥ ೨೧

ಎಂದು ದ್ರುಪದನು ಪಾಂಡುಪುತ್ರರ
ನಂದು ಕಾಣದೆ ನೃಪರ ನಾನೇ
ನೆಂದು ನೆರಹಿದೆನೆನುತ ಕೃಷ್ಣನ ನೋಡಿ ತಿರುಗಿದನು ।
ಮಂದರೋದ್ಧರ ವರಯಶೋದಾ
ನಂದಕಂದ ಮುಕುಂದ ಗೋಪೀ
ವೃಂದವಲ್ಲಭ ಪಾಂಡುಪುತ್ರರ ಕರುಣಿಸೈ ಯೆಂದ ॥ ೨೨

ಇಪ್ಪತ್ತೊಂಬತ್ತನೆಯ ಸಂಧಿ ಮುಗಿದುದು.

1 ಕೈಗಳನೋಡಿ, ಚ. ತ. 2 ಬೆರಳಮೂಗಿನಹೊತ್ತದುಗುಡವಲಿ, ಚ. ಶ.

ಮೂವತ್ತನೆಯ ಸಂಧಿ.

ಸೂಚನೆ

ತಮತಮಗೆ ತವಕದಲಿ ಭೂಪೋ
ತ್ತಮರು ಹೋಱಿಯೆ ಬೞಲಿ ಜಾತ
ಶ್ರಮರು ಹಿಮ್ಮೆಟ್ಟಿದರು ಗೆಲಿದುದು ಧನು ಮಹಾರಥರ ॥

ಭದ್ರಮಂಟಪದಲ್ಲಿ ಪಾಂಚಾಲಿಯ ಪ್ರವೇಶ.

ಕೇಳು ಜನಮೇಜಯನೃಪತಿ ಪಾಂ
ಚಾಲಿ ಹೊಕ್ಕಳು ಭದ್ರಮಂಟಪ
ಶಾಲೆಯನು ಮರಳಿದುದು ಮನ್ಮಥನೊಡ್ಡು ಸತಿಯೊಡನೆ ।
ಬಾಲೆಯನು ನಿಜರೂಪದರ್ಪದೊ
ಳಾಳಱಿಯಿರೆ ಬಾಹುಬಲದಲಿ
ಸೋಲಿಸುವೊಡನುವಾಗಿ ಯೆಂದರು ಹೊಯ್ದು ಡಂಗುರವ ॥ ೧

ಇದೆ ಮಹಾಧನುಬಾಣಪಂಚಕ
ವಿದೆ ನಭೋಗ್ರದ ಯಂತ್ರಹೊಳೆಯು
ತ್ತಿದೆ ವಿಭಾಡಿಸಿ ಮೆಱೆವನಾವನು ಬಾಹುವಿಕ್ರಮವ ।
ಇದುವೆ ಕಬ್ಬಿನ ಬಿಲು ಶರಾವಳಿ
ಇದು ಕುಸುಮಮಯಯಂತ್ರವಬಲೆಯ
ಹೃದಯವಾತನೆ ರಮಣನಾತಗೆ ಕುಸುಮಶರನೆಂದ ॥ * ೨

---

* ಇದುವೆ ಕಬ್ಬಿನ ಬಿಲು ಶರಾವಳಿ
ಮದನಪಂಚಕಬಾಣ ಕುಸುಮವು
ಇದೆ ನಭೋಗ್ರದ ಯಂತ್ರಭೇದವ ನೋಡಿ ಮತ್ಸ್ಯನನು ।
ಇದು ಮಹಾಧನು ಮದನವೈರಿಯ
ಯದು ಖಟಿಕ ಮಾಯೂಸಕರುಷಣ
ಯಿಂದನು ಸತ್ವದಲಾರು ತೆಗೆದರೆ ಯುವರೆ ವರರೆಂದ, ॥ ಕ. ಖ.

ಇದಕೆ ಸೈರಿಸದೇಟಿ ಬೇಗದ
ಲಿದಕೆ ಬಯಸುವರೇಟಿ ಬೇಗದ
ಲಿದಕೆ ಯರ್ಥಿಪರೇಟಿ ಶೀಘ್ರದಲೆಂದು ನೃಪಸುತೆಯ |
ವಿದಿತದಲ್ಲೀಧನುವನಾರ್ಸ
ತ್ವದಲಿ ತೆಗೆವರೊ ತಂಗಿಗಾತನೆ
ಮುದದೊಳೇ ತಾ ರಮಣನೆನಿಸುವ ಕುಸುಮಶರನೆಂದ || ೩

ಎಂದು ಸಾಱಿಸಿ ಭಾರಿಧನುವನು
ತಂದು ಧರೆಗಿೞುಹಿದರು ಯಂತ್ರವ
ನಂದವಿಟ್ಟರು ಗಗನದಲಿ ಗವಸಣಿಗೆಗಳನುಗಿದು |
ಮುಂದೆ ಕೂರಂಬುಗಳ ಥರಥರ
ದಿಂದ ನಿಲಿಸಿ ಸುಗಂಧದಕ್ಷತೆ
ಯಿಂದ ಪೂಜೆಯ ರಚಿಸಿದರು ವೈದಿಕವಿಧಾನದಲಿ || ೪

ಮಸಗಿದುದು ಬಹುವಾದ್ಯಚಯ ನಿ
ಪ್ಪಸರದಲಿ ನಿಸ್ಸಾಳತತಿ ಗ
ರ್ಜಿಸಿದುವಾವರ್ಜಿಸುವವೊಲು ಘನಯಂತ್ರವೇದಿಗಳ |
ಬಸಗೆಯಾಟವೊ ಬಿಲ್ಲಹೊಯ್ಲಿನ
ಘಸಣೆ[1] ಯಾಟವೊ ಗರುವರಿಗೆ ಗಂ
ಗಸಿಯ ಮಾಡಿತು ಚಾಪವವನೀಪಾಲ ಕೇಳೆಂದ || ೫

ನೆರವಿಯಲಿ ನಾನಾದಿಗಂತದ
ಧರಣಿಪತಿಗಳಹಮ್ಮಿಕೆಯಲು
ಬ್ಬರಿಸಿ ಹೊಕ್ಕರು ಬೇಱೆಬೇಱೊಬ್ಬೊಬ್ಬರುರುವಣಿಸಿ |
ಪರಗಿರಿಗೆ ಹುಲುರಕ್ಕಸರು ಮ
ತ್ಸರಿಸಿದಂತಾಯ್ತೇನನೆಂಬೆನು
ಧರೆಗೆ ಮಿಡುಕದ ಧನು ವಿಭಾಡಿಸಿ ಹೊಯ್ದುದತಿರಥರ[2] || ೬

---

1 ಹಸುವೆ, ಚ. ಠ. 2 ಧರೆಯಬಿಡದೀಧನುವಿಭಾಡಿಸಿಕೆಡಹಿತವನಿಪರ, ಚ. ಟ.

ಹಾರ ಹರಿದುದು ಕರ್ಣಪೂರವ
ಚಾರುಮಣಿಗಳು ಸಡಲಿದುವು
ವೀರನೂಪುರ ನೆಗ್ಗಿದುವು ತಗ್ಗಿದುವು ನೆನೆಹುಗಳು ।
ನಾರಿಯರ ಕೈಹೊಯ್ಲ ನಗೆಯಲಿ
ಹಾರ ಜಡಿದುದು ಮುಸುಕುದಲೆಯ ಮ
ಹೀರಮಣರೊಳಸರಿದು ಸಿಂಹಾಸನವ ಸಾರಿದರು ॥ ೭

ಮಿಡುಕದೀಧನು ನಮ್ರ ಝಾಡಿಸಿ
ಕೆಡಹಿತಿದನಿನ್ನಾರು ಕೊರಳಲಿ
ತೊಡಿಸಿ ತಿರುವನು ಸೆಳೆದು ಬಿಗಿವರೊ ಯಂತ್ರದಲಿ ಶರವ ।
ಕಡುಹಿನಣ್ಣನ ಕಾಂಬೆವೈಸಲೆ
ನುಡಿದು ಮಾಡುವುದೇನೆನುತ ಸಿರಿ
ಮುಡಿಯ ಮುಸುಕಿನ ರಾಯರಿದ್ದರು ಬಯಲ ಡೊಂಬಿನಲಿ ॥ ೮

ಐಸಲೇ ಸೌಭಾಗ್ಯವೆಮಗೆ ಶ
ರಾಸನಾಕರುಷಣದೊಳತಿಡೊ
ಳ್ಳಾಸದಲಿ ಡಾವರಿಸಿ ಗೆಲಿದಳು ದ್ರುಪದಸುತೆ ನೃಪರ ।
ಲೇಸು ತಪ್ಪೇಸಿದಕೆನುತ ಭ
ದ್ರಾಸನವ ನಿಱಿದುಲಿವ ತೊಡರಿನ
ಘೋಷಣೆಯ ಘಱಿಲುಗಳ ಮಗಧನೃಪಾಲನೈತಂದ ॥ ೯

ಬಿಲ್ಲ ಹೊರೆಗೈದಿದನು ಚೌಪಟ
ಮಲ್ಲ ನೋಡಿದನಹುದೆಲೇ ತ
ಪ್ಪಲ್ಲೆನುತ ಮೇಲ್ದಿರುಹಿದನು ಮುಂಗಯ್ಯಸಂಪಳಿಯ ।
ಬಿಲ್ಲನೆತ್ತಿದೊಡಿವನನಂಗನೆ
ಯೊಲ್ಲಳೋ ಮೇಣೊಲಿವಳೋ ಕಡು
ಬಲ್ಲಿದನು ತಾನೀತನೆನುತಿದ್ದುದು ಸಖೀನಿವಹ ॥ ೧೦

ಈತ ಕುಸಿದೆತ್ತಿದೊಡೆ ಧನು ಮೊ
ರಾತುದಿವನೌಕಿದೊಡೆ ಕಾರ್ಮುಕ
ವೀತನಾರೆಂದಱಿಯದಿವನೌಡೊತ್ತಿ ವ್ಯೈಬಲಿದು ।
ಘಾತಿಯಲಿ ಘಲ್ಲಿಸಿದೊಡಾಧನು
ಸೋತುದೆವೆಯಂತರಕೆ ತೆರಳಿಯೆ
ಧಾತುಗುಂದಿನಲಳ್ಳಿಱಿದುವಳ್ಳಿಗಳು ಮಾಗಧನ ॥ ೧೧

ಬೆಮರನಾಱಿಸಿಕೊಂಡು ವಿಗತ
ಶ್ರಮನು ಮೊಳಕಾಲಿಂದ ದಂಡೆಯೊ
ಳಮರಿ ದೇಹವ ಬಲಿದು ವಕ್ಷದೊಳೌಂಕಿ ಗಾಢದಲಿ ।
ಕುಮತಿಯಲ್ಲಾಡದಿರೆ ಬಿಟ್ಟುದು
ಜವೆಯ ಮಾತ್ರದೊಳಿವನ ಭುಜವಿ
ಕ್ರಮವನೊರೆದುದು ಸದೆದುದೀತನಗರ್ವವಿಭ್ರಮವ ॥ ೧೨

ಕೇಳಿದನು ಕಾಂತಾಕದಂಬದ
ಘೋಳು ಘೋಳೆಂದೆಂಬ ನಗೆಗಳ
ಕಾಳುಮಾಡಿದೆನೇಕೆ ಧನು ತಾನೇಕೆ ಸುಡಲೆನುತ ।
ಬೇಳುವೆಯಲುಱಿದಂಕದವ್ರೊಲು
ಬ್ಬಾಳುತನ ವುಬ್ಬರಿಸೆ ಮುಸುಕಿನ
ವಾಳಿ ಹಿಮ್ಮೆಟ್ಟಿದನು ಕಡೆಯುವ ತಿರುಹಿ ಕಿಱಿದೊಡೆಗೆ ॥ ೧೩

ಕೆರಳಿದನು ದಮಘೋಷನಂದನ
ನರರೆ ದಿಟ್ಟನ ಧನು ವಿಭಾಡಿಸಿ
ತೆರಳಿಚಿತಲಾ ವಿಗಡಚಕ್ರಾಯುಧನ ಮಾಗಧನ ।
ಪರಿಬವೆನ್ನದು ಹೊಳ್ಳುಗಳವೆನು
ದುರುಳಧನುವನು ನಗುವಕ್ಕೈನೆಯು
ತುರುಬ [1] ಕೊಯ್ವೆನೆನುತ ಕಲಿ ಶಿಶುಪಾಲನ್ಯೆತಂದ ॥ ೧೪

---

[1] ರುರವ, ಕ, ಖ.

ಇವನಲೇ ರಾವಣನು ಮುನ್ನಿನ
ಭವದೊಳಗೆ ತಪ್ಪಲ್ಲೆನುತ ಜನ
ನಿವಹ ನಡುಗಿತು ಕೋಮಲಾಂಗಿಯ ಪುಣ್ಯವೆಂತೆನುತ ।
ಅವನಿಪತಿ ಕೇವಣದಲೀ ಚಾ
ಪವನು ಬಾರ್ಯೈಸಿದೊಡೆ ಬಲುಹೇ
ಶಿವ ಯೆನುತ ಶಿಶುಪಾಲ ಸಂವರಿಸಿದನು ಮುಂಜೆಱಗ ॥ ೧೫

ಏನನೆಂಬೆನು ಧನು ಸುಗಾಢದ
ಮಾನಭಂಗದ ಮೊದಲ ಮನೆ ಯೊ
ಮಾನಿನಿಯುರಪಹಾಸ್ಯವೀಜನವೀನೃಪಾಲಕರು * ।
ಆನಲಾರರದುಬ್ಬಿಯನು ಸಹ
ಮಾನ ಸಾಹಸಿ ಹೀನಬಲನಿವ
ನೇನ ಮಾಡಲಿ ಹೊಯ್ದು ದಿವಸನು ನಿಮಿಷಮಾತ್ರದಲಿ * ॥ ೧೬

ಮೀಱಿತೀ ಧನುವೇನ ಮಾಡಿದೊ
ಡೋರಣಿಸಿ ಶಿಶುಪಾಲಭೂಮಿಪ
ನಾರುಭಟೆಯುಲ್ಲಿಱಿದು ಹೋಯಿತು ಧನುವಿನುಬ್ಬಟೆಗೆ ।
ಚೀಱಿ ಚಾಪವನೊತ್ತುತೆತ್ತಲು
ಕಾಱಿಸಿತು ರಕ್ತವನು ಕೆಡಹಿತು
ನಾರಿಯುರು ಘೋಳನಲು ಬಿಟ್ಟನು ಮನದ ಸತ್ವವನು ॥ ೧೭

ಕಂಡು ಮಾಗಧನೆಂದನೀಧನು
ಚಂಡಿ ಯಿದು ನಮಗಲ್ಲ ನಾವ್ ಮುಂ
ಕೊಂಡು ತಪ್ಪಿತು ನೊಪ್ಪಿತಾದುದು ಭಾರಿಯಗ್ಗಳಿಕೆ ।
ಭಂಡರೀಭೂಮಿಪರು ದ್ರುಪದನ
ದಿಂಡದೊತ್ತಿರು ನಗೆಯನಾನಲಿ
ಮಂಡೆಗಳಲೆನುತಿವರು ಹಾಯ್ದರು ತಮ್ಮ ಪಟ್ಟಣಕೆ ॥ ೧೮

* ನೃಪಾಲಕರ । ಹೀನನುಡಿಗಳಕಂಡುದೈತ್ಯಸ ॥ ಮಾನವಮನದಲಿನೊಂದು ತಿರುಗಿದ । ನೇನನೆಂಬೆನುಸದೆದುದಾತನಗರ್ವವಿಭ್ರಮವ ॥ ಚ.

ಗರುವರಲ್ಲಾ ಚೈದ್ಯಮಾಗಧ
ರಿರದೆ ತಮ್ಮಯ ಪುರಕೆ ಗಮಿಸಿದ
ರರಸುಗಳ ಮಿಕ್ಕವರ ವಿಧಿಯನು ಕೇಳ್ ಮಹೀಪತಿಯೆ |
ಧರಧುರದೊಳಭಿಮಾನಹಾನಿಯ
ಹುರುಳಹುದು ಬಿಲುಹೋರಟೆಗೆ ನಿಲ
ಲರಿದೆನುತ್ತಂಘವಣೆಗುಂದಿತು ಸಕಲನೃಪನಿಕರ || ೧೯

ದುರುಳ ಪಾಂಚಾಲನ ಕುಮಾರಿಯ
ವರಕಟಾಕ್ಷದ ಬೀಸುವಲೆಯಲಿ
ಶರಮಹಾಧನುವೆಂಬ ಬಲುಬಡಿವಲೆಯನಳವಡಿಸಿ |
ಧರಣಿಪಾಲಮೃಗಂಗಳನು ಸಲೆ
ಬರಿಸಿ ಸದೆದನು ಹೊಲ್ಲೆಯೇನಂ
ತಿರಲಿ ನೋಡುವೆನೆನುತ ಶಲ್ಯನೃಪಾಲ ನಡೆತಂದ || ೨೦

ಅಗ್ಗಳೆಯ ನಾಮಗಧ ಮಾತಿನ
ಲಗ್ಗಗನು ಶಿಶುಪಾಲ ಸೋಲಿದ
ಸುಗ್ಗಿಯಿಬ್ಬರಿಗಾಯ್ತು ಹಲಬರಿಗಾಯ್ತು ರಣಧೂಳಿ |
ತಗ್ಗುವುದೊ ಧನು ಧನುವಿಘಾತಿಗೆ
ಮುಗ್ಗುವನೊ ಮದ್ರೇಶನಿದಱೊಳ
ಗಗ್ಗಳೆಯನಹನೆನುತ ನೋಡಿದರಂದು ನಾರಿಯರು || ೨೧

ಬಂದನೀತನು ಧನುವ ಸಾರಿಯೆ
ನಿಂದು ಸಂವರಿಸಿದನು ಕಾಂತಾ
ವೃಂದವನು ನೋಡಿದನು ಮನದಲಿ ಧಿಕ್ಕುಧಿಗಿಲೆನುತ |
ಸಂದಣಿಯ ಕೆಲಕೊತ್ತಿ ಘಣಿಯಲಿ
ಮಂದರವ ಬಿಗಿವಂತೆ ಭುಜದಲಿ
ಮುಂದು ಪರಿದೌಕಿದನು ವಕ್ಷದೊಳವಚಿ ಗಾಢದಲಿ || ೨೨

---

1 ಪೈಸರಿಸ ಮುಸುಕಿನ, ಚ. 2 ಕುರುಬ, ಚ. 3 ನಭಕೊತ್ತಿ, ಚ.

ಕೊಳ್ಳದೀಧನುವೀತನುಬ್ಬಿನೊ
ಳಳ್ಳ ಗೊಬ್ಬಿನೊಳಾಂಕಿ ತೊಡರಿನ
ಘಲ್ಲಣೆಯ ಘರಿಕೆಂದು ದಂಡಿಸಿ ನಿಮಿಷಮಾತ್ರದಲಿ ।
ಬಿಲ್ಲ ಬಿಡದವನಿಯಲಿ ಬಿದ್ದನು
ಡೊಳ್ಳು ಮೇಲಾಗಿತ್ತು ಸಖಿಯರು
ಘೋಳೆನಲು ಸುಡು ಘೋರಧನುವೆನುತೀತ ಹಿಂದೆಗೆದ ॥ ೧೩

ಮೆಲ್ಲ ಮೆಲ್ಲನೆ ಯೆದ್ದು ಹಿಂದಕೆ
ತಳ್ಳಿದನು ತಲೆವಡೆದು ಶಲ್ಯನು
ಬಿಲ್ಲುಮಾಡಿದ ಪರಿಯ ನೋಡಿರೆ ಯೆನುತ ಬೆರಗಾಗಿ ॥
ಎಳ್ಳನಿತು ನೆಱೆ ಮಿಡುಕದೀತಗೆ
ಬಳ್ಳಿದನು ಮದ್ರೇಶನೊಬ್ಬನೆ
ಬಿಲ್ಲು ತಾನದು ಕೇಳು ಜನಮೇಜಯಮಹೀಪಾಲ ॥ ೧೪

ಹಿಂಗಿದನು ಮದ್ರೇಶನೀಧನು
ಭಂಗಪಡಿಸಿತು ಮಾನ್ಯರನು ಜಡ
ಜಂಗಮಾತ್ಮರಲೇನಹುದು ಝೊಂಪಿಸಿದುದೀಜಗವೆ ।

ಕರ್ಣನು ಧನುಸ್ಸನ್ನು ಪೂರ್ಣಮಾಡಲು ಆಗದೇ ಸುಮ್ಮನಿರುವಿಕೆ.

ಅಂಗನಾಪಾಣಿಗ್ರಹಣ ರಾ
ಯಂಗೆ ತಾನೀ ದೃಷ್ಟ ಧನುವನು
ಭಂಗಪಡಿಸಿಯೆ ಬಿಡುವೆನೆನುತೈತಂದನಾಕರ್ಣ ॥ ೧೫

ಈತನರ್ಜುನನಲ್ಲವೇ ರೂ
ಪಾತಿಶಯವುಳ್ಳಾತ ಯಂತ್ರವ
ನೀತ ಗೆಲಿದೊಡೆ ಪುಣ್ಯವೈಸಲೆ ತಂಗಿಗನುಸಾರಿ ।
ಈತ ವರನಹುದೆನುತ ಲಲನಾ
ಜಾತ ವೀತನನೀಕ್ಷಿಸುತ ಸಂ
ಪ್ರೀತಿಯಲಿ ನೋಡುತ್ತಲಿರ್ದುದು ಭೂಪ ಕೇಳೆಂದ ॥ ೧೬

ತುಡುಕಿದನು ಚಾಪವನು ಮಹಿಯಿಂ
ಮಿಡುಕದಿರೆ ಮಂಡಳಿಸಿ ಝೂಡಿಸಿ
ಜಡಿದು ಜಱಿದೆತ್ತಿದನು ದಂಡೆಯನಿಕ್ಕಿ ಕೊಪ್ಪಿನಲಿ [1] ।
ಹೊಡಕರಿಸಿ ಸತ್ವಾತಿಶಯವಿಂ
ಮಡಿಸಿ ಸರ್ಷಪಮಾತ್ರ ತಿರುವನು
ತೊಡಿಸಲಾರದೆ ಹಿಂಗಿ ಮೌನದೊಳಿರ್ದನಾಕರ್ಣ ॥ ೨೭

ದುರ್ಯೋಧನನು ಧನುಸ್ಸನ್ನು ನೋಡಿ ಹಿಂತಿರುಗುವಿಕೆ.

ಬಳಿಕ ದುರ್ಯೋಧನನು ತನ್ನಯ
ಬಲುಹಿಗೂಣೆಯವೆನುತ ಗರ್ಜಿಸಿ
ಯುಲಿದು ನಡೆದನು ಬಹಳಕೋಪದಿ ಧನುವದಿದ್ದೆಡೆಗೆ ।
ಘಟಿಲನೇ ತಾನ್ಯದಿ ನೋಡಿದ
ನಳವಹುದೆ ನಮಗೆನುತ ಮೆಲ್ಲನೆ
ತಿಳಿದು ತನ್ನೊಳು ತಾನೆ ತಿರುಗಿದ ಸಿಂಹವಿಷ್ಟರಕೆ ॥ ೨೮

ಇವರು ನಾಲ್ವರಿಗೊಂದೆ ಪಥ ಹಲ
ರವಗಡಿಸಿ ಮುನ್ನಳುಕಿದರು ಭೂ
ಭುವನಪತಿಗಳು ಭಾರಿ ಧನುವಿದೆ ಮಾನಿನಿಯು ಮುಂದೆ ।
ಎವಗೆ ತಮಗಿದು ವಶವೆ ಬಾವ
ನ್ನವನು ವೇಷ್ಟಿಸಿ ಭುಜಗವಿದೆ ಯೆಂ
ದವನಿಪರು ಹೊರೆಗುಂದಿದರು ಪಡಿಮುಖದ ದುಗುಡದಲಿ ॥ ೨೯

ಬಲರಾಮನ ಪ್ರಯತ್ನ.

ಕ್ಷಿತಿಪ ಕೇಳ್ಳೈ ವಿಗಡಚಾಪ
ವ್ಯತಿಕರಕೆ ದುರ್ಯೋಧನಾದಿ
ಕ್ಷಿತಿಪತಿಗಳಂಜಿದುದ ಕಂಡನು ನಗುತ ಬಲರಾಮ ।

---

1 ಕೋಪದಲಿ, ಚ.

ಕೃತಕಧನುವನು ಮುಱಿದು ದ್ರುಪದನ
ಸುತೆಯು ಮುಂದಲೆವಿಡಿದು ತಹೆನು
ದ್ಧತನಲಾ ಪಾಂಚಾಲನೇನು ತಿಳಿದ ಶರಾಸನವ ॥ ೩೦

ಹಲಧರನ ಮಸ್ತಕವ ಕಂಡನು
ನಳಿನನಾಭನಿದೇನು ಪೀತವ
ನಿಱಿದಿರೆಲ್ಲಿಗೆ ಗಮನವಾವುದು ಕಾರ್ಯಗತಿ ನಿಮಗೆ ।
ತಿಳುಹಿ ಯೆನೆ ಬೇಱೇನು ಯಂತ್ರವ
ಕಳಚಿ ಬಿಸುಟು ಲತಾಂಗಿಯನು ಹಿಡಿ
ದೆಳದು ತಹೆನೆನಲ್ಕೆಸಲೇ ಕೇಳೆಂದನಸುರಾರಿ ॥ ೩೧

ಬಲರಾಮನಿಗೆ ನೀನು ಸುಮ್ಮನಿರೆಂದು ಕೃಷ್ಣನ ವಚನ.

ಏನಹರು ನಿಮಗಿಂದು ಕುಂತೀ
ಮಾನಿನಿಯರತ್ತೆಯರಲೇ ತ
ತ್ಸೂನುಗಳು ಮೈದುನರು ತತ್ಪತ್ನಿಯರು ತಂಗಿಯರು ।
ಸಾನುರಾಗವೆ ಮತ್ತೆ ಸಂಶಯ
ವೇನಿದಕೆ ತಪ್ಪಲ್ಲ ಕುಂತೀ
ಸೂನುಗಳು ದ್ರೌಪದಿಗೆ ರಮಣರು ನೋಡಿ ನೀವೆಂದ ॥ ೩೨

ಮೂಗಿನಲಿ ಬೆರಳಿಟ್ಟು ಮಕುಟವ
ತೂಗಿದನು ಬಲರಾಮನವನಿಯು
ನೀಗಿ ಹೋದರ ಮಾತು ಪಾಂಡವರೆತ್ತಲಿವಳೆತ್ತ ।
ಬೇಗುದಿಯಲುರಿಯರಗಿನೊಳಗೊಂ
ದಾಗಿ ಬೆಂದರು ಲೋಕವೆಱಿಯೆ ಪ
ರಾಗವಿಕ ನಿಮಗಂಜುವೆವು ನಾವೆಂದನಾರಾಮ ॥ ೩೩

ಕ್ಷಿತಿಯೊಳವರಿಲ್ಲೆಂದು ದ್ರುಪದನ
ಸುತೆಗೆ ಪತಿ ಪರರೆಂದು ಯಂತ್ರ
ಚ್ಯುತಿಗೆ ಬೇಱುಂಟೆಂದು ತೋಱಿತೆ ನಿಮ್ಮ ಚಿತ್ತದಲಿ ।

ಕ್ಷಿತಿಗೆ ಪಾಂಡವರುಂಟು ದ್ರುಪದನ
ಸುತೆಗೆ ಪತಿ ಪರರಲ್ಲ ಕುಂತೀ
ಸುತರನೀಗಳ ತೋಱುವೆನು ವಸುದೇವನಾಣೆಂದ ‖ ೩೪

ಈ ವರ್ತಮಾನದಿಂದ ಬಲರಾಮನ ಸಂತೋಷ.

ಇದು ವಿಚಿತ್ರವಲಾ ಗತಾಸುಗ
ಳುದಿಸಿದೊಡೆ ಲೇಸ್ಸೈಸಲೇ ದ್ರೌ
ಪದಿಯುನವರನುರಾಗಿಸಲಿ ಭೋಗಿಸಲಿ ಭೂತಳವ ।
ಇದುವೆ ನಿಶ್ಚಯವಾದೊಡವರ
ಭ್ಯುದಯುವೆಮ್ಮಭ್ಯುದಯು ವೇನೆಂ [1]
ಬುದು ಮಹಾದೇವೆಂದು ತಲೆದೂಗಿದನು ಬಲರಾಮ [2] ‖ ೩೫

ಈಕೆಯುನು ಮೆಚ್ಚಿಸದು ರಾಜಾ
ನೀಕ ಸೌಂದರ್ಯದಲಿ ಚಾಪ
ವ್ಯಾಕರಣಪಾಂಡಿತ್ಯರೆಂಬರ ಕಾಣೆ ನಾನಿನ್ನು ।
ಈಕೆಗಿನ್ನಾರೊಡೆಯರೋ ಕುಂ
ತೀಕುಮಾರಕರಿಲ್ಲಲಾ ಸುಡ
ಲೇಕೆ ನೆರಹಿದೆ ನಿವರನೆನುತಾ ದ್ರುಪದ ಚಿಂತಿಸಿದ ‖ ೩೬

ತಾತ ಚಿಂತಿಸ ಬೇಡ ನಿಮ್ಮಾ
ತಾತ ಶಂಕರ ಕೊಟ್ಟನಿರುತದ
ಮಾತು ಬಱಿದೊರೆಯಾಗದೆನುತಲೆ ತಂದೆಗಿದಿರಾಗಿ ।

ಧೃಷ್ಟದ್ಯುಮ್ನನ ಚಿಂತೆ.

ಸೋತರೀನ್ನೃಪರೆಲ್ಲ ತಂಗಿಗೆ
ಭೂತಳೇಶ್ವರರೊಬ್ಬರೂ ವರ
ಜಾತವಾಗರು ನೋಡಿ ನಮ್ಮಯು ಮಖಜೆಗಕಟೆಂದ ‖ ೩೭

1 ವೆಂದಾ, ಚ ಠ.

2 ಪದುಮನಾಭನ ಹೊಗಟಿಕುಳ್ಳಿದ್ದನು ಸರಾಗವಲಿ, ಚ, ಟ.

ಹರಹರಾ ಇನ್ನಾರು ತಂಗಿಗೆ
ವರರು ವಾರಿಧಿವಳಯದವನೀ
ಶ್ವರರು ನೆರೆದರು ರೂಪುವಿಕ್ರಮವೆರಡುಹೊಲಿತಾಗಿ ।
ನರಪತಿಗಳಂಚಿಯಲ್ಕೆ ಲೇಸಿ
ನ್ನರಸಲಾವ್ರದು ಹದನೆನುತ ವಿ
ಸ್ತರದ ಗುಜುಗುಜು ಮಸಗಿದುದು ಕಾಂತಾಕದಂಬದಲಿ ॥ ೩೮

ಧನುಸ್ಸನ್ನು ಪೂರ್ಣವಾಡಲು ಬ್ರಾಹ್ಮಣರನ್ನು ಕರೆಯುವಿಕೆ.

ಅವನಿಪತಿಗಳು ಹೊಳ್ಳುವಾಙದ
ರಿವರೊಳಲ್ಲವೆ ದಕ್ಷಿಣೆಯು ಹಾ
ರುವ ಮಹಾಜನವಿದೆ ಸಮುದ್ರಕೆ ಪಡಿ ಸಮುದ್ರವೆನೆ ।
ಇವರೊಳಗೆ ಮುಂಗಯ್ಯ ಬಲುಹು
ಳ್ಳವರು ನೆಗಹಲಿ ಧನುವನೀಯುಂ
ತ್ರವನು ಸಾಧಿಪುದೆಂದು ಧೃಷ್ಟದ್ಯುಮ್ನ ಸಾಱಿಸಿದ ॥ ೩೯

ಸಾಱಿಸುವ ಡಂಗುರವನಾಗಳು
ವೀರಧೃಷ್ಟದ್ಯುಮ್ನತಂಗಿಯು
ನಾರು ಸೋಲಿಸುವವರು ತಾವಾರಿಲ್ಲ ನೃಪರೊಳಗೆ ।
ಭೂರಿವಿಪ್ರರ ಮಧ್ಯದಲ್ಲಿ
ನ್ನಾರದುಂಟೆಂದೆನುತ ಮನದಲಿ
ಹಾರವಿಸಿ ಶ್ರೀಕಂಠವರವಿದು ಸಿದ್ಧಿಸುವುದೆಂದ ॥ ೪೦

ಮೂವತ್ತನೆಯ ಸಂಧಿ ಮುಗಿದುದು.

ಮೂವತ್ತೊಂದನೆಯ ಸಂಧಿ.

ಸೂಚನೆ.

ರಾಯಸಭೆ ನಗಲ್ಕೈದೆ ಯಂತ್ರದ
ದಾಯವನು ನೆಱೆ ಗೆಲಿದು ನಿರ್ಜರ
ರಾಯನಂದನ ಕಾದಿ ಗೆಲಿದನು ಸಕಲಭೂಮಿಪರ ||

ಬ್ರಾಹ್ಮಣರ ಆಲೋಚನೆ.

ಕೇಳು ಜನಮೇಜಯಧರಿತ್ರೀ
ಪಾಲ ಪಾಂಚಾಲೆಯ ಮನೋರಥ
ಶಾಲೆಯಲಿ ಸಾಱಿದರಲ್ಕೆ ಸಭೆಯಲಿ ಮಹೀಸುರರು |
ಏಱೆ ಭುಜಬಲವುಳ್ಳವರು ವಿ
ಪ್ರಾಳಿಯಲಿ ಬಿಲುವಿಡಿದು ಯಂತ್ರದ
ಕೋಲುಗಳ ಕೇವಣಿಪುದೆಂದರು ಹೊಯ್ದು ಡಂಗುರವ || ೧

ಬೆರಸುವರು ಪಾರ್ಥಿವರು ಪಾರ್ಥಿವ
ವರರೊಡನೆ ತದಲಾಭಪಕ್ಷಾಂ
ತರಕೆ ಪಾರ್ಥಿವಸುತೆಯನೀವುದು ವಿಪ್ರಜಾತಿಯಲಿ |
ಪುರುಷರನುಲೋಮದಲಿ ಕನ್ಯಾ
ವರಣವೆಹುದು ವಿಲೋಮದಲಿ ವಿ
ಸ್ತರಿಸಲೇಕಿದ ನೀವು ಬಲ್ಲಿರಿ ಧರ್ಮ[1] ನಿರ್ಣಯವ || ೨

ಎಂದು ಸಾಱಿದ ನುಡಿಯ ನಾದ್ವಿಜ
ವೃಂದವಾಲಿಸಿ ನಮಗಿದೇಕರ
ವಿಂದನಯನೆಯ ತೊಡಕು ತೆಗೆ ನಾವಾರು ಧನುವಾರು |

---

1 ಶಾಸ್ತ್ರ, ಖ.

ಬಂದ ದಕ್ಷಿಣೆ ಮೃಷ್ಟಭೋಜನ
ದಿಂದ ತೃಪ್ತರು ನಾವು ನಮಗಿದ
ಱಿಂದ ಬಹುದಪಕೀರ್ತಿ ಕರವೆಂದುದು ಬುಧಸ್ತೋಮ ॥ ೩

ಬ್ರಾಹ್ಮಣರು ತಮ್ಮ ಸಾಮರ್ಥ್ಯವನ್ನು ಹೊಗಳಿಕೊಳ್ಳುವಿಕೆ.

ವಚನಶೂರರು ನಾವು ಪಾರ್ಥಿವ
ನಿಚಯವೇ ಭುಜಶೂರರನಿಬರ
ನಚಲಧನು ಭಂಗಿಸಿತು ನಮಗೀವಿದ್ಯೆ ವೈದಿಕವೆ ।
ಉಚಿತವಲ್ಲಿದು ನಮ್ಮ ಸಾಹಸ
ರಚನೆಯನು ನೋಡುವೊಡೆ ಪಂಡಿತ
ನಿಚಯವಿದಿರಲಿ ನಿಲಲಿ ನೋಡುವೆವಲ್ಲಿ ವಿಸ್ಮಯವ ॥ ೪

ಸಾಂಗವೇದಪದಕ್ರಮದಿ ಸ
ರ್ವಾಂಗನಿಚಯದಿ ನಿಖಿಳಪುರಾ
ಣಂಗಳಲಿ ಮೀಮಾಂಸೆಯಲಿ ಸ್ಮೃತಿತರ್ಕಶಾಸ್ತ್ರದಲಿ ।
ಭಂಗಿಸುವೆ ವಿಜಯಿಸುವೆ ಬಹುವಾ
ದಂಗಳಲಿ ವಾತ್ಸ್ಯಾಯನಾದಿಯು
ಪಾಂಗವಿದ್ಯೆಯಲೆಮ್ಮ ನೋಡೆಂದುದು ಬುಧಸ್ತೋಮ ॥ ೫

ಭರತದಲಿ ವೈದ್ಯದಲಿ ಕಾವ್ಯಸು
ವಿರಚಿತಾಲಂಕಾರದಲಿ ಕರಿ
ತುರಗಲಕ್ಷಣದಲಿ ಸಮಾಹಿತಮಂತ್ರಶಾಸ್ತ್ರ[1]ದಲಿ ।
ಸರಸಕವಿತಾರಚನೆಯಲಿ ವಿ
ಸ್ತರದುಪನ್ಯಾಸದಲಿ ಭೂಪತಿ
ಕರೆಸಿ ನೋಡಲಿ ನಮ್ಮನೆಂದುದು ಭೂಸುರವ್ರಾತ[2] ॥ ೬

ಅಲ್ಲದಿದ್ದೊಡೆ ಶೋಧಿಸಿದ ತನಿ
ಬೆಲ್ಲವಿಕ್ಕಿದ ಹೂರಿಗೆಯ ಬೆದೆ

1 ತಂತ್ರ, ಚ. ಠ. 2 ದ್ವಿಜರು ತಮತಮಗೆ, ಚ. ಠ.

ಯಲ್ಲಿ ಪರಡಿಗಳು ಸೇವಿಗೆಯು ಪರಿಪರಿಯು ಪಾಯಸದ ।
ಪುಲ್ಲಿಗೆಯು ತತ್ಸರಿಯು ಮಂಡಿಗೆ
ಯಲ್ಲಿ ನವಘೃತಸೂಪದಂಶಕ
ದಲ್ಲಿ ನೋಡಲಿ ನಮ್ಮನೆಂದುದು ಭೂಸುರವ್ರಾತ ॥ ೭

ಹೂರಿಗೆಯು ಗಾರಿಗೆಯುಲಾಯಂ
ಣೂರಿಗೆಯು ಲಡ್ಡುಗೆಯು ತುಪ್ಪದ
ತೋರಹಾಲುಂಡೆಗಳ ಯೆಳ್ಳುಂಡಿಗೆಯು ಕೆನೆವೊಸರ ।
ಚಾರುಶಾಕಾವಳಿಯುಲಾವಿ
ಸ್ತಾರ ಭಕ್ಷ್ಯಾವಳಿಯು ಪಾಕದೊ
ಳೋರೆ ಹುಸಿಯುಂಟೆಂಬ ಯಂತ್ರವ ಕಳಚಬಲುಹುಂಟು ॥ ೮

ಆಗ ಅರ್ಜುನನು ಸಭೆಯಲ್ಲಿ ನಿಲ್ಲುವಿಕೆ.

ರಸದ ಹೊಚಲೇಪದಲಿ ಹುದುಗಿದ
ಮಿಸುನಿಯಂತಿರೆ ಜೀವಭಾವ
ಪ್ರಸರದೊಳಗವಲಂಬಿಸಿದ ಪರಮಾತ್ಮನಂದದಲಿ ।
ಎಸೆವ ವಿಪ್ರಾಕಾರದಲಿ ರಂ
ಜಿಸುವ ಭೂಪತಿ ತತ್ಸಭಾಸದ
ವಿಸರಮಧ್ಯದಲಿದ್ದು ಕೇಳಿದ ನೀಮಹಾಧ್ವನಿಯು ॥ ೯

ನೋಡಿದನು ತಮ್ಮನನು ಸನ್ನೆಯ
ಮಾಡಿದೊಡೆ ಕೈಕೊಂಡನವನಿಪ
ಕೂಡಿ ಕುಂತಿಗೆ ಭೀಮಸೇನಂಗೆಱಗಿ ವಿನಯದಲಿ ।
ಕೂಡೆ ಕುಳ್ಳಿರ್ದಖಿಳವಿಪ್ರರ
ನೋಡಿ ಮೆಲ್ಲನೆ ಧೋತ್ರದರ್ಭೆಯ
ಗೂಡಸಂವರಿಸುತ್ತ ಸಭೆಯಲಿ ನಿಂದನಾಪಾರ್ಥ ॥ ೧೦

ಆಗ ಬ್ರಾಹ್ಮಣರ ಬುದ್ಧಿವಾದ.

ಏನು ಸುದ್ದಿಯುಪಾಧ್ಯರೆದ್ದಿರಿ
ದೇನು ಧನುವಿಂಗಲ್ಲಲೇ ತಾ
ನೇನು ಮನದಂಘವಣೆ ಬಯಸಿದಿರೇ ನಿತಂಬಿನಿಯ |
ವೈನತೇಯನವಗಡಿಸಿದ ವಿಷ
ವೇನು ಸದರವೊ ಹಾವಡಿಗರಿಗಿ
ದೇನು ನಿಮ್ಮುತ್ಸಾಹವೆಂದುದು ವಿಪ್ರಜನ ನಗುತ[1] ‖ ೧೧

ಮದುವೆ ಬೇಕೇ ಶ್ರೋತ್ರಿಯಸ್ತೋ
ಮದಲಿ ಕನ್ಯಾರ್ಥಿಗಳು ನಾವೆಂ
ಬುದು ನಿಜಾನ್ವಯವಿದ್ಯೆಯಲಿ ಕೊಡುವುದು ಪರೀಕ್ಷೆಗಳ |
ಮದುವೆಯುಹುದಿದು ಸೌಖ್ಯಪುಣ್ಯ
ಪ್ರದವು ಭೂದೇವರಿಗೆ ನೀವು ನೆ
ನೆದುದು ಭಗೀರಥಯತ್ನವೆಂದುದು ವಿಪ್ರಜನ ನಗುತ ‖ ೧೨

ನೀವು ಸೈರಿಸಿ ನಿಮ್ಮ ಕಾರು
ಣ್ಯಾವಲೋಕನವುಂಟಲೇ ಸ
ದ್ಭಾವದಲಿ ನೀವ್ ರಚಿಸಿದಾಶೀರ್ವಾದಶಕ್ತಿಯಲಿ |
ನಾವು ವಿಜಯರು ಚಾಪಯಂತ್ರವಿ
ದಾವ ಘನವೆಂಬರ್ಜುನನ ಸಂ
ಭಾವನೋಕ್ತಿಗೆ ನಿಲ್ಲದವರೊದಱಿದರು ತಮತಮಗೆ ‖ ೧೩

ವಿಪ್ರರ ಆಕ್ಷೇಪ ವಚನಗಳು.

ಕ್ರಮಿತರವಧರಿಸಿದಿರೆ ಶುದ್ಧ
ಭ್ರಮಿತಮೂಲನ ಹಿರಿಯ ವಿಷ್ಣು
ಕ್ರಮಿತರೇ ದೀಕ್ಷಿತರೆ ಧನುವಿಗೆ ಯತ್ನಮಾಡಿದಿರೆ |

1 ಧೂರ್ತವಟುನಿಕರ, ಚ. ಠ.

ಕ್ಷಮವಿ ತಾನೀಕ್ಷತ್ರಿಯರ ನಾ
ಕ್ರಮಿಸುವುದು ತದ್ಧರ್ಮವೀಸು
ಭ್ರಮಿ ಯಿವನು ನೆಱೆ ಹೞವ ತಹನೀಶ್ರೋತ್ರಿಯರ ಕುಲಕೆ ॥೧೪

ಕೆಲರು ಹೋಗದಿರೆಂದು ಜಱೆದರು
ಕೆಲರು ತಾನೇ ಬಲ್ಲನೆಂದರು
ಕೆಲರು ನುಡಿದರು ವಿಪ್ರಸಭೆಗಪಹಾಸ್ಯವಾಯ್ತೆನುತ ।

ಆಗ ಕೆಲವರ ಅನುಮತಿ.

ಕೆಲರು ತಪ್ಪೇನೆಂದು ಕಳೆದರು
ಕೆಲರು ಭದ್ರಾಕಾರಗೀತಂ
ಗಳುಕುವುದು ಧನು ಭಾಗ್ಯಮುಖಗೆಂದುದು ಬುಧಸ್ತೋಮ॥ ೧೫

ತೊಟ್ಟ ಹೊಸವುಪವೀತ ಧಟ್ಟಿಯು
ಮಟ್ಟ ನೊಸಲಲಿ ಕುಶೆಯು ಕರಡಿಗೆ
ಕಟ್ಟಿಯಿರಿಕಿದ ಕಕ್ಷೆ ಬೆರಳಲಿ ಮುಱಿದ ದರ್ಭೆಗಳ ।
ಉಟ್ಟ ಭೂಸುರ ಬೞಲಗಚ್ಚೆಯು
ಲಟ್ಟ ಹಾಸದ ಜನರ ನಗೆಗಳ
ನಟ್ಟವಿಗನೋಸರಿಸಿ ಸಭೆಯಲಿ ಮೆಲ್ಲನೈತಂದ ॥ ೧೬

ತಿರುಗಿ ಕಂಡರು ಸಕಲಭೂಮೀ
ಶ್ವರರು ಗಹಗಹಿಸಿದರಿದೇನರೆ
ಮರಳೊ ಜಡನೋ ವಿಪ್ರವೇಷಚ್ಛನ್ನ ಸುರಪತಿಯೊ ।
ಮರುಳುಗಳು ತಾವೆಕಟ ಮದನನ
ಸರಳ ಮಱುಮೊನೆಗಾವನಂತಃ
ಕರಣ ನೆಱೆ ಕಳವಳಿಸದೆಂದರು ನೃಪರು ತಮತಮಗೆ ॥ ೧೭

ಧನು ತನಗೆ ನೆಗಹಲ್ಕೆ ಕೃಷ್ಣಾ
ಜಿನವೊ ಸಾಲಿಗ್ರಾಮದೇವರೊ
ವಿನುತತುಲಸಿಯೊ ಕುಶೆಯೊ ದರ್ಭೆಯೊ ಸಮಿಧೆಗಳ ಹೊಱೆಯೊ।

ನೆನೆದ ತಿಲವ್ರೋ ಮೋಣಿದೌಷಾ
ಸನವ ಕೊಳವಿಯೊ ಬಣಗುವಿಪ್ರನ
ಸನಹ ನೋಡಿರೆ ಘನವಲಾ ದ್ರೌಪದಿಯ ಸೌಭಾಗ್ಯ ॥ ೧೮

ಅಂಗವಿದು ಗಜತುರಗಶಸ್ತ್ರಾ
ಸ್ತ್ರಂಗಳುಚಿತವು ನಮಗೆ ವಿಪ್ರರಿ
ಗಂಗವೇದಪುರಾಣತರ್ಕಸ್ಮೃತಿಸುವಿದ್ಯೆಗಳು ।
ಅಂಗವಂಗಿಗಸಾಧ್ಯವಾದುದ
ನಂಗಿಗೊಡಬಡುವುದೇ ದ್ವಿಜಾತರ
ಸಂಗತಾನುಷ್ಠಾನಪರರೆಂದುದು ನೃಪವ್ರಾತ ॥ ೧೯

ಲಹರಿ ಮಸಗಿದುದಿತ್ತ ಕಾಂತಾ
ಬಹಳಪಾರಾವಾರಹುಬ್ಬಿನ
ವಿಹತಿಗಳ ತೆರೆ ಮಾಲೆಗಳ ಬೆಳುನೊರೆಯ ಬುದಬುದದ ।
ಗಹಗಹಿಸಿ ನಗುವಟ್ಟಹಾಸದ
ರಮಣಿಗಳ ರಭಸದ ವಿಡಂಬದ
ವಿಹರಣದ ಚಲದೃಷ್ಟಿಗಳ ಮಚ್ಛಮೀನ ಹೊಳಹುಗಳ ॥ ೨೦

ವಿಪ್ರರ ಗುಂಪಿನಿಂದ ಅರ್ಜುನನು ಏಳಲು ಜನಗಳ ಅಪಹಾಸ.

ಇತ್ತ ನೋಡೌ ತಾಯೆ ಹಾರುವ
ರತ್ತ ಗಡ್ಡದುಪಾಧ್ಯರನು ತಾ
ವೆತ್ತುವರು ಗಡ ಧನುವನೆಸೆವರು ಗಡ ತಿಮಿಂಗಿಳನ ।
ಹೊತ್ತುಗಳವರೆ ಲೇಸು ಬಳಿಕಿ
ನ್ನುತ್ತಮವಲಾ ವಿಪ್ರರೆನೆ ತಲೆ
ಗುತ್ತಿ ನಾಚಿದಳುಂಗುಟದಲೌಂಕುತ ಮಹೀತಳವ ॥ ೨೧

ಎಲವೊ ಮಟ್ಟಿಯ ಮದನ ದರ್ಭೆಯ
ತಿಲದ ಮನ್ಮಥ ವಿಮಳಧೋತ್ರದ
ತಳಿರುಗಾಸೆಯ ಕಾಮ ಕೃಷ್ಣಾಜಿನದ ಕಂದರ್ಪ ।

ನಳಿನಮುಖಿಯನು ವರಿಸು ಬಾ ನಿನ
ಗಳವಡುವಳೇ ಯಕ್ಷ ಮರಳಿಯೆ[1]
ತಲೆವಿಡಿವೆವಾವ್ ನೋಡಿ ಯೆಂದರು ನಗುತ ಚಪಳೆಯರು ‖ ೨೨

ಅದರೊಳಗೆ ಕೆಲರೆಂದರಾಗಳು
ವಿದಿತಹಾಸ್ಯವಿದೇಕೆ ಆರಂ
ಗದಲಿದಾರುವೆ ಬಲ್ಲಿದರೊ ಘನಗುಪ್ತವೇಷಿಗಳು ।
ಬುಧರೊಳಗೆ ಬಂದಿಹರೊ ವೇಷದೊ
ಳಿವಱನುವ ಮುರವೈರಿ ಬಲ್ಲನು
ಇದು ನಿದಾನವೆನಲ್ಕೆ ಯಾದವಪಡೆಯೊಳಗೆ ಹರಿಯು ‖ ೨೩

ಕೃಷ್ಣನು ಬಲರಾಮನಿಗೆ ಅರ್ಜುನನನ್ನು ತೋರಿಸುವಿಕೆ.

ಅದೆ ಹಲಾಯುಧ ನೋಡು ವಿಪ್ರ
ಘದಲಿ ಪಾರ್ಥನ ಬರವು ಮೇಘದ
ಹೊದಿಕೆಗಳ ಹರಿದಶ್ವನಂತಿರೆ ವಿಪ್ರವೇಷದಲಿ ।
ವಿದಿತವೇ ವಸುದೇವನಾಣೆಂ
ದುದಕೆ ತಪ್ಪದಲೈ ಸಭಾಮ
ಧ್ಯದಲಿ ಬರುತಿರುವಾತನರ್ಜುನನೆಂದನಸುರಾರಿ ‖ ೨೪

ಫಲುಗುಣನ ಶ್ರೀಯಂಗವಟ್ಟವ
ಹೊಳಹನೀಕ್ಷಿಸಿ ಯಂಗಲಕ್ಷಣ
ತಿಳಿದು ನೋಡಿದ ರೇವತೀಪತಿ ಬಹಳಹರುಷದಲಿ * ।
ನಳಿನನಾಭನು ಸರ್ವಗತನಹ

---

1 ಅಳವಡುವನೆಲೆ ಯಕ್ಷ ಕೇಳು, ಚ. ಟ.

* ಸುಳಿವುತೊಯ್ಯಾರದಲಿ ಬರುತಿಹ
ನಿಳೆಯುಮರರಿಂಗೊಂದಿಸುತ್ತಿಹ
ಫಲುಗುಣಂಗಿದೆ ಬೆನ್ನೊಳಗೆ ತಾ ಮಚ್ಚೆ ನೋಡೆನಲು, ಖ. *

ತಿಳಿಯಲಿಕೆ ಸರ್ವಜ್ಞನಾತನು
ತಿಳಿದೆ ಲೇಸಾಯ್ತೆನುತ ಕೃಷ್ಣಗೆ ರಾಮನಿಂತೆಂದ ॥ ೨೫

ಜನಪನೋ ಭೀಷ್ಮಾದಿಗಳೊ ತ
ಜ್ಜನನಿಯೋ ತಾವೆಲ್ಲ ಭೂಸುರ
ಜನದ ಸಾರೂಪ್ಯದಲಿ ಸಭೆಯೊಳಗಿಪ್ಪರೆನೆ ಕೇಳ್ದು ।
ನಿನಗದೆಂತವರಱಿತವನಲನ
ಮೊನೆಗೆ ತಪ್ಪಿದರೆಂತು ಶಿವ ನೀ
ನೆನಿತು ಮಾಯಾಸಿದ್ಧನೆಂದನು ನಗುತ ಬಲರಾಮ ॥ ೨೬

ಭುವನರಕ್ಷಾಮಣಿಯೆ ಯಾದವ
ನಿವಹಚಿಂತಾಮಣಿಯೆ ನೀಪಾಂ
ಡವರ ಜೀವನಮಣಿಯೆ ಯೆಂದನು ನಗುತ ಬಲರಾಮ ।
ದಿವಿಜಪಾಲನೆಗೆಂದು ದಾನವ
ನಿವಹವನು ತಡೆಗಡಿದು ಭೂಭಾ
ರವನೆ ಯಿಳುಹಲು ಬಂದ ದೇವನೆ ಯೆಂದು ಹರುಷಿಸಿದ ॥ ೨೭

ಅವನಿಪತಿ ಕೇಳುತ್ತಲೀಪಾ
ರ್ಥಿವರ ಪರಿಹಾಸವನು ಕಾಂತಾ
ನಿವಹದಲಿ ನಿಬ್ಬರದ ನುಡಿಗಳನಾ ಮಹೀಸುರರ ।
ವಿವಿಧಕಟುಮಧುರೋಕ್ತಿವಿನ್ಯಾ
ಸವನು ಕೇಳುತ ಮುಗುಳುನಗೆಯಲಿ
ನವಮದದ್ವಿಪದಂತೆ ಗರುವಾಯಿಯಲಿ ನಡೆತಂದ ॥ ೨೮

ಬರುವ ಅರ್ಜುನನನ್ನು ಕೆಲವರು ಶ್ಲಾಘಿಸುವಿಕೆ.

ಇವನ ಗತಿ ಮುಖಚೇಷ್ಟೆ ಭಾವೋ
ತ್ಸವವಿಲಾಸವುಪೇಕ್ಷೆ ಭರದಂ
ಘವಣೆ ಗರುವಿಕೆ ಗಮನಭಾವದ ಭೀತಿ ಬುಲ್ಲವಣೆ ।

ಇವನ ವಿಮಳಕ್ಷಾತ್ರವಿಕ್ರಮ
ವಿವರ ಕೊಂಡೆಯತನವಿವೇ ಸಾ
ಕಿವನು ಘಾಟಥ ವೀರನೆಂದರು ಧೀರನರ್ಜುನನ ॥ ೨೯

ಬರುತ ಭೀಷ್ಮದ್ರೋಣಕೃಪರಿಂ
ಗೆಱಗಿದನು ಮನದೊಳಗೆ ಯಾದವ
ರರಸಹಂತಿಯ ಹರಿಯನಭಿವಂದಿಸಿದನಕ್ಷಿಯಲಿ ।
ಸುರಪತಿಗೆ ಗುಹಗಣಪದಿಕ್ಪಾ
ಲರಿಗೆ ರುದ್ರಾದಿತ್ಯವಸುಮು
ಖ್ಯರಿಗೆ ಮಣಿದನು ಬಂದನಗ್ಗದ ಚಾಪವಿದ್ದೆಡೆಗೆ ॥ ೩೦

ಮೊದಲಲಂಬುಜಭವನನಾಮ
ಧ್ಯದಲಿ ಮಧುಸೂದನನ ನಾಬಿಲು
ತುದಿಯಲಾವಹಿಸಿದ್ದ ನಗ್ಗದ ನೀಲಲೋಹಿತನ ।
ಇದು ಮಹಾಭೂಮಿಪರ ಬಿಂಕವ
ನೊದೆದ ಧನುವೀ ಪ್ರೂತುರೆನುತೆ
ತ್ತಿದನು ಬಾಗೊತ್ತಿದನು ಕೊರಳಲಿ ತೊಡಿಸಿದನು ತಿರುವ ॥ ೩೧

ಹೊಯ್ದು ತಿರುವನು ಸೆಳದು ಕಿವಿವರೆ
ಗೊಯ್ದಿಸಿದು ಹದವಿಲ್ಲೆಲಾ ಬಿಲು
ಹೊಯ್ದುದಕಟಾ ಬಱಿದೆ ಹೆದಱಿತು ಮಾಗಧಾದಿಗಳು ।
ಮೆಯ್ದೆಗೆದರಿದಱೊಳಗೆ ಹೆಸರೆನ
ಗೆಯ್ದು ಬೇಕಿಂನ್ನೈಸಲೇಯೆಂ
ದಯ್ದು ಬಾಣವ ಕೊಂಡು ಯಂತ್ರದ ಹೊಳಪನೀಕ್ಷಿಸಿದ ॥ ೩೨

ಧನುಸ್ಸನ್ನು ಪೂರ್ಣಮಾಡಿದುದು.

ಬಾಗಿ ನೋಡಿದ ತೈಲಕುಂಭವ
ನಾಗ ಹೊಳದುದು ಮತ್ಸ್ಯಲೋಚನ
ಲಾಗಿನನುವನು ಕಂಡು ಹರುಷಿಸಿ ತಿರುವ ತೊಡರಿಸಿದ ।

ತೂಗಿ ಕಿವಿವರೆಗೊಯ್ದು ಯಂತ್ರವ
ತಾಗಿಸಿದನಂಬಿನಲಿ ಪಾರ್ಥನ
ಲಾಗುವೇಗವನಾರು ಬಲ್ಲರು ಚಾಪತಂತ್ರದಲಿ ॥ ೩೩

ಆಗ ಸೂತ್ರದ ಧಾರೆಯಂತ್ರದ
ಜಾಗಕೆಡೆಹಿದರಾಗ ಭೂಪರು
ಜಾಗು ತ್ರಿಪುರದವಾರಿ ಯೆಂದರು ತಮ್ಮ ಮನದೊಳಗೆ ।
ಜಾಗು ಧಣಿ ಧಣಿ ಪೂತು ಕಾರ್ಮುಕ
ಯೋಗಸಿದ್ಧ ಮುರಾರಿ ಕೋದಂ
ಡಾಗಮತ್ರಿಪುರಾರಿ ಯೆಂದುದು ಸಕಲಜನನಿಕರ ॥ ೩೪

ಆಗ ವಿಪ್ರಸಂಘದ ಸಂತೋಷ.

ಹಾಯೆನುತ ಬೊಬ್ಬಿಱಿದು ವಿಪ್ರನಿ
ಕಾಯ ಕುಣಿದುದು ಕಮಲಮುಖಿ ನಿ
ರ್ದಾಯದಲಿ ಸೇರಿದಳು ಹಾರುವಗೆನುತ ಹರುಷದಲಿ ।
ಆಯುಧವತಿಜನಜಲಧಿ ಮುಸುಕಿತು
ಬಾಯ ಮೌನದ ಬೆರಳಮೂಗಿನ
ರಾಯರಿರ್ದುದು ಹೊತ್ತದುಗುಡದ ಭಂಗಜಲಧಿಯಲಿ ॥ ೩೫

ತೂಗಿ ಶಿರವನು ರಾಮಕೃಷ್ಣರು
ಜಾಗು ಯೆಂದರು ಭೀಷ್ಮದ್ರೋಣರು
ಲಾಗು ಮಿಕ್ಕರಿಗುಂಟೆ ಯಂತ್ರದ ಹೊಳಹನೀಕ್ಷಿಸಲು ।
ಬೇಗದಲಿ ದುರ್ಯೋಧನಾದಿಗ
ಳಾಗ ಹೆದಱಿತು ಕರ್ಣಸೈಂಧವ
ರೀಗಳವನಾರೆನುತ ತಮ್ಮೊಳಗಾಗ ಗುಜುಗುಜಿಸೆ ॥ ೩೬

ಮೊಳಗಿದುವು ನಿಸ್ಸಾಳತತಿ ಹೆ
ಕ್ಕಳದ ಹೆಚ್ಚುಗೆಯಲ್ಲಿ ದಿವಿಜಾ
ವಳಿಯ ದುಂದುಭಿರವದಲುಬ್ಬಿದ ಸಾಧುವಾದಗಳ ।

ಕಳಕಳದ ಕೊಲ್ಲಣಿಗೆಗಳ ಹೂ
ಮಳೆಯು ಹುರದ ಹೊನಲಿನಲಿ ಜನ
ಮುಳುಗಿತದ್ಭುತರಸದಲಳ್ಳಿಱಿದುದು ಜಗತ್ತ್ರಯುವ ॥ ೩೭

ಕಿತ್ತುಸುರಗಿಯ ಸುಭಟರಂದಱು
ವತ್ತುಸಾವಿರವೀರ ಪಾರ್ಥನ
ಸುತ್ತ ಮುತ್ತಿದರಂಗರಕ್ಷಣೆಗರಸನಾಜ್ಞೆಯಲಿ ।
ಇತ್ತ ಮಹಿಳಾಜನದ ಮೌಳಿಯ
ಮುತ್ತು ಕುಸುಮಾಯುಧನ ಥಟ್ಟನ
ಮತ್ತಗಜವೈತಂದಳಲ್ಲಿಗೆ ದ್ರೌಪದೀದೇವಿ ॥ ೩೮

ತೊಲತೊಲಗು ಮನ್ಮಥನ ಹೊಗರಿ
ಟ್ಟಲಗು ಬರುತಿದೆ ಸಾರು ಸಾರೆಂ
ದುಲಿವವ್ರೊಲು ಚರರುಲಿದು ಹೊಯ್ದರು ಮುಂದೆ ಕಂಬಿಯಲಿ ।
ನಳಿನಮುಖಿ ದಂಡಿಗೆಯಲೈತಂ
ದಿೞಿದಳೀತನ ಹೊರೆಯಲಾಗಳ ಕಳ
ಕಳದಲೊಳತೋಟಿ ಮಸಗಿತು ಪರುಷಲಜ್ಜೆಯಲಿ ॥ ೩೯

ಲಲಿತಮದಿರಾಪಾಂಗದಲಿ ಮು
ಕ್ಕುಳಿಸಿ ದಣಿಯವು ಕಂಗಳುಬ್ಬುವ
ಪುಳಕಜಲದಲಿ ಮೂಡಿ ಮುಳುಗದು ಮೈ ನಿತಂಬಿನಿಯ ।
ತಳಿತಲಜ್ಜೆಯ ಭರಕೆ ಕುಸಿದುದು
ಚಳಿಸಿತಂತಃಕರಣವಾಂಗಿಕ
ಬಹುಳಿತಸಾತ್ವಿಕಭಾವವೇದ್ಯೈಸಿದುದು ಮಾನಿನಿಯ ॥ ೪೦

ದ್ರೌಪದಿಯು ಅರ್ಜುನನ ಕೊರಳಲ್ಲಿ ಹಾರವನ್ನು ಹಾಕಿದುದು

ಧರಣಿಪತಿ ಕೇಳ್ ಬಹಳಲಜ್ಜಾ
ಭರದ ಭಯದಲಿ ಬೆಮರಿಡುತ ಕುಚ

ಭರದಿ ಮೇಲುದ ಜಾಱೆ ಜೋಡಿಸಿ ನಿಮಿರ್ದು ನಡುನಡುಗಿ ।
ತರುಣಿ ನಿಜತನುಪರಿಮಳದಿ ಮಿಗೆ
ಹೊರೆದ ಹೂವಿನ ದಂಡೆಯನು ನೃಪ
ವರನ ಕೊರಳಲಿ ಹಾಯ್ಕಿದಳು ಜಯ ಯೆನೆ ಸುರಸ್ತೋಮ ॥ ೪೧

ಕೊರಳ ಹೂವಿನ ದಂಡೆಯಲಿ ನಿಜ
ಕರದ ಭಾರಿಯ ಧನುವಿನಲಿ ಮೈ
ಪರಿಮಳದ ನಿಟ್ಟೆಸಳುಗಂಗಳ ಕೆಲದ ಯುವತಿಯಲಿ ।
ವರನ ಪರಿ ಹೊಸತಾಯ್ತು ಹೊತ್ತನು
ಹರನ ಹಗೆ ಹಾರುವರಯನು ನ
ಮ್ಮರಸಿ ತಾ ಹಾರುವಿತಿಯೆಂದರು ನಗುತ ಚಪಳೆಯರು ॥ ೪೨

ಜನಪ ಕೇಳೈ ಯುವತಿಯೊಡನ
ರ್ಜುನನ ತಂದರು ರಾಜಮಂದಿರ
ಕನಿಮಿಷಾವಳಿ ಹರಿದುದಭ್ರದೊಳಮರಪತಿ ಸಹಿತ ।

ಜನಗಳಿಗೆ ಯುದ್ಧಕ್ಕಾಗಿ ದುರ್ಯೋಧನನ ಪ್ರೇರಣೆ.

ಮನದಸೂಯದ ಮುಖದ ದುಗುಡದ
ವಿನತಮಕುಟದ ಕಯ್ಯ ಗಲ್ಲದ
ಕನಲಿಕೆಯ ಕೊನರುಗಳ ಕೌರವರಾಯ ಖತಿಗೊಂಡ ॥ ೪೩

ಏನು ಹದ [1] ಪಾಂಚಾಲ ಮಾಡಿದ
ಮಾನಭಂಗವ ಕಂಡಿರೇ ವರ
ಭಾನುನಂದನಶಕುನಿಶಲ್ಯಜಯದ್ರಥಾದಿಗಳು ।
ಮಾನನಿಧಿಗಳು ಕಂಡಿರೇ ಮದ
ದಾನೆಗಳು ನೀವ್ ಕಂಡಿರೇ ಹದ
ಸೇನೆನುತ ಮೊದಲಿಸಿದನು ತಂಸವೆರನವನೀಶ ॥ ೪೪

---

1 ಹರ, ಕ.

ಹಳೆಯ ಹುಲು ಧನುವಿದನು ಹಾರುವ
ಸೆಳೆದ ಗಡ ಕೌಳಿಕದ ಯಂತ್ರವ
ಗೆಲಿದ ಗಡ ಗರುವಾಯಿ ಗೆಡಿಸಿದ ಗಡ ಮಹೀಶ್ವರರ |
ನಳಿನಮುಖಿ ಹಾಯ್ಕಿದಳು ಗಡ ತಿರು
ಕುಳಿಯ ಕೊರಳಲಿ ದಂಡೆಯನು ನೀ
ವೊಲಿದು ಮದುವೆಯ ಮಾಡಿ ಯೆಂದನು ಬೈದು ತನ್ನವರ [1] ||೪೫

ಭಂಡರೋ ನೀವ್ ನೆರೆದ ಭೂಮಿಯ
ಮಂಡಲೇಶ್ವರರಕಟ ನಿಮ್ಮಯ
ಹೆಂಡಿರನು ಬಳುವಳಿಯ ಕೊಡಿ ಹಾರುವನ ಹೆಂಡತಿಗೆ |
ಗಂಡುಗಲಿಗಳು ನಿಮ್ಮನನಿಬರ
ಕಂಡುಪೇಕ್ಷಿಸಿ ಯಾಚಕನ ಕೈ
ಕೊಂಡಳಿದಕಿನ್ನೇನು ಮನದಲಿ ವಾಸಿ ನಿಮಗೆಂದ || ೪೬

ವಾಸಿಗಳನಱಿಸುವೊಡೆ ದ್ರುಪದನ
ಮೀಸಲಡಗನು ಹದ್ದು ಕಾಗೆಗೆ
ಸೂಸಿ ವಿಪ್ರನ ಹಿಡಿದು [2] ಬಿಡುವುದು ಮತ್ತೆ ತಿರಿದುಣಲಿ |
ಆಸರೋಜಾನನೆಯ ನಮ್ಮ ವಿ
ಳಾಸಿನೀವೀಧಿಯಲಿ ಕೂಡುವು
ದೈಸಲೇ ಯೆಂದೊಡನೊಡನೆ ಕುರುರಾಯ ಗರ್ಜಿಸಿದ || ೪೭

ಪಾಂಚಾಲ ಪಟ್ಟಣವನ್ನು ಸರ್ವರು ಮುತ್ತಿದುದು.

ಏಱಿ ಹತ್ತಲಿ ಲಗ್ಗೆ ಪದಹತಿ
ಧೂಳಿಯಲಿ ಹಿರಿಯುಗಳನಗಲಕೆ
ಹೂಱಿ ಕಳೆಯಲಿ ಹರಿದು ಹತ್ತಲಿ ತೆನೆಯ ಸರಿಸದಲಿ |
ಕೋಲುಗುಂಡಿನ ಹತಿಗೆ ಹುರಿಯೊಡ

1 ಭೂಮಿಪರ, ಚ. ಠ. 2 ಬಡಿದು, ಠ.

ಬಾಱಿ [1] ಹೊಯ್ ಹೊಯ್ಯೆನುತ ಸಕಲನೃ
ಪಾಳಿ ಗರ್ಜಿಸಿ ಮುತ್ತಿದುದು ಪಾಂಚಾಲಪಟ್ಟಣವ ॥ ೪೮

ಕೂಡೆ ಗಜಬಜಿಸಿತ್ತು ಹರಿದುದು
ನಾಡಿಗಾವಳಿ ವಿಪ್ರಸಭೆ ತೆಗೆ
ದೋಡಿದುದು ಪಾಂಡವರು ಬಂದು ಕುಲಾಲಭವನದಲಿ ।
ನೋಡುತಿರ್ದರು ಲಗ್ಗೆಯುಬ್ಬರ
ವೀಡಿಱಿದುದು ದಿಗಂತವನು ಕೈ
ಮಾಡಿ ಕೊಂಡುದು ಹೊಯ್ದು ಬೆರಸಿದರಾಳುವೇರಿಯಲಿ ॥ ೪೯

ಹಲ್ಲಣಿಸಿತಿದು ಹುಗುವ ಚೂಣಿಯು
ಚಲ್ಲ ಬಡಿದರು ಸರಿಸಕಡಱುವ
ಬಿಲ್ಲ ಬಿರುದರ ಮೆಟ್ಟಿತಿವಿದರು ಸಾಲಸಬಳಿಗರು ।
ಝಲ್ಲರಿಯ ಝೂಡಿಗಳ ವಾದ್ಯದ
ಘಲ್ಲಣೆಯ ಪಱಿ ನೆರೆದುದಲ್ಲಿಯು
ದಲ್ಲಿ ಮುತ್ತಿಗೆ ತೆಗಿಸಿದರು ಪಾಂಚಾಲನಾಯಕರು ॥ ೫೦

ಚೂಣಿ ಮುಱಿದೈತರಲು ಬಹಳ
ಕ್ಷೋಣಿಬಲ ಕುರುರಾಯ ಥಟ್ಟಿನ
ಹೂಣಿಗರು ಹುರಿಗೊಂಡು ಕವಿದರು ಕರ್ಣ ಮೊದಲಾಗಿ ।
ಸಾಣೆಯಲಗಿನ ಸರಿಗೆ ಪರಬಲ
ದಾಣಿಯಿಟ್ಟವೊಲಡಿಮಿಡುಕದ
ಕ್ಷೀಣಬಲವೋಸರಿಸಿ ತೆಗೆದುದು ದ್ರುಪದಪರಿವಾರ ॥ ೫೧

ಯುದ್ಧಕ್ಕೆ ಬಂದವರನ್ನು ಧೃಷ್ಟದ್ಯುಮ್ನನು ಓಡಿಸುವಿಕೆ.

ಬಱಿಕ ಧೃಷ್ಟದ್ಯುಮ್ನ ಕೋಪದಿ [2]
ದಱಿವ ಮುಱಿದನು [3] ಶಕುನಿ ಸೈಂಧವ
ರಳುಕೆ ಹೆಬ್ಬಲ ಕವಿದುದಾಕುರುರಾಯನಾಜ್ಞೆಯಲಿ ।

1 ನಾಳ, ಠ. ದಾಳ. ಚ. 2 ಸರಳನ, ಖ 3 ಮಳೆಯ ಕರೆದನು, ಖ.

ನಳಿನಮಿತ್ರನ ಪುತ್ರ ಗೌತಮ
ಕಳಶಜರು ಕಾಳಿಂಗಶಲ್ಯರ
ಬಱಿಗ ಕವಿದುದು ದ್ರುಪದಪುತ್ರನ ಮೇಲೆ ಯವಗಡಿಸಿ ॥ ೫೦

ಅವಗಡಿಸಿ ಬರೆ ದ್ರುಪದನಂದನ
ನವರ ತಱುಬಿದನೊಂದು ಕ್ಷಣಕಾ
ಗವರ ಸೇನೆಯು ಕಡಲಿಗಾಂತನು ಬಡಬನಂ [1] ಬಂತೆ ।
ರವಿಸುತನು ಗುರುಶಲ್ಯಗುರುಸಂ
ಭವರು ಕವಿಯಲು ಬಱಿಕ ಸೈರಿಸ
ದವನು ಹಿಮ್ಮೆಟ್ಟಿದನು ಕಡಲಿಗೆ ಕಟ್ಟೆ ಮುಱಿವಂತೆ ॥ ೫೭

ಮೊದಲ ಲಗ್ಗೆಯ ಧೂಳಿಯೋ ದ್ರೌ
ಪದಿಯ ಬೈತಲೆಗಮಲಸಿಂದೂ
ರದ ಸವಿಸ್ತರವಾಗದಿದ್ದೊಡೆ ರಾಯನಾಣೆನುತ ।
ಮದಮುಖರು ಮುಂಕೊಂಡು ದುರ್ಗವ
ಬೆದಱಿಸಿತು ಬೇಱೇನು ದ್ರುಪದನ
ಸದನಸೀಮೆಯ ಪರಿಸಿ ಹಾಯ್ದರು ರಾಜಬೀದಿಯಲಿ ॥ ೫೪

ಅರ್ಜುನನು ಜನಗಳನ್ನು ಓಡಿಸುವಿಕೆ.

ಏಱು ಮನ್ನೆಯ ಗಂಡನಾಗು ನೃ
ಪಾಲ ಮದುವೆಯ ಮನೆಗೆ ರಾಯರ
ಧಾಟಿ ಬಿದ್ದಿನವಾಯ್ತು ನಡೆ ಸಂತೈಸು ಬೀಯಗರ ।
ಏಪೆನಲು ಕಳಕಳವನರ್ಜುನ
ಕೇಳಿದನು ಹೊದೆಯಂಬುಗಳ ತರ
ಹೇಪೆನುತ ಕವಿದೆಚ್ಚು ಮುಱಿದನು ಭಟರ ಮುಂಗುಡಿಯ ॥ ೫೫

[1] ಸೇತುವೆಂ, ಜ.

ಅದು ಬೞಿಕ ಕಲ್ಪಾಂತಮೇಘದ
ಮೊದಲ ಮೞೆಯೆನೆ ಸುರಿದುದಂಬಿನ
ಹೊದರು ಹುದುಗಿತು ರಾಯದೞಿ ರೌಕುಳದ ರಕ್ತದಲಿ ।
ಕೆದಱಿದರು ಕರ್ಣಾದಿಗಳು ನೆಱೆ
ಬೆದಱಿದರು ಮತ್ತೊಂದು ಕಡೆಯಲಿ
ಸದೆದು ಹೊಕ್ಕನು ಭೀಮ ಭಾರಿಯ ಮರದ ಕೊಂಬಿನಲಿ ॥ ೫೬

ತಱುಬಿದನು ಮದ್ರೇಶ ಪವನಜ
ನುಱುಬೆಯನು ಫಲುಗುಣನ ಬಾಣವ
ಮುಱಿಯಿಸುತ ರಾಧೇಯ ನಿಂದನು ಸಿಂಹನಾದದಲಿ ।
ಕಱುಬರೋ ಘನಯಂತ್ರಭೇದಿಯ
ನಱಿದು ಕಾಡುವ ಕುರುಡರೋ ನೀ
ವಿಱಿತಕಂಪೈಸಿದಿರೆನುತ ಕೈಕೊಂಡನಾಭೀಮ ॥ ೫೭

ತುರಗರಥಸಾರಥಿಗಳನು ಹೊ
ಯ್ದೊರಸಿದನು ಪವಮಾನಸುತನು
ಬ್ಬರದ ಖಾತಿಗೆ ಶಲ್ಯ ಹಿಮ್ಮೆಟ್ಟಿದನು ಹಿನ್ನೆಲೆಗೆ ।
ನರನ ಶರಹತಿಗಳುಕಿ ಮೋರೆಯ
ತಿರುಹಿದನು ಕಲಿಕರ್ಣನಿವದಿರು
ಸರಿಯೆ ವಿಪ್ರರು ನಮ್ಮ ವಿಗ್ರಹಕೆನುತ ಖಾತಿಯಲಿ ॥ ೫೮

ಆಗ ಪರಾಜಿತರಾಗಿ ತಮ್ಮ ತಮ್ಮ ಸ್ಥಳಕ್ಕೆ ಹೋಗುವಿಕೆ.

ಅರಸ ನಡೆ ದ್ರುಪದನ ಕಪಾಲದ
ಲಿರಲಿ ಮಾನಚ್ಯುತಿ ಮಹೀಸುರ
ವರರೊಡನೆ ದಂಡೇಕೆ[1] ನಡೆವುದು ಹಸ್ತಿನಾಪುರಕೆ ।
ನೆರಹುವುದು ನೃಪವರ್ಗವನು ಬಂ

[1] ಖತಿಯೇಕೆ, ಖ. ಚ.

ದೊರಸುವುದು ಪಾಂಚಾಲಭೂಪನ
ಶಿರದ ಬರಹವೆನೆಂದು ನುಡಿದನು ಕುರುಪತಿಗೆ ಕರ್ಣ ॥ ೫೯

ಅಹುದು ಕರ್ಣನ ಮಾತು ತೆಗೆಯಲಿ
ಬಹಳಬಲವೀಹೊತ್ತಿನಲಿ ರಣ
ವಿಹಿತವಲ್ಲೌಕಿದೊಡೆ ತಪ್ಪದು ವಿಪ್ರವಧೆ ನಮಗೆ ।
ಮಹಿಮೆ ಮಾಸಲು ಹೋಗದೀಸರ
ಲಹಿತದರ್ಪವ ಮುಂದೆ ನೋಡಲು
ಬಹುದೆನುತ ತಿರುಗಿದನು ಕುರುಪತಿ ಹಸ್ತಿನಾಪುರಕೆ ॥ ೬೦

ಬಾಹ್ಲಿಕ ಭೂಮೀಶ್ವರರು ತಮ್ಮಯ
ಹೊಂಬಿಲಿಗೈದಿದರಿತ್ತ ಸಾಬಲ
ಕಲಿ ಸುಶರ್ಮಕಳಿಂಗಸೈಂಧವರಿವರು ಮೊದಲಾಗಿ ।
ಇಳೆಯ ಭೂಪರ ಕೂಡೆ ಕೌರವ
ತಿಲಕ ದುಮ್ಮಾನದಲಿ ಹೋಗಲು
ನಲಿದು ಕುಂತೀಸುತರ ಸಲಹಿದ ವೀರನಾರಯಣ ॥ ೬೧

ಮೂವತ್ತೊಂದನೆಯ ಸಂಧಿ ಮುಗಿದುದು

ಮೂವತ್ತೆರಡನೆಯ ಸಂಧಿ

ಸೂಚನೆ

ವಿಮಳಮುನಿ ಪಾಂಚಾಲಚಿತ್ತ
ಭ್ರಮೆಯನಪಹರಿಸಿದನು ದ್ರೌಪದಿ
ರಮಣಿ ಯಾದಳು ಹರನ ವರದಲಿ ಪಾಂಡುತನಯರಿಗೆ ॥

ತಾಯಿಯ ಬಳಿ ಈ ವರ್ತಮಾನವನ್ನು ಹೇಳುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ಕೌರವನೃಪತಿ ಪಯಣದ
ಮೇಲೆ ಪಯಣದಲೈದಿ ಹೊಕ್ಕನು ಹಸ್ತಿನಾಪುರಿಯ ।
ಹೇೞಲೇನದನಖಿಳಧರಣೀ
ಪಾಲಕರು ದುಮ್ಮಾನದಲಿ ಪಾಂ
ಚಾಲದೇಶವ ಕಳೆದು ಹೊಕ್ಕರು ತಮ್ಮ ನಗರಿಗಳ ॥ ೧

ಭೀತಿ ಹರೆದುದು ರಾಯದೞಿಸಂ
ಘಾತ ಸರಿದುದು ಮತ್ತೆ ಸುಜನ
ವ್ರಾತ ನೆರೆದುದು ಮೊಱೆದುದವನೀದೇವರಗ್ಗಳಿಕೆ ।
ವಾತಜನು ಮರಗೊಂಬಿನಲಿ ಮಾ
ಱಾಂತರನು ಮನ್ನಿಸಿ ಕುಲಾಲನಿ
ಕೇತನಕೆ ಬಂದೆಱಗಿದನು ಧರ್ಮಜನ ಚರಣದಲಿ ॥ ೨

ಇತ್ತಲರ್ಜುನನಿನಸುತನ ಬೆಂ
ಬತ್ತಿ ಮರಳಿದನವನಿಪಾಲರ
ಮುತ್ತಿಗೆಯ ಝಾಡಿಸಿದ ಜಯಲಕ್ಷ್ಮಿಯ ಕಟಾಕ್ಷದಲಿ ।
ಮತ್ತರಾಯರ ಬೆನ್ನ ಕಪ್ಪವ
ನೆತ್ತಿದುತ್ಸಾಹದಲಿ ಹೊಸಹೊಗ
ರೆತ್ತಿದಕ್ಷಿಯ ಹೊಳಹಿನಲಿ ಹೊಕ್ಕನು ನೃಪಾಲಯವ ॥ ೩

ಈತನುದಯದಲಿಂದು ಭೂಸುರ
ಜಾತಿಗಾಯ್ತಗ್ಗಳಿಕೆ ಪಾರ್ಥಿವ
ಜಾತರನು ಭಂಗಿಸಿದ ಧನುವಿಂದಿವನ ವಶವಾಯ್ತು ।
ಸೋತು ತೆಗೆದ ಮಹೀಶ್ವರರ ಮಾ
ತೇತಕಿದು ಮಝಪೂತೆನುತ ಜನ
ವೀತನನು ಕೊಂಡಾಡುತಿರ್ದುದು ನೆರವಿನೆರವಿಯಲಿ ॥ ೪

ಬಂದನೀತ ಸುಗತಿಯು ಗರುವಿಕೆ
ಯಿಂದ ರಮಣಿಯು ಹೊರೆಗೆ ಬಾ ನೀ
ನೆಂದು ಕರೆದನು ಸತಿಸಹಿತ ತಿರುಗಿದನು ನಲವಿನಲಿ ।
ಇಂದುಮುಖಿಯುನು ಕುಂಭಕಾರರ
ಮಂದಿರದ ಹೊಱಗಿರಿಸಿ ಫಲುಗುಣ
ಬಂದು ಮೆಯ್ಯಿಕ್ಕಿದನು ಕುಂತಿಯು ಚರಣಕಮಲದಲಿ ॥ ೫

ತಾಯೆ ಬಿನ್ನಹವಿಂದು ಧರಣೀ
ರಾಯುರೆಲ್ಲರ ಗೆಲಿದು ತಂದೆನು
ನಾಯುಕವನನುಪಮುಸುಮೌಲ್ಯವನಮಲಮೌಕ್ತಿಕವ ।
ಅದನ್ನು ಸರ್ವರೂ ಅನುಭವಿಸಿರೆಂದು ಕುಂತಿಯು ಹೇಳಲು ವಿಚಾರ.
ತಾಯೆ ಚಿತ್ತೈಸಿದಿರೆ ಯೆನೆ ತಡ
ವಾಯಿದಳು ತನಿಹರುಷದಲಿ ಲೇ
ಸಾಯಿತೈವರು ಕೂಡಿ ಭೋಗಿಪುದೆಂದಳಾಕುಂತಿ ॥ ೬

ಎನೆ ಹಸಾದವೆನುತ್ತ ಕಮಲಾ
ನನೆಯು ಪೊಡವಂಡಿಸಿದನವ್ವೆಗೆ
ತನುಜ ನೀ ತಂದಮಲಮೌಕ್ತಿಕವಿದೆ ಮಹಾದೇವ ।
ತನಗೆ ನುಡಿ ತೊದಳಿಸಿತಲಾ ನೀ
ವಿಸಿಬರುಪಭೋಗಿಸುವುದೆಂದೆನು
ವನಿತೆಯೈವರಿಗರಸಿಯೇ ಹಾ ಯೆಂದಳಾಕುಂತಿ ॥ ೭

ಜನನಿ ತಪ್ಪದು ನಿಮ್ಮ ನುಡಿಯೀ
ವನಜಮುಖಿ ಯೆಮ್ಮೈವರಿಗೆ ಸತಿ
ವಿನುತಗುರುವಚನಾಂಬುನಿಧಿ ಮಕ್ಕಳಿಗಲಂಘ್ಯವಲೆ ।
ಎನೆ ಯುಧಿಷ್ಠಿರನೃಪತಿ ಪಾರ್ಥನ
ಕನಲಿದನು ಕಲಿಭೀಮನಲ್ಲಿಂದ
ನು ನಕುಲಸಹದೇವರನುಚಿತವೆಂದರರ್ಜುನನ ॥ ೮

ಎಲ್ಲ ಧರ್ಮದ ಸಾರವನು ನೀವ್
ಬಲ್ಲಿರಱಿಯಿರಿ ಹೇೞ್ವುದಾವುದು
ನಿಲ್ಲಿ ನೀವ್ ಸಹದೇವನಕುಲರು ಹಲವುಮಾತೇನು ।
ಬಲ್ಲಿರಖಿಳಾಮ್ನಾಯಭಾಷಿತ
ದಲ್ಲಿ ನೋಡಲು ಧರ್ಮಶಾಸ್ತ್ರದೊ
ೞಲ್ಲ ತಾಯಿಂದಧಿಕಗುರು ಜಗಕೆಂದನಾಪಾರ್ಥ ॥ ೯

ಮಾತೃವಚನವಲಂಘ್ಯವದು ವಿ
ಖ್ಯಾತಪದ್ಧತಿ ಲೋಕಯಾತ್ರಾ
ಭೀತಿಯಲಿ ಭಯವೇನು ಧರ್ಮರಹಸ್ಯನಿಷ್ಠರಿಗೆ ।
ಏತಕೀಲೋಕಾನುಸರಣೆ ವಿ
ಧೂತಕಿಲ್ಬಿಷವಾವುದಿದು * ಧ
ರ್ಮಾತಿಶಯದಲಿ ವಿಹಿತ ಯಿಹಪರಕೆಂದ * ನಾಪಾರ್ಥ ॥ ೧೦

ರಾಗಲೋಭವ್ಯಾಪ್ತಿಯಲಿ ನೀ
ವೀಗರುವೆಗಳುಕುವರೆ ಸಲೆ ಧ
ರ್ಮಾಗಮವನಾಚರಿಸುವುದಲೇ ನಮ್ಮನುಷ್ಠಾನ ।
ಈಗಳೀಗುರುವಚನಧರ್ಮ
ತ್ಯಾಗವೇನದು ಧರ್ಮವೇಯುಪ
ಭೋಗವೈವರಿಗೆಂದು ತಿಳುಹಿದನವರನಾಪಾರ್ಥ ॥ ೧೧

ಮಾಡದಿರಿ ಸಂದೇಹವನು ಖಯು
ಖೋಡಿ ಯಿದಱೊಳಗಲ್ಲ ಧರ್ಮದ
ಮೂಡಿಗೆಯೊಳಂಬಿರಲಿ ಬಹಿರಂಗದಲಿ ಬಱಸದಿರಿ ।
ಗೂಡು ಹಲವಿಹ ಪಕ್ಷಿಯೊಂದಿದ
ನಾಡಬಾರದು ಸಾಕು ಚಿಂತಿಸ
ಬೇಡಿ ನೀವೆಂದನಿಬರನು ತಿಳುಹಿದನು ಕಲಿಪಾರ್ಥ ॥ ೧೨

* ಸಂಪ್ರೀತಿಯಿಂ ಬಳಸವುದು ಮತವಹುದೆಂದ, ಖ.

ಮುಖ್ಯವಾದುದ ಬಿಟ್ಟು ಮೆಱೆಯದೆ
ಮುಖ್ಯವಾದುದ ಹಿಡಿವರಲ್ಲದೆ
ಮುಖ್ಯಮತವಿದನಾರುವಱಿಯರೆ ದೇವರಾಶಿಯಲಿ ।
ಮುಖ್ಯಜೀವರ ಜೀವ ಬಲ್ಲನು
ಮುಖ್ಯ ಕರ್ಮವನೆಂದು ಪಾರ್ಥನು
ಮುಖ್ಯಧರ್ಮವ ಹೇೞಿ ತಿಳುಹಿದ ಧರ್ಮಪುತ್ರನನು ॥ ೧೩

ಬಳಿಕ ನಿರ್ವಿಚಾರವಾಗಿ ಐವರೂ ಅಂಗೀಕರಿಸುವಿಕೆ.

ಆದುದನುಮತ ತಮ್ಮೊಳಗೆ ತ
ತ್ಸೋದರರು ನಿವಾದದಿಂದ [1] ತ
ಳೋದರಿಯನೊಲಿದೈವರಂಗೀಕರಿಸಿದರು ಬೞಿಕ ।
ಆದರಣೆಯಲಿ ಕುಂತಿ ಸೊಸೆಗೆ ವೃ
ಕೋದರನ ಭಿಕ್ಷಾನ್ನಭಾಗದ
ಭೇದವನು ತಿಳುಹಿದಳು ತೊಡೆಯಲಿ ತೆಗೆದು ಕುಳ್ಳಿರಿಸಿ ॥ ೧೪

ಇೞಿದನಸ್ತಾಚಲಕೆ ರವಿ ನೃಪ
ತಿಲಕರೈವರು ವಿಹಿತಸಂಧ್ಯಾ
ವಳಿಗಳನು ವಿಸ್ತರಿಸಿ ಕುಂತಿಯ ಚರಣಕಭಿನಮಿಸಿ ।
ಜಲರುಹಾಕ್ಷನ ನಾಮಕೀರ್ತನ
ಕಲಿತಪರಮಾನಂದರಸದಲಿ
ಮುೞುಗಿ ಮುದದಿಂದಿದ್ದರವರು ಕುಲಾಲಭವನದಲಿ ॥ ೧೫

ಸಿಲುಕಿದುದು ಜನದೃಷ್ಟಿ ಬಲುಕ
ತ್ತಲೆಯ ಬಂದಿಯೊಳಂಧಕಾರದ
ಜಲಧಿಯಲಿ ಜಗವದ್ದುದೇನೆಂಬೆನು ಮಹಾದ್ಭುತವ ।

1 ತ್ಸೌಹಾರ್ದದಿಂದ, ಖ. ಚ.

ನಳಿನಮಿತ್ರನ ಬೇಹುಕಾಱಱ
ಸುಳಿವೊ ತಿಮಿರದ ಪ್ರಳಯವೋ ಯೆನೆ
ನಿಳಯನಿಳಯದ ಸೊಡರು ತಳಿತುದು ಕೂಡೆ ನಗರಿಯಲಿ ॥ ೧೬

ಇವರಿಗುಂಟೇ ತೈಲದೀಪ್ತಿಗೆ
ರವಣವಲ್ಲಿ ಕುಲಾಲನಿಳಯಕೆ
ಕವಿವ ಕಗ್ಗತ್ತಲೆಯ ನುಗ್ಗೊತ್ತಿದುದು ಬೇಱೊಂದು ।
ನವಯುವತಿಯಾಭರಣಮಣಿರುಚಿ
ನಿವಹವೀಕ್ಷೆಯ ನಯನಕಾಂತಿಯ
ಮವನಿಪತಿ ಕೇಳ್ ನಿಮ್ಮ ಪಿತನ ಪಿತಾಮಹರ ಪರಿಯ ॥ ೧೭

ಬೞಿಕಲಾರೋಗಣೆಯ ಮಾಡಿದ
ರೊಲಿದು ಭಿಕ್ಷಾನ್ನಾದಿಭುಕ್ತದ
ಬೞಿಕ ದ್ರೌಪದಿ ವುಂಡಳೈವರ ಶೇಷದನ್ನವನು ।
ನಳಿನಮುಖಿ ಕೈದೊಳೆದು ಬಂದಾ
ನಿಳಯದಲಿ ಕುಳಿತಿರಲು ಕುಂತಿಯ
ಬೞಿಯ ಕುಳಿತುಱೆ ಕಾಲನೊತ್ತಿದಳಾಗ ಸೊಸೆತನದಿ ॥ ೧೮

ಜನಪನಂದನೆಗೊಂದು ಕೃಷ್ಣಾ
ಜಿನವನಿತ್ತರು ಶಯನಭಾಗಕೆ
ಜನನಿಯಂಘ್ರಿಯ ಬೞಿಯಲೊಱಗಿದರೈವರೊಂದಾಗಿ ।
ವನಿತೆಯವರಂಘ್ರಿಗಳ ತಲೆದಿಂ
ಬಿನಲಿ ಮಲಗಿದಳಂದಿನಾಹವ
ಜನಿತಕೃತ್ಯವ ನುಡಿವುತಿರ್ದನು ಪಾರ್ಥನರಸಂಗೆ ॥ ೧೯

ಆಗ ಯುದ್ಧ ಕೌಶಲ ನಿರೂಪಣ.

ಗೆಲಿದ ಪರಿಯನು ಕೌರವೇಂದ್ರನ
ದೞವ ಮುಱಿದಂದವನು ಕರ್ಣನಿ
ಗಳುಕದೆಚ್ಚ ಶರಪ್ರಯೋಗವ ಚಾಪಕೌಶಲವ ।

ಬಲಜಲಧಿ ಮುಕ್ಕುಳಿಕಿದರೆ ಮಂ
ಡಳಿಸಿ ಮೊಗೆದಂದವನು ಶಸ್ತ್ರ
ವಳಿಯ ಸಂಹರಣವನು ವಿವರಿಸಿದನು ಮಹೀಪಾಲ ॥ ೨೦

ಕುದುರೆಯೇಱಾಟವನು ಮಾತಂ
ಗದ ಸುಶಿಕ್ಷಾಭೇದವನು ರಥ
ವಿದಿತಕೌಶಲವನು ಶರಾಸನವೇದಸಂಗತಿಯ ।
ಮದವದರಿಭಂಜನದ ದಿವ್ಯಾ
ಸ್ತ್ರವಲಿ ಮುಕ್ತಾಮುಕ್ತಸಮರಂ
ಗದ ಸುಸಂಗತಿಯಿಂದ ನೂಕಿದರಿವರು ಯಾಮಿನಿಯ ॥ ೨೧

ಆಯುಧದ ಲಕ್ಷಣವನಾದಿ
ವ್ಯಾಯುಧದ ಮಂತ್ರಪ್ರಭಾವವ
ನಾಯುಧದ ವಿವಿಧಪ್ರಯೋಗವನದಱ ಕೌಶಲವ ।
ರಾಯರಂಗದ ಶಕ್ತಿವರ್ಗದ
ಪಾಯುಗುಣವಿಕ್ರಮಪರಾಕ್ರಮ
ನಾಯಕರ ಗುಣಕಥನದಲಿ ನೂಕಿದರು ಯಾಮಿನಿಯ ॥ ೨೨

ಸಾಕು ನಮ್ಮಯ ಮಾತು ರಾತ್ರಿಯ
ನಾಕುಜಾವದೊಳೆರಡು ಸಂದುವು
ಬೇಕು ನಿದ್ರೆಯೊಳಿರವದೆನುತಲಿ ರಾಯನರ್ಜುನಗೆ ।
ಆಕುಲಾಲನ ಭವನದೊಳು ಲೋ
ಕೈಕವೀರರು ಸರ್ವಗುಣಗಣ
ಪಾಕುಮಾರಕರರಸ ಫಲುಗುಣನೆಂದ ವಿನಯದಲಿ ॥ ೨೩

ಆಗ ಧೃಷ್ಟದ್ಯುಮ್ನನು ಕಶ್ಯಪನೆಂಬ ಬ್ರಾಹ್ಮಣಸಹಿತನಾಗಿ
ಇದನ್ನು ಕೇಳುವಿಕೆ.

ಮುನಿವಳೀವಧುವೆಂದು ನಿದ್ರಾಂ
ಗನೆಯನೌಕಿದರವನಿಪರು ಕಾ

ಮುನಿಸಹಿತ ಬೞಿಕಿತ್ತಲೀಪಾಂಚಾಲಭೂಪತಿಯು |
ತನುಜನಿವರ ಪರೀಕ್ಷೆಗೋಸುಗ
ಮುನಿಪ ಕಶ್ಯಪ ಕೂಡಿ ಕೇಳಿವ
ನಿನಿತು ಮಾತೆಲ್ಲವನು ಮಱೆಯಲಿ ನಿಂದು ರಜನಿಯಲಿ || ೭೪

ಬಂದು ಧೃಷ್ಟದ್ಯುಮ್ನನೈಯ್ಯಂ
ಗೆಂದನಿನನಸ್ತಮಯಸಂಧ್ಯಾ
ವಂದನಾನಂತರದಿ ಶಸ್ತ್ರಾಸ್ತ್ರ ಪ್ರಸಂಗದಲಿ |
ಸಂದಗಜಹಯಕಥನಭೂಮಿಪ
ರಂದದಲಿ ನೃಪನೀತಿಸಂಗತಿ
ಯಿಂದ ರಾತ್ರಿಯು ಕಳೆದರಾರೆಂದಱಿಯೆ ನಾನೆಂದ || ೭೫

ಧರಣಿಪತಿ ಕೇಳ್ ವಿಪ್ರರಾದೊಡೆ
ಸರಸನವಭೋಜನದ ಕಥೆ ಮೇಣ್
ವಿರಚಿತದ ವೇದಾಂಗವೈದಿಕತರ್ಕ ಶಾಸ್ತ್ರದಲಿ |
ಅರಸುಗಳಿಗಾಯುಧದ ಗಜರಥ
ತುರಗದೇಱಾಟದ ಮಹಾಸ್ತ್ರದ
ವಿರಚನೆಗಳವು ಜಾತಿವಿದ್ಯೆಗಳೆಂದನಾಮುನಿಪ || ೭೬

ಭೂರಿಭೂಧನವರ್ಧನವ್ಯವ
ಹಾರಲಾಭಾಲಾಭಚಿಂತೆಗ
ಳೂರುಜನಿತರಿಗಿಂತು ಶೂದ್ರಗೆ ಕೃಷಿಯು ಮಾತುಗಳು |
ಆರಿಗಾದೊಡೆ ಜಾತಿಧರ್ಮದ
ಸೇರುವೆಗಳೇ ತಿಳುಹುವುವು ನ
ಮ್ಮಾರಯಿಕೆಗಿವರಿಂದು ಕ್ಷತ್ರಿಯರೆಂದನಾಮುನಿಪ || ೭೭

ಇವರು ಪಾರ್ಥಿವರೊಳಗೆ ಕೇಳ್ಪಾಂ
ಡವರು ನಿಸ್ಸಂದೇಹವೆಂದೇ
ನಿವಗೆ ನಾವೆನ್ನೆವೆ ವಿವಾಹದ ಪೂರ್ವಕಾಲದಲಿ |

ಅವರನುಪಚರಿಸೆಂದು ರಚಿಸು
ತ್ಸವವನಾಗಳು ಪೂರ್ವಗಿರಿಯಲಿ
ರವಿಯುದಯವೆಂದಾಪುರೋಹಿತ ತಿಳುಹಿದನು ನೃಪನ ॥ ೨೮

ಪಾಂಡವರು ಕ್ಷತ್ರಿಯರೆಂದು ದ್ರುಪದನ ನಿಶ್ಚಯ.

ಒಸಗೆಯಾಯಿತು ಮತ್ತೆ ಗುಡಿಯೆ
ತ್ತಿಸಿತು ನಗರಿಯೊಳಧಿಕಹರ್ಷ
ಪ್ರಸರದಲಿ ರೋಮಾಳಿ ಪಲ್ಲವಿಸಿದುದು ಭೂಪತಿಯ ।
ಬಿಸಜಬಂಧುವಿನುದಯದಲಿ ನೃಪ
ವಿಸರಸಹಿತ ಕುಲಾಲಭವನದಿ
ವಸುಮತೀವಲ್ಲಭರ ಕಂಡನು ಬಂದು ಪಾಂಚಾಲ ॥ ೨೯

ಏಱ ಬಿಜಯಂಗೈವುದೆಂದು ನೃ
ಪಾಲಕರನುಚಿತದಲಿ ನಿಜರಾ
ಜಾಲಯಕೆ ಕೊಂಡೊಯ್ದನೀಕ್ಷಿಸುತನಿಬರಿಂಗಿತವ ।
ಮೇಲುಮೊಗದ ಗಭೀರಗತಿಯ ಛ
ಡಾಳವನು ಕಂಡಿವರು ರಾಯರ
ಪೀಳಿಗೆಗಳಹುದೆನುತ ನಿಶ್ಚಯಿಸಿದನು ಮನದೊಳಗೆ ॥ ೩೦

ಪರೀಕ್ಷೆಗಾಗಿ ಕಟ್ಟಿಸಿದ ಮನೆಗಳಲ್ಲಿ ಇವರು ಕ್ಷತ್ರಿಯ
ಗೃಹಕ್ಕೆ ಹೋಗುವಿಕೆ.

ಬರಲು ದ್ರುಪದನು ನಾಲ್ಕು ಮನೆಯನು
ಪರಿಪರಿಯೊಳಳವಡಿಸಿ ಯಿರಿಸಿದ
ನಿರುತ ವರ್ಣಾಶ್ರಮವನಱಿಯಲು ರಚಿಸಿದನು ವಿಧಿಯ ।
ಅರಸ ಕೇಳಾಪಾಂಡುಪುತ್ರರು
ಬರಲು ಬೀಡಾರವನು ತೋಱಿದ
ನೊರೆದೊರೆದು ದ್ರೌಪದಿಯ ಪಿತನುಱೆ ನಾಲ್ಕು ಭವನಗಳ ॥ ೩೧
ಮೊದಲಮನೆಯಲಿ ದರ್ಭೆ ತುಲಸಿಯು
ಮುದದಿನಾವರಗೋಪಿಚಂದನ

ಸದನದಲಿ ಶ್ರೀಸಾಲಗ್ರಾಮದ ಪೂಜೆ ಮಾಡಿರಲು ।
ಅದಱಿನಾತಱುವಾಯ ಮನೆಯೊಳು
ಗದೆ ಶರಾಸನ ಖಡ್ಗ ಮುದ್ಗರ
ವಧಟುಚಕ್ರ ತ್ರಿಶೂಲ ತುಂಬಿರೆ ಬೞಿಕ ಮೂಱಱಲಿ ॥ ೨೧

ಸೊಗಸು ಮಿಗಲಾ ತ್ರಾಸು ಕಟ್ಟಳೆ
ಯೊಗುಮಿಗೆಯ ಮಾಷಗಳ ಪದ್ಧತಿ
ಯುಗಲದಲಿಹರಹಿದನು ಬಗೆಬಗೆಯಲ್ಲಿ ನಾಲ್ಕಱಲಿ ।
ನೊಗವು ನೇಗಿಲು ಕುಂಟೆ ಕೂರಿಗೆ
ಶಕಟ ಜೊತ್ತಿಗೆ ಘಂಟೆ ಬಾಸಿಗ
ನಗವ ತೋಱಲಿಕಿವರು ಹೊಕ್ಕರು ಶಸ್ತ್ರಭವನವನು ॥ ೨೨

ಕಳಗಳಿವರಲು ಕ್ಷತ್ರಜಾತಿಯ
ಹೊಳಹಿನಂತಿದೆ ಯೆನುತ ದ್ರುಪದನು
ಬೞಿಕ ಮಜ್ಜನಶಾಲೆಗಾಯುತ ಮಾಡ ಹೇೞಿದನು ।
ಕೆಲರು ವಾಸಿತತೈಲ ಪೂಸಲಿ
ಕೆಲರು ತೈಲಾದಿಗಳನಿಕ್ಕಲಿ
ಕೆಲರದುಷ್ಣೋದಕವ ನೆಱೆಯಲಿ ಮುಖಜೆಯರಸರಿಗೆ ॥ ೨೩

ಅವರಿಗೆ ಮಂಗಳಸ್ನಾನಾದಿ ಉಪಚಾರ.

ಮುದದಿ ಮಂಗಳಮಜ್ಜನವ ಮಾ
ಡಿದರು ದಿವ್ಯಾಂಬರವನುಟ್ಟರು
ಸುದತಿಯರು ಹರಿವಾಣದಾರತಿಗಳನು ಕೈಕೊಳುತ ।
ಪದಕ ಕರ್ಣಾಭರಣ ಹಾರದಿ
ಮುದದಿನೊಪ್ಪಂಬಡೆದವರ ಪೂ
ಸಿದರು ಮಲಯಜಯಕ್ಷಕರ್ದಮವೊಲ್ಲೆಮಲ್ಲಿಗೆಯ ॥ ೨೪

ಬಾಸಿಗದ ಸೊಸಲುಗಳಲೆಸೆವ ಮ
ಹೀಶರೈವರು ಮಂಟಪದ ನೆಲೆ

ವಾಸಿಯಲಿ ಕುಳ್ಳಿರ್ದರದುಭುತರಾಜತೇಜದಲಿ |
ಆಸೊಸೆಯ ಸಂಗಾತ ಕುಂತಿ ವಿ
ಳಾಸದಲಿ ಕುಳ್ಳಿರ್ದಘನವಿ
ನ್ಯಾಸವನು ಜನ ನೋಡುತಿರ್ದುದು ಬಿಗಿದ ಬೆಱಗಿನಲಿ || ೩೬

ಬಳಿಕ ದ್ರುಪದನು ತನ್ನ ವಧುವಿಂ
ಕಳಶಜಲವನು ತರಿಸಿ ಹರುಷದಿ
ಪುಳಕಿಸುತ ಮಧುಪರ್ಕವನು ಮಾಡಲಿಕೆ ಕುಳ್ಳಿರ್ದ |
ಲಲಿತಮಂಡಲಮಾಡಿ ಯರ್ಚಿಸಿ
ನಳಿನನಾಭನ ನೆನೆದು ಪಾಂಡವ
ತಿಲಕರೈವರ ನೋಡಿ ಕರೆದನು ಮನಸಿನೊಲವಿನಲಿ || ೩೭

ಜಲವನಂಜಲಿಯಿಂದ ದ್ರುಪದನು
ಸೆಳೆದು ಮೊಱೆದವೆ [1] ಬರಲಿ ಯಂತ್ರವ
ಗೆಲಿದ ಗರುವನು ನಿಮ್ಮ ಪಂಚಕದೊಳಗೆ ಯೆನೆ ನಗುತ |
ಇೞಿದನರಸನು ಭೀಮನೊಯ್ಯನೆ
ಸುಳಿವನರ್ಜುನ ಹಿಂದೆ ಯಮಳರು
ನಳಿನವದನೆಯು ಹೊರೆಗೆ ಬಂದರು ಭೂಪ ಕೇಳೆಂದ || ೩೮

ಬಿಸುಟನಂಜಲಿಯುದಕವನು ನಿ
ಪ್ಪಸರದಲಿ ಬೆಱಗಾಗಿ ಭೂಪನ
ಮುಸುಡನೆವೆಯಿಕ್ಕದೆ ನಿರೀಕ್ಷಿಸುತೆಂದನಾದ್ರುಪದ |
ಅಸುರರೋ ಸುರರೋ ಭುಜಂಗರೊ
ವಸುಮತೀಶರು ನಿಮ್ಮೊಳೀಮಾ
ನುಷರ ಪರುಟವವಿಲ್ಲ ನೀವಾರೆಂದು ಬೆಸಗೊಂಡ || ೩೯

ನಾವು ಪಾಂಡವರೆಂದು ಹೇಳುವಿಕೆ.

ಈತನಗ್ಗದ ಭೀಮನರ್ಜುನ
ನೀತನಿವರೇ ಯಮಳರೆಂಬವ

---

1 ಕೊಂಡನು, ಚ.

ರೀತಗಳು ನಮ್ಮಿಂದ ಕಿಱಿಯರು ನಾವು ಪಾಂಡವರು |
ಮಾತೆ ಯೆಮ್ಮೈವರಿಗೆ ಜಗತೀ
ಖ್ಯಾತೆ ಕುಂತೀದೇವಿ ನೇಮಿಸ
ಲೀತಳೋದರಿಯಾದಳೆಮ್ಮೈವರಿಗೆ ವಧುವೆಂದ || ೪೦

ದ್ರೌಪದಿಗೆ ಪಂಚಪತ್ನೀತ್ವವಿಚಾರ.

ಕೊಂಡು ಹರಿದುದು ಹರುಷವಾಬ್ರ
ಹ್ಮಾಂಡದಗ್ರಕೆ ಮನವನೈವರು
ಗಂಡರೆಂದೆನೆ ಯಿೞಿದುದಾಗಳೆ ಮನ ರಸಾತಳಕೆ |
ಕಂಡು ಬಲ್ಲಿರೆ ಕಂಗಳಲಿ ಕಿವಿ
ಗೊಂಡು ಕೇಳ್ದರೆ ಮುನ್ನ ನಮಗೀ
ಭಂಡತನವನು ಮಾಡಿದುದು ವಿಧಿಯೆಂದನಾ ದ್ರುಪದ || ೪೧

ಲೋಕಸಮ್ಮತವಲ್ಲ ಶಾಸ್ತ್ರಾ
ನೀಕದಭಿಮತವಲ್ಲ ಕಾಪಥ
ವೇಕೆ ನಿಮಗಿದು ಪಾಂಡುತನುಜರು ನೀವ್ ಮಹಾತ್ಮರಲೆ |
ಪ್ರಾಕೃತರೆ ನೀವಕಟ ನಿಮ್ಮ ವಿ
ವೇಕ ಲೇಸಾಯ್ತಿಹಪರಕೆ ಮಿಗೆ
ಲೋಕಕಿದು ಸಾಧನವೆ ಯೆಂದನು ದ್ರುಪದಭೂಪಾಲ || ೪೨

ಕಾಮಮೋಹಿತರಲ್ಲ ವಿಷಯ
ಸ್ತೋಮಭಂಗಿತರಲ್ಲ ಧರ್ಮದ
ಸೀಮೆಯೊಳಗಣುಮಾತ್ರವಳುಪುವರಲ್ಲ ಜಗವಱಿಯೆ [1] |

ಕಂಡು ಬಲ್ಲವೆ ಕಂಗಳಿದವುಂ
ಕೊಂಡು ಬಲ್ಲದೆ ಕಾಲ ನಮಗೀ
* ಭಂಡತನವನು ಮಾಡುವರೆ ನೀವೆಂದನಾ ದ್ರುಪದ, ಠ. * ||

1 ನೀವುಧಾರ್ಮಿಕರು, ಚ. ಠ.

ಈಮಹಾಸತಿ ಯೆಮಗೆ ಜನನಿಯು
ನೇಮದಲಿ ವಧುವಾದಳಿದುವೆ ವಿ
ರಾಮವೇಕೆ ವಿವೇಕವೆಂದನು ಧರ್ಮಸುತ ನಗುತ || ೪೩

ಏಕಪತಿ ಬಹುಸತಿಯರೆಂಬುದು
ಲೋಕಪದ್ಧತಿ ಕಂಡೆವಾವಿಂ
ದೇಕಪತ್ನಿಗೆ ಪುರುಷಪಂಚಕವೆನು ಮಹಾದೇವ |
ಲೋಕಶಾಸ್ತ್ರವಿರುದ್ಧವೆನು ಕಿವಿ
ಯೋಕರಿಸುತಿದೆ ಕಂಗಳಿಗೆ ಸು
ವ್ಯಾಕುಲಿತ ಹಿರಿದಾದುದೆಂದನು ದ್ರುಪದಭೂಪಾಲ || ೪೪

ಆಗ ವ್ಯಾಸರ ಆಗಮನ.

ಆಸಮಯದಲಿ ನೆಗಳ್ದ ವಾರ್ತಾ
ಘೋಷವನು ನೆಱೆ ತಿಳಿದು ಮನದಲಿ
ಲೇಸನಿದನಾನಱಿಪೆನೆಂದುದ್ಯೋಗವನು ಮಾಡಿ |
ಕೇಶವನ ನಿಜಮೂರ್ತಿಯೆನಿಪಾ
ವ್ಯಾಸಮುನಿ ಯೈತರಲು ಕಂಡು ಮ
ಹೀಶರಿದಿರೆದ್ದೆಱಗಿದರು ಪದಯುಗಕೆ ವಿನಯದಲಿ || ೪೫

ಆಸಭೆಯ ವಂದನೆಯ ಕೊಳುತಲು
ವ್ಯಾಸಮುನಿ ನಡೆತಂದನಲ್ಲಿ ಮ
ಹೀಸುರರು ಕುಂತಿಜರು ಕಂಡರು ಕಾಣಿಕೆಯನಿಕ್ಕಿ |
ದೋಷವರ್ಜಿತಧರ್ಮವನು ನಿ
ರ್ಣೈಸಲಱಿಯದ ಮಂದಮತಿಗೆ ಮ
ಹೇಶ ಕೃಪೆಮಾಡಿದನೆನುತ ಮೆಯ್ಯಿಕ್ಕಿದನು ದ್ರುಪದ || ೪೬

ನೆಗಹಿದನು ದ್ರುಪದನನು ಯಮಜಾ
ದಿಗಳನೆತ್ತಿದನೊಬ್ಬರೊಬ್ಬಗ

ತೆಗೆದು ತಕ್ಕೈಸಿದನು ಮುದದಲಿ ಪಾಂಡುನಂದನರ ।
ದುಗುಡವೇಕೈ ದ್ರುಪದ ನಿನ್ನಯ
ಮಗಳ ಸೌಭಾಗ್ಯವನು ರಂಭಾ
ದಿಗಳು ರಂಜಿಸಲರಿಯರೆಂದನು ಕೃಷ್ಣಮುನಿ ನಗುತ ॥ ೪೭

ಅಹುದಲೇ ಬಳಿಕೇನು ತಂಗಿಯು
ಬಹಳಸುಕೃತೋದಯದಲರಗಿನ
ಗೃಹದ ಗಂಟಲನೊದೆದು ಸುಳಿದರು ಪಾಂಡುನಂದನರು ।
ಬಹಳ ಯಂತ್ರವನೆಚ್ಚ ಪಾರ್ಥನು
ಮಹಿಳಗೆನ್ನ ಕುಮಾರಿಗೀಗಳು
ಬಹುಪತಿಗಳಾಯ್ತಿದನು ನೀವ್ ನಿರ್ಣಯಿಸಿ ಕೊಡಿಯೆಂದ ॥ ೪೮

ದ್ರುಪದಧೃಷ್ಟದ್ಯುಮ್ನಪಾಂಡವ
ನೃಪರು ಕಶ್ಯಪಸಹಿತ ಹೊಕ್ಕರು
ವಿಪುಳತರಲಾವಣ್ಯದಿಂದೇಕಾಂತಭವನವನು ।
ನೃಪತಿ ಸಂಶಯವೇನು ನಾವದ
ನಪಹರಿಸುವೆವು ಪಾಂಡುಪುತ್ರರ
ನುಪಚರಿಸು ವೈವಾಹವನು ವಿಸ್ತರಿಸು ಸಾಕೆಂದ ॥ ೪೯

ವಿಧಿವಿಹಿತಲೋಕಪ್ರಧಾನವ
ನಧಿಕರಿಸಿ ವರ್ಣಾಶ್ರಮಕೆ ಸು
ವ್ಯಧಿಕರಣ ಹೊಗದಂತೆ ಸದ್ವ್ಯವಹಾರಮಾರ್ಗದಲಿ ।
ವಿಧಿಸಿದೊಡೆ ಸಿಮ್ಮಂಘ್ರಿಗಳ ಸ
ನ್ನಿಧಿಯು ಪಾಣಿಗ್ರಹಣಸಾಧನ
ವಿದುವೆ ಯಿದೆ ಪಾರ್ಥಂಗೆ ಮದುವೆಯು ಮಾಡಿ ನೀವೆಂದ ॥ ೫೦

ಧರಣಿಪತಿ ಕೇಳವರ ತಾಯ್ಮು
ನ್ನರಿಯದಾಡಿದಳಾ ನುಡಿಯನು

ತ್ತರಿಸ ಬಾರದು ಧರ್ಮವಿದು ಪರಮಾತ್ಮಭಕ್ತರಿಗೆ ।
ಗುರುವಚನವೇ ಮಿಥ್ಯವೆಂದುಪ
ಚರಿಸಿತೇನಿದು ಪೂರ್ವಜನ್ಮದ
ಸರಸಿಜಾಕ್ಷಿಯ ಕಥೆಯನರುಪುವೆನೆಂದನಾಮುನಿಪ ॥ ೫೧

ಮೂವತ್ತೆರಡನೆಯ ಸಂಧಿ ಮುಗಿದುದು.

ಮೂವತ್ತಮೂರನೆಯ ಸಂಧಿ.

ಸೂಚನೆ

ಅನಿಲವಧು ತಾ ಮುಖ್ಯದೇವಾಂ
ಗನೆಯರೈವರು ಕೂಡಿ ಧರಣಿಗೆ
ಜನಿಸಿದರು ಪದುಮಜನ ಶಾಪದೊಳವರು ಮುಖಮುಖದಿ ॥

ದ್ರೌಪದಿಯ ಪೂರ್ವಜನ್ಮದ ವೃತ್ತಾಂತ.

ಕೇಳು ಜನಮೇಜಯ ಧರಿತ್ರೀ
ಪಾಲ ತಾ ಶ್ರೀವ್ಯಾಸದೇವರು
ಹೇಳಿದರು ದ್ರೌಪದಿಯ ಪೂರ್ವಾಪರದ ಸಂಗತಿಯ ।
ಮೇಲೆ ತಾನಿಂದ್ರಾಣಿಯಲ್ಲಿಗೆ
ಕಾಲನಂಗನೆಯಶ್ವಿನೀಸುರ
ಲಾಲತಾಂಗಿಯು ಗೂಡಿ ಬಂದಳು ಬಳಿಕ ಶಚಿದೇವಿ ॥ ೧

ಶಚ್ಯಾದಿಗಳು ಬ್ರಹ್ಮನನ್ನು ಪರೀಕ್ಷಿಸುವಿಕೆ.

ಕೂಡಿ ತಾವ್ ಮಾತಾಡಲೊಂದುವ
ನಾಡಿದಳು ಕಮಲಜನು ಜೀವವ
ನೋಡಿ ಬಲ್ಲನೊ ಯಾಖಿಯನೆನುತವೆ ಮೂವರೊಂದಾಗಿ ।

ರೂಢಿಗಚ್ಚರಿಯಾಗಿ ಯೊಂದೇ
ಗೂಡಿನಲಿ ಬಂದಂಬುಜಾತನ
ನೋಡಿ ನಿಂದರು ಸುರಮನೋಹರದಿವ್ಯರೂಪದಲಿ ॥ ೨

ಕಮಲಜನು ಕಂಡವರ ನಕ್ಕನು
ಕುಮತಿಯಲಿ ನೀವೆಮ್ಮನೀಕ್ಷಿಪ
ಕ್ರಮಗಳಲಿ ನೀವ್ ಬಂದಿರಲ್ಲದೆ ಬರವು ಮತವಲ್ಲ ।
ಅಮಿತಜೀವರ ಕರ್ಮವೃತ್ತಿಯು
ಕ್ರಮವ ತಾನೇ ಬಲ್ಲನಾಗಳು
ಭ್ರಮಿಸನ್ಯ ಸರ್ವಜ್ಞಕಮಲಜನಿವರಿಗಿಂತೆಂದ ॥ ೩

ಶಚ್ಯಾದಿಗಳಿಗೆ ಬ್ರಹ್ಮಶಾಪ.

ನೀವು ಮಾಡಿದ ಪಾಪ ನಿಮ್ಮನು
ನೋವಿಸುವುದೈ ಮೂಱುಜನ್ಮಕೆ
ದೇವಿಯರೆ ನಿಮಗೊಂದುಜನ್ಮಕೆ ಯಿರಲಿ ಕೇಳೆಂದ ।
ಭಾವದಲಿ ಸರ್ವಜ್ಞರಾದೊಡೆ
ನೋವಿಸದೆ ಕಾಯೆಂದು ವಾಣೀ
ದೇವಿಯರು ಕಳುಹಿದರು ಕಮಲಜನಾಜ್ಞೆಗೊಂಡವರ ॥ ೪

ಆದರೆಯು ಜನ್ಮಾಂತ್ಯದಲಿ ನಿಮ
ಗಾದಯಾಂಬುಧಿ ವಾಸುದೇವನು
ಮೇದಿನಿಗೆ ಜನಿಸುವನು ಮುಂದಕೆ ನಿಮಗೆ ಕರುಣಿಸುವ ।
ಯಾದವೇಂದ್ರನು ದ್ವಾಪರಾಂತ್ಯದ
ಮೇದಿನೀಶರ ಕೆಡಹಿ ಭೂಮಿಯೊ
ಳಾದ ಭಾರವನಿಳುಹಿ ಬರಲಿಕ್ಕೆಂದು ಕಂಡವರ ॥ ೫

ಮೂಱುಜನ್ಮದ ನಿಮ್ಮ ಗೂಡಿಗೆ
ಪಾರುಖಾಣೆಗಳೆಂದು ನೇಮಿಸಿ
ನಾರಿಯರ ಕಳುಹಲಿಕೆ ಬಂದರು ಜನ್ಮವೊಂದಱಲಿ ।

ಮೂಱುಲೋಕಾಧೀಶನರಸಿಯು
ಮಾಱಿತ್ತೈವರ ಬ್ರಹ್ಮಶಾಪವು
ಮೀಱಲಾರಳವಲ್ಲ ಕಮಲಜನಾಜ್ಞೆಯೆಂಬುದನು ॥ ೬

ಇನ್ನು ಕೇಳೈ ದ್ರುಪದ ಮುಂದಕೆ
ಮನ್ನಿಸಿಯೆ ಪಾರ್ವತಿಯು ಮೇಳದೆ
ತನ್ನ ಪತಿಯೊಡನಾಡುತಿರಲಿಕೆ ಕಂಡಳಿಂದ್ರಾಣಿ ।
ಪನ್ನಗನ ಸಿರಿ ಚರಣದಾಂಕನು
ತನ್ನ ಲೋಕದೊಳಿರಲು ಶಚಿಯುಷೆ
ತನ್ನ ದೇಹದೊಳಿರಲು ಶ್ಯಾಮಳದೇವಿ ಸಹಿತಾಗ ॥ ೭

ಹರನ ಸತಿಗೆ ಬ್ರಹ್ಮಶಾಪ.

ಇರುತಿರಲು ಗಿರಿಸುತೆಯು ನಕ್ಕಳು
ಸರಸಿರುಹಸಂಭವನ ಶಾಪವ
ಸರಸ ಕೇಳೈ ಶಾಪವಾಯಿತು ಹರನ ಸತಿಗಂದು ।
ವರಸುರಾಂಗನೆಯರಿರ ನಾಲ್ವರ
ಶರಿರವೊಂದಾಗಿರಲು ಧರೆಯಲಿ
ಧರಿಸುವುದು ನೀವ್ ನಾಲ್ಕು ಜನ್ಮದೊಳನ್ಯದೇಹದಲಿ ॥ ೮

ಆದರೆಯು ನೀವ್ ನಿಮ್ಮ ಪುರುಷರು
ಮೇದಿಸಿಯಲೈದುವುದದೆಂದಾ
ಗಾದಯಾಂಬುಧಿ ಕಮಲಪುತ್ರನು ವರವ ದಯಮಾಡೆ ।

ಭಾರತಿಯನ್ನು ಕುರಿತು ತಪವಂ ಮಾಡಿರೆಂದು ಬ್ರಹ್ಮನ ಅಪ್ಪಣೆ.

ಆದಿವಿಜಯುವತಿಯರಿಗೆಂದನು
ವಾದವಿಲ್ಲದೆ ನೀವು ನಾಲ್ವರು
ವೇದಿಸುವುದೌ ತಪವ ಮುಖ್ಯಪ್ರಾಣನಂಗನೆಗೆ ॥ ೯

ಎಂದು ಕಳುಹಿದ ಬಟುಕ ಸತಿಯರು
ಬಂದರೈ ಧರಣಿಯಲಿ ತಪಿಸಲಿ
ಕಂದು ಮಾಡಿದರೊಂದು ಸಾವಿರವರುಷ ತಪಸುಗಳ ।
ಅಂದದಕೆ ತಾ ಮೆಚ್ಚಿ ನೀವೇ
ನೆಂದುದನು ಸಲಿಸುವೆನದೆಂದರೆ
ಯಿಂದುಮುಖಿ ನಿಮ್ಮಂಗಸಂಗವ ಮಾಡಿ ನಮ್ಮವನು ॥ ೧೦

ಶಚ್ಯಾದಿಗಳ ಪ್ರಾರ್ಥನೆಯಂತೆ ಭಾರತಿಯು ಭೂತಳದಲ್ಲಿ ಜನಿಸುವೆ
ನೆಂದು ಹೇಳುವಿಕೆ.

ನಮ್ಮ ಪತಿಸಂಗವನೆ ಕರುಣಿಸು
ನಮ್ಮ ಪತಿಗಿಂದಧಿಕದೇವರ
ನಮ್ಮ ಕಾಣಿಸು ತಾಯೆ ಮುಖ್ಯಪ್ರಾಣನಂಗನೆಯೆ [1] ।
ನಿಮ್ಮ ಕೃಪೆಯಿಂದೆಮಗೆ ಹಬ್ಬಿದ
ಕರ್ಮವನು ಕಡೆಗಾಂಬೆವೆಂದರು
ಸುಮ್ಮನಿರದ [2] ರಸಿಯರು ಭಾರತಿದೇವಿಗೊಲವಿನಲಿ ॥ ೧೧

ಎನಲು ನಿಮ್ಮಯ ಕೂಡೆ ನಾನೇ
ಜನಿಸುವೆನು ಧರಣಿಯೊಳಗೆಂದು ಈ
ಜನಿಸಿದಳು ತಾನಾಗ ವಾರುಣಿಯೆಂಬ ನಾಮದಲಿ ।
ಜನಿಸಿದಳು ನಳನಂದಿನೀಯೆಂ
ದೆನಿಪ ನಾಮದಿ ಬಟುಕ ಭೂಸುರ
ತನುಜೆ ಯಾದವಳಿಂದ್ರಸೇನಾ ಯೆಂಬ ನಾಮದಲಿ ॥ ೧೨

ಅನಿಮಿಷಾಬ್ದ ಸಮಾಪ್ತವಾದುವು
ವನಿತೆಯಾಯಾಶ್ರಮದಲೊಂದಿನ
ಮನೆಯಲಾಡುತ್ತಿರಲು ಶಂಕರ ಬಂದ ವಟುವಾಗಿ ।
ವನಿತೆ ತಮ್ಮಾಶ್ರಮದಲೆಡೆಯಲಿ

---

1 ನಂಗವನು, ಘ ಜ. 2 ಬೊಮ್ಮವಿಧಿಯು, ಘ ಜ.

ವಿನುತ ಹೊಸವಟುವೆಂದು ನಗುತಲು
ತನುಜೆ ಸೆಳೆದಳು ಶಿವನ ಕೌಪವ ದ್ರುಪದ ಕೇಳೆಂದ ॥ ೧೩

ಬಳಿಕ ಶಿವ ಕರ ಕೊಂಡುಕೌಪನು
ಯಿಳೆಯು ಮಾನವನಂತೆ ಲಜ್ಜೆಯು
ಬಳೆಯು ತೊಡಗಲ್ಕಿಂದ್ರಸೇನೆಯು ಕಂಡಳಿದನಾಗ ।
ಇಳೆಗಪೂರ್ವವದೀತ ಹೊಸವಟು
ಬಳಿಕೆನುತಲಾ ಯುವತಿ ತನ್ನಯು
ಗೆಳೆಯರಿಂಗಱುಹಿಸದೆ ಕಿಱುಗಣ್ ಸೀರೆ ಶಿವಗೀಯೆ ॥ ೧೪

ವರಕುಮಾರಿಯು ತನ್ನ ಮನದಲಿ
ನಿರುತ ಬ್ರಹ್ಮಾರ್ಪಣವ ಮಾಡಲು
ಹರನು ಮನ್ನಿಸಿ ಕೌಪುಗೊಂಡನು ಕೇಳ್ಮಹೀಪತಿಯೆ ।
ಸರಸಿಜಾಕ್ಷಿಗೆ ಶಿವನು ತತ್‌ಕ್ಷಣ
ಹರಕೆ ಯಿತ್ತನು ನಿನ್ನ ಮಾನವ
ಗರುಡಸಿಂಧದ ದೇವ ಕಾಯುಲಿ ಯೆನುತ ತಿರುಗಿದನು ॥ ೧೫

ಆಫಲವು ಕೌರವನ ಕೃತ್ಯವೆ
ಲೋಪಿಸುವುದೈ ಲೇಸು ಬಹುವ
ಸ್ತ್ರಾಪಹಾರದಿನವರಿಗಿತ್ತುದು ತನಗೆ ಸಂದಪುದು * ।
ಓಪತುಷ್ಟಿಯ ಮಾತಲಱಿವಳು
ತಾಪಿಸುವ ಜನನಿಕರಕಾಗಳು
ಕೋಪಿಸದೆ ತಾನಿಂದ್ರಸೇನೆಯುನಂದು ಮಾಡಿದನು ॥ ೧೬

ಬಳಿಕ ಭೂಸುರತತಿಗೆ ಭೂಸುರ
ಬಱಿಗದಲಿ ಮೌದ್ಗಲ್ಯನೆಂಬಾ
ಯಿಳೆಯು ಸುರ ಜನಿಸಿದ್ದೊಡಾತನ ಕಥೆಯು ಕೇಳೆಂದ ।

* ಲೋಪಿಸಿತು ಬಹುವಸ್ತ್ರಾದಿಂದವೆ ಭೂಪ ಕೇಳೈ ಪರರಿಗಿತ್ತುದು
ತನಗೆ ಸಂಪಪುವು, ಘ.

ಜಲಜಸಂಭವನಾಜ್ಞೆಗಳ ತಾ
ನಿಳಿಕೆಗೊಂಡನದಕ್ಕೆ ಶಾಪವ
ಜಲಜಸಂಭವನಿತ್ತನಾತಂಗುತ್ತಮರ ಸತಿಯು ‖ ೧೭

ಪತಿತನವು ನಿನಗಾಗಲೆಂದರೆ
ಕ್ಷಿತಿಸುರನು ನಡುನಡುಗಿ ಯಾಕ್ಷಣ
ಕ್ಷಿತಿಯೊಳಗೆ ತಾ ದಿವ್ಯಸಾವಿರವರುಷ ತಪಮಾಡಿ ।
ಪತಿತಪಾವನನಾಮಧೇಯನ
ಸುತನ ಮೆಚ್ಚಿಸೆ ಕಮಲಸಂಭವ
ಕ್ಷಿತಿಸುರಗೆ ತಾನೆಂದ ಸತಿಯರ ಭೋಗ ನಿನಗಿಲ್ಲ ‖ ೧೮

ಭೋಗದಾಯಕ ಜೀವನಾಯಕ
ನಾಗಿಹುದು ನೀನಲ್ಲಿ ಪರವಶ
ನಾಗಿಹುದು ಹೋಗೆಂದು ಬೆಸಸಿದ ದ್ವಿಜಗೆ ಕಮಲಜನು ।
ರಾಗದಲಿ ಮೌದ್ಗಲ್ಯ ಮರಳಿದ
ಬೇಗದಲಿ ಕನ್ಯಾರ್ಥಿಯಾಗಿಯೆ
ಯಾಗರುವೆಯೆಂಬಿಂದ್ರಸೇನೆಗೆ ಪತಿಯು ತಾನಾದ ‖ ೧೯

ಮುನ್ನ ವಾರುಣಿಯೆಂಬ ಭೂಸುರ
ಕನ್ನಿಕೆಯು ಹೆಸರಿಂದ್ರಸೇನೆಯು
ತನ್ನ ಪತಿಯೇ ದೈವವೆಂದೇ ಯಿದ್ದಳನವರತ ।
ಉನ್ನತೋನ್ನತಭಕ್ತಿಭರದಲಿ
ಭಿನ್ನವಿರದೆ ವರಪತಿವ್ರತೆ
ಚೆನ್ನೆಯರ ಗರುವೆನಿಸಿ ನಡೆದಳು ದ್ರುಪದ ಕೇಳೆಂದ ‖ ೨೦

ಆತಪೋನಿಧಿ ಕುಷ್ಠರೋಗಪ
ರೀತಜಿಗುಪ್ಸೆಯಲಿ ಹುದುಗಿದೊ
ಡಾತಳೋದರಿ ಭಜಿಸುತಿರ್ದಳು ಭಾವಶುದ್ಧಿಯಲಿ ।
ಆತನೀಕೆಯು ಕೃತ್ಯದಲಿ ಭಾ

ವಾತಿಶಯದಲಿ ಖೋಡಿಯನು ಹಿಡಿ
ವಾತನಾಗಿರಲೊಂದುದಿನವಿಂತಾಯ್ತು ಕೇಳೆಂದ ॥ ೨೧

ಮುದ್ಗಲನ ಕಥೆಯಲ್ಲಿ —ಆತನು ತನ್ನ ಪತ್ನಿಯ ಭಕ್ತಿಗೆ ಮೆಚ್ಚಿ ಆಕೆಯನ್ನು ಸಂತೋಷಪಡಿಸುವಿಕೆ.

ಕೊಳತಬೆರಳನು ಭುಕ್ತಶೇಷದೊ
ಳುಬ್ಬಿಹಿದೊಡೆ ಕಂಡೀಕೆ ಚಿತ್ತದೊ
ಳೊಳುಕದುಪಭೋಗಿಸೆ ಮುನೀಶ್ವರ ಕಂಡು ಕೃಪೆಯಿಂದ [1] |
ಲಲನೆ ಮೆಚ್ಚಿದೆನಿಂದು ನೀಮನ
ವೊಲಿದುದನು ಬೇಡೆನಲು ಬೞಿಕಾ
ಲಲನೆ ನುಡಿದಳು ದಿವ್ಯರೂಪದೊಳೆನ್ನನೆರೆಯೆಂದು ॥ ೨೨

ದ್ರುಪದ ಕೇಳಾಕುಷ್ಠರೋಗವ
ನಪಹರಿಸಿ ಕಂದರ್ಪರೂಪಿನೊ
ಳುಪಚರಿಸಿದನು ಕಾಮಿನಿಯನತಿಕಾಮಕೇಳಿಯಲಿ |
ತಪಸಿ ದಣಿದನು ತನ್ನ ಮುನ್ನಿನ
ತಪವ ನೆನೆದನು ದಣಿದುದಿಲ್ಲೀ
ಚಪಲಲೋಚನೆ ಸೆಱಗ ಹಿಡಿದಳು ಹೋಗದಿರಿ ಯೆನುತ ॥ ೨೩

ಪತ್ನಿಗೆ ಶಾಪವ ಕೊಟ್ಟು ತೀರ್ಥಯಾತ್ರೆಗೆ ಹೋಗುವಿಕೆ.

ದಿಟ್ಟಹೆಂಗಸೆ ನೃಪರ ಬಸುಱಲಿ
ಹುಟ್ಟು ನೀ ಹೋಗೆಂದು ಶಾಪವ
ಕೊಟ್ಟನೀಕೆಗೆ ಹಾಯ್ದನಾಮುನಿವರ ತಪೋವನಕೆ [2] |

ಆಗ ಶಿವನನ್ನು ಕುರಿತು ತಪಸ್ಸನ್ನು ಮಾಡಲು ಶಿವನು ಬರುವಿಕೆ.

ನಟ್ಟಡವಿಯಲಿ ನಳಿನಮುಖಿ ಕಂ
ಗೆಟ್ಟು ಭಜಿಸಿದಳಖಿಳದುರಿತಘ
ರಟ್ಟನನು ದಿವಿಜೇಂದ್ರವಂದ್ಯನನಿಂದುಶೇಖರನ [3] ॥ ೨೪

1 ನಧಿಕಹರುಷದಲಿ, ಕ. 2 ತೀರ್ಥಯಾತ್ರೆಯಲಿ, ಕ.
3 ಬಲುದೈವನನು ಬಾಲೇಂದುಶೇಖರನ, ಕ.

ಹಲವುಕಾಲದೊಳಕಟ ತಪದಲಿ
ಬಳಲಿದಳಲಾ ಮುನಿಯ ವಧುವೆಂ
ದಿಳಿದನೀಶ್ವರನಾತಪೋವನಕೀಕೆ ಯಿದಿರಿನಲಿ |
ಸುಳಿಯೆ ಕಂದೆಱೆದಬಲೆ ಕಂಡಳು
ಸುಲಭನನು ಭಕ್ತರಿಗೆ ತರ್ಕಾ
ವಳಿಗೆ ದುರ್ಲಭನನು ದುರಾಸದ ಮಹಿಮಧೂರ್ಜಟಿಯ ॥ ೨೫

ತರುಣಿ ಮೆಯ್ಯಿಕ್ಕಿದೊಡೆ ಕರದಲಿ
ಶಿರವನೆಗಹಿದನಬುಜಲೋಚನೆ
ವರವ ಕೊಟ್ಟೆನು ಬೇಡಿಕೊಳ್ಳೆನೆ ಕಾಂತೆ ಹರುಷದಲಿ |

ಪತಿಯನ್ನು ಕೊಡು ಎಂದು ಐದುಬ್ಬಾರಿ ಕೇಳಲು ಐದುಜನ
ಗಂಡಂದಿರೆಂದು ಹೇಳುವಿಕೆ.

ಹರ ಪತಿಂ ದೇಹಿ ಪ್ರಭೋ ಶಂ
ಕರ ಪತಿಂ ದೇಹಿ ಪ್ರಭೋ ಯೆಂ
ದರಸಿ ಬೇಡಿದಳೈದು ಭಾರಿ ಮಹೇಶನಲಿ ವರವ ॥ ೨೬

ಬೇಡಿದಳು ತಾ ತನ್ನ ಪತಿಯನು
ಕೂಡೆ ವಾರ್ತದೊಳಱಿಯದಾಗಳ್
ಬೇಡಿದಳು ತಾನಿಂದ್ರಸೇನೆಯು ಪಂಚವಾಕ್ಯದಲಿ |
ಬೇಡಿದರೆ ಗಿರಿಜೇಶನೈವರ
ಕೂಡಿ ನೀಡಿದನಿಂದ್ರಸೇನೆಗೆ
ರೂಢಿಪರು ನಿನಗೊಡೆಯರಹರೌ ಕೇಳು ನೀನೆನುತ ॥ ೨೭

ಆಗ ಭಯಪಡಲು ಅಭಯದಾನ.

ಆದೊಡೈವರು ಪತಿಗಳಹರು ತ
ಳೋದರಿಯೆ ನಿನಗೆನಲು ಬೆಚ್ಚಿದ
ಳೀದುರಿತ ತನಗೇಕೆನುತ ಸತಿ ಮುಚ್ಚಿದಳು ಕಿವಿಯ |

ಆದೊಡಂಜದಿರಂಜದಿರು ವರ
ವೇದಬಾಹಿರವಲ್ಲ ಸತಿಯರೊ
ಳಾದಿಗುರು ಪತಿವ್ರತೆಯು ನೀನೆಂದನು ಮಖಧ್ವಂಸಿ ॥ ೨೮

ಶ್ರುತಿಗಳೆಂಬುದೆ ಯೆನ್ನ ನುಡಿಗಳು
ಕ್ರತುಗಳೆನ್ನಯ ಚೇಷ್ಟೆ ಧರ್ಮದ
ಗತಿ ವಿಚಾರಿಸಲೆನ್ನ ನೇಮದ ವಿಹಿತವಿಧಿ ಯೆಂದ ।
ಶ್ರುತಿಗಳೀ ಮನ್ವಾದಿಗಳು ತರ್ಕ
ಸ್ಮೃತಿಗಳಂಬುಜಭವಾದಿ ದೇವ
ಪ್ರತತಿ ಯೆನ್ನಾಜ್ಞೆ ಯೊಳಗೆಂದಾಸತಿಗೆ ಶಿವ ನುಡಿದ ॥ ೨೯

ನಿನ್ನ ಕಥನವೆ ಪುಣ್ಯಕಥನವು
ನಿನ್ನ ಚರಿತವೆ ಪುಣ್ಯಚರಿತವು
ನಿನ್ನ ನೆನೆವಂಗನೆಗೆ ಬಹುದು ಪತಿವ್ರತಾವಿಭವ ।
ಎನ್ನನುಜ್ಞೆ ಯು ಧರ್ಮಚಿಂತಾ
ಪನ್ನೆಯಾಗದಿರೆಂದು ಕೃಪೆಯಲಿ
ತನ್ನ ಸಿರಿಕರತಳವನಿರಿಸಿದನುತ್ತಮಾಂಗದಲಿ ॥ ೩೦

ಹರನ ನುಡಿಯೇ ವೇದ ಹರನಾ
ಚರಣೆಯೇ ಸನ್ಮಾರ್ಗ ಹರ ಪತಿ
ಕರಿಸಿ ನುಡಿದುದು ಪರಮಪಾವನಧರ್ಮತತ್ತ್ವವಿದು ।
ಬರಹಸಹಿತಾವಿಧಿಯನೊರಸಲು
ಹರ ಸಮರ್ಥನು ಹರನ ಬರಹವ
ನೊರಸಲಾಪರೆ ತೋಱಿಸಾ ಬ್ರಹ್ಮಾದಿದೇವರಲಿ ॥ ೩೧

ಪಂಚಪತಿಗಳು ಎಂದುದಕೆ ರೋದಿಸಲು ಇಂದ್ರನು ಖರುವಿಕೆ

ಬಚ್ಚಿಕ ಪುರುಷಪಂಚಕರಾದುದ
ಕಳುಕಿ ರೋದನ ಮಾಡೆ ವಾಸವ

1 ಕ್ರತುಗಳೀ, ಚ,

ಲಲನೆಯಲ್ಲಿಗೆ ಬಂದು ಕೇಳಿದ ಶೋಕವೇಕೆಂದು ।
ಎಲೆ ಸುರೇಶ್ವರ ಕೇಳು ನನ್ನನೆ
ಯಳುಕಿಸಿದ ಶಾಪದೊಳಗೀವಟು
ವಿಳಯೊಳ್ಳೈವರು ಪತಿಗಳನಗಹರೆಂದು ವರವಿತ್ತ ॥ ೨೧

ಇಂದ್ರನು ಇದನ್ನು ಕೇಳಿ ಶಂಕರನನ್ನು ಜರಿಯುವಿಕೆ.

ಎನಲು ಕೋಪಿಸಿ ಶಕ್ರ ಶಂಕರ
ನಿನಿತು ದುಃಖವ ಲಲನೆಗೀವರೆ
ಮನುಜಲೋಕದಲೆನುತ ವಟುವೇಷವನು ತಾ ಜಱಿದ ।
ನಿನಗಿನಿತು ಬಲವಾರದೆಂದರೆ
ಯೆನಗೆ ಬಲ ಬೇಱೇನು ಲೋಕದ
ಜನವೆ ತಾ ನೀನೆನ್ನ ಪರಿಯನೆ ಯಱಿಯೆ ನೀನೆಂದ ॥ ೨೨

ನಿನ್ನ ಕೊಂಡೆಮಗೇನು ಕಾರಣ
ವೆನ್ನ ರಾಜ್ಯದಲ್ಲೈದೆ ಸುಖಸಂ
ಪನ್ನರಲ್ಲದೆ ದುಃಖವಾರಿಗೆ ಬರುವುದೆಂದೆನಲು ।
ಎನ್ನನಾರೆಂದಱಿಯಲಾ ನೀ
ನಿನ್ನು ನೋಡಾ ತನ್ನನುಜ್ಞೆಯ
ಖಿನ್ನರೈದರೆ ಶೈಲದಡಿಯಲಿ ಸುರನ ನರೋತ್ತಮರು ॥ ೨೪

ಎನಲು ಶಕ್ರನು ಗಿರಿಯನಾಕ್ಷಣ
ಕನಲಿ ಕಿತ್ತಿದನಲ್ಲಿ ನಾಲುವ
ರನಿಮಿಷರ ಪರಿಮಿತದೊಳಿರ್ದರು ಸುಖದಿ ಕುಳ್ಳಿರ್ದು ।
ವಿನುತ ಮಂತ್ರಾಳೋಚನೆಯಲಾ
ಗನಿಲನಂತಕಯಶ್ವಿನೀಸುರ
ರಿನಿತು ಬ್ರಹ್ಮಾಜ್ಞೆಯಲಿ ಯಿರುತಿರೆ ಶಿವನು ತನ್ನಿಂದ ॥ ೨೫

ಶಿವನಿಗೆ ಬ್ರಹ್ಮನ ಶಾಪ

ಬಿದ್ದರೆಂದತ್ಯಧಿಕದೇವರ
ನದ್ವಿಸಿದೆನಾನೆಂದಕಾರಣ
ರುದ್ರನನು ಶಾಪಿಸಿದ ವಾಣೀಪತಿಯು ವಿನಯದಲಿ ।
ಹೊದ್ದುವುದು ಭೂಮಿಯಲಿ ನೀ ಜನಿ
ಸಿದ್ದು ವಿದ್ಯಾನಿಧಿಯು ದ್ರೋಣನ
ಬುದ್ಧಿಗಾಸ್ಪದನಾಗಿ ಭಾರದ್ವಾಜಗೋತ್ರದಲಿ ॥ ೩೬

ಜನಿಸುವುದು ನೀ ನಿನ್ನ ವನಿತೆಯು
ತನುವನೈದದೆ ಬ್ರಹ್ಮಚರ್ಯಾದಿ
ಘನತೆಯಲಿ ಕಲ್ಪಾಯುವಾಗಿಹುದೆಂದು ನೇಮಿಸಿದ ।
ಅನಿಮಿಷೇಶ್ವರನಿತ್ತ ಶಾಪವು
ನನಗೆ ನಿನ್ನಿಂದಾಯ್ತು ಭೂಮಿಯ
ಜನನ ನೀ ನಮ್ಮಂತೆ ಜನಿಯಿಸು ಮನುಜರೂಪಿನಲಿ ॥ ೩೭

ಎಂದೆ ಯಿಂದ್ರಗೆ ಶಾಪವಿತ್ತೊಡೆ
ಯಿಂದುಧರ ತಾ ಮತ್ತೆ ಭೂಸುರ
ನಂದನೆಯು ಹೊರೆಗೈದಿ ಬಂದನು ಹೇಳಿದನು ಬಳಿಕ ।
ಬಂದ ಶಾಪವೆ ತನಗೆ ಬ್ರಾಹ್ಮಣ
ಮುಂದಣಾಯುಾಸವನು ತಿಳುಹಿಯೆ
ಯಿಂದುವದನೆಯು ಸಂತವಿಸಿ ಬಳಿಕೆಂದನಾಶಿವನು ॥ ೩೮

ಆಕೆಗೆ ವರವಂ ಕೊಟ್ಟು ಶಿವನು ತನ್ನಾವಾಸಸ್ಥಾನಕ್ಕೆ
ಹೋಗುವಿಕೆ.

ಉರುಗಣೌಘದನಿಳಯನಾವನ
ಚರಣಜಲವೇ ತ್ರಿಪಥಗಾಮಿನಿ
ಸರಸಿರುಹಸಂಭವನ ಜನಕನು ನಿನ್ನ ರಕ್ಷಿಸುವ ।

ಹರುಷದಲಿ ಕೇಳೆಂದು ಶಂಕರ
ವರವನಿತ್ತಾಸತಿಗೆ ತಿರುಗಿದ
ಮರಳಿ ತಾ ರಜತಾದ್ರಿಗೈದಿದೊಡಾಕೆ ನಿನಗಿಂದು ॥ ೩೯

ಜನಿಸಿದಳು ಪತಿವ್ರತೆಯೊಳುತ್ತಮೆ
ನಿನಗೆ ನಂದನೆಯಾಗಿ ನಿನ್ನಯ
ಘನತರದ ಪುಣ್ಯಾಂಬುರಾಶಿಯ ಸಿರಿಗದಾರೆಂದು ।

ಪಾಂಡವರ ಪೂರ್ವಜನ್ಮದ ವೃತ್ತಾಂತ

ಜನಪ ನಿನ್ನಯ ತನುಜೆ ದ್ರೌಪದಿ
ವನಿತೆಯಾದಳು ಪಾಂಡುಪುತ್ರರ
ಘನವನಱಿಯುಲು ಮುನ್ನ ಕಮಲಜನಾಜ್ಞೆಯಾದುದನು ॥ ೪೦

ಬೞಿಕಲಿಂದ್ರನು ಮಱವೆಯುಲಿ ಕಳ
ವಳಿಸಲಾತಂಗಾಗಳಂತಿರೆ
ಹಲವುದಿನ ಸೆಱೆಯಾಯ್ತು ರಜತಾಚಲದ ಕುಹರದಲಿ ।

ಶಿವಶಾಪದಿಂದ ಐದುಜನರಿಂದ ಕೂಡಿ ಬಿಲದೊಳಿರುವಿಕೆ.

ಬಿಲದೊಳೀಪರಿ ಯಿಂದ್ರರೈವರು
ಸಿಲುಕಿದರು ಶಂಕರನ ಖತಿಯುಲಿ
ಬೞಿಕ ಬಿಡುಗಡೆಯಾಯ್ತು ಕಾತ್ಯಾಯನಿಯ ದೆಸೆಯಿಂದ ॥ ೪೧

ಅದಱನೈವರಿಗೀಕೆ ವಧುವೆಂ
ಬುದು ಮಹೇಶ್ವರವಾಕ್ಯ [1] ನೀನಿಂ
ತಿದಕೆ ಚಿಂತಿಸಬೇಡ ಬೞಿಕೀಪಾಂಡುನಂದನರ ।
ಹದನನಱಿವೊಡೆ ಕೇಳು ನೃಪ ಪೂ

---

[1] ನಾಜ್ಞೆ, ಚ.

ರ್ವದಲಿ ಸುರಪತಿ * ತಾನು ಬಚಿಕಾ
ತ್ರಿದಶನಾಯಕನೆಂಬ ಗರ್ವದಲಾಯ್ತು ಶಿವಶಾಪ * ‖ ೪೨

ಬ್ರಹ್ಮಶಾಪದಿಂದ ಯಮನು ಅಶ್ವಿನೀದೇವತೆಗಳು ಸಹ ಜನಿಸುವಿಕೆ.

ಸರಸಿರುಹಸಂಭವನ ಶಾಪದಿ
ಧರೆಗೆ ಜನಿದರಶ್ವಿನೀಸುರ
ವರರು ಯಮ ತಾ ಸಹಿತ ನಾಲ್ವರು ನೆರೆದು ಬಿನ್ನವಿಸೆ ।
ಸುರಶಿರೋಮಣಿ ಸರ್ವಜೀವರೊ
ಳಿರುವ ಮಾರುತಿಗಱುಪೆ ಕೇಳದ
ಧರೆಯೊಳಗೆ ತಾವೆಲ್ಲಿ ಜನಿಸುವೆವೆಲ್ಲಿ ಜನಿಸೆಂದ ‖ ೪೩

ಅಲ್ಲಿ ಪಂಕಜನಾಭ ಕಾರ್ಯ
ಕ್ಕಲ್ಲಿ ಜನಿಸಿಯೆ ಯಾದವೇಂದ್ರನ
ನಲ್ಲಿ ಭಜಿಸಲು ಶಾಪ ಹಿಂಗುವುದೆಂದು ನೇಮಿಸಲು ।
ನಿಲ್ಲದೈವರು ನಿನ್ನ ಮಗಳಿಗೆ
ವಲ್ಲಭರು ನೆರೆಯಾದರೆಂದೆನ
ಲೆಲ್ಲವಿದು ಕಮಲಜನ ರಾಣೀವಾಸದಾಜ್ಞೆಯಲಿ ‖ ೪೪

ಒಲಿದು ಮಾರುತಿ ಯಿಂದ್ರಮುಖ್ಯರ
ಹಳೆಯ ಶಾಪಕೆ ಹರಿವ ಕಂಡನು
ತಿಲಕನಯನಾಂಗನೆಯು ಸಹಿತಾಶಾಪ ನಾಲ್ವರದ ।
ಕಳದಳ್ಯ ಶ್ರೀವಾಯುವಧು ತಾ
ನೊಲಿದು ಪಂಚಕಸತಿಯರೆಲ್ಲರು
ಬಚಿಕ ನಿನ್ನಯ ಸುತೆಯೊಳಾಗಲು ಜನಿಸಲೊಂದಾಗಿ ‖ ೪೫

ಜನಿಸಿದರು ತಾವೀಕೆಗಾಗಿಯೆ
ಯನಿಮಿಷರು ತಾವಲ್ಲಿ ಬರುತಿರ
ಲನಿಲನಂತಕಗಾವು ಜನಿಸುವ ಕುಂತಿಸುತರಾಗಿ ।

* ಶಂಕರನ ಶಾಪಧಲಿ ನವೆದನು ಹಲವುದಿನ ಕೈಲಾಸಕುಹರದಲಿ, ಖ. *

ಎನಲು ನಡುಗಿದರವರು ಮೊದಲಲಿ
ಮನುಜಜನ್ಮವೆ ಕಷ್ಟವೆದಱಲಿ
ವನಿತೆ ಯೊಡಪುಟ್ಟಿದರಿಗೊಬ್ಬಳ್ ಶಿವಶಿವಾಯೆನುತ ॥ ೪೬

ಮಱುಗಿದರು ಸುರವರರು ನಾಲ್ವರು
ಹರ ಹರಾ ಯೆನಲವರ ಕಳುಹಿದ
ಹರನ ಹೊರೆಯುಕೆ ಬಂದು ಬಿನ್ನಹ ಮಾಡಿದರು ಶಿವಗೆ ।
ಧರಿಸಲಾರೆವು ಮನುಜಯೋನಿಯು
ಧರಿಸಿದರೆ ಸತಿಯೊಬ್ಬಳೈವರಿ
ಗರಸಿಯಹಳದಕಾರೆವೆಂದೆನೆ ಶೂಲಿ ಯಿಂತೆಂದ ॥ ೪೭

ಅದು ನಿಮಗೆ ಬಿಡದಿನ್ನು ಬೞಿಕಾ
ವಿಧಿಯು ಶಾಪದಿ ನಾನು ಭೂಮಿಯೊ
ಳುದಿಸುವೆನು ತಾ ದ್ರೌಣಿನಾಮದಲೆಂದೊಡಾಶಿವಗೆ ।
ವಿಧಿಸಲಾಪರಿ ನೀವು ಶಾಪವ
ಮುದದೊಳೀಜಗಜೀವಜನನಿಯು
ಸದನದಲಿ ಜನಿಸಲ್ಕೆ ನಿಃಕ್ಷತಿಯುಹುದು ಕೇಳೆಂದ ॥ ೪೮

ಜನಿಸುವುದು ನೀವೈವರಿಂದ್ರರು
ಮನುಜಲೋಕದಲರಸಕುಲದಲಿ
ವನಿತೆ ನಿಮ್ಮೈವರಿಗದೊಬ್ಬಳು ತಾ ನಿಧಾಸಿಸಲು ।
ಜನನವಿದು ಕಡು ಕಷ್ಟ ನಮ್ಮಯ
ಮುನಿತನವು ತಾನಲ್ಲವೆನುತಲಿ
ವನಿತೆಯನು ಸ್ವೀಕರಿಪ ಹದನನು ಬಲ್ಲ ಶಿವನೆನುತ ॥ ೪೯

ಇಂದ್ರರು ಪ್ರಾರ್ಥಿಸಲು ಅದರಿಂದ ನಿಮಗೆ ಬಾಧಕವಿಲ್ಲೆಂದು
ಶಿವನು ಹೇಳುವಿಕೆ.

ಹರ ಹರ ತ್ರಾಹೀಶ ಕರುಣಾ
ಕರ ಮಹಾದೇವನೆ ದುರಂತದ

ನರಕಸಾಧನವುಚಿತವೇ ನಿಮ್ಮಂಘ್ರಿಭಜಕರಿಗೆ [1] |
ಕರುಣಿಸೈ ಮತ್ತೊಂದು ಪರಿಯಲಿ
ವರವನೆನೆ ನಸುನಗುತ ಗಂಗಾ
ಧರನು ತಿಳುಹಿದನೈವರಿಗೆ ಬೞಿಕರಸ ಕೇಳೆಂದ ‖ ೫೦

ಖೇಡತನವೇಕಿದಕೆ ನಿಮ್ಮೊಳು
ಖೋಡಿ ಇದರೊಳಗಿಲ್ಲ [2] ಮುನಿವಧು
ಬೇಡಿದಳು ಪೂರ್ವದಲಿ ವರವನು ಪಂಚವಾಕ್ಯದಲಿ |
ಖೋಡಿಯಾಗದು ಧರ್ಮಮಾರ್ಗಕೆ [3]
ಕೇಡುಬಾರದು ನಿಮ್ಮ ನೆಱೆ ಕೆ
ಟ್ಟಾಡಿದರೆ ಬಾಯ್ ಹುಳಿವುದೆಂದನು ಬಾಲಶಶಿಮೌಳಿ ‖ ೫೧

ನಿಮ್ಮ ಚರತವೆ ಪುಣ್ಯಚರಿತವು
ನಿಮ್ಮ ಕಥನವೆ ಪುಣ್ಯ ಕಥನವು
ಸಿಮ್ಮ ಯುದ್ಧವೆ ಧರ್ಮಯುದ್ಧವದೆಂದನಾಶಿವನು |
ನಿಮ್ಮ ಸತಿಯಳ ನಿಮ್ಮನೈವರ
ನಿಮ್ಮ ನೆನೆವರ ಯಾದವೇಂದ್ರನು
ನಿಮ್ಮ ತಾನೊಲವಿನಲಿ ಕಾದಪನಿಹಪರಂಗಳಲಿ ‖ ೫೨

ವ್ಯಾಸರು ಸರ್ವವನ್ನು ಹೇಳಿದ್ದಲ್ಲದೆ ದ್ರುಪದನಿಗೆ ದಿವ್ಯದೃಷ್ಟಿಯಂ
ಕೊಟ್ಟು ಸರ್ವವನ್ನು ತೋರಿಸುವಿಕೆ.

ಎನೆ ಹಸಾದವೆನುತ್ತ ನಿಟಿಲೇ
ಕ್ಷಣನನೈವರು ಬೀೞುಕೊಂಡರು
ಜನಿಸಿದರು ಮಹಿಯೊಳಗೆ ಕುಂತೀದೇವಿಸುತರಾಗಿ |

---

1 ದರ್ಶನಕೆ, ಚ　　2 ರೂಢಿತಪದೊಳಗೊಬ್ಬ, ಕ. ಖ

3 ಜೋಡೆನಿಸಿದಳುನಾರಿಧರ್ಮಕೆ, ಚ

ನಿನಗೆ ಮಗಳೀವನಿತೆ ಕುಂತೀ
ತನುಜರಿವರಳಿಯಂದಿರೈ * ನೀ
ವಿನಿತು ಘನವೆಲ್ಲವನು ಪ್ರೀರದಿರಿ ತೋಱಬೇಕೆಂದ * ॥ ೫೩

ಎಲೆ ಮರುಳೆ ಪೂರ್ವದಲಿ ತಾಪ್ ತ
ವ್ಮೊಳಗೆ ಯೈವರು ಜನಿಸೆ ನಿನ್ನೀ
ನಳಿನವಮುಖಿಗಿವರೆಲ್ಲ ವರಗಳು ಪಾಂಡುನಂದನರು ।
ಇಳೆಗೆ ಜನಿಸಿದರೆಂದು ಕೃಷ್ಣನ
ನಳಿನಚರಣದ ಸೇವೆಗೋಸುಗ
ಸುಲಭನಿವರಿಗೆ ಯಾದವೇಂದ್ರನು ಯೆಂದನಾಮುನಿಪ ॥ ೫೪

ತಿಳಿಯದಿರೆ ನೋಡಾದೊಡೆನುತ
ಗ್ಗಳೆಯ ಮುನಿಪತಿ ದಿವ್ಯದೃಷ್ಟಿಯ
ಸಲಿಸಿದೊಡೆ ನೋಡಿದನು ನೃಪನೀಪಾಂಡುನಂದನರ ।
ಹೊಳೆಹೊಳೆವ ಕಳರಾಸಿಯಿಂದವೆ
ಒೞಕ ನಯನಕಪೂರ್ವರೂಪಿನ
ಬೞಗವಾಗಿರೆ ಪಾಂಡುಪುತ್ರರ ಕಂಡನಾದ್ರುಪದ ॥ ೫೫

ಮೆಱೆವ ದೇಹಪ್ರಭೆಗಳಲಿ ಮಿಱು
ಮಿಱುಪದಿವ್ಯಾಭರಣಕಿರಣದ
ತುಱುಗಿನಲಿ ತನಿಹೊಳೆವ ದಿವ್ಯಾಂಬರದ ಕಾಂತಿಯಲಿ ।
ಅಱಿತವಹವನಿತೆಲ್ಲವನು ಕಂ
ದೆಱೆವ ತೇಜಃಪುಂಜಮಯರಸ
ದೆವಕವೆನಲವರೈವರೊಪ್ಪಿದರಿಂದ್ರತೇಜದಲಿ ॥ ೫೬

ಮನದ ಝೊಮ್ಮಿನ ಜಡಿವ ರೋಮಾಂ
ಚನದ ಹುದುಗುವ [1] ಹೊದಱುಕಂಗಳ

---

* ನಿನಗೆನಿತು ಘನವೋ ಶಿವ ಯೆನುತ ತಲೆದೂಗಿದನು ಮುನಿಪ *

1 ಹೆದಱಿದ, ಕ

ಜೆನುಗುವಾತಿನ ಹೂತ ಹರುಷದ ಹೊಂಗಿದುತ್ಸವದ ।
ಕೊನರ್ವ ಬೆಳಗಿನ ತಳಿತ ಚಿಂತೆಯು
ನೆನೆದ ಭಾವದ ರಾಗರಸದು
ಬ್ಬಿನಲಿ ಹೊಂಪುಳಿಯೋದನಿವರನು ಕಂಡು ಪಾಂಚಾಲ ॥ ೫೭

ಆಗ ದ್ರುಪದನು ವ್ಯಾಸರನ್ನು ಸ್ತುತಿಸುವಿಕೆ.

ಅರಸ ಕಂಡೈ ನರಪತಿಗಳೋ
ಸುರಪತಿಗಳೋ ಮನದ ಸಂಶಯು
ಹರಿದುದೇ ಹೊರೆಯಿಲ್ಲಲೇ ಲೇಸಾಗಿ ನೋಡೆನಲು ।
ಪರಮಋಷಿಯರೆ ನಿಮ್ಮ ಕೃಪೆಯಲಿ
ನಿರುತವನು ಗೋಚರಿಸಿ ಕಂಡೆನು
ಪರಮಹರುಷದಲೆನುತ ಚರಣವ ಹಿಡಿದು ಮುಂಡಾಡಿ ॥ ೫೮

ನಂಬಿದ್ದೈ ಲೇಸಾಗಿ ಲಗ್ನವಿ
ಳಂಬವಾಗದೆ ಧಾರೆ ಯೆಱೆ ಕಳ
ಶಾಂಬುವಿದೆ ನೀ ಹೋಗು ಕಶ್ಯಪ ಹೋಮಸಾಧನವ ।

ಬಳಿಕ ಸಾಂಗವಾಗಿ ವಿವಾಹವನ್ನು ನಡಸುವಿಕೆ.

ತುಂಬು ವಹಿಲದಲವನಿಯುಮುರಕ
ದಂಬ ನೆರೆಯುಲಿ ಯೆನಲು ದ್ರುಪದನ
ಹೆಂಬೆಳೆಯು ತನಿಹರುಷ ಹೊರೆಯೋಱಿತ್ತು ನಿಮಿಷದಲಿ ॥ ೫೯

ಸಾರಿದರು ಮುಟ್ಟಕ್ಕಿಯನು ಗುಡ
ಜೀರಿಗೆಗಳೊದಗಿದುವು ಲಗ್ನವಿ
ಹಾರದಾಶೀರ್ವಾದದಾಯುತರವದ ರಭಸದಲಿ ।
ಧಾರೆಯೆಱೆದನು ದ್ರುಪದ ಪಾಂಡುಕು
ಮಾರರಿಗೆ ನಿಜಸುತೆಯುನತಿವಿ
ಸ್ತಾರಿಸಿತು ವೈವಾಹರಚನೆ ವಿಶಾಲವಿಭವದಲಿ ॥ ೬೦

ಹೋಮಸಮನಂತರದಲಖಿಳಧ
ರಾಮರರ ಪೂಜೆಯಲಿ ಸುಜನ [1]
ಸ್ತೋಮ ತುಷ್ಟಿಯ ಮಾಡಿದನು ಸನ್ಮಾನದಾನದಲಿ ।
ಆಮುನೀಂದ್ರಂಗೆಱಗಿದರು ನೃಪ
ರಾಮಹಾಸತಿಸಹಿತಪರಮ
ಪ್ರೇಮದಲಿ ಹರಸಿದನು ತೆಗೆದಪ್ಪಿದನು ಪಾಂಡವರ ॥ ೬೧

ಪರಮವೈಭವದಲಿ ಚತುರ್ಥಿಯ
ಮಱುದಿವಸದೋಕುಳಿಯ ಪರಿಜನ
ಪುರಜನದ ಸುಮ್ಮಾನಶರಧಿಯ ಸಾರಸಂಪದವ ।

ಸರ್ವರಿಗೂ ಬುದ್ಧಿವಾದಗಳನ್ನು ಹೇಳಿ ವ್ಯಾಸರು ತಮ್ಮಾಶ್ರಮಕ್ಕೆ ಹೋಗುವಿಕೆ.

ವರಮುನಿಪನೀಕ್ಷಿಸಿದನನಿಬರ
ಕರೆಸಿ ನಯನೀತಿಗಳ ಹೇಳಿಯೆ
ಮರಳಿ ಬಿಜಯಂಗೈದು ಹೊಕ್ಕನು ಬದರಿಕಾಶ್ರಮವ ॥ ೬೨

ಬಳಿಕ ಪಾಂಡವರಾಯರೈವರು
ನಳಿನನಾಭನ ಚರಣಕಮಲವ
ನಲಿದು ನೆನೆವುತ್ತಿದ್ದರಾಪಾಂಚಾಲನಗರಿಯಲಿ ।
ಎಲೆ ಮುಕುಂದ ಮುರಾರಿ ಯಾದವ
ತಿಲಕ ಕಾವುದು ತಮ್ಮನೆನುತಲಿ
ನಳಿನಮುಖಿ ಸಹಿತಲ್ಲಿ ವತ್ಸರವೊಂದ ನೂಕಿದರು ॥ ೬೩

ಅಂದಿಗಾದುವು ವರುಷ ಕಾಲನ
ನಂದನಗೆ ಮೂವತ್ತುವರೆ ಬಳಿ

---
1 ಭೂತ್ಯ ಚ.

ಕಂದಿನೋಪಾದಿಯಲಿ ನಾಲ್ವರಿಗೊಂದು ಕೊಱತೆಯಲಿ ।
ಸಂದುದೈ ವತ್ಸರವು ಪಾಂಡವ
ನಂದನರಿಗಾದಿನಕೆ ಕೇಳ್ಳೈ
ತಂದೆ ಪರೀಕ್ಷಿತತನಯ ಯಾದವರಾಯನೊಲುವೆಯಲಿ ॥ ೪೬

ಆಗ ಯಾದವರು ಪಾಂಡವರನ್ನು ನೋಡಲು ಬರುವಿಕೆ

ದ್ವಾರಕಿಯ ಮಧ್ಯದಲಿ ಪಾಂಡವ
ವೀರರೈವರು ಮದುವೆಯಾದುದ
ಧೀರಯಾದವರ್ಕೈದೆ ಕೇಳಿಯೆ ವಿವಿಧಪರುಷದಲಿ ।
ನಾರಿಯರು ವಸುದೇವಸಹಿತ ಮು
ರಾರಿಯಲ್ಲಿಗೆ ಬಂದು ಕುಂತೀ
ನಾರಿತನುಜರ ನೋಡಿ ಬಪೆ ನಡೆ ಯೆನುತ ಬಿನ್ನವಿಸೆ ॥ ೬೫

ಬಳಿಕ ಮುರರಿಪು ತಾತನಾಜ್ಞೆಗೆ
ಸಲಿದು ಯಾದವಸೇನೆಯಾಗಳ
ಯೊಲವಿನಲಿ ಗಮಿಸಿದುದು ಪಾಂಡವರಾಯುವರುಶನಕೆ ।
ಜಲಜನಾಭನು ಸಕಲಯಾದವ
ಬಳಿಗ ಸಹಿತೈತಂದ ಯದುಕುಲ
ತಿಲಕ ಗದುಗಿನ ವೀರನಾರಾಯಣನು ಮನವುಟ್ಟ ॥ ೬೬

ಮೂವತ್ತ ಮೂರನೆಯ ಸಂಧಿ ಮುಗಿದುದು

ವೈವಾಹಿಕಪರ್ವ ಮುಗಿದುದು.

ಮೂವತ್ತನಾಲ್ಕನೆಯ ಸಂಧಿ

ಸೂಚನೆ

ಧಾಳಿಯಲಿ ಬಂದರಿಬಲದ ಹೆ
ಬ್ಬಾಳುತನವನು ಮುಱಿದು ಸಂಧಿಯ
ಮೇಲೆ ಧರ್ಮಜ ಬಂದು ಹೊಕ್ಕನು ಹಸ್ತಿನಾಪುರವ ||

ಪಾಂಡವರ ವಿವಾಹವಾರ್ತೆಯನ್ನು ಕೇಳಿ ಕೌರವರ ಸಂತಾಪ.

ಕೇಳು ಜನಮೇಜಯ ನೃಪತಿ ಪಾಂ
ಚಾಲಸುತೆಯ ವಿವಾಹವಾರ್ತೆಯ
ಕೇಳಿದರಲ್ಲೈ ಕೌರವರು ಮಱುಗಿದರು ಮಱುಕೊಳಿಸಿ |
ಆಳ ನೆರಹಿದರಖಿಳದಳದೆ
ಖ್ಖಾಳವನು ಮಾಡಿದರು ಭೂಮೀ
ಪಾಲಸಂಕುಲ ಸಹಿತ ಬಂದರು ದ್ರುಪದಪುರಿಗಾಗಿ || ೧

ಏನ ಹೇಳುವೆನಿನ್ನವರ ಜಯ
ಮಾನವನು ಮತ್ತೊಂದು ಪೈಕದ
ಮಾನಭಂಗಸ್ಥಿತಿಯನೆಲೆ ಜನಮೇಜಯ ಕ್ಷಿತಿಪ |
ಭಾನುವಿನ ಮಂಜಿನ ಶಿಲೋಚ್ಚಯ
ಸಾನುವಿನ ತಗರಿನ ತರಕ್ಷುವ
ಧೇನುವಿನ ಹೋರಟೆಯ ಹವಣನು ಹೇಳಲೇನೆಂದ || ೨

ಭೀಮಪಾರ್ಥರಿಂದ ಪರಾಜಿತರಾಗಿ ಸರ್ವರೂ ತಮ್ಮತಮ್ಮ ಸ್ಥಳಕ್ಕೆ ಹೋಗುವಿಕೆ.

ಮುಱಿದುದಾಹೆಬ್ಬಲ ವಿಘಾತಿಯ
ಲೊಱಗಿದರು ಪಟುಭಟರು ಗಜಹಯ

ದೊಱೆತೆ ಬತ್ತಿತು ಭೀಮಪಾರ್ಥರ ಶರನಿದಾಘದಲಿ ।
ಉಱುಕುಗೊಂಡರು ನಿಚ್ಚಟರು ಕೈ
ಮಱೆದುದಾಚೆಯ ಧೈರೆಗಳವದಿರು
ನೆಱೆ ವಿಭಾಡಿಸಿತೆಗೆದುಹಾಯ್ದರು [1] ಹಸ್ತಿನಾಪುರಕೆ ॥ ೩

ಬೞಿಕ ಪಾಂಚಾಲಕನ ಭೀತಿಯ
ಮೊಳಕೆ ಮುರಿದುದು ಮೆಱೆದುದುತ್ಸವ
ಜಲಧಿವಲಯದ ಭೂತಳಾಗ್ರದ ಭೂತಳೇಂದ್ರರಲಿ ।
ಹೊಳೆಹೊಳೆವ ರವಿರಶ್ಮಿಗಳ್ಪರ
ಜ್ವಲಿಸುವಂತಿರೆ ಪಾಂಡುನಂದನ
ರಳವಿನುಬ್ಬಟೆ ಬಿಸಿಲು ಪಸರಿಸಿತು ದೆಸೆದೆಸೆಗೆ ॥ ೪

ಕೃಷ್ಣನ ಆಗಮನ.

ಬಂದನಲ್ಲಿಗೆ ಸಕಲಯಾದವ
ವೃಂದಸಹಿತ ಮುರಾರಿ ಕುಂತೀ
ನಂದನರು ಬರಲಿದಿರುಗಾಣಿಸಿಕೊಂಡರುಚಿತದಲಿ ।
ತಂದ ಬಹುವಿಧವಸ್ತುಭಾರವ
ನಂದು ಕೊಟ್ಟನು ಗಜರಥಾಶ್ವವ
ನಿಂದುವದನೆಯರಿಗೆ ವಿಚಿತ್ರಾಂಬರವಿಭೂಷಣವ ॥ ೫

ಕೃಷ್ಣನ ಮುಂದೆ ತನ್ನ ಸುಖದುಃಖಗಳನ್ನು
ಕುಂತಿಯು ಹೇಳಿಕೊಳ್ಳುವಿಕೆ.

ಮಗನೆ ಧರ್ಮಜ ಕೇಳು ಭೀಮಾ
ದಿಗಳ್ ಹರಿ ಯೆಂಮ್ಮ ಕೃಷ್ಣದೇವನ
ಮಗನು ಸೋದರಮಾವನೀತನು ನಿಮಗೆ ವಸುದೇವ ।
ವಿಗಡರೀಯಾದವನೃಪರು ಬಂ

[1] ಸೆಱೆಯ ಸೂಱೆಯ ಹಿಡಿಸಿ ಹೋದರು, ಕ. ಖ.

ಧುಗಳು ನಿಮಗೆಂದೈವರನು ಕೈ
ದೆಗೆದು ಕಮಲೋದರನ ಕೈಯ್ಯಲಿ ಕೊಟ್ಟಳಾಕುಂತಿ ॥ ೬

ಬನದೊಳಪಗತನಾದನಿವರ
ಯ್ಯನು ಕುಮಾರರ ಬಾಲ್ಯಕಾಲದೊ
ಳೆನಗೆ ರಕ್ಷಾಭಾರ ಬಿದ್ದುದು ಪತಿಪರೋಕ್ಷದಲಿ ।
ಇನಿಬರನು ಗಜಪುರಿಗೆ ಕೊಂಡೊ
ಯ್ದೆನು ಸುಯೋಧನನಿಂದ ವೈರವು
ಜನಿತವಾದುದು ಬಳಿಕ ಲಾಕ್ಷಾಭವನದಹನದಲಿ ॥ ೭

ಉರಿಯೊಳುಳಿದೆವು ನಿಮ್ಮ ಚರಣ
ಸ್ಮರಣಬಲದಲಿ ಬಹಳ ವಿಪಿನಾಂ
ತರದೊಳಗೆ ತೊಳಲಿದೆವು ತಿರಿದೆವು ಹೊರೆದೆವೊಡಲುಗಳ ।
ಬರಬರಲು ತತ್ಸಕಲದುಃಖೋ
ತ್ಕರನಿವಾರಣ ದ್ರುಪದಕನ್ಯಾ
ವರಣ ನಿಮ್ಮಾಯಂಘ್ರಿದರುಶನವೆಂದಳಾ ಕುಂತಿ ॥ ೮

ದೇವಿ ಚಿತ್ತವಿಸಾಪಚಾರಿಕ
ಭಾವವೇ ಧರ್ಮಜನು ಭೀಮನು
ಭಾವನವರು ಧನಂಜಯಾದಿಗಳೆಮಗೆ ಮೈದುನರು ।
ಈವುಪಾಧಿಸ್ಥಳದೊಳಂತ
ರ್ಜೀವನವು ಪ್ರಾಣಾದಿವಾಯುಗ
ಳಾವು ನಿಮ್ಮೈವರಿಗೆ ಕಾರಣವೆಂದನ [1] ಸುರಾರಿ ॥ ೯

ದ್ರುಪದ ಗುಡಿಗಟ್ಟಿದನು ಕುಂತಿಯು
ವಿಪುಳಹರುಷವನೇನನೆಂಬೆನು
ದ್ರುಪದ ಯದುಪರಿವಾರ ವುಲಿದುದು ಜಲಧಿಘೋಷದಲಿ ।

1 ಯೆಂದನು ಕುಂತಿಗ, ಕ. ಖ.

ಅಪರದೆಸೆಯ ಮುಗಿಲೊಡೆದು ಹೊಳಹೊಳ
ದುಪರಿಚರ ರವಿಯಂತೆ ತತ್‌ಕ್ಷಣ
ವಿಪುಳತೇಜಃಪುಂಜರೆಸೆದರು ಪಾಂಡುನಂದನರು ॥ ೧೦

ಇದಿರಲವನಿಪಭೀಮನೆಡವಂ
ಕದಲಿ ಮಾದ್ರೀಸುತರು ಬಲವಂ
ಕದಲಿ ದೇವಕಿ ಕುಂತಿವಸುದೇವಾದಿಯದುನಿಕರ ।
ಮುದದಿನೈವರ ರಮಣಿ ಬಲವಂ
ಕದಲಿ ಕರುಣಾಳುವಿನ ವಾಮಾಂ
ಕದಲಿ ಫಲುಗುಣನೊಪ್ಪಿ ಮೆಱೆದನು ದಾನವಧ್ವಂಸಿ ॥ ೧೧

ಆವುದೋ ಧರ್ಮಜನ ಭೀಮನ
ಭಾವಶುದ್ಧಿ ಧನಂಜಯನ ಸುಕೃ
ತಾವಲಂಬನ ಸಾರವೆಂತುಟೊ ಶಿವ ಮಹಾದೇವ ।
ತಾವು ಗಾಣವು ವೇದವುಪನಿಷ
ದಾವಳಿಗಳೋಲೈಸಿ ಕೃಷ್ಣ ಕೃ
ಪಾವಿಲಾಸವ ನೋಡಿ ಯೆಂದುದು ಸಕಲಸುರನಿಕರ ॥ ೧೨

ಅರಸ ಚಿತ್ತೈಸಂದಿನೋಲಗ
ಹರಿದುದಾ ಹರಿಸೇನೆ ಬಿಟ್ಟುದು
ಪುರದ ಬಹಿರುದ್ಯಾನವೀಧಿಗಳೊಳಗೆ ಹರಹಿನಲಿ ।

ಚಾರರಿಂದ ಧೃತರಾಷ್ಟ್ರನು ಈ ವಾರ್ತೆಯನ್ನು ಕೇಳಿ ಚಿಂತಿಸುವಿಕೆ.

ಕುರುನೃಪಾಲನ ಗುಪ್ತಚಾರರು
ಅಱಿದರೀವಾರ್ತೆಯನು ಪುರದಲಿ
ನೆರಹಿದರು ನೆಱೆ ಕೇಳಿದನು ಧೃತರಾಷ್ಟ್ರನೀಹದನ ॥ ೧೩

ಕರೆಸಿದನು ಗಾಂಗೇಯ ಗೌತಮ
ಗುರುಸುಯೋಧನಶಕುನಿಸೈಂಧವ

ಗುರುತನುಜ ರಾಧೇಯ ವಿದುರವಿಕರ್ಣಸೌಬಲರ |
ಚರಮುಖಪ್ರತಿಪನ್ನ ಬಂಧುರ
ತರವಚೋವಿನ್ಯಾಸಕರ್ಣ
ಜ್ವರವೊ ಕರ್ಣಾಮೃತವೊ ಕೇಳಿರೆ ಯೆಂದನಂಧನೃಪ ‖ ೧೪

ಕೇಳಿರೈ ಹೇಳುವೆನು ಯಾದವ
ರಾಳು ಬಂದು ದುಗುಡಜನಾರ್ದನ
ಕೋಳುವೋದನು ಗಡ ಯುಧಿಷ್ಠಿರಭೀಮಪಾರ್ಥರಿಗೆ |
ಗಾಳಿ ಬೆಂಬಲವಾಗಲುರಿಯು ಛ
ಡಾಳವನು ಜಾಳ್ಯಸಬಹುದೆ ವಿ
ಟಾಳಿಸಿತಲ್ಲೈ ನಿಮ್ಮಗಾರುಡವೆಂದನಂಧನೃಪ ‖ ೧೫

ಆಗ ಸೈಂಧವಾದಿಗಳು ತಮ್ಮನ್ನು ಹೊಗಳಿಕೊಳ್ಳುವಿಕೆ.

ಎನಲು ಗರ್ಜಿಸುತರಸೆ ಮುರರಿಪು
ಜೆನುಗಿದೊಡೆ ಗಿರಿ ಜಱಿವುದೇ ಯಮ
ತನುಜಭೀಮಾರ್ಜುನರ ಹಿಡಿಯೊಳಡಗವುದೆ ಗಗನ [1] |
ದನುಜರಿಪುವಿನೊಳೇನಹುದು ಬರ
ಲನಿಮಿಷರು ನೆರವಾಗಿ ನಮ್ಮನು
ಜನಪ ನೋಡೆಂದರು ಜಯದ್ರಥಕರ್ಣಸೌಬಲರು ‖ ೧೬

ಕೊಱತೆಯಲ್ಲಿದು ನಿಮ್ಮ ನಾವ್ ಕಂ
ಡಱಿದೆವಿವರತಿಬಳರು ಕೃಷ್ಣನ
ಬಱಿಯ ಸಾಹಸವೇನು ಭೀಮಾರ್ಜುನರ ಬಲುಹೇನು |

ಆಗ ಅವರನ್ನು ಕರೆಸಿ ಸಮಾಧಾನವಾ ಮಾಡೆಂದು ಭೀಷ್ಮರ ವಚನ

ನೆರವಣಿಗೆಯುಳ್ಳವರು ನೀವ್ ಹೊ
ಕ್ಕಱಿದ ರಣ ಹಸಿಯಾಱಿತೇ ನೀ
ವೆಱಿಯಿರೇ ಭೂಪಾಲ ಯೆಂದನು ನಗುತ ಗಾಂಗೇಯ ‖ ೧೭

---
1 ಭೀಮಾರ್ಜುನರು ಹಿಡಿದರೆ ಗಗನವಡಗುವುದೆ, ಚ. ಠ.

ಇವರ ಬಲುಹಂತಿರಲಿ ಸಾಕಿ
ನ್ನವರ ಕರೆಸು ವಿರೋಧಬಂಧ
ವ್ಯವಹೃತಿಗೆ ಫಲವಿಲ್ಲ ಮೂಲಚ್ಛೇದಕರ್ಮ[1] ವಿದು |
ಅವರು ಮುನ್ನತಿಬಳರು ಕೃಷ್ಣನ
ಪವಣ ನೀನೇ ಬಲ್ಲೆಯಿನ್ನೀ
ಸವಡಿ ಮಾರಿಯು ತೊಡಕು ಲೇಸಲ್ಲೆಂದನಾಭೀಷ್ಮ || ೧೮

ಕರೆಸು ವಿದುರನ ಕಳುಹಿ ವಾರಣ
ಪುರದ ರಾಜ್ಯವಿಭಾಗವನು ವಿ
ಸ್ತರಿಸಿ ಕೊಡುವುದು ಪಾಂಡುಸುತರಿಗೆ ಮುನ್ನಿನಂದದಲಿ[2] |
ನರಯುಧಿಷ್ಠಿರಪವನಜರನುಪ
ಚರಿಸಿ ನಿನ್ನವಗುಣವ ನೋಡದೆ
ಬೆರಸಿ ಕೊಡುವೆನು ಕೂಡೆ ಬದುಕುವುದೆಂದನಾಭೀಷ್ಮ || ೧೯

ಕರೆಸಿ ಕೊಡಿರೈ ನಿಮ್ಮ ಚಿತ್ತಕೆ
ಬರಿಸಿ ನಡೆಸುವೆ ನನ್ನ ಮಕ್ಕಳ
ದುರುಳತನದಿಂದಾದ ಹಿಂದಣಮುಕ್ಕಳಾಟಿಕೆಯು |
ಮಱೆದು ಕಳೆಯಲಿ ಪಾಂಡುನಂದನ
ರೆರವಿಗರೆ ಬಾ ವಿದುರ ಭೀಷ್ಮನ
ಪರಮಮತವೇ ನನ್ನ ಮತ ಹೋಗೆಂದನಂಧನೃಪ || ೨೦

ವಿದುರನು ಪಾಂಚಾಲಪುರಕ್ಕೆ ಬಂದು ಸರ್ವರನ್ನು ಒಡಂಬಡಿಸಿ
ಕರೆದು ಕೊಂಡು ಹೋಗುವಿಕೆ.

ಕಳುಹಿದರು ವಿದುರಂಗೆ ಬುದ್ಧಿಯ
ಕಲಿಸಿ ಭೀಷ್ಮಾದಿಗಳು ಪಯಣದ
ಲಲಿತಸನ್ನಾಹದಲಿ ಪರುಠವಿಸಿದನು ಪಾವುಡವ |

---

1 ಮಾರ್ಗ, ಕ. ಖ.

2 ಕೊಡು ಭಂಡಾರವನು ದಾಯಾದಮಾರ್ಗದಲಿ, ಚ. ಛ.

ಬಳಿಕ ಸುಮುಹೂರ್ತದಲಿ ವಿಪ್ರಾ
ವಳಿಗಳಾಶೀರ್ವಾದದಲಿ ಮಂ
ಗಳತತಿ ಮಿಗಿಲೊಲವಿಂದ ಹಸ್ತಿನಪುರವ ಹೊಱವಂಟ ॥ ೨೧

ಕೇಳು ಭೂಪತಿ ಹಲವು ಪಯಣದ
ಮೇಲೆ ಪಯಣದಲೈದಿದನು ಪಾಂ
ಚಾಲಪುರವನು ಬಂದನರಮನೆಗಧಿಕಹರುಷದಲಿ ।
ಕೇಳಿದರು ಕೌಂತೇಯರೀತನ
ಯಾಲಿಸಿದರಿದಿರ್ಗೊಂಡು ತನುಪುಳ
ಕಾಳಿಯಲಿ ಮೈಮುಱುಗೆ ತೆಗೆದಪ್ಪಿದರು ತಮತಮಗೆ ॥ ೨೨

ಕ್ಷೇಮವನು ಕುಶಲವನು ಬಂಧು
ಸ್ತೋಮವನು ಕೇಳಿದರು ತಮ್ಮ
ಕ್ಷೇಮಕುಶಲವ ಹೇಳಿದರು ಪೂರ್ವಾಪರಸ್ಥಿತಿಯ ।
ಭೂಮಿಪತಿ ಚಿತ್ತವಿಸು ಬಳಿಕಿನ
ರಾಮಣೀಯಕಯಾದವೇಂದ್ರಶಿ
ರೋಮಣಿಯ ಸಮ್ಮೇಳವನು ಹೇಳಿದರು ವಿದುರಂಗೆ ॥ ೨೩

ತಂದ ಪಾವುಡವನಿತುವನು ಯಮ
ನಂದನಂಗೊಪ್ಪಿಸಿದ ದ್ರುಪದ ಮು
ಕುಂದ ಧೃಷ್ಟದ್ಯುಮ್ನಕಂದರ್ಪಾ ನಿರುದ್ಧರಿಗೆ ।
ತಂದ ಬಹುವಿಧವಸ್ತುವನು ಸಾ
ನಂದದಲಿ ನೀಡಿದನು ಬಳಿಕರ
ವಿಂದನಾಭನ ಪದಕೆ ಮೈಯಿಕ್ಕಿದನು ಭಕ್ತಿಯಲಿ ॥ ೨೪

ತೆಗೆದು ತಕ್ಕೈಸಿದನು ಭೀಷ್ಮಾ
ದಿಗಳ ಕುಶಲವ ಕೇಳಿದನು ನಸು
ನಗುತ ಮೈದಡವಿದನು ವಿದುರನನಾ ಕೃಪಾಜಲಧಿ ।

ವಿಗಡನಾಧೃತರಾಷ್ಟ್ರನೀ ಬಂ
ಧುಗಳ ನೆನೆವನೆ ಪಾಂಡುಸುತರಿಗೆ
ಸೊಗಸುವನೆ ನೀ ಬಂದೆ ಲೇಸಾಯ್ತೆಂದನಸುರಾರಿ ॥ ೨೫

ಕಳುಹಿದನು ಬೀಡಾರಕಾತನ
* ಬೞಿಯ ಪರಿವಾರವನು ಮನ್ನಿಸಿ
ಬೞಿಕ ಮಱುದಿನ ಮೇಳವಿಸಿದರು ಮಂತ್ರಶಾಲೆಯಲಿ ।
ತಿಳುಹಿದನು ಧೃತರಾಷ್ಟ್ರಭೀಷ್ಮರ
ಲಲಿತಮತವನು ಬಂಧುವರ್ಗ
ಸ್ಖಲಿತವನು ಸೈರಿಸುವುದೆಂದನು ವಿನಯದಲಿ ವಿದುರ * ॥ ೨೬

ಕರೆಸಿದನು ಧೃತರಾಷ್ಟ್ರನಾತನ
ಚರಣವನು ಕಾಂಬುದು ನದೀಸುತ
ಗುರುಕೃಪರು ನಿಮಗೊಳ್ಳಿದರು ನೀವಖಿಳರಾಜ್ಯದಲಿ ।
ಸರಿಯು ಕೊಂಬುದು ಸೇರುವೊಡೆ ಗಜ
ಪುರದೊಳಹುದಲ್ಲದೊಡೆ ನಿಮ್ಮಯ
ಧರೆಯಲಿರಿ ನೀವಾತ್ಮನಿರ್ಮಿತರಾಜಧಾನಿಯಲಿ [1] ॥ ೨೭

ಮುರಹರನನಹುದೆನಿಸಿ ಭೂಮೀ
ಶ್ವರರ ಮೆಚ್ಚಿಸಿ ಭೀಮನನು ಮನ
ಬರಿಸಿ ಪಾರ್ಥನನೊಲಿಸಿ ಮಾದ್ರೀಸುತರ ನೊಡಬಡಿಸಿ ।
ಅರಸಿಗಭಿಮತವೆನಿಸಿ ಪಾಂಚಾ

---

* ನೊಲಿದು ಮನ್ನಿಸಿ ಮಾನ್ಯಮನ್ನಣೆ
ಗಳಲಿ ಮಱುದಿನ ಸಕಲಜನಸಹಿತೊಂದುನಿಳಯದಲಿ ।
ನಳಿನನಾಭನು ಕುಂತಿಪುತ್ರರು
ನಲಿದುಕುಳ್ಳಿರಲೆಂದು ಪರಿಮಿತ
ದೆಲೆವನೆಯಲಾ ವಿದುರ ತಾ ಮಂದಿರವನಱುಹಿದನು, ಕ. ಖ. ॥

[1] ಪುರದೊಳಿರಿ, ಚ.

ಲರಿಗೆ ಕಾರ್ಯವಿದೆಸಿಸಿ ಕುಂತಿಗೆ
ಪರಮಹರುಷವ ರಚಿಸಿ ನುಡಿದನು ಸಂಧಿಯನು ವಿದುರ ॥ ೨೮

ಕದಪು ತಿಳಿದುದು ಕಾರ್ಯಗತಿಗಾ
ಸ್ಪದವ ಕೊಟ್ಟರು ಬಳಿಕ ಸುಮುಹೂ
ರ್ತದಲಿ ಪಯಣವ ಮಾಡಿದರು ಪಾಂಚಾಲಬಲಸಹಿತ ।
ಯದುಶಿರೋಮಣಿ ವೆರಸಿ ಬಹುಪಯ
ಣದಲಿ ಬಂದರು ಬಳಿಕ ಕೌರವ
ರಿದಿರುಗೊಂಡರು ಕೂಡೆ ಹೊಕ್ಕರು ಹಸ್ತಿನಾಪುರವ ॥ ೨೯

ಬಳಿಕ ಪ್ರೀತಿಯಿಂದ ಬಹುಕಾಲ ಯಿರುವಿಕೆ.

ಬಂದು ಕಾಣಿಕೆ ಗೊಟ್ಟು ಗಂಗಾ
ನಂದನನ ಧೃತರಾಷ್ಟ್ರನನು ಸಾ
ನಂದದಲಿ ಗಾಂಧಾರಿಯನು ಗುರುಗೌತಮಾದಿಗಳ ।
ವಂದಿಸಿದರಿವರ್ಕೈವರವರಾ
ನಂದಜಲಪರಿಲುಳಿತನಯನಾ
ಸ್ಪಂದಪರಿತೋಷದಲಿ ತೆಗೆದಪ್ಪಿದರು ಪಾಂಡವರ ॥ ೩೦

ಕರೆಸಿ ತನ್ನ ಕುಮಾರಕರ ನೂ
ರ್ವರನು ಕಾಣಿಸಿದನು ಪರಸ್ಪರ
ಪರಮಸಂಪ್ರೀತಿಗಳ ಗಾಢಾಲಿಂಗನೋತ್ಸವದ ।
ದರುಶನೋಚಿತಮಾನ್ಯಮಾನ
ಸ್ಫುರಣದಲಿ ವಿಸ್ತರಿಸಿ ಸೈಂಧವ
ಗುರುತನುಜರಾಧೇಯಸೌಬಲರಪ್ಪಿದರು ನೃಪರ ॥ ೩೧

ಯಾದವರು ಪಾಂಚಾಲರಲಿ ಸಂ
ಪಾದಿಸಿದರನ್ಯೋನ್ಯಘನ
ಸಂವಾದಸುಖಸಂಪ್ರೀತಿಯಲಿ ಮೆಱೆಯಲ್ಕಿಷ್ಟಸತ್ಕಾರ ।

ಆದುದುತ್ಸವ ಜನಜನಿತಹರು
ಷೋದಧಿಯ ಹೊನಲಿನಲಿ ಹಿಂದಣ
ಭೇದಕರ್ದಮವಡಗಿ ಹೋಯ್ತವನೀಶ ಕೇಳೆಂದ ‖ ೩೦

ವೀತಭಯರನ್ಯೋನ್ಯಪರಮ
ಪ್ರೀತಿಗಳ ಬಳವಿಗೆಯಲಿರ್ದರು
ಭೂತಳಾಧಿಪರೈದುವಸಂವತ್ಸರಗಳೊಂದಾಗಿ ।
ಖ್ಯಾತವಿದು ಪಾಂಚಾಲಪುರದೊ
ಳತೀತವಾಯ್ತೊಂದೊಂದುವರುಷವ
ಭೀತ ಧರ್ಮಸುತಂಗೆ ಮೂವತ್ತಾಱುಸವುವೆಂದ ‖ ೩೩

ಮೂವತ್ತನಾಲ್ಕನೆಯ ಸಂಧಿ ಮುಗಿದುದು.

ಮೂವತ್ತೈದನೆಯ ಸಂಧಿ.

ಸೂಚನೆ.

ದಾಯಭಾಗದೊಳಖಿಳರಾಜ್ಯ
ಶ್ರೀಯೊಳರ್ಧವ ಕೊಂಡು ಪಾಂಡವ
ರಾಯರೊಪ್ಪಿದರಿಂದ್ರನಿರ್ಮಿತರಾಜಧಾನಿಯಲಿ ‖

ಪಾಂಡವರಿಗೆ ಕೌರವರಿಗೆ ಭೂಭಾಗವನ್ನು ಮಾಡಿ ಕೊಡಲು
ಧೃತರಾಷ್ಟ್ರನ ಅನುಮತಿ

ಕೇಳು ಜನಮೇಜಯ ಧರಿತ್ರೀ
ಪಾಲ ನಿಮ್ಮಯ ಪೂರ್ವಜರು ಸಮ
ಪಾಳಿಗಳ ಸೇರುವೆಯ ಸಂಧಿಸಿ ಸಾಮನಸ್ಯದಲಿ [1] ।

1 ಯೊಳಿದ್ದರು ಸಾನುರಾಗದಲಿ, ಚ.

ಖೇಳವೇಳದ ಬೇಟೆಗಳ ವೈ
ಹಾಳಿಗಳ ಜೂಜಿನ ಸಮಂಜಸ
ಲೀಲೆಗಳ ಕೇಳಿಯಲಿ ಕಳೆದರು ಪಂಚವರ್ಷಗಳ ॥ ೧

ಕರೆಸಿದನು ಧೃತರಾಷ್ಟ್ರಭೂಪತಿ
ಮುರಹರನ ದ್ರುಪದನ ಯುಧಿಷ್ಠಿರ
ನರವೃಕೋದರಭೀಷ್ಮಗುರುಕೃಪಕರ್ಣಸೌಬಲರ [1] ।
ಎರಡುಭಾಗವ ಮಾಡಿ ವಿಶ್ವಂ
ಭರೆಯ ರಾಜ್ಯವನುಭಯರಾಯರ
ಹೊರೆಹೊಗದೆ ಪಾಲಿಸಲಿ ಪಂಥದೊಳೆಂದನಂಧನೃಪ ॥ ೨

ಅಹುದು ಹೊಲ್ಲೆಯವೆಲ್ಲ ಖುಲ್ಲರ
ಕುಹಕಕೊಳ್ಳದು ಬೇಱೆ ರಾಜ್ಯದೊ
ಳಹರೆ ಸೇರುವೆ ದೃಢವಹುದು ದಾಯಾದವಿಷಯದಲಿ [2] ।
ಗಹನವೇಕಾಮಿಷಸಮುದ್ಭವ
ದಹಿತತನದುತ್ತರಣವತಿದು
ಸ್ನಹವೆಲೇ ನೀ ನೆನೆದ ಹದ ಲೇಸೆಂದನಾಭೀಷ್ಮ ॥ ೩

ಅರಸ ಕೇಳ್ಳೈ ಸಕಲರಾಜ್ಯವ
ನೆರಡು ಭಾಗೆಯ ಮಾಡಿ ಪೂರ್ವೋ
ತ್ತರದ ದಕ್ಷಿಣಪಶ್ಚಿಮಂಗಳ ಹೆಚ್ಚುಕುಂದುಗಳ ।
ಪುರನಗರಖರ್ವಡಮಡಂಬ
ಸ್ಫುರಿತಖೇಟಗ್ರಾಮವೆಂಬವ
ನೆರಡುಭಾಗವ ಮಾಡಿದರು ಕೂಡಿದರು ಸಮವಾಗಿ ॥ ೪

ಪುರಸುರೇಂದ್ರಪ್ರಸ್ಥವರಸಂ
ಗಿರವು ಧರ್ಮಸುತಂಗೆ ಹಸ್ತಿನ

---

1 ಶಕುನಿಗಳ, ಚ.   2 ಮಾರ್ಗದಲಿ, ಚ. ಠ

ಪುರ ಸುಯೋಧನಗುಭಯುರಾಯುರ ರಾಜಧಾನಿಗಳು ।
ಚರಮದಕ್ಷಿಣವಾಗಿ ಪೂರ್ವೋ
ತ್ತರವಿಲಂಬಿತವಾಗಿ ಹಿಮಸಾ
ಗರಪರೀತ ಮಹೀತಳವ [1] ಸೇರಿಸಿದರೆರಡಾಗಿ ॥ ೫

ವಾರಣದ ಘಟೆಗಳ ಸಘಾಟದ
ವಾರುವಂಗಳ ಮಣಿಮಯುದ ಹೊಂ
ದೇರುಗಳನಾಭರಣಗಳ ತೆಗಿಸಿದರು ಸಮವಾಗಿ ।
ಕೌರವರ ಪಾಂಡವರ ಮನದೊಳ
ಗೋರೆಪೋರೆಯು ತಿಳುಹಿ ಸ್ವೈರವಿ
ಕಾರವನು ಬಿಡಿಸಿದರು ಭೀಷ್ಮಾದಿಗಳು ಹರುಷದಲಿ [2] ॥ ೬

ಬಟಿಕ ಸುಮುಹೂರ್ತದಲಿ ಹೊಱಗುಡಿ
ಬಳಸಿ ಹೊಯ್ದುವು ರಾಣಿವಾಸದ
ನಿಳಯುನಿಳಯುದ ತಳಿಗೆ ತಂಬುಲಮಂಗಳಾರ್ತಿಗಳ ।
ಫಲಸಮೂಹದ ಕಾಣಿಕೆಯು ಕೈ
ಗೊಳುತ ಗಾಂಧಾರಿಗೆ ಮಹೀಶನ
ಲಲನೆಯುರಿಗಭಿನಮಿಸಿ ಕಳುಹಿಸಿ ಕೊಂಡರುಚಿತದಲಿ [3] ॥ ೭

ಕಳುಹಲೈತಂದಂಧನೃಪತಿಯು
ನಿಲಿಸಿದರು ನಿಳಯುದಲಿ ಕೌರವ
ಕುಲದ ನೂರ್ವರ ಕರ್ಣಶಕುನಿಜಯುದ್ರಥಾದಿಗಳ ।
ನಿಲಿಸಿದರು ಗಜಪುರದ ಯೋಜನ
ವಳಯುದಲಿ ಗುರುಭೀಷ್ಮವಿದುರರು
ಕೆಲವು ಪಯುಣವ ಬಂದು ಕಳುಹಿಸಿಕೊಂಡರುಚಿತದಲಿ ॥ ೮

---

1 ಮಧ್ಯದ ಭೂಮಿಯುನು, ಚ. 2 ವಿನಯುದಲಿ, ಕ. ಖ.
3 ದನುಕೈಕೊಳುತ ಹರಕೆಗಳ, ಕ. ಖ.

ಇಂದ್ರಪ್ರಸ್ಥಪುರನಿರ್ಮಾಣ.

ಭೂಮಿಲಂಬದ ನೃಪರ ಬಲದು
ದ್ದಾಮವಿಭವದಲಸುರರಿಪು ಸಹಿ
ತೀಮಹೀಪಾಲಕರು ಬಂದರು ಹಲವು ಪಯಣದಲಿ ।
ರಾಮಣೀಯಕರಚನೆಯಲಿ ಸು
ತ್ರಾಮನಗರಿಯ ಸೂತ್ರದಲಿ ಸುಮ
ನೋಮನೋಹರ ವಿಶ್ವಕರ್ಮನು ರಚಿಸಿದನು ಪುರವ ॥ ೯

ಧರಣಿಪತಿ ಚಿತ್ತೈಸಿಳಾವೃತ
ವರುಷಮಧ್ಯದ ಹೇಮಗಿರಿಯ ವೊ
ಲರಮನೆಯ ಸಿರಿ ಸೋಲಿಸಿತು ಸುರರಾಜವೈಭವವ ।
ಹರಿಯ ವೀಧಿಯ ಸೋಮವೀಧಿಯ
ಮುರಿವುಗಳ ಕೇರಿಗಳ ನೆಲೆಯು
ಪ್ಪರಿಗೆಗಳ ಹೊಂಗೆಲಸದಲಿ ಹೊಳೆದುದಾನಗರ ॥ ೧೦

ಹೇಮನಿರ್ಮಿತದೇವಸದನ
ಸ್ತೋಮದಲಿ ಮಣಿಮಯದ ಫಣಿಪನ
ಹೇಮವೇದಿಯ ವಿವಿಧರತ್ನಾವಳಿಯ ಹಸರದಲಿ ।
ಕಾಮರಿಪುವಿಂಗೊರೆಯ ಕಟ್ಟುವ
ವಾಮಲೋಚನೆಯರ ವಿಳಾಸದ
ಲಾಮಹಾಪುರವೆಸೆದುದಿಂದ್ರಪ್ರಸ್ಥನಾಮದಲಿ ॥ ೧೧

ಅಲ್ಲಿಗೆ ಧರ್ಮರಾಯನ ಪ್ರವೇಶ.

ವಿತತವಿಭವದಲಿಂದ್ರನಮರಾ
ವತಿಯ ಹೊಗುವಂದದಲಿ ದ್ರುಪದಾ
ಚ್ಯುತರು ಸಹಿತವನೀಶ ಹೊಕ್ಕನು ರಾಜಮಂದಿರವ ।
ಕೃತಯುಗದೊಳಾತ್ರೇತೆಯಲಿ ಭೂ
ಪತಿಗಳಾದರನಂತಕುಂತೀ
ಸುತರ ಸಿರಿಗೆಣೆ ಯಾದುದಿಲ್ಲ ಮಹೀಶ ಕೇಳೆಂದ ॥ ೧೨

ಬಂದು ಕಂಡುದು ಸಕಲಪುರಜನ
ವೃಂದ ಕಾಣಿಕೆಗೊಟ್ಟು ಸುಭಟರ
ಸಂದಣಿಯು ಗಜರಥಹಯುದ ಪದಧೂತಧೂಳಿಗಳ ।
ಮಂದಿರದ ಬಾಗಿಲ ಗತಾಗತ
ವೃಂದದೊತ್ತೊತ್ತಯುಲಿ ಪುರಜನ
ನಿಂದುದಲ್ಲಿಯುದಲ್ಲಿ ಪಡೆಯುದೆ ರಾಜದರುಶನವ ॥ ೧೩

ಅತಿಶಯುವನೇನೆಂಬೆನಮರಾ
ವತಿಯು ಭೋಗಾವತಿಯು ಮಧ್ಯ
ಸ್ಥಿತಿಯು ನಾಯುಕರತುನದಂತಿರೆ ಮೆಱೆದುದಾನಗರ ।
ಸತತವೀಪರಿವಿಭವವೀಜನ
ವಿತತಿಗಳ ಸನ್ಮಾರ್ಗವೀಸಂ
ತತಿಗಳೀವಿಸ್ತಾರವೀಪರಿ ಭೂಪ ಕೇಳೆಂದ ॥ ೧೪

ಬಂದ ರಾಜರು ತಮ್ಮತಮ್ಮ ಪುರಕ್ಕೆ ಹೋಗುವಿಕೆ

ದ್ರುಪದಧೃಷ್ಟದ್ಯುಮ್ನಮೊದಲಾ
ದಪರಿಮಿತಬಾಂಧವನಿಕಾಯುವ
ನುಪಚರಿಸಿ ಕಳುಹಿದನು ಭೂಪತಿ ಪಂಚಕೈಕಯುರ ।
ವಿಪುಳಕಾರುಣ್ಯದಲಿ ಪಾಂಡವ
ನೃಪಜನವ ಸಂತೈಸಿ ದಾನವ
ರಿಪು ನಿಜನಿವಾಸಕ್ಕೆ ಬಿಜಯುಂಗೈಯ್ಯಲನುವಾದ ॥ ೧೫

ಕೃಷ್ಣನು ದ್ವಾರಾವತಿಗೆ ಹೋಗುವಿಕೆ.

ಕರೆಸಿ ಕುಂತೀದ್ರೌಪದಿಯುರನು
ಕರುಣವಚನಾಮೃತದ ರಸದಲಿ
ಹೊರೆದು ಕೃತದಾಯಾದವಿಷಮವಿರೋಧವರ್ತನವ ।

ಅಱುಹಿ ಸುಯ್ಧಾನದ ಸಮಾಹಿತ
ಕರದ ಬುದ್ಧಿಯು ಹೇೞಿ ಯಾದವ
ರರಸ ಬಿಜಯಂಗೈದನಾದ್ವಾರಾವತೀಪುರಿಗೆ ॥ ೧೬

ಧರ್ಮರಾಯನ ರಾಜ್ಯಭಾರಕ್ರಮವರ್ಣನ.

ಕಳುಹಿದನು ಪಾಂಚಾಲರನು ಯದು
ತಿಲಕಮೊದಲಾದಖಿಳಬಾಂಧವ
ಕುಲವನುತ್ಸಾಹದಲಿ ಹೊರೆದನು ನಾಡುಬೀಡುಗಳ ।
ಬೆಳುಗವತೆ ಯನ್ಯಾಯದಾರಡಿ
ಕಳವು ದಱದುಱ ಬಂದಿಡಾವರ
ಕೊಲೆಹುಸಿಗಳಿಲ್ಲಿವರ ರಾಜ್ಯದೊಳರಸ ಕೇಳೆಂದ ॥ ೧೭

ಯಾಗವಹ್ನಿಯ ಧೂಮವಲಿ ದಿಗು
ಭಾಗವಿವರಣವಡಗಿತು ಹವಿ
ರ್ಭಾಗದಲಿ ಭೋಜನವದಾದುದಜೀರ್ಣವಮರರಿಗೆ ।
ಯಾಗದಕ್ಷಿಣೆಗಳಲಿ ಬಹಳ
ತ್ಯಾಗದಾನಕೆ ಲಟಕಟಿಸಿ ತಾ
ವಾಗಿ ಕೈಯ್ಯಾನರು ಯುಧಿಷ್ಠಿರನೃಪನ ರಾಜ್ಯದಲಿ ॥ ೧೮

ಬಲಿಯ ನಹುಷನ ದುಂದುಮಾರನ
ನಳನ ಸಗರನ ನೃಗನ ಶಾಕುಂ
ತಳನ ಪುರುಕುತ್ಸನ ಹರಿಶ್ಚಂದ್ರನ ಪುರೂರವನ ।
ಇಳೆಯ ವಲ್ಲಭರೆನಿಪ ರಾಜಾ
ವಳಿಯ ಮನಮೆಚ್ಚುಗಳನುರ್ವೀ
ಲಲನೆ ಮೆಱೆದಳು ಮೇಳದಿಂ ಧರ್ಮಜನ ರಾಜ್ಯದಲಿ ॥ ೧೯

ಆದಿಯುಗದಲಿ ಧರ್ಮವಿರ್ದುದು
ಪಾದ ನಾಲ್ಕಱ ಗಾಢಗತಿಯಲಿ
ಪಾದದೂಣೆಯವಾದುದಾತ್ರೇತಾಪ್ರಭಾವದಲಿ ।

ಪಾದವೆರಡಡಗಿದುವು ದ್ವಾಪರ
ದಾದಿಯಲಿ ಯುಧಿಷ್ಠಿರನ ರಾ
ಜ್ಯೋದಯದಲಂಕುರಿಸಿ ಸುಳಿದುದು ನಾಲ್ಕು ಚರಣದಲಿ ॥ ೨೦

ಅರಸ ಚಿತ್ತೈಸಾ ಯುಧಿಷ್ಠಿರ
ನರಪತಿಯ ರಾಜ್ಯಪ್ರಭಾವೋ
ತ್ಕರುಷವಿಸ್ತರವೆನ್ನ ಪಾಡೇನಾಕ [1] ದಂತಿರಲಿ ।

ಆಗ ನಾರದರ ಆಗಮನ.

ಪರಮವಿಭವದೊಳೊಂದು ದಿನವೈ
ವರು ನಿಜಾಸ್ಥಾನದಲಿ ಹರಿವಿ
ಷ್ಟರದೊಳಿರ್ದರು ಕಂಡರತಿದೂರದಲಿ ನಾರದನ ॥ ೨೧

ಬಂದನಿವರೋಲಗಕೆ ಗಗನದಿ
ನಿಂದುಮಂಡಲವಿಳಿವವೊಲು ನೃಪ
ವೃಂದವೆದ್ದಭಿನಮಿಸಿದರು ಪದಯುಗಕೆ ಮುನಿಪತಿಯ ।
ಇಂದು ಧನ್ಯರು ನಾವಲಾ ಮುನಿ
ವಂದ್ಯದರುಶನವಾಯ್ತುಪೂರ್ವವಿ
ದೆಂದು ಕುಂತೀತನುಜರಿದಿರೆದ್ದಂಘ್ರಿಗೆರಗಿದರು ॥ ೨೨

ಹರಸಿದನು ಮುನಿಯರ್ಘ್ಯಪಾದ್ಯೋ
ತ್ಕರವ ಮಧುಪರ್ಕಾಸನಾದಿಯ
ನರಸ ಮಾಡಿದನಮರಮುನಿ ಕೈಕೊಂಡು ಹರುಷದಲಿ ।
ಪರಿಮಿತದ ಸಮಯದ ವಚೋವಿ
ಸ್ತರಣವುಂಟೆನೆ ರಾಯನೋಲಗ
ಹರದುದವನೀಪಾಲ ಬಿನ್ನಹ ಮಾಡಿದನು ಮುನಿಗೆ ೨೩

ಏನಿ ಬಿಜಯಂಗೈದ ಹದನೆನ
ಗೇನನುಗ್ರಹವಚನ ನಿಮ್ಮಡಿ
ಗೇನ ನಾ ಬೆಸಕೈವುದೆನಗಾಜ್ಞಾಪಿಸುವುದೆನಲು ।

---

1 ವೇನನೆಂಬೆನು ನಾನು ಚ.

ನೀನಘಾಟದ ರಾಜಋಷಿ ನೀ
ಮಾನುಷನೆ ಧರ್ಮಸ್ವರೂಪನು
ನೀನು ಭವದಾಲೋಕನಾರ್ಥವು ನಮ್ಮ ಬರವೆಂದ ‖ ೨೪

ಅನುಜರನು ಪೇಟುವೊಡೆ ಭೀಮಾ
ರ್ಜುನರು ವಧುವಾರೆಂಬೊಡಮರಾಂ
ಗನೆಯರಿಗೆ ನೂಱಿಂಟುಮಡಿ ಯಾದ್ರೌಪದೀದೇವಿ ।
ಘನಸಹಾಯನು ಹವಣಿನೆಂಬೆನೆ
ಘನಚತುರ್ದಶಭುವನಪತಿ ನೃಪ
ನಿನಗೆ ಪಾಡೇ ಪನ್ನಗೇಂದ್ರಸುರೇಂದ್ರರಿಂದಿನಲಿ ‖ ೨೫

ನಾರದರು ಸುಂದೋಪಸುಂದರ ಕಥೆಯಂ ಹೇಳುವಿಕೆ.

ಆದಡೊಂದಿಹದೈವರಿಗೆ ವಧು
ವಾದಳೀ ದ್ರೌಪದಿ ಮಹೇಶ್ವರ
ನಾದಿಯಲಿ ಕರುಣಿಸಿದ ವರವಿದು ಪುಣ್ಯಕಥನವಿದು ।
ಮೇದಿನಿಯೊಳೀಕಾಮಿಷತ್ವಾದಿ
ಯಾದಿಯಿದು ವಿಗ್ರಹಕೆ ತಮ್ಮೊಳು
ಕಾದಿದರು ಸುಂದೋಪಸುಂದರು ಭೂಪ ಕೇಳೆಂದ ‖ ೨೬

ಸುಂದೋಪಸುಂದರ ಸಂಹಾರಾಲೋಚನೆ.

ಅರಸುಗಳು ತಾವಿಬ್ಬರೇಕೋ
ದರರು ಬಲುಗೈಗಳು ಸುರಾಸುರ
ನರರೊಳಗೆ ಪಾಯಿಯಲಿ ಪೆಂಠಣಿಸಿದರು ಭೂತಳವ ।
ನೆರೆದು ಸುರರು ಸರೋಜಪೀಠಂ
ಗಱುಹಿದರು ಬಟಿಕಾತನವದಿರ
ಪರಿಹರಿಸುವುದಕೇನುಪಾಯವೆನುತ್ತ ಚಿಂತಿಸಿದ ‖ ೨೭

ಬಟಿಕಸಂಖ್ಯಾತದ ಸುರೋರಗ
ಲಲನೆಯರಲಿ ತಿಲಾಂಶಮಾತ್ರದ

ಚಲುವಿಕೆಯನೇ ತೆಗೆದು ನಿರ್ಮಿಸಿದನು ವರಾಂಗನೆಯ ।
ಬೆಳಗಿತಾಕೆಯ ಹೆಸರು ದಿವಿಜಾ
ವಳಿಯೊಳ್ಪದೆ ತಿಲೋತ್ತಮಾಹ್ವಯ
ದಳಿಕುಳಾಳಕಿಗಬುಜಭವ ನೇಮಿಸಿದನೀಹದನ ॥ ೧೮

ತಿಲೋತ್ತಮಾಗಮನ.

ಅವರ ಕೆಡಿಸುವ ಹದನ ಕೈಕೊಂ
ಡವನಿಗಿಳಿತಂದಳು ವಿನೋದದ
ಳವದಿರಿದ್ದರು ಬನದೊಳಗೆ ಮದಿರಾಮದೋದ್ಧತರು ।
ಯುವತಿಯನು ಕಂಡರು ಕಟಾಕ್ಷದ
ಸವಡಿಗೋಲಿಂದೊಡೆದುದೆದೆ ಹರಿ
ದವರು ಹಿಡಿದರು ವಾಮದಕ್ಷಿಣಕರಗಳಂಗನೆಯ ॥ ೧೯

ಸುಂದೋಪಸುಂದರ ಮರಣ.

ಎನಗೆ ವಧು ತಾ ಮುನ್ನ ಕಂಡೆನು
ತನಗೆ ವಧು ತಾ ಮುನ್ನ ಹಿಡಿದೆನು
ತನಗೆನಗೆ ನೀ ನಿಲ್ಲು ತಾ ನಿಲ್ಲೆನುತ ಹೊಯ್ದಾಡಿ ।
ಜನಪರಿಬ್ಬರು ಮಡಿಯಲಮರಾಂ
ಗನೆ ಮುಗುಳ್ನಗೆ ನಗುತಲಬುಜಾ
ಸನನ ಹೊರೆಗೈದಿದಳು ಕುಂತೀತನುಜ ಕೇಳೆಂದ ॥ ೨೦

ಕಾಲಭೇದದಿಂದ ದ್ರೌಪದಿಯ ಬಳಿ ಪಾಂಡವರು ಇರತಕ್ಕದ್ದೆಂದು
ನಾರದರ ವ್ಯವಸ್ಥೆ.

ಅದಱನೀಜೀವರಿಗೆ ದುಃಸ್ಥಿತಿ
ಸುದತಿಯರ ದೆಸೆಯಿಂದ ರಾಜ್ಯದ
ಹುದುವಿನಲಿ ಮೋಣರ್ಥಗತಿಯಲನರ್ಥ ತಪ್ಪದಲೆ ।
ಸುದತಿ ನಿಮ್ಮೈವರಿಗೆ ಯಾದ್ರೌ

ಪದಿ ಮಹಾಸತಿ ರಾಗಲೋಭದ
ಕದನದಲಿ ಕಾಳಾಗದಿದ್ದರೆ ನಿಮಗೆ ಲೇಸೆಂದ ॥ ೩೧

ಅರಸ ಕೇಳೊಂದೊಂದು ವರುಷದೊ
ಳರಲಿ ನಿಮ್ಮೊಬ್ಬರಲಿ ಸತಿ ಮೆಱು
ವರುಷ ಮತ್ತೊಬ್ಬರಲಿ ಪಂಚಕಕ್ಕದುವರುಷದಲಿ ।
ಅರಸಿಯರು ಪತಿಸಹಿತ ಮಂಚದೊ
ಳಿರಲು ಕಾಂಬುದು ಸಲ್ಲದಿದು ಗೋ
ಚರಿಸಿದೊಡೆ ಬೞಿಕದಕೆ ಪ್ರಾಯಶ್ಚಿತ್ತವುಂಟೆಂದ ॥ ೩೨

ಆರು ಕಂಡರೆ ಯಾತನೊಬ್ಬನೆ
ಧಾರುಣಿಯೊಳು ಸುತೀರ್ಥಯಾತ್ರಾ
ಭಾರದಲಿ ಚರಿಸುವುದು ಸುತ್ತಲಿ ವರುಷವೊಂದಱಲಿ ।
ಚಾರುನಿಷ್ಕೃತಿ ಯೆನಲು ಮುದದಲಿ
ನಾರದನ ದಿವ್ಯೋಪದೇಶಕೆ
ಸಾರಹೃದಯ ಹಸಾದವೆಂದನು ತಮ್ಮದಿರು ಸಹಿತ ॥ ೩೩

ಮಂಗಳವು ನಿಮಗೆಂದು ಹಂಸೆಯ
ಬೆಂಗೆ ಹಾಯ್ದನು ಬೞಿಕ ನಭದೊಳ
ಭಂಗಮುನಿಯಡಗಿದನು ತಮ್ಮೊಳಗೆಂದರೀನೃಪರು ।
ಅಂಗನಾವಿಷಯದಲಿ ಸೀಮಾ
ಸಂಗತಿಯ ಸೇರಿಸಿದನೈ ಮುನಿ
ಪುಂಗವನ ಕರುಣದಲಿ ಗದುಗಿನ ವೀರನಾರಯಣ ॥ ೩೪

ಮೂವತ್ತ ಐದನೆಯ ಸಂಧಿ ಮುಗಿದುದು

ಮೂವತ್ತಾರನೆಯ ಸಂಧಿ

ಸೂಚನೆ

ಅಸುರಾರಿವಿರೋಧಿಪುರದಲಿ
ವಾಸವಾತ್ಮಜ ಮದುವೆಯಾಗಿ ವಿ
ಳಾಸದಲಿ ಹೊಕ್ಕನು ಸುಭದ್ರಾಸಹಿತ ನಿಜಪುರವ ||

ನಾರದಗಮನ.

ಕೇಳು ಜನಮೇಜಯ ಧರಿತ್ರೀ
ಪಾಲ ನಾರದಮುನಿ ನರೇಂದ್ರನ
ಬೀಳುಕೊಂಡನು ಚಪಳಗತಿಯಲಿ ನೆಗೆದನಂಬರಕೆ |
ಮೇಲೆ ಮತ್ತೊಂದತಿಶಯೋಕ್ತಿಯ
ಹೇಳುವೆನು ಪಾರ್ಥಂಗೆ ಬಂದುದು
ಕಾಲಗತಿಯೈ ಸಲೆ ವಿದೇಶಭ್ರಮಣವಾಯ್ತೆಂದ || ೧

ಚೋರರ ಬಾಧೆಯಿಂದ ವಿಪ್ರರು ಮೊರೆಹೊಗುವಿಕೆ.

ನರನ ವೆಳತದೊಳೊಂದು ಸಮಯದೊ
ಳಿರುಳು ತಸ್ಕರಬಾಧೆಯಲಿ ಭೂ
ಸುರರು ಬಾಯ್ಬಿಡುತೈದೆಯಿಂದ್ರಪ್ರಸ್ಥಪುರವರವ |
ಮೊಱೆಯುಬಾಯ್ಗಳ ಹಲ್ಲುಕೈಗಳ
ಹರಿದವೈಯ್ಗಳಸೆಕೆಯ ಸುಯ್ಗಳ
ತರದಬೈಯ್ಗಳ ಕಳಕಳವ ಕೇಳಿದನು ಕಲಿಪಾರ್ಥ || ೨

ಕರೆಸಿ ವಿಪ್ರರ ಬಾಧೆಗಳನಾ
ದರಿಸಿ ಕೇಳಿಯೆ ಸಂತವಿಸಿ ಪರಿ
ಹರಿಸಿ ಕೊಡುವೆನು ದುಷ್ಟಪಾಟಚ್ಚರಪರಿಪ್ಲವವ |

ಮರಳಿ ನೀವೆಂದವರ ಕಳುಹಿದ
ನರಿವಿದಾರಣ ಬಂದನಗ್ಗದ
ಶರಧನುವ ಕೊಳಲೆಂದು ರಾಯನ ಸೆಜ್ಜೆಯರಮನೆಗೆ ॥ ೩

ಆಗ ಧರ್ಮರಾಯನು ಸತಿಯೊಡನೆ ಇರುವಿಕೆ.

ಸಮಯವೇನೆನೆ ಜೀಯ ರಾಯನೆ
ರಮಣಿಯೊಡನೇಕಾಂತವರಸನ
ಸಮನಿಸಿಹುದೆಂದೆನಲು ಸೂಚಿಸಲಾಗಲರ್ಜುನನು ।
ಸಮಯ ವಿಷಮವಿದೇಸದೀಗಳ
ಸಮನಿಸಿತು ತನಗೆನುತ ಚಿಂತಿಸಿ
ಸ್ತಿಮಿತಹರುಷನು ಬಟಿಕ ತಿಳಿದನು ತನ್ನ ಮನದೊಳಗೆ ॥ ೪

ತಮಗೆ ತಾನಹುದೆಂದು ಘಟಿಸಿತು
ವಿಮಳಮುನಿವಾಕ್ಯವು ಸೆಱೆ ಸಂ
ಭವಿಸಿತೇ ತನಗೆಂದು ಚಿಂತಿಸಿ ಸುಯ್ದನಡಿಗಡಿಗೆ ।
ಅಮರಮುನಿಮತ ವೊಂದು ಮಂಚದ
ರಮಣಿರಮಣರ ದರುಶನವು ಯು
ಕ್ರಮವೆಸಿಸುವೀನುಡಿಯು ಸಂಭವಿಸಿತ್ತೆ ತನಗೆಂದ ॥ ೫

* ಕಂಗಳವು ವಿಪ್ರರಲಿ ಖಳರಭಿ
ಷಂಗವಾರ್ತಾಶ್ರವಣ ಬಹುದುರಿ
ತಂಗಳಲಿ ಕರ್ತವ್ಯವಾವುದೊ ಮೊದಲು ತನಗೆಂದ ।

---

* ಈಗಲೀವಿಪ್ರರಲಿ ಖಳರಭಿ
ಯೋಗವಾರ್ತಾಶ್ರವಣ ಬಹುದುರಿ
ತಾಗಮವು ತನಗಾವುದೋ ಕರ್ತವ್ಯವೆಂದೆನುತ ।
ಈಗಲೀಸಂದಿಗ್ಧ ಸಮಯ
ತ್ಯಾಗಧರ್ಮವಿರೋಧಕೃತ್ಯವಿ
ಭಾಗವಾವುದೊ ಶಾಸ್ತ್ರದೃಷ್ಟಿಯೊಳೆಂದು ಚಿಂತಿಸಿದ ॥ *

ಕಂಗಳಿವು ನೆಱೆ ಕಾಣವೆಗ್ರಜ
ನಂಗನರಸಿಯರಿಹುದು ಭೂಸುರ
ಭಂಗಬಾಧೆಯಿದೆನುತ ಪಾರ್ಥನು ವಿವಿಧಚಿಂತೆಗುಳಿ ॥ ೬

ಕೇಳಲಿಕೆ ಸರಿಯೆರಡಕಾದರೆ
ಮೇಲೆ ತಾನಿದಱಧಿಕವಾವುದೊ
ಕೇಳಿದೆವು ಕಿವಿಗಳಲಿ ಕಂಡೆವು ಭೂಸುರವ್ಯಥೆಯ ।
ಕೇಳಿದನು ನೃಪನಂಗಜಾಲದ
ಬಾಲೆಯೊಳಗಿಹ ವಿಷಯವಾವುದು
ಕೀಳು ಮೇಲುಗಳಾವುದೆನುತವೆ ಪಾರ್ಥ ಚಿಂತಿಸಿದ ॥ ೭

ಎರಡುಪಾತಕ ವಿವರೊಳಾವುದು
ಕರ ಬಲುಹು ಸಾಮಾನ್ಯಪಕ್ಷಾಂ
ತರವಿಶೇಷವದಾವುದೊ ಯೆಂದಳುಕಿ ಚಿತ್ತದಲಿ ।
ಬರೆದೊರೆದು ತೂಕದಲಿ ತೂಕವ
ವೊಱಸಿ ಕಾಹಿನ ಕಂದುಕುಂದನು
ಪರಿಹರಿಸಿ ನಿಶ್ಚಯಿಸಿ ನುಡಿದನು ತನ್ನ ಮನದೊಳಗೆ * ॥ ೮

ಅರಸನರಸಿಯರೊಂದು ಮಂಚದೊ
ಳಿರಲು ಕಂಡೊಡೆ ಭೂಪ್ರದಕ್ಷಿಣೆ
ವರುಷವೊಂದಱೊಳಿದಕೆ ಪ್ರಾಯಶ್ಚಿತ್ತವಿಧಿಯುಂಟು ।

---

* ಎರಡುಪಾತಕವಿವೆ ಬಲಾಬಲ
ವೆರಡಱೊಳು ಸಾಮಾನ್ಯಪಕ್ಷಾಂ
ತರವಿಶೇಷವದಾವುದದಱೊಳಗೆಂದು ಚಿತ್ತದಲಿ ।
ಬರೆದೊರೆದು ನೋಡಿದನು ತೂಕವ
ಬಱಸಿ ಕಾಹಿನಕಂದುಕುಂದನು
ಪರಿಕಿಸುತ ನಿಶ್ಚೈಸಿ ತಿಳಿದನು ತನ್ನ ಮನದೊಳಗೆ ॥ * ಚ.

ಧರಣಿಯುಮರರುಪಪ್ಲವವ ಪರಿ
ಹರಿಸದಿರಲಾಪಾತಕಕೆ ಸಂ[1]
ಹರಣವುಂಟೇ ಶಾಸ್ತ್ರದೃಷ್ಟಿಯೊಳೆಂದನಾಪಾರ್ಥ ॥ ೯

ಆಗ ಅರ್ಜುನನು ಚಿಂತಿಸಿ ವಿಪ್ರರನ್ನು ರಕ್ಷಿಸುವಿಕೆ.

ಭೂಸುರರ ದುಃಖೋಪಹಾರವ
ನಾಶಮಾಡದ ನೃಪರ ಜಾತಿಗೆ
ದೋಷ ದೊಡ್ಡಿತು ಯೆಂದು ನಾರದ ತನಗೆ ತಿಳುಹಿದನು ।
ಭೂಸುರಾಂಗನೆಯರುಗಳತ್ಯಾ
ಯಾಸವನು ನಿಃಕ್ಷತ್ರಮಾಡದೆ
ಗೋಸಮೂಹವು ಕೋಳುವೋಗಲಿಕಡ್ಡಹೊಗದಿರಲು ॥ ೧೦

ದೋಷವದು ಹನ್ನೆರಡು ವರುಷಕೆ
ನಾಶ ನಗರಿಯುಲಿರಿಸಲಾಪುದು
ಪಾಶದಲಿ ಕೆಡೆಕಟ್ಟಿ ಹೊಯ್ವರು ಸೆಱೆಯು ಯುವತಿಯರ ।
ಹೇಸದೊಯ್ದರು ದ್ವಿಜರ ಸದನದ
ಗೋಸಮೂಹವದಷ್ಟು ಮಾರ್ಗವ
ನೀಶನಾವವ ಕೇಳ ನೀಗರ್ಜಿಡಿವಾತನಾರೆಂದ ॥ ೧೧

ಎನುತ ನರನೊಳಹೊಕ್ಕು ತನ್ನಯ
ಧನುಶರಂಗಳ ಕೊಂಡು ನುಡಿದನು
ಮುನಿವಚನ ಸಂಘಟಿತನೃಪದಂಪತಿವಿಲೋಕನದ ।
ಘನದುರಿತನಿಷ್ಕೃತಿಗೆ ವರುಷದೊ
ಳನಗೆ ದೇಶಭ್ರಮಣವಾಯ್ತೆಲೆ
ಜನಪ ಚಿಂತಿಸಬೇಡೆನುತ ಹೊಱವಂಟನಾಪಾರ್ಥ ॥ ೧೨

[1] ಲಿರಧಿಹಪರಕೆಸಂ, ಕ. ಖ.

ಇಱಿದು ತಸ್ಕರವ್ರಾತವನು ಕುಱಿ
ದಱಿದು ಭೂಸುರರೂರುಗಳ ಸೆಱೆ
ತುಱುಗಳನು ತಂದಿತ್ತನರ್ಜುನನಾಮಹೀಸುರರ ।
ತುಱುಗಿದಾಶೀರ್ವಾದಮಳೆಗಳು
ಕಱೆಯೆ ಹೆಚ್ಚಿದ ವೀರಕೀರ್ತಿಯು
ತೊಱೆಗಳಲಿ ತೇಂಕಾಡುತಿರ್ದನು ಪಾರ್ಥ ಹರುಷದಲಿ [1] ॥ ೧೩

ಅರ್ಜುನನ ತೀರ್ಥಯಾತ್ರೆ.

ಧಾರುಣೀಪತಿ ಕೇಳು ಗಂಗಾ
ತೀರಕೈದಿದನರ್ಜುನನು ಭಾ
ಗೀರಥೀ ಸ್ನಾನಾವಗಾಹವಿಶುದ್ಧವಿಗ್ರಹನ ।
ದೂರದಲಿ ಕಂಡುರಗರಾಜಕು
ಮಾರಿ ಕರೆದಳೊಲವಿನಲಿ ಜಂ
ಭಾರಿತನುಜನನಿಱುಹಿದಳು ಪಾತಾಳಮಂದಿರಕೆ ॥ ೧೪

ಆಗ ಉಲೂಪಿಯ ವಿವಾಹ.

ವಿಭವದಲಿ ವಾಸುಗಿಯ ತಂಗಿಯು
ನುಭಯವಂಶವಿಶುದ್ಧೆಯನು ಹರಿ
ನಿಭನು ಪಾಣಿಗ್ರಹಣವನು ಮಾಡಿದನು ಸೊಲವಿನಲಿ ।
ಅಭಿಮತಕ್ರೀಡಾವಿನೋದದ
ರಭಸದಲಿ ದಿನ ಸವೆಯೆ ಗರ್ಭ
ಪ್ರಭವವಾಯ್ತು ಕುಮಾರ ಜನಿಸಿದನುರಗನಾರಿಯಲಿ ॥ ೧೫

ಆಕೆ ಮುನ್ನೂರ್ವಶಿಯು ಯತ್ರಿಯು
ನೂಕಲಾತನ ವಧುವ ಪುರುಷನ
ವಾಕ್ಯವನು ಪತಿಕರಿಸಿ ಮಾಡಿದಳರ್ಧವತ್ಸರವ ।

---

1 ತಿರ್ದುಧಃ ಸಕಲಜನನಿಕರ, ಚ.

ಆಕೆಯೆಸೆದಿಹ ಸದನಸೀಮೆಯ
ನಾಕುಮೂರಿಯು ಮಾಡಿ ಗಂಡನ
ನಾಕೆಯಲಿ ರಮಿಸಲಿಕೆ ಶಪಿಸಿದನುರಗಜಾತಿಯಲಿ ॥ ೧೬

ಜನಿಸಿ ಪಾರ್ಥಂಗರಸಿ ಯೆನಿಸಿಯೆ
ವನಿತೆಯರು ನಿಮ್ಮಾಳ್ವಸದನದ
ವಿನುತಬಾಗಿಲಗಾಹಿ ಜನಿಸಲಿ ನಿನ್ನ ಸುತನಾಗಿ ।
ಎನಲಿಕೊಬ್ಬನು ಜನಿಸಿ ಹರುಷದೊ
ಳನಿತು ಯಿರಲಿಕೆ ಮುಂದಣುತ್ತರ
ದನುವನಾಲಿಸು ಕಥೆಯ ಪಾರ್ಥನ ತೀರ್ಥಯಾತ್ರೆಯಲಿ ॥ ೧೭

ಸುತವಿನೋದದ ರಚನೆಯಲಿ ಸಾ
ರಥಿಗೆ ಯಾವಾಸುಗಿಯ ಕೊಟ್ಟನು
ಕ್ಷಿತಿಗೆ ನಾಗರವಾಲಿಯಾದುದು ನೃಪತಿ ಕೇಳಂದ ।
ಸತಿಯು ಗರ್ಭದಲಿರಲು ಪಾರ್ಥನು
ಕ್ಷಿತಿಗೆ ಕಳುಹಿಸಿ ಕೊಡುವುದುಚಿತದ
ಮತಿಯ ಮೆಱೆಯುದೆ ಪಾರ್ಥ ಹೊಱವಂಟನು ಸರಾಗದಲಿ ॥

ಕ್ಷಿತಿಗೆ ಬಂದನು ಜಾಹ್ನವೀಸಂ
ಗತಸಮುದ್ರದ ತೀರದಲಿ ಸೇ
ವಿತದ ತೀರ್ಥೋನ್ನತದಿನೈದಿದನಿಂದ್ರದಿಙ್ಮುಖವೆ ।
ವಿತಳದಲಿ ತಂದೆಲೆಯ ಬಳ್ಳಿಯ
ಕ್ಷಿತಿಯ ಸುತ್ತಲು ಬಿತ್ತ ಹೇಱಿಯೆ
ಯತಿಮನೋಹರದಿಂದ ಬಂದನುವಗಸ್ತ್ಯಮುಖವಾಗಿ ॥ ೧೯

ಅರಸ ಕೇಳುತ್ತರದ ಪೂರ್ವದ
ಪರಮತೀರ್ಥವ್ರಾತ ನೆಱೆ ಸ
ತ್ಕರಿಸಿ ಸಾಗರತೀರದಲಿ ದಕ್ಷಿಣದಿಶಾವರಕೆ ।

ತಿರುಗಿದನು ನರಸಪ್ತಗೋದಾ
ವರಿಯ ದಾಂಟಿಯೆ ಕೂರ್ಮಗಿರಿಯನು
ಪರಿಹರಿಸಿ ನೆಱೆ ಬಂದ ಕೃಷ್ಣಾನದಿಯ ಸಂಗಮಕೆ ॥ ೨೦

ಶ್ರೀಗಿರಿಯ ಕಂಡಾನಿವೃತ್ತಿಯ
ಕಾಗಿ ಕಾಂಚೀನಗರಿಗೈದಿದ
ಬೇಗದಲಿ ಹಿಂದುಳಿದ ತೀರ್ಥವ ಮಿಂದು ಹರುಷದಲಿ ।
ಆಗಳತಿಶಯಭಕ್ತಿಭಾವದ
ರಾಗದಲಿ ಬಲ್ಲಾಳನಾಥನ
ಮೇಗೆ ಪೂಜೆಯ ಮಾಡಿ ಮೆಱೆದನು ನರನು ತ್ರಿಭುವನದಿ ॥ ೨೧

ಆನಗರದತಿಶಯಕೆ ದೇವ
ಸ್ಥಾನನಿಕರವು ನೆರೆಯದುತ್ತಮ
ದಾನರೇಶ್ವರ ಬಂದನಗ್ರದ ರಂಗನಾಥಂಗೆ ।
ಮಾನನಿಧಿ ಪೂಜಿಸಿಯೆ ತೆರಳಿಯೆ
ಮೌನದಲಿ ಶ್ರೀರಂಗದಿಂದವೆ
ಮಾನಿನಿಯ ಕಂಡದಕೆ ಹೊಕ್ಕನನಂತಶಯನವನು ॥ ೨೨

ಏನ ಹೇಳುವೆನರಸ ನಿಗಮ
ಸ್ಥಾನವಿಭವಕೆ ದೇವನಿಕರ
ಸ್ಥಾನವಲ್ಲಿಗೆ ನೇಮಿಸಿ ಬಂದನಬುಧಿಯ ತೀರದೇಶದಲಿ ।
ವಾನರರ ಭುಜಬಲದ ಸತ್ವದ
ನೂನಶಾಸನವಪ್ಪ ಲಂಕೆಯ
ದಾನವೇಶ್ವರ ಮಾರ್ಗ ಕಂಡನು ಸೇತುಬಂಧನವ ॥ ೨೩

ವರಧನುಷ್ಕೋಟಿಯಲಿ ಮಿಂದೀ
ಶ್ವರಪದಾಂಬುಜಕೆಱಗಿ ಬಳಿಕಾ
ನರನು ಬಂದನು ಮಕರವೂಘಕೆ ಜಲಧಿತೀರದಲಿ ।

ಸುರವಧುಗಳೈನೂಱುನಾರದ
ವರಮುನಿಯ ಶಾಪದಲಿ ಕಲ್ಲಾ
ಗಿರಲು ಪೂರ್ವದೊಳಾತನಿದಿರಿನಲವರು ಜಲದೊಳಗೆ ॥ ೨೪

ನೆರೆದು ನಗ್ನೆಯರಾಗಿ ಮಾನಸ
ಸರಸಿಯಲಿ ಹೊಕ್ಕಿರಲು ಶಾಪವ
ನೊರೆದನವರಿಗೆ ಹತ್ತುಸಾವಿರವರುಷ ಕಲ್ಲಾಗಿ ।
ಇರುತಿಹುದು ನೀವೆನಲು ನಾಕಜ
ರರಸಿಯರು ಬಿನ್ನವಿಸೆ ತವಗಿದು
ಪರಿಹರಪುದೆಂದೆನಲು ಕೇಳಲು ಮಕರಮಾಘದಲಿ ॥ ೨೫

ಆವನೊಬ್ಬನು ಬಂದು ನಿಮ್ಮಯ
ತಾವಿನಲಿ ಮಿಂದವನ ಮಂಡೆಯು
ಸೇವಿಸಿದ ಬಿಂದುದುರೆ ಯಾದಿನಕಂದು ಕಡೆಹಾರ ।
ದೇವವಧುತೆಯು ಒರಲಿ ಕಲ್ಲಿನ
ಭಾವ ಬಿಟ್ಟಡಗಿರಲಿ ಯೆಂದಾ
ದೇವವಧು ನಿಕರಕ್ಕೆಯುಭಯುವನಿತ್ತು ಕಳುಹಿದನು ॥ ೨೬

ಇರಲು ಕನ್ಯೆಕುಮಾರಿಯಲಿ ನೆರೆ
ನೆರೆದು ಬಿಟ್ಟರು ದೇವವಧುಗಳು
ಯಿರಲಿ ಯೀಱೈದಬ್ದಸಾವಿರವರುಷಪರಿಯಂತ ।
ಶರಧಿಯಲಿ ಶಿಲೆಯಾಗಿ ಬಿಟ್ಟೊಡೆ
ವರುಣನೈದಿದ ಮಕರರಾಶಿಯು
ಲಿರಲಿ ಮಾಘಸ್ನಾನಕಾಗಿಯು ಪಾರ್ಥ ನಡೆತಂದ ॥ ೨೭

ಜಲಧಿಯಲಿ ನೆಱೆ ಮಾಘ ಮಾಡಿಯೆ
ಜಲವನಂಗೀಕರಿಸಿ ಕೂದಲ
ಬೞಿಗವನು ಬಿಚ್ಚಲಿಕೆ ಶಿಲೆಗಳ ಮೇಲೆ ಬಿಂದುದುರೆ ।

ತಿಳಿದು ಮಾಘಸ್ನಾನಮಹಿಮೆಯ
ನೊಲಿದು ಕೇಳೈ ಸೂರ್ಯಮಂಡಲ
ವಿಳಗೆ ಮೂಡುವಸಮಯಕಾಗಳ ವುದಕವೊಱಲುವುದು ॥ ೨೮

ಬರಲಿ ಮದ್ಯಪ ಬ್ರಹ್ಮಘಾತಕ
ಬರಲಿ ಸ್ವರ್ಣಸ್ತೇನ ಗೋವಧೆ
ಧರಿಸಿ ಬಂದವ ಬರಲಿ ಗುರುವಧೆ ಮಾಡಿದವ ಬರಲಿ ।
ಬರಲಿಕವರಘರಾಶಿಯಾದುದ
ಪರಿಹರಿಸಿ ನೆಱೆ ಸತ್ಪವಿತ್ರರ
ನೆರವಿ ಯೋಗ್ಯವ ಮಾಡಿ ಕೊಡುವೆನು ನಿಮಿಷಮಾತ್ರದಲಿ ॥ ೨೯

ಎಂಬ ಜಲಗಳ ಮಿಂದು ಮಂಡೆಯು
ಉಂಬುಬಿಂದುಗಳುದುರೆ ಸ್ತ್ರೀನಿಕು
ರುಂಬವಾದರು ವಾದಶಿಲೆಗಳು ಮಾಘಮಾಸದಲಿ ।
ಅಂಬರಕ್ಕೈನಾಕುಪ್ರಜೆಗಳು
ಇಂಬುಗೊಂಡೈದಿದರು ಪಾರ್ಥನ
ಅಂಬು ಕಾದುದದೆನುತ ಹೊಗೞಿದರಂದು ಹರುಷದಲಿ ॥ ೩೦

ಹರಸುತಲಿ ಕಲಿಪಾರ್ಥದೇವನ
ಸುರವಧುಗಳಂದೈದಿ ಹೊಕ್ಕರು
ಸುರರ ಭವನವನರಸುತಿತ್ತಲು ಕೇಳು ಕೌತುಕವ ।
ವರಧನುಷ್ಕೋಟಿಯಲಿ ಮಿಂದೀ
ಶ್ವರಪದಾಂಬುಜಕೆಱಗಿ ನೆಱೆ ವರ
ಸರಸಿ ಪಂಚತಟಾಕದಲ್ಲಿ ಮಕರಮಾಘದಲಿ ॥ ೩೧

ವರಸಮರ್ಪಣಮಾಡಿ ಫಲುಗುಣ
ತೆರಳಿದನು ಕನ್ಯಾಕುಮಾರಿಯ
ನರನು ಬೀಳ್ಕೊಂಡಲ್ಲಿ ಹೋಗಲಿಕರಸ ಕೇಳೆಂದ ।

ಸುರವಧುಗಳಿರಲವರ ಶಾಪವ
ಪರಿಹರಿಸಿ ಸಲೆ ತೀರ್ಥಸೇವಾ
ಪರಮಪಾವನಕರಣನಾತನ ನೆನೆದನಾಪಾರ್ಥ ॥ ೩೦

ಆತನಳಬಳವೆಱಿದು ಪಾಂಡ್ಯಮ
ಹೀತಳಾಧಿಪ ನಿಜಕುಮಾರಿಯು
ನಾತಗಿತ್ತನು ಕುಸುಮಲತೆಯನು ಕೊಡುತಲಿಂತೆಂದ ।
ಓತುಕೊಳ್ವುದು ನರನೆ ಯಿಾಕೆಯು
ಪ್ರೀತಿಯಲಿ ನೀನೆನುತ ಕೊಟ್ಟನು
ಧಾತುವತ್ಸರ ತ್ರುತಯಭಾಗದೊಳರಸ ಕೇಳೆಂದ ॥ ೩೩

ಆಕೆ ಮೇನಕೆ ಶಕ್ರನರಸಿಯು
ನಾಕು ಸತಿಯುಳದೆನಿಸಿ ಮರ್ತ್ಯ
ಸೀಕದಲಿ ಜನಿಸೆನಲು ಜನಿಸಿದಳಲ್ಲಿ ಪಾಂಡ್ಯನಲಿ ।
ಪ್ರಾಕುತನದಲಿ ಪಾರ್ಥನರಸಿಯು
ಲೋಕದೊಳು ತಾನಾಗಿ ಯಿರಲಿಕೆ
ಯಾಕೆ ಗರ್ಭಿಣಿಯಾದಳಗ್ಗದ ವೀರಭದ್ರನನು ॥ ೩೪

ಆತ ನಾಕಲಿಬಭ್ರುವಾಹನ
ನೀತಿಯಲಿ ಜನಿಸಿದನು ಬಲುಗೈ
ಭೂತನಾಥನ ಶಾಪಭಯದಲಿ ರುದ್ರಗಣದಾತ ।
ಆತ ಸಹಿತಂಗನೆಯು ನಿಲಿಸಿಯೆ
ಪ್ರೀತಿಯಲಿ ನಡೆತಂದು ಪಶ್ಚಿಮ
ಕೋತು ತೀರ್ಥಕ್ಷೇತ್ರನಿಃಕರವ ಪಾರ್ಥನಾದರಿಸಿ ॥ ೩೫

ನದನದಿಗಳುತ್ತರಿಸಿ ಪಂಪಾ
ಸುದತಿಯಾಶ್ರಮಕೈದಿ ಕಂಡನು
ಮುದದಿ ವಿರುಪಾಕ್ಷನನು ಪೂಜಿಸಿ ಬಂದ ಹರಿಹರಕೆ ।

ಅದಟುತನದಿಂ ಬಂದ ಚೈತ್ರದ
ತದಿಗೆಗಲ್ಲಿಂ ತೆರಳಿ ಗೋಕ
ರ್ಣದ ಮಹಾಬಲಕಾಗಿ ಬಂದನು ಮಿಂದು ತೆರಳಿದನು ॥ ೩೬

ಮುದದಿ ಮದಿಸಿದಹಂಸೆಗಳನವೆ
ನದಟ ನೋಡುತ ಬಂದ ತಾರಾ
ವಿದಿತಕಳೆಗಳು ಮೆರೆದವೆಂಬರಕಾಗ ರಾಗದಲಿ ।
ಅದಱದಱ ಕಾಲದಲಿ ಕಾಲವೆ
ಮುದದಿ ಮನ್ನಿಸಿ ಗ್ರೀಷ್ಮರುತುವಿನ
ಮೊದಲಮಾಸಕೆ ಹೊಕ್ಕ ತುಳುವಿನದೇಶದ ಕ್ಷಿತಿಯ ॥ ೩೭

ಇಂತಿದಿರಲಿಕಾಸಪ್ತನಾಥನ
ನೊಲಿದು ಸೇವಿಸುತಿರಲಿಕಲ್ಲಿಯ
ತುಳುವಭೂಪನು ಪಾರ್ಥಗಿತ್ತನು ತನ್ನ ನಂದನೆಯ ।
ನಳಿನಮುಖಿ ತಾ ವರತಿಲೋತ್ತಮೆ
ತುಳುವನಲಿ ಜನಿಸಿದಳು ಚಂದ್ರನ
ಕಳೆಯನಾಲಿಂಗಿಸಲು ಶಕ್ರನು ಕಂಡು ಶಪಿಸಲಿಕೆ ॥ ೩೮

ಧರೆಯಲಿರು ನರನರಸಿಯಾಗಿಯೆ
ವರಷವೈವತ್ತೈದು ಪರಿಯಂ
ತಿರುವುದೆನೆ ನರನರಸಿಯಾದಳು ಪತಿಯ ಮಾತಿನಲಿ ।
ಪರಪುರುಷರತಿಯಾಗಲಮರರ
ವರಮುಖವ್ರಾತಂಗಳೀಪರಿ
ನರರ ಹೆಂಡಿರ ಗತಿಗಳಾವುದೊ ತಿಳಿವೊಡರ್ಜುನಗೆ ॥ ೩೯

ವರಸುತೆಯ ಕೈಕೊಳಿಸಿ ವಿಜಯಗೆ
ನಿರವಿಸಲಿಕಾಹರಿಯ ಮೈದುನ
ತಿರುಗಿ ಕಳುಹಿಸಿ ಕೊಂಡು ಬಂದನು ವರುಷಋತು ಬರಲು ।

ಸಂತುಪತಿ ತಡಿವಿಡಿದು ಗೋವೆಯು
ಪರಿಹರಿಸಿ ಬರಲಾಯ್ತು ಮೇಘದ
ವರಸಮೂಹದ ಮೇಳವನು ನೋಡುತ್ತ ನಡೆತಂದ ॥ ೪೦

ಒಡ್ಡು ಮಿಱಿದುದು ಮೇಘಘಟೆ ಬಿಸಿ
ಲೊಡ್ಡು ಮುಱಿದುದು ಚಂದ್ರಸೂರ್ಯರ
ನಡ್ಡವಿಸಿ ಹಿಡಿಯಾಳ ಹಿಡಿದುವು ಮುಗಿಲಚೂಣಿಗಳು ।
ಅಡ್ಡಬೀಳುವರಾರು ಮೇಘದ
ಗೊಡ್ಡಹಯನಾದಂತೆ ಬೆನಕನ
ಲಡ್ಡುಗೆಯು ಪರಿಯಾಯ್ತು ನವಗ್ರಹ ವರುಷಕಾಲದಲಿ ॥ * ೪೧

ಆಳ ಕರೆ ಕಟಕವೆನು ಸೂರ್ಯನ
ಮೇಲೆ ಬರಹೇಳೆಂಬ ಮೇಘನೃ
ಪಾಲಕನ ಡಂಗುರವೊ ಮೊಳಗುಗಳೋ ದಿಗಂತರದ [1] ।
ಆಲಿಕಲ್ಲಳೊ ಮುಗಿಲ ಮುಂಗುಡಿ
ಯಾಳ ಹೊಯ್ಲಲಿ ಬೀಳ್ವ ತಾರಾ
ಮಾಲೆಗಳೊ ಜೀಮೂತಲತೆ ಲಂಬಿಸಿದುದಂಬರವ ॥ ೪೨

ಮಿಂಚಿದುವು ದೆಸೆಗಳಲಿ ಗಗನಕೆ
ಮುಂಚಿದುವು ಹಂಸೆಗಳು ನಭದಲಿ
ಹಿಂಚಿದುವು ಜೀವನಕೆ ಜೀವನ ವಿರಹಿನಿಕುರುಂಬ ।
ಪಂಚಪತಿಯರೊ ಮೇಣಿವರು ಪತಿ
ವಂಚಕೆಯರೊ ಗ್ರೀಷ್ಮಕಾಲದ
ಪಂಚತೆಯೊಳಾಲಂಗಿಸಿತು ದಿಗ್ವಧುಗಳಂಬುದವ ॥ ೪೩

---

* ಖಡ್ಡ ತಡದೆವು ಕಡಲನುಡುಗಣ ।
ದೊಡ್ಡಕಾಣೆನು ಮುಗಿಲಬೆನಕಗೆ ।
ಲಡ್ಡುಗೆಗಳಾದುವು ಸಮಸ್ತಗ್ರಹಸುತಾರೆಗಳು ॥ ಚ. ಠ.

1 ಮೊಱಗುವ ಸಿಡಿಲನುಬ್ಬರವೊ, ಚ. ಠ.

ಜನಪ ಕೇಳೈ ಕಾರ್ಮುಗಿಲ ಮುಂ
ಬನಿಗಳೋಡುವ ಬೇಗದಲಿ ಜೀ
ವನವನಾಳುವ ಹೊನಲು ಕೊಂಕಣದೆಸೆಯ ವೀಧಿಯಲಿ |
ಜಿನುಗಿನಲಿ ಬಲುಮಳೆಗಳಲಿ
ನನೆನನೆದು ಸಾಗರತೀರದಲಿ ಬಂ
ದನು ಕಿರೀಟಿ ವಿಚಾರಿಸುತ ಮುರಹರನ ಪಟ್ಟಣಕೆ || ೪೪

ಪುರವ ಹೊಱವಂಟೆಂಟುತಿಂಗಳು
ಪರಿಹರಿಸಿತೀಕೃಷ್ಣರಾಯನ
ಪುರದೊಳಗೆ ನೂಕುವೆನು ವರುಷಾಕಾಲವಿಭ್ರಮವ |
ವರುಷವೊಂದು ಸಮಾಪ್ತಿಯಾಗಲಿ
ಕರಸನಂಘ್ರಿವಿಲೋಕನಾವಿ
ಸ್ತರಣವಹುದೆಂದಾತ ನಿಶ್ಚಯಿಸಿದನು ಮನದೊಳಗೆ || ೪೫

ಅರಸ ಕೇಳ್ ಸಂನ್ಯಾಸಿವೇಷದ
ಪರಿಕರವನಳವಡಿಸಿ ಯಾದವ
ಪುರದ ಹೊಱಬಾಹೆಯಲಿ ಹೆಚ್ಚಿದ ಬನದ ಮಧ್ಯದಲಿ |
ಇರುಳು ಕಗ್ಗತ್ತಲೆಯೊಳೌಕುವ [1]
ಸರಿಮಳೆಗೆ ಮಿಗೆ ಸೆಡುಗೊಳುತು
ಬ್ಬರಿಸಿ ಕೃಷ್ಣನ ನೆನೆಯುತಿದ್ದನು ಮರನ ಹೊಳ್ಳಿನಲಿ || ೪೬

ದೇವನತ್ತಲು ಸತ್ಯಭಾಮಾ
ದೇವಿಯರ ಪಾಳಯದೊಳಿರುತಿ
ದ್ದೀವಿಲಾಸವ ನೋಡಿ ನಕ್ಕನು ಶಕ್ರನಂದನನ |
ಆವಳೋ ನೆನಹಿನಲಿ ಸುಳಿದಳು
ಭಾವದಲಿ ಸುಮ್ಮಾನವೇನೆನೆ
ದೇವಿ ಬೇಱೊಂದಿಲ್ಲ ಕೇಳ್ ನಿನ್ನಾಣೆ ಹುಸಿಯಲ್ಲ || ೪೭

---

1 ಕತ್ತಲೆಯೊಳಗೆ ಸುರಿವಾ, ಕ. ಖ.

ಅರಸಿ ನೀ ಮೇಣಱಿಯಲಾ ಸೋ
ದರದ ಮೈದುನನೆನಗೆ ಕುಂತೀ
ವರಕುಮಾರಕನಾತನೀ ದ್ವಾರಾವತಿಯ ಹೊಱಗೆ ।
ಮರನ ಹೊಳ್ಳೊಳು ಹೊಕ್ಕು ಸಿಕ್ಕಿದ
ನರಿಯವೋಲ್ಯೆಥಾನೆ ಹೋಗುಪ
ಚರಿಸಿ ಬಹೆನೆನುತೆದ್ದನಸುರಾರಾತಿ ಮಂಚದಲಿ [1] ॥ ೪೮

ಅರಸಿ ಕೇಳೀಬಂದ ಪಾರ್ಥನ
ಕರೆದುಪಾಯಾಂತರದೊಳೀವೆನು
ಸರಸಿಜಾನನೆಯನು ಸುಭದ್ರೆಯನಿಂದು ತಪ್ಪಿದರೆ ।
ಕರೆಸಿ ದುರ್ಯೋಧನಗೆ ಕೊಡಿಸುವ
ಭರವು ಬಲಭದ್ರಂಗೆ ಪಾರ್ಥನ
ಬರವು ಲೇಸಾಯ್ತೆನುತ ನೆನೆದನು ವೈನತೇಯನನು [2] ॥ ೪೯

ನೆನೆಯಲಾಕ್ಷಣ ಕ್ಷೀರಸಾಗರ
ವನಧಿಯಲ್ಲಿಂ ಬಂದು ಯಾದವ
ಜನಪನಂಘ್ರಿಯೊಳೆಱಗಿ ಬಾಗಿದನಹಿಕುಲಾಂತಕನು ।
ದನುಜಹರನಾಪಕ್ಷಿರಾಜನ
ವಿನಯವೃತ್ತಿಯಲೇಱಿ ತನ್ನಯ
ವನಿತೆಯಾಲಯದಿಂದ ಹೊಱವಂಟಾಗ ನಡೆತಂದ ॥ ೫೦

ಬಂದನಲ್ಲಿಗೆ ಫಲುಗುಣನ ಕಂ
ಡೆಂದ ನಿನ್ನಯ ಠಾವನಱಿದೆವ
ದೆಂದೆನಲು ಮೈಯಿಕ್ಕಿ ಬಿನ್ನಹ ಮಾಡಿದನು ಹರಿಗೆ ।

---

1 ನೆನುತ ಮಂಚವನಿಳಿದನಸುರಾರಿ, ಕ. ಖ.

2 ಹೊಱವಂಟನು ನಿಜಾಲಯವ, ಚ. ಘ.

ನಂದಗೋಪಯಶೋದೆವನಿತೆಯ
ಕಂದ ನೀನಿದನಱಿತೆನೆಂಬುದ
ಮಂದಮತಿಗಳಿಗಸುರ ಬೇಡಿದು ನೀನು ಸರ್ವಜ್ಞ ॥ ೫೧

ಎಂದುದಕೆ ಮುದವಡೆದು ಪಾರ್ಥಂ
ಗೆಂದ ರೈವತಶೈಲದಲ್ಲರ
ವಿಂದಸಖನುದಯದಲಿ ಬಂದಿರು ಮುಸಲಿಯೈತಂದು ।
ಮಂದಿರಕೆ ಬರಹೇೞಿದೊಡೆ ಬಾ
ಮುಂದೆ ನಿನ್ನಯ ಸ್ವಾರ್ಥ ಸಿದ್ಧಿಪು
ದೆಂದು ಪಾರ್ಥನ ಸಂತವಿಸಿ ಮರಳಿದನು ಮುರವೈರಿ ॥ ೫೨

ನಿಲಿಸಿ ಮರಳಿದ ಸತ್ಯಭಾಮಾ
ನಿಳಯಕಾಗಲು ಬಿಜಯಮಾ
ಡಲು ತರಣಿ ಬಂದನು ಪೂರ್ವಶೈಲಕ್ಕೆತ್ತ ಮುರವೈರಿ ।
ನಲಿದು ಪ್ರಾತಃಕಾಲಕರ್ಮವ
ಜಲದಲರ್ಘ್ಯವನೆತ್ತಿ ಸೂರ್ಯಂ
ಗೊಲಿದು ಯಾದವದೇವನಿತ್ತಲು ಬಂದನೋಲಗಕೆ ॥ ೫೩

ಪರಮಹಂಸನ ಸುಳಿವು ಸಾಕ್ಷಾ
ತ್ಪರಮಪುರುಷನ ಸಂಗದಲಿ ಯತಿ
ವರನ ದರುಶನ ಲೇಸು ನಮ್ಮಯ ನಗರಿಗೈತರಲು ।
ಹರಹಿದನು ಹರಿ ವಾರ್ತೆಯನು ತಾ
ನಱಿಯದಂತಿರೆ ಕೇಳಿ ನೀಲಾಂ
ಬರನು ಬಹಳೋತ್ಸವದಲೈದಿದ ನರನ ಹೊರೆಗಂದು ॥ ೫೪

ಬರಲಿಕಾತನು ತನ್ನ ಕಾಲದ
ನಿರುತಸದನುಷ್ಠಾನ ಮಾಡಿಯೆ
ಗಿರಿಯ ತಪ್ಪಲ ಮರದ ನೆಳಲಲಿ ನೀತಿಪಾವನನು ।

ನರನು ನೆಱೆ ಸಂನ್ಯಾಸಿವೇಷವ
ಧರಿಸಿ ತಾ ಪರಿಯಾಜ್ಞೆಯಿಂದವೆ
ಸರಸಿಜಾಕ್ಷನ ನೆನೆಯುತಿದ್ದನು ಕಾಶಪಟನಾಗಿ ॥ ೫೫

ವಂದಿಸಿದನಾಮುನಿಗೆ ರಾಮನು
ವಂದಿಸಲಿಕಾಶ್ರಮದ ಹರಕೆಯು
ನಂದು ಕರುಣಿಸಿ ನುಡಿದ ಚಾತುರ್ವೇದ ವಿದ್ಯೆಗಳ ।
ಎಂದದನು ವ್ಯಾಖ್ಯಾನದಿಂದಲಿ
ಯಿಂದಿರಾಪತಿ ಸರ್ವಜೀವರಿ
ಗೆಂದು ನೆಱೆ ಸರ್ವೇಶ್ವರೇಶ್ವರ ಸರ್ವಗುಣನಿಳಯ ॥ ೫೬

ಎಂದು ಚಾತುರ್ವೇದವಿದ್ಯೆಯು
ಸಂದುಗೊಡದಾಹರಿಯು ಹೊಗಳುವು
ವೆಂದನ್ಯೆ ಪ್ರತ್ಯಕ್ಷಶ್ರುತದಿಂದಾನುಮಾನದಲಿ ।
ನಿಂದು ಬೆರಳಿನ ಮೂಗಿನಲಿ ಸಾ
ನಂದ ಮಿಗೆ ಬೆಱಗಾಗಿ ತಮ್ಮಯ
ಮಂದಿರಕೆ ನೀವ್ ಬಿಜಯಮಾಡುವುದೆಂದು ಕೈಮುಗಿದ ॥ ೫೭

ನಾವು ಭಿಕ್ಷುಕರೆಮಗೆ ನಿಂದಿತ
ಭೂವಧೂವಲ್ಲಭರ ಸದನವು
ನಾವು ಸಾರ್ದಿರಬೇಕು ನದಿಗಳ ತೀರವನಗಳಲಿ ।
ಭಾವಿತಪ್ರಾರಬ್ಧಕರ್ಮಘ
ಲಾವಳಿಯನುಪಭೋಗಿಸುತ ದೇ
ಹಾವಸಾನವನೀಕ್ಷಿಸುತ್ತಿಹೆವೆಂದನಾಪಾರ್ಥ ॥ ೫೮

ಎನಲು ಲಾಂಗಲಿ ಯತಿಯ ಮಾತಿಗೆ
ನೆನೆದು ಹೊಂಪುಳಿಯಾಗಿ ನುಡಿದನು
ದಿನವ ನೂಕುವುದೊಂದು ಗ್ರಾಮಕೆ ಮೂಱುನಗರದಲಿ ।

ದಿನವ ನೂಕುವುದೈದು ಪುರದಲಿ
ದಿನವ ಕಳವುದದೇಬುಪಟ್ಟಣ
ಜನಪದಗಳುಳ್ಳಲ್ಲಿ ನವದಿನ ದೇವಸದನದಲಿ ॥ ೫೯

ದಿನವ ನೂಕುವುದರ್ಧಮಾಸವು
ವಿನಯದಲಿ ಸುರನದಿಯ ತೀರದಿ
ದಿನವ ಚರಿಸುವುದಾಪ್ರಯಾಗದಿ ಪಕ್ಷವೆರಡುಗಳ ।
ವನದಿ ವಸಿಸಿಹುದಮಳಮುನಿಗಳ
ಮನೆಯಲೈವತ್ತಾಱುದಿನಗಳ
ವಿನಯದಲಿ ನೂಕುವುದು ಶ್ರೀಗಿರಿಯಲ್ಲಿ ಮಾಸವನು ॥ ೬೦

ಈ ಮಹಾದ್ವಾರಕಿಯು ಕಾಶಿಯು
ಭೂಮಿಗಿಮ್ಮಡಿಯಾ ತ್ರಿಯಂಬಕ
ನೇಮಿಸಿಹ ಶೈಲಕ್ಕೆ ಸಾವಿರ ಮಲ್ಲಿಕಾರ್ಜುನನ ।
ಆಮಹೀಧರಕೊಂದುಸಾವಿರ
ಭೂಮಿಯಲಿ ತ್ರ್ಯಯುಗಕೆ ಲಕ್ಷವು
ಕಾಮಹರ ವಿರುಪಾಕ್ಷನಲ್ಲಿಗೆ ಲಕ್ಷ ಹನ್ನೊಂದು ॥ ೬೧

ಪರಮಪುರುಷೋತ್ತಮಕೆ ಪಂಢರಿ
ಪುರಕೆ ಶ್ರೀರಂಗಕ್ಕೆ ಉರಗನ
ವರಮಹಾಶಯನಕ್ಕೆ ಮತ್ತಾಪಂಚಕೃಷ್ಣರಿಗೆ ।
ಧರಣಿಯಲಿ ಸರಿ ತೂಕ ಮಿಕ್ಕನ
ಧರಣಿಯಲಿ ನೆರೆದಿರ್ದ ಕ್ಷೇತ್ರದ
ಪರಿಗಣಿತಹನ್ನೆರಡುಲಕ್ಷದ ಸರಿಯು ತೂಕವದು ॥ ೬೨

ಈ ಮಹಾದ್ವಾರಕೆಯ ಮಹಿಮೆಯು
ಸೋಮಶೇಖರನಱಿಯ ತಾಸಿದ
ನೇಮಿಸಲಿಕಳವಲ್ಲ ಚಕ್ಷುಶ್ಶ್ರವಣಪತಿಗೆಂದ ।
ನೀ ಮಹಾಸಂನ್ಯಾಸಿ ದ್ವಾರಕಿ

ಭೂಮಿಯನು ಬಿಟ್ಟನ್ಯಭೂಮಿಗೆ
ಕಾಮಿಸುವೊಡಲ್ಲೆಂದು ಯತಿಯನು ಮುಸಲಿ ನಿಲಿಸಿದನು ‖ ೬೩

ಬಲರಾಮನು ಸನ್ಯಾಸಿವೇಷದಲ್ಲಿದ್ದ ಅರ್ಜುನನನ್ನು
ಪಟ್ಟಣಕ್ಕೆ ಕರತರುವಿಕೆ.

ಇಹುದು ನೀವೇಕಾಂತಭವನದೊ
ಳಿಹುದು ಚಾತುರ್ಮಾಸವಿಧಿ ಸ
ನ್ನಿಹಿತವಾಯ್ತಿದ ನೂಕಿ ಬಿಜಯಂಗೈವುದಿಚ್ಛೆಯಲಿ |
ವಿಹಿತಚರಿತರು ನೀವು ನಿರ್ವಹಿ
ಸಿಹೆವು ಶುಶ್ರೂಷೆಯನು ನೀವ್ ನೆಱೆ
ಗಹನಮಾಡದಿರೆಂದು ತಂದನು ಯತಿಯ ಮಂದಿರಕೆ ‖ ೬೪

ಗುಡಿಯ ತೋರಣವಾದ್ಯರವದು
ಗ್ಗಡಣೆಯಿಂದೈತರಲಿಕಾಯತಿ
ನುಡಿದನಗ್ಗದ ಕೃತಕಕೃಷ್ಣನು ಹೇೞಿದಂದದಲಿ |
ಮಡದಿಯರ ಜಾತಿಯಲ್ತು ಕನ್ಯಕೆ
ಬಿಡದೆ ಮಾಡಿದ ಪಾಕಭಿಕ್ಷೆಯ
ಹಿಡಿಯಬಹುದೆನೆ ರೇವತಿಯ ಪತಿಯದನು ಕೈಕೊಂಡ ‖ ೬೫

ಅಂದು ರಾಮನು ತದ್ವ್ರತೀಶನ
ತಂದನುತ್ಸಾಹದಲಿ ಪುರಜನ
ನಿಂದು ನೋಡಲು ದ್ವಾರಕಾಪುರದೊಳಗೆ ಬರುತಿರ್ದ |
ಅಂದು ಮೊದಲಾಷಾಢದಶಮಿಯ
ಮಿಂದು ಸ್ವಾತಿಗೆ ಪಾರ್ಥ ಹೊಕ್ಕನ
ದಿಂದಿರಾಪತಿನಗರಿಗಾದಿನಕೆಂಟುಮಾಸವನು ‖ ೬೬

ಆ ಯತಿಸೇವೆಗಾಗಿ ಸುಭದ್ರೆಯನ್ನು ನಿಯಮಿಸುವಿಕೆ.

ಇವರನರಮನೆಯೊಳಗೆ ಕನ್ಯಾ
ಭವನಮಧ್ಯದೊಳಿರಿಸಿ ಬೞಿಕಿನೊ

ಳವರ ಪರಿಚರ್ಯೆಕ್ಕೆ ನಿರವಿಸಿದಾಸುಭದ್ರೆಯನು ।
ಇವರಪೂರ್ವಮಹಾತ್ಮಕರು ನೀ
ನಿವೆರದೇವಾರ್ಚನೆ ಸಮಾಧಿ
ಪ್ರವರದಲಿ ಬೆಸಸಿದುದ ಮಾಡುವುದೆಂದು ನೇಮಿಸಿದ ॥ ೬೭

ಈ ವಿಷಯದಲ್ಲಿ ಕೃಷ್ಣನ ಆಕ್ಷೇಪ ಮತ್ತು ಬಲರಾಮನ ಸಮಾಧಾನ.

ಮುರಮಥನ ಬಂದಾಗ ರಾಮನ
ಹಿರಿದು ಮರುಳಾಡಿದನು ತಂಗಿಯ
ತಿರುಕಗಿತ್ತಿರೆ ಮಱೆದು ನೀವಿಂದೆಂದನೊಲವಿನಲಿ ।
ಅರಸುಮಗಳನು ತೊತ್ತುಗೆಲಸಕೆ
ಪರುಠವಿಸಿದಿರಿ ಶಿವ ಶಿವಾ ತಾ
ವಱಿಯವಿಲ್ಲಿಯ ಲೇಸು ಹೊಲ್ಲ ಹವೆಮ್ಮದಲ್ಲೆಂದ ॥ ೬೮

ಮರುಳ ನೀ ಹೋಗೆನುತ ನೀನಿವ
ನಱಿಯೆ ಯತಿ ಸರ್ವಜ್ಞನೀತನು
ತಿರುಕನೇ ಸಾಕ್ಷಾತು ಲಕ್ಷ್ಮೀಕಾಂತಸನ್ನಿಭನು ।
ಬರಲಿ ಮಾಣಲಿ ಹಾನಿ ವೃದ್ಧಿಯು
ಹರಿಬವೆನ್ನದು ಯತಿ ಮಹಾತ್ಮಕ
ನಱಿಯದವರೇ ನಾವೆನುತ ಗಜಱಿದನು ಬಲರಾಮ ॥ ೬೯

ಯತಿಗಳಾವನ ಮನೆಯಲನ್ನವ
ಪತಿಕರಿಸಲಾಪತಿತಪಾವನ
ಪತಿಕರಿಸಿದಂತಹುದದೆಂದರೆ ಕೃಷ್ಣನಿಂತೆಂದ ।
ಪತಿತಪಾವನನಾಮಧೇಯನು
ಪತಿಕರಿಸಲೇನಹುದದೆಂದರೆ
ಕ್ಷಿತಿಮೊದಲು ಚೌರಾಸಿಲಕ್ಷದ ಜೀವಕನ್ನವನು ॥ ೭೦

ಇಕ್ಕಿದಂತಹುದೊಬ್ಬ ಯತಿಗಳ
ಕುಕ್ಷಿಗನ್ನವನಿಕ್ಕೆ ಯೆನಲಿಕೆ

ನಕ್ಕು ಕೌಶಲವಲ್ಲ ಯತಿಗಳಿಗಿಕ್ಕಬೇಕೆಂದ ।
ಚಿಕ್ಕತನ ತಮಗಿದನು ಕಾಣಲು
ಮಕ್ಕಳಿಗೆ ತಾನೇಕೆ ಯತಿಯನು
ಸಿಕ್ಕಿಸಿಯೆ ನೂಱೊಂದುಕುಲವನು ಗತಿಯಲಿರಿಸಿದಿರಿ ॥ ೭೧

ಆದೊಡೊಳ್ಳಿತು ತಂಗಿ ಬೆಸಕೈ
ದಾದರಿಸಲೀ * ತಪಸಿಯನು ತವ
ಗೀದುರಾಗ್ರಹವಾದೊಡಿದರೊಳಸೂಯೆ ನಮಗೇಕೆ * ।
ಹೋದೆವಿದೆ ಮೌನದೊಳನುತಲಬು
ಜೋದರನು ಹಿಂಗಿದನು ಹರಿಯು ವಿ
ನೋದರಚನೆಯನೇನನೆಂಬೆನು ಭೂಪ ಕೇಳೆಂದ ॥ ೭೨

ದನುಜಹರ ಭೀಷ್ಮಕನ ತನುಜೆಯ
ಮನೆಗೆ ಬರೆ ಬಲಭದ್ರರಾಮನ
ಯನುಜೆ ಯತಿಯನು ಮುದದಿ ಸೇವೆಯ ಮಾಡಲಱುವತ್ತು ।

ಸುಭದ್ರೆಯು ಅರ್ಜುನನ ವೃತ್ತಾಂತವನ್ನು ಕೇಳುವಿಕೆ.

ದಿನ ಸವೆಯಲೊಂದಿನದೊಳಬಲೆಯು
ಮನವೊಲಿದು ಸಂನ್ಯಾಸಿವೇಷದ
ಮುನಿಯು ಕೇಳವಳಂದು ನಿಮ್ಮಯ ತೀರ್ಥಯಾತ್ರೆಯಲಿ ॥ ೭೩

ನರನ ಕಂಡಿರೆ ಯೆನಲಿಕೇತಕೆ
ನರವಿಚಾರವು ನಿನಗೆ ಯೆನಲಿಕೆ
ನರಗೆ ವಲ್ಲಭೆ ಯಾಗಬೇಕೆಂದೆನ್ನ ತನುಮನವು ।
ಅರಸಿ ನಿನಗರ್ಜುನನು ವಲ್ಲಭ
ನಿರುತ ತಮಗಱುಹಿದನು ಕೌರವ
ರರಸ ಬಂದರೆ ಕಾದಿ ನಿನ್ನನು ಗೆದ್ದು ಪತಿಯಹನು ॥ ೭೪

* ಯತಿಪತಿಯು ನವ ।
ಗೀದುರಾಗ್ರವೇಕೆ ಕಾಂಬಿರಿ ಫಲವನಗ್ರದಲಿ ॥ ಖ.

ಭರವಸವು ನರನಿಂದು ನಾಳನೊ
ಳರಸನಹನೆನೆ ಕೇಳಿ ನೀವಾ
ನರನ ಚಿತ್ತವನೇನ ಬಲ್ಲಿರಿ ಯೆನಲು ತಾ ನರನು ।
ಅರಸಿ ಕೇಳ್ಳ ನೀನು ಸಾಕ್ಷಾತ್
ನಿರುತನರನೆಂದಾದೊಡಾತನ
ವರಗುಣಾನ್ವಿತನಾಮಪದಿಮೂಱವನು ಹೇಱೆನಲು ॥ ೨೫

ಆದೊಡರ್ಜುನ ಪಾರ್ಥ ಫಲುಗುಣ
ನಾದರಿಸು ವಿಜಯನು ಕಿರೀಟಿಯು
ಭೇದವಿಲ್ಲ ಧನಂಜಯಾಚ್ಯುತ ಕೃಷ್ಣ ಭೀಭತ್ಸು ।
ಆದಿಯಲಿ ನರ ಸವ್ಯಸಾಚಿಯು
ಸಾಧಿಸಲಿಕಾಶ್ವೇತವಾಹನ
ಮೇದಿನಿಗೆ ಗಾಂಡೀವಿಯೆಂಬುದು ತನ್ನ ಗುಣನಾಮ ॥ ೨೬

ಈಸು ಕೇಳಲೆ ವನಿತೆಯೆನೆ ವಿ
ಶ್ವಾಸವಿಲ್ಲದೆ [1] ಮತ್ತೆ ನುಡಿದಳು
ನೀಶದಲಿ ನಿಮಗುದರ ದೊಡ್ಡಿತು ವಕ್ಷ ಕಿಱಿದೆಂದು ।
ಭೂಸುರರು ನೆಱೆಯಾಡುತಿರ್ಪ್ಪರು
ಕೇಶವನ ಮುಂದೆನಲಿಕಾಯತಿ
ವೇಷ ತೋಱಿದ ತನ್ನ ವಕ್ಷವನಾಕುಮಾರಿಯಲಿ ॥ ೨೭

ಯತಿಯನ್ನು ಅರ್ಜುನನೆಂದು ತಿಳಿಯುವಿಕೆ.

ತೋಱಲಿಕೆ ನಡುನಡುಗಿ ನಾಚಿಯೆ
ಸಾಱಿ ಭಿಕ್ಷವನಿಕ್ಕಿ ತಿರುಗಿಯೆ
ವಾರಿಜಾಕ್ಷನ ನೆನೆಯುತಿರಲಿಕೆ ಪಾರ್ಥ ಕೈದೊಳದು ।
ವೀರನಿರಲಾರಾಮನನುಜೆಗೆ

1 ವಾಗುತ. ಖ.

ಬಾರಿಸಿದುವಾಹತ್ತವಸ್ಥೆಯು
ಯಾರಯಿದು ನೀ ಕೇಳು ಮನದೊಳಗಱುಪಿ ನೋಡಿದಳು ॥ ೭೮

ಎರಡುಚಿಂತಿಸಲಾಯ್ತು ಸುಲಲಿತ
ನಿರುತಮೂಱು ಜ್ವರವು ತೋಱಲು
ವಿರಸ ನಾಲುಕು ವ್ಯೆಯ್ಯನಿಱುಹಲ್ಕೈದು ಲಜ್ಜೆಯನು ।
ಇರಿಸಲಾಱೇಳ್ವೆಕಳವೆಡೆಗೊಳ
ಸಿರಿಯು ಮಾನವ ತಳೆಯಲೆಂಟಱ
ಪರಿವಿಡಿಯಲಾ ಮುಸುಕೆ ಮೂದಲಿ ನಾರಿಗೊಂಬತ್ತು ॥ ೭೯

ತನುವೞಿಯಲಾಹತ್ತು ತೋಱುವ
ದಿನದೊಳಾಕೈವಲ್ಯನಾಥನು
ಘನಕೃಪಾಂಬುಧಿ ಕೃಷ್ಣರಾಯನು ಯಾದವಾದಿಗಳ ।
ವಿನಯದಿಂದ ಪ್ರಭಾಸಕ್ಷೇತ್ರಕೆ
ದನುಜಹರ ತೆರಳಿಸಲು ತೆರಳುತ
ಮನೆಯ ಕಾಹಿಗೆ ಯಿರಿಸುತೇಕಾಂತದಲಿ ಹರಿ ನುಡಿದ ॥ ೮೦

ನರ ಸುಭದ್ರೆಯನೊಯ್ದೊಡಾಕ್ಷಣ
ಹರಿದು ರಾಮಂಗಱುಹಬೇಡೆಂ
ದರೆಘಳಿಗೆ ಕಾಲಾಂತ ನಿಲುವುದು ಗುರುವಿನುತ್ಸವಕೆ ।
ಹರುಷದಲಿ ಕೈಕೊಂಡ ಬೞಿಕಾ
ದರಿಸಿ ಮುಸಲಿಯ ಕೊಂಡು ತೆರಳಿದ
ನಿರುತವರಕಾರ್ತಿಕದಶುದ್ಧದ ಪಂಚಮಿಯ ದಿನಕೆ ॥ ೮೧

ಹರಿಯು ತೆರಳಿದ ಹಿಂದೆ ಪುರದಲಿ
ಚರಿಸುವವರಿಲ್ಲೆಂದು ದ್ವಾರಕಿ
ಯರಸ ತೆರಳಿದ ರಾಸಕೇಳಿಯ ರಭಸದುನ್ನತಿಗೆ ।

ನರನು ಮೌನದೊಳೊಂದು ಕಡೆಯಲಿ
ವರಸುಭದ್ರೆಯುದೊಂದುಕಡೆಯ
ಲ್ಲಿರಲಿಕಾಬೆಳಗಾಗೆ ಮಱುದಿನ ದೇವಪೂಜೆಯಲಿ ॥ ೮೧

ಸುಭದ್ರಾರ್ಜುನರ ಅನ್ಯೋನ್ಯಾನುರಾಗ.

ಬಾಲಕಿಗೆ ಸಂನ್ಯಾಸಿದೇವರ
ಮೇಲೆ ಮನವಾಯ್ತಿವರಿಗಾಕೆಯ
ಮೇಲೆ ನೆಲಸಿತು ಚಿತ್ತ ಕಾಣೆನು ಜಪಸಮಾಧಿಗಳ ।
ಮೇಳವಿಸಿತನ್ಯೋನ್ಯರಾಗ ಛ
ಡಾಳಿಸಿದುದಭಿಲಾಷೆ ಕಾಮನ
ಬೇಳುವೆಗೆ ಬೆಂಡಾದುದಿಬ್ಬರಧೈರ್ಯವಡಿಗಡಿಗೆ ॥ ೮೨

ಮಿಡುಕುವುದು ಬಾಯ್ ಚಿತ್ತವವಳಲಿ
ತೊಡಕಿಹುದು ಜಪಮಾಲೆ ಬೆರಳಲಿ
ನಡೆವುತಿಹುದಕ್ಷಿಗಳು ಮುಕ್ಕುಳಿಸಿಹುವು ಮಾನಿನಿಯು ।
ಮೃಡಪಿತಾಮಹಪೂಜೆಗಾಸತಿ [1]
ಹಿಡಿಹಿನಲಿ ಮನವರಳ ಮುದ್ರೆಯ
ತೊಡಹು ಹೊಱಗೊಳಗಿಂದುಮುಖಿಯುರ ನ್ಯಾಸಮುದ್ರೆಯಲಿ [2] ॥

ಜಾಱಿದುದು ಮಳೆಗಾಲವತಿಬಿಳು
ಪೇಱಿದುವು ಮುಗಿಲುಗಳು ಕತ್ತಲೆ
ಸೂಱೆ ಹೋಯಿತು ಹಗಲಿರುಳು ರವಿಶಶಿಗಳುಪಟಳಕೆ ।
ತಾಱಿದುವು ನದನದಿಗಳಭ್ರಕೆ
ಹಾಱಿದುವು ಹಂಸೆಗಳು ತಲೆ
ದೋಱಿದುವು ತಾವರೆಗಳನೆ ಬಂದುದು ಶರತ್ಸಮಯ ॥ ೮೪

---

1 ಮೃಡನ ಪೂಜೆಗೆ ಕೈ ಸುಭದ್ರೆಯು, ಚ.
2 ನರನಾಥ ಕೇಳೆಂದ ಚ, ಕ,

ಅರ್ಜುನನು ದ್ವಾರಕೆಗೆ ಬಂದದ್ದನ್ನು ಕೃಷ್ಣನು ತಿಳಿಯುವಿಕೆ.

ಇರಲಿಕೊಂದಿನ ರಾತ್ರಿಯೊಳಗಾ
ನರನ ವೃತ್ತಾಂತವನು ತಿಳಿದಾ
ಕರುಣಿ ನೋಡಿ ವಸುದೇವರೋಹಿಣಿ ಸತ್ಯಭಾಮೆಯನು ।
ಕರೆದು ಗಾರ್ಗ್ಯಾಂಗಿರಸಗೌತಮ
ವೆರಸಿ ಬಂದನು ದ್ವಾರಕಾಪುರ
ವರಕೆ ಪಾರ್ಥ ಸುಭದ್ರೆಯಿಬ್ಬರ ನೆರಹಬೇಕೆಂದು ॥ ೮೬

ಸುರಗುರುವ ನೆನೆಯಲಿಕೆ ಬಂದಾ
ನರನ ವೈವಾಹಕ್ಕೆ ದೇವರ
ನೆರವಿ ಬಂದುದು ಕೃಷ್ಣರಾಯನ ಕರುಣದಳತೆಯಲಿ ।
ಉರಗಮಥನನನೇಱಿ ನಾಕದ
ಸುರಪತಿಯನೊಡಗೊಂಡು ಯಾದವ
ರರಸ ಹೊಕ್ಕನು ನಿಮಿಷಮಾತ್ರದೊಳರಸ ಕೇಳೆಂದ ॥ ೮೭

ಅರ್ಜುನನಿಗೆ ಸುಭದ್ರೆಯನ್ನು ಕೊಟ್ಟು ವಿವಾಹಮಾಡಲು ಕೃಷ್ಣನ ಪ್ರಯತ್ನ.

ನಳಿನನಾಭನು ದೇವವೃಂದದ
ಬಳಗದಲಿ ಭೂದೇವಧರ್ಮದ
ತಲಹಿನುದ್ವಾಹಿಕವ ಪಾರ್ಥಗೆ ಮಾಡಲನುವಾದ ।
ವಿಲಸಿತದ ಮನ್ವಾದಿಮಾರ್ಗವ
ಬೆಳಸಿ ಬೇಗದಿ ಬಂದನಾವರ
ನಿಳಯಕೈದಿದ ಪಾರ್ಥನಿಹ ಪರಿಣಾಮಗೃಹದೆಡೆಗೆ ॥ ೮೮

ಬಂದು ಕಂಡಾನರನ ವೇಷವ
ನಂದು ತೆಗೆದಾವರಿಸಿ ಮಜ್ಜನ
ಕಂದವಿಡಿಸಿಯೆ ದಿವ್ಯವಸ್ತ್ರಾದಿ ವರನ ಸಿಂಗರಿಸಿ ।

ನಿಂದಿರಲು ಮುನಿನಿಕರ ತಂದುದು
ಚಂದದಲಿ ವರಹೋಮಕೆಲ್ಲವ
ನಂದು ರಚಿಸಲು ಕುಂದು ಬಾರದತೆಱದಿ ವಹ್ನಿಯಲಿ ‖ ೪೯

ಸುದತಿಯನು ಶುಭದಿನಸುಲಗ್ನಗ
ಳೊದವೆ ವೈವಾಹವನು ವಿಸ್ತರಿ
ಸಿದರು ಹರಿವಸುದೇವ ದೇವಕಿಯುಗ್ರಸೇನನೃಪ ।
ಮದುವೆಯಾಯಿತು ಬಲನಱಿಯದಂ
ದದಲಿ ಹೂಡಿದ ರಥವನೇಱಿಸಿ
ಮದವಳಿಗೆಸಹಿತರ್ಜುನನ ಕಳುಹಿದನು ಮುರವೈರಿ ‖ ೫೦

ಅರ್ಜುನನು ಸುಭದ್ರೆಯನ್ನು ಕರೆದುಕೊಂಡು ಹೋಗುವಿಕೆ.

ಮುದದೊಳಾವೈಕುಂಠ ಪಾರ್ಥನ
ಸುದತಿಗೊಂದಿನ ತೇರ ನಡೆಸುವ
ಹದನ ಕಲಿಸಿದನಾಕೆ ಸಾರಥಿಯಾಗೆ ತೆರಳಿದನು ।
ತ್ರಿದಶಗಣಸಹಿತಮರಮುನಿಗಳ
ಸದನಕೆಲ್ಲರ ಕಳುಹಿ ಯಾಕ್ಷಣ
ಸುದತಿಯರು ಸಹಿತೈದಿ ಹೊಕ್ಕನು ತನ್ನ ಮಂದಿರವ ‖ ೫೧

ಪುರವ ಹೊಱವಂಟವರು ಬರಲು
ಬ್ಬರಣೆ ಯಾಗಲು ಬಟಿಕ ಸಾತ್ಯಕಿ
ಹರಿಯು ನೇಮವನಱಿದು ಕಳುಹಿದ ರಾಮಗೂಟಿಗವ ।

ಬಲರಾಮನು ಚಾರರಿಂದ ಈ ವಾರ್ತೆಯನ್ನು ಕೇಳಿ ಯುದ್ಧ
ಪ್ರಯತ್ನ ಮಾಡುವಿಕೆ.

ತರಣಿಯುದಯದ ಮೇಲೆ ಮುಸಲಿಯು
ಹೊರೆಯಲೊಱಲಿದರಾಚರರು ಯತಿ
ವರ ಸುಭದ್ರೆಯನೊಯ್ದನಾಮುನಿ ಯೆನುತ ಬಾಯ್ಬಿಡಲು ‖ ೫೨

ತುರಗಗಜರಥಸಹಿತವರು ತಾವ್
ಧುರಕೆ ತೆರಳಲು ಹರಿಯು ನಗುತಲೆ
ಕರೆದು ಬೊಬ್ಬೆಯನಾಲಿಸಿದ ತಾ ರಾಮ ದುಗುಡದಲಿ |
ಬಱಿದೆ ಬೊಬ್ಬಿಡುವಾಗ ರಾಮಗೆ
ಪರಿಯ ಹೇೞಿದರಿಂದು ನಿಮ್ಮಯ
ವರಯತೀಶನ ಜಪಸಮಾಧಿಗೆ ಸಮಿಧೆ ದೊರಕಿತೆಲ || ೯೩

ಇರುಳು ಕೋಟೆಯನೊಡೆದು ರಥದಲಿ
ವರಕುಮಾರಿಯನೊಯ್ದನಾತನು
ನಿರುತ ತಮಗಳವಲ್ಲ ಯೆಂದರೆ ಮುಸಲಿ ಬೆಱಗಾದ |
ಅರಸುಮಗಳನು ಕೊಂಡು ಹಾಯ್ದನು
ತಿರುಕಮುನಿ ಮರ್ಝು ಭಾಪು ಸುಭಟರ
ಕರೆ ಮುರಾರಿಯ ಮಾತು ತಾಗಿತೆ ಯೆನುತ ಗರ್ಜಿಸಿದ || ೯೪

ಹೇೞಬೇಡವೆ ಮುನ್ನವೇ ನೀ
ಳಾಳಕಿಯ ಕೆಡಿಸಿದಿರಲಾ ನೀ
ವಾಳ ಸಂಹಿದೊಡಿನ್ನು ಮಾಡುವ್ರದೇನು ಕಡು ಮುೞಿದು |
ಜಾಳಿಸಿದುದಪಕೀರ್ತಿಯುಕಟ ವಿ
ಟಾಳಿಸಿತು ಯದುವಂಶಕೆನೆ ಕರ
ವಾಳ ಜಡಿದೈದಿದನು ಹಲಧರನರ್ಜುನನ ರಥಕೆ || ೯೫

ಮುಸುಕಿದನು ನಾರಾಚದಲಿ ನಿ
ಪ್ಪಸರದಲಿ ಹಲಧರನ ಸೇನೆಯ
ಕುಸುರಿವಱಿದನು ಕೊಱಿದನಗಣಿತಬಲವನಾಪಾರ್ಥ |
ಎಸವನೇ ಸಂನ್ಯಾಸಿ ಮಾಡಿದ
ಹುಸಿಯುಪನ್ಯಾಸಕ್ಕೆ ಕೊಯ್ವೆನು
ರಸನೆಯನು ರೇವತಿಯ ಮೇಲಾಣೆನುತ ಹರಿತಂದ || * ೯೬

* ಹುಸಿಯ ನೋಡಿರೆ ನರನಿವನು ತಾ |
ವಸುಧೆಯಲಿ ಕಡಿದಿಕ್ಕಿ ತೋಱುವೆನೆಂದನಾರಾಮ, ಕ. || *

ಸುಭದ್ರೆಯನ್ನೊಯ್ದವನು ಅರ್ಜುನನೆಂದು ಕೃಷ್ಣನು ಹೇಳುವಿಕೆ.

ಬಳಿಕ ಹರಿದನು ಕೃಷ್ಣ ನೀತನ
ಕೆಲಕೆ ತೆಗೆದನು ಬಹಳರೋಷವ
ತಿಳುಹಿರೇ ನಾಕಿನ್ನು ವಸುದೇವಂಗೆ ದೇವಕಿಗೆ ।
ಉಳಿಯದೀತನ ದೋಷವಲ್ಲಿವೆ
ತಿಳಿದೆವಾವರ್ಜುನನು ನೀವಿದ
ಕಳುಕಲೇತಕೆ ಮರಳಿ ನಾಕಿನ್ನೆಂದನಸುರಾರಿ * ॥ ೯೭

ಗೆಲುವುದರಿದೀನರರನ ಪುನರಪಿ
ಯಿಳೆಯೊಳೊಂಮೆಗೆ ಗೆದ್ದೆವಾದೊಡೆ
ನಳಿನಮುಖಿಯನು ಕೊಂಬರಾರೆನೆ ವೊಬ್ಬ ಕರವಿಡಿದ ।
ಲಲನೆಯನು ವೈವಾಹಕೆನುತಲಿ
ನಳಿನನಾಭನು ಧರ್ಮಶಾಸ್ತ್ರವ
ತಿಳುಹಿ ರಾಮನನಂದು ಬೋಧಿಸಿ ಮರಳಿ ತಿರುಗಿದನು ॥ ೯೮

ಅಕಟ ದುರ್ಯೋಧನಗೆ ತಪ್ಪಿತು
ಸಕಲಯಾದವರೊಂದೆ ಯಾದಿರ
ವಿಕಳಮತಿ ತಾನೊಬ್ಬ ಕೃಷ್ಣನ ಕಪಟದಾಟವಿದು ।
ಅಕುಟಿಲರು ನೀವಲ್ಲ ತಾ ಬಾ
ಧಕನು ಗರುವರು ನೀವೆನುತ್ತಲಿ
ಭ್ರುಕುಟಿಬದ್ಧದಿ ಮುಳಿದ ನಗರಿಗೆ ರಾಮ ರೋಷದಲಿ ॥ ೯೯

ಹಸ್ತಿನಾಪುರಕ್ಕೆ ಅರ್ಜುನಾಗಮನ.

ಹರಿಸಹಿತ ಬಲರಾಮನಿತ್ತಲು
ತಿರುಗಿದನು ಪವಮಾನವೇಗದಿ
ಪುರಕೆ ಬಂದನು ಪಾರ್ಥನಾಗ ಸುಭದ್ರೆಯೊಡಗೂಡಿ ।

---

* ಮುಳಿವುದೀತನ ದೋಷವಲ್ಲಿದ
ತಿಳಿವೆನಾನರ್ಜುನನು ಗಡ ನಾ
ವಳುವುದಿನ್ನೇಕೆನುತ ಬೋಧಿಸಿದನು ಹಲಾಯುಧನ, ಚ. ಥ ॥

ಪುರದ ಬಹಿರುದ್ಯಾನದಲಿ ಸಂ
ವರಿಸಿ ರಥವನು ನಿಲಿಸಿ ನಲಿವುತ
ಪರಿಗತಶ್ರಮನಾಗಿ ನಗುತ ಸುಭದ್ರೆಗಿಂತೆಂದ ॥ ೧೦೦

ಅರಮನೆಗೆ ನಡೆ ಮುಂದೆ ದ್ರೌಪದಿ
ಕರೆಸಿದೊಡೆ ನೀ ಹೋಗು ನಿರುತವ
ನಱುಹದಿರು ತುಱುಗಾಹಿಗಳ ಮಗಳೆಂದು ನುಡಿ ಸಾಕು ।
ಅರಸಿ ಮಿಗೆ ಮನ್ನಿಸಿದೊಡಲ್ಲಿರು
ಕರೆಸಿಕೊಂಬೆನು ಬೇಱೆ ಸದನಕೆ
ವರಸುಭದ್ರೆಯ ಕಳುಹಿದನು ನಿಜರಾಜಮಂದಿರಕೆ ॥ ೧೦೧

ಬಂದಳಾಕೆ ಸಮಸ್ತಪುರಜನ
ವಂದು ಹೊಗೞಲಿಕಿಂದುಮುಖಿಯನು
ಮಂದಿ ನುಡಿದುದು ಮನುಜೆಯೋ ಸುರಲೋಕಮಾನಿನಿಯೊ ।
ಮುಂದೆ ಬರೆ ಬರೆ ಬಾಗಿಲವದಿರು
ನಿಂದರಲ್ಲಿಯದಲ್ಲಿ ಬೞಿಕರ
ವಿಂದಮುಖಿಯನು ಕಂಡು ದ್ರೌಪದಿಗಱುಹಿದರು ಹದನ ॥ ೧೦೨

ಕರೆಸಿ ಕಾಣಿಸಿಕೊಂಡು ಪಾಂಡವ
ರರಸಿ ಬೆಸಗೊಳಲಾಕೆ ಪಾರ್ಥನ
ಪರುಠವದ ಮಾತುಗಳನೊಱೆವಳು ನಗೆಯ ಮೊಳೆ ಮಿನುಗೆ ।
ಸುರಭುಜಂಗಮವಧುವೊ ನೀ ಮೇ
ಣರಸು [1] ಗಳ ಸುತೆಯಂತೆ ಕೋಮಲೆ
ತರಳೆ ನೀ ಗೌಳಿಗರ ಮಗಳೆನಬೇಡ ಹುಸಿ ಯೆನಲು ॥ ೧೦೩

ಮುಸುಗಿದುದು ನಿಸ್ಸಾಳತತಿ ಗ
ರ್ಜಿಸಿದುವರ್ಜುನ ಬಂದನೆಂದಂ
ಬೊಸಗೆವಾತಿನಲೂರ ಸುಳಿದರು ದೂತರಲ್ಲಲ್ಲಿ ।

---

1 ಮಗಳೋ ತಂಗಿ ನೀ ಗೊ
ಲ್ಲರ ಮಗಳೆ ಪುಸಿಯೆನುತ ತಲೆದೂಗಿದಳು ಪಾಂಚಾಲಿ, ಚ. ೮

ಶಶಿಮುಖಿಯರುಪ್ಪಾರತಿಯ ಮಿಗಿ
ಲೆಸೆವ ರತುನಾರತಿಯ ಕಾಂತಾ
ವಿಸರ ನೂಕಿತು ಪಾರ್ಥ ಹೊಕ್ಕನು ರಾಜಮಂದಿರವ ॥ ೧೦೪

ಅರಸ ಭೀಮಂಗೆಱಗಿ ನಕುಲಾ
ದ್ಯರನು ಕಾಣಿಸಿಕೊಂಡು ದೇಶಾಂ
ತರದ ತೀರ್ಥೋನ್ನತಿಯನಾವೃತ್ತಾಂತಸಂಗತಿಯ ।
ಮುರಹರನ ಸೌಹೃದವನಾತನ
ಕರುಣಕನ್ಯಾಲಾಭವನು ಬಿ
ತ್ತರಿಸಿ ಹರುಷಾಂಬುಧಿಯೊಳದ್ದಿದನಗ್ರಜಾನುಜರ ॥ ೧೦೫

ಬಳಿಕ ಕೃಷ್ಣನ ಸೋದರಿಯೆ ಯೆಂ
ದೊಳಗೆ ಕರ ಸಂಭ್ರಮಿಸೆ ದ್ರೌಪದಿ
ನಳಿನಮುಖಿ ಮನ್ನಿಸಿದಳಾಗಲು ಪಾರ್ಥನರಸಿಯನು ।
ಫಲುಗುಣಗೆ ವರುಷಾದಿಕಾಲವು
ಯಿಳೆಯಕ್ಕೈದಿದ ದಿನಕೆ ತುಂಬಿತು
ತಿಳಿಯಲಾವರವರುಷ ಭೀಮನ ಸದನಕಬುಜಾಕ್ಷಿ ॥ ೧೦೬

ಇರಲಿಕೊಂದಿನ ಪಾರ್ಥ ನಿಲಯಕೆ
ಬರಲು ಕೃಷ್ಣನ ಯನುಜೆ ಬಂದಳು
ಸಿರುತಸವತಿಯ ಭಾವವಱಿಯದೆ ನಡೆಗಳವರೊಡನೆ ।
ಅರಸ ಕೇಳಾವರಸುಭದ್ರೆಯ
ಪರಿಯ ತಿಳುಹುವೆ ಮುನ್ನ ಲಂಕಾ
ಪುರಿಯಲಾಜನಕಜೆಯ ಸೇವೆಯ ಮಾಡಿದಾಫಲದಿ ॥ ೧೦೭

ವರತ್ರಿಜಟೆ ಜನಿಸಿದಳು ಕೃಷ್ಣನ
ಕರುಣದಲಿ ರೋಹಿಣಿಯ ಜಠರದೊ
ಳರಸಿಯಾದಳು ವರಸುಭದ್ರೆಯು ಪಾರ್ಥಗೊಲವಿನಲಿ ।

ಇರಲಿರಲು ಮಿಗೆ ಪಾರ್ಥನರಸಿಯು
ರಿರದೆ ತಾವೇ ಬಂದು ಹೊಕ್ಕರು
ಪುರವ ಮೂವರದಿಬ್ಬರನಿಲಜಗೊಬ್ಬಳಾನೃಪನ ॥ ೧೦೮

ಧರ್ಮಾದಿಗಳ ವಿವಾಹ

ಮದುವೆಯಾಯಿತು ಧರ್ಮಪುತ್ರಗೆ
ಸುದತಿಶ್ಯಾಮಳೆ ಯೆಂಬಳೊಬ್ಬಳು
ವಿಧಿವಿಹಿತಗೃಹ್ಯೋಕ್ತಿಯಲಿ ನಿಮಿವರಕುಲಾನ್ವಯಕೆ ।
ಅದಟಕೌರವನತ್ತಲಿಭಪುರ
ಸದನದಲಿ ವೈವಾಹಕೋಸುಗ
ಮುದದಿ ತೆರಳಿದನಾಸುಭದ್ರೆಯ ನೆರೆವ ಸಡಗರಕೆ ॥ ೧೦೯

ತೆರಳಲಾನಾರದನು ಹಸ್ತಿನ
ಪುರಕೆ ಬಂದಾ ಕೌರವೇಂದ್ರನ
ಭರವಸವ ಕೇಳಿದನು ಕೇಳಲಿಕಂದು ಹರುಷದಲಿ ।
ಪರಮಪರಿತೋಷದಲಿ ಮುಸಲಿಯು
ವರಜೆಯನು ತಾ ನೆರೆಯಲೋಸುಗ
ತೆರಳಿದನು ತಾನೆಂದು ಪೇಳಿದರಾಗ ಪುರವರದಿ ॥ ೧೧೦

ಎನಲಿಕಾಮುನಿ ನಕ್ಕು ಮುನ್ನಿನ
ದಿನದಲಾಕೆಯು ಪಾರ್ಥನೊಯ್ದನು
ದನುಜಹರನಾನರಗೆ ಧಾರೆಯನೆರೆದು ಕಳುಹಿದನು ।
ನೆನೆಯಲಾಗದು ನೀ ಸುಭದ್ರೆಯ
ತನುವ ನಿನ್ನಯ ತೆರವಿಗೆಂದಾ
ವಿನಯದಲಿ ಕೊಂಡಮಳಹಣವನು ಕೃಷ್ಣ ಕಳುಹಿದನು ॥ ೧೧೧

ರಾಮಸೀವೃತ್ತಾಂತವಱಿಯೆ ನಿ
ರಾಮಯನುಸಲೆ ಕೇಳಿ ಪಾರ್ಥನ
ಕಾಮಿನಿಗೆ ಸಂಗ್ರಾಮ ಮಾಡಲು ಮುಳಿದು ತಿರುಗಿದನು ।

ಆಮಹಾನರಗಿದಿರದಾವನು
ಸೋಮಶೇಖರ ಮೊದಲಿಗಂಜುವ
ಭೂಮಿಪತಿ ನೀ ತಿರುಗು ಹಸ್ತಿನಪುರಕೆ ಹರುಷದಲಿ ‖ ೧೧೨

ಎನಲಿಕಗ್ಗದ ದುಗುಡಭರದಲಿ
ನೆನೆದಳಲುವನು ಮರಳಿ ಬಂದಾ
ವನಿತೆಗಿತ್ತಾಹಣವು ಖಂಡುಗವಾಗ ಹನ್ನೆರಡು ।
ಜನಪ ಸುಯ್ಯುತ ಕೊಂಡು ದೇವಕಿ
ತನಯು ಮಾಡಿದ ಪರಿಯು ನೆನೆಯುತ
ಕನಲಿ ಇರಲಿಕೆ ಮುನಿಪ ಹೋದನು ಮೋಕ್ಷಮಾರ್ಗದಲಿ ‖ ೧೧೩

ಮದುವೆಯಾಯಿತು ಧರ್ಮಪುತ್ರಗೆ
ಸುದತಿ ಶ್ಯಾಮಳೆಯೆಂಬ ನಾರಿಯು
ಮದನಭೂಪನ ಮಗಳು ಸ್ವರ್ಣಗ್ರಾಮದಧಿಪತಿಯು ।
ಮುದದಿ ಭೀಮಗೆ ಸರ್ಪರಾಜನ
ಸುದತಿ ಸಾವಿತ್ರಿಯಲಿ ಜನಿಸಿದ
ಮದನಮೋಹಿನಿ ಯೆಂಬ ಕಾಳೀದೇವಿ ಸತಿಯಾಗೆ ‖ ೧೧೪

ಧರಣಿಜನ ಸುತೆ ನಕುಳದೇವಂ
ಗರಸಿಯಾದಳು ಕೇಳು ನರಪತಿ
ನಿರುತದಲಿ ಸಹದೇವಗಾದಳು ಮದ್ರಭೂಪತಿಯು ।
ವರತನುಜೆ ವೃಷೆಯೆಂಬ ನಾಮದಿ
ಪರಮಸುಖದಿಂದಿರಲು ಬಂದಳು
ವರಹಿಡಿಂಬಾದೇವಿ ತನ್ನಯ ಸುತನನೊಡಗೊಂಡು ‖ ೧೧೫

ಬಂದು ಭೀಮನ ಮಂದಿರಕೆ ಸತಿ
ವೃಂದ ಮೊತ್ತಕ್ಕಾದಿಯಾದಳು
ನಂದಗೋಪನ ಕಂದನನುಜೆಯು ಶಕ್ರಪುತ್ರನಿಗೆ ।

ಸಂದ ಸತಿ ತಾನಾಗಿ ಬೞಿಕರ
ವಿಂದನಯನನ ಕೂರ್ಮೆಯಲಿ ಮೊದ
ದಿಂದ ನಯದಲಿ ರಾಜ್ಯವಾಡಿದರಿಂದ್ರಪ್ರಸ್ಥದಲಿ ॥ ೧೧೬

ಅತ್ತಲಾಕೌರವಗೆ ಸತಿಯರೊ
ಳುತ್ತಮೆಯು ವರಭಾನುಮತಿ ತಾ
ಚಿತ್ತವಲ್ಲಭೆ ಯಾದಳಂದಾ ಗೌಳದಧಿಪತಿಯ ।
ಹೆತ್ತ ಸುತೆ ತಾ ಸೋಮದತ್ತನ
ದತ್ತಕಾತ್ಮಜೆ ಚಂದ್ರಮತಿಯೆಂ
ಬತ್ಯಧಿಕದಿಂ ಕರ್ಣಗಾದಳು ರಮಣಿಯೆಂದೆನಿಸಿ ॥ ೧೧೭

ದಿನಕರಾತ್ಮಜನಿಂದ ಕೌರವ
ಜನಪನಗ್ಗದ ಭೂಪರೆಲ್ಲರ
ನನುವರದೊಳುೞಿ ಜಯಿಸಿ ತಂದನು ಮೂವರರಸಿಯರ ।
ಇನತನೂಜಗೆ ಸೇರಿದಳು ಮಿಗೆ
ವನಿತೆ ಚಂದ್ರಮತಿ ಪ್ರಭಾನ್ವಿತೆ
ದನುಜಸುತೆಯಾಸುರಸೆ ದುಶ್ಶಾಸನಗೆ ವಧುವೆನಲು ॥ ೧೧೮

ಅತ್ತಲಾಕೌರವಗೆ ತಂಗಿಯು
ನೊತ್ತಿ ಯಿಟ್ಟದ ಬಿಡಿಸಿ ಯನುಜೆಯ
ನತ್ತಿಯಳ ಬೞಿಗಿತ್ತು ಕಾಯ್ದನು ಸೋಮವಂಶವನು ।
ಉತ್ತರೋಕ್ತಿಯನಿನ್ನು ಕೇಳಾ
ವಿಸ್ತರದಿ ಕರುಣಾಳು ಕುಂತಿಯ
ಪೆತ್ತ ಮಕ್ಕಳ ಕಾಯ್ದ ಗದುಗಿನ ವೀರನಾರಯಣ ॥ ೧೧೯

ಮೂವತ್ತಆರನೆಯ ಸಂಧಿ ಮುಗಿದುದು.

ಮೂವತ್ತ ಏಳನೆಯ ಸಂಧಿ

ಸೂಚನೆ

ಖಾಂಡವಾಹ್ವಯವನದಹನದು
ಚಂಡಗಂಡರ ಗಂಡ ದಿವಿಜರ
ಹಿಂಡು ಗೋಳಿಡೆ ಧಾಳಿಯಿಟ್ಟನು ಚಂಡಗಾಂಡೀವಿ ||

ಅಭಿಮನ್ಯುಮೊದಲಾದವರ ಜನನ.

ಕೇಳು ಜನಮೇಜಯ ಧರಿತ್ರೀ
ಪಾಲ ಪಾರ್ಥಸುಭದ್ರೆಯಲಿ ಭೂ
ಪಾಲತಿಲಕನು ಜನಿಸಿದನಲೈ ಜಾತಮಾತ್ರದಲಿ |
ಮೇಲೆ ಮೊಳಗುವ ದುಂದುಭಿಯ ದಿವಿ
ಜಾಳಿಯ ಹಸುಳೆಯ ಹರುಷಾವಳಿ [1]
ಮೇಳವದ ವೈಸಿರಿಯನೇನೆಂಬೆನು ಧನಂಜಯನ || ೧

ಕಲಿತನಕೆ ನೆಲೆಯಾಯ್ತು ಭುಜದ
ಗ್ಗಳಿಕೆಗಾಸ್ಪದವಾಯ್ತು ನಿಜಚಾ
ಪಳವ ಬಿಸುಟಳು ವೀರಸಿರಿ ವಿಕ್ರಮದ ಸಿರಿಸಹಿತ |
ಹಳಿವು ಕಳವಳ ಭೀತಿ ಭಂಗ
ಸ್ಖಲನಕಂಪನವೆಂಬಿವಾತನ
ನೆಲನ ಸೀಮೆಯ ಸೋಂಕಲಮ್ಮವು ನೃಪತಿ ಕೇಳೆಂದ || ೨

ಜಾತಕರ್ಮಾನಂತರದಿ ವಿ
ಖ್ಯಾತನಾಮವಿಧಾನವನು ಸಂ
ಪ್ರೀತಿಯಲಿ ಮಾಡಿದನು ಮುನಿ ಭೂಪತಿಯನುಜ್ಞೆಯಲಿ |

---

[1] ಗಳ ಹೂವಳೆಯ ಪೂರದ, ಡ.

ವೀತಭಯನಭಿಮನ್ಯುವೆನೆ ರಿಪು
ಜಾತ ನಡುಗಿತು ಲೋಕ ಮೂಱಱೊ
ಳೀತನುದಯದ ಕೀರ್ತಿ ಪಸರಿಸಿತರಸ ಕೇಳೆಂದ ॥ ೭

ಯಮಸುತಗೆ ಭೀಮಗೆ ಕಿರೀಟಿಗೆ
ಯಮಳರಿಗೆ ಸುಕುಮಾರಕರು ನಿಜ
ರಮಣಿಯಲಿ ಜನಿಸಿದರು ಸುತಸೋಮಕನು ಪ್ರತಿವಿಂಧ್ಯ ।
ವಿಮಲಶ್ರುತಕರ್ಮ[1] ಪ್ರತಾಪೋ
ತ್ತಮನು ಶ್ರುತಸೇನಾಖ್ಯನುರುವಿ
ಕ್ರಮಶತಾನೀಕಾಭಿಧಾನರು ದ್ರುಪದತನುಜೆಯಲಿ ॥ ೮

ಕೃಷ್ಣನು ಈವಾರ್ತೆಯನ್ನು ಕೇಳಿ ಸಪರಿವಾರನಾಗಿ
ಹಸ್ತಿನಾವತಿಗೆ ಬರುವಿಕೆ.

ಇವರು ಕಳುಹಿದ ಹರುಷವಾರ್ತಾ
ಶ್ರವಣರಸದಲಿ ಮನ ಮುಳುಗಿ ಯಾ
ದವಶಿರೋಮಣಿ ರಾಮವಸುದೇವಾದಿಗಳು ಸಹಿತ ।
ಇವರ ಪುರಿಗೈತಂದರಿವರು
ತ್ಸವದಲಿದಿರ್ಗೊಂಡೊಸಗೆಯಲಿ ಬಾಂ
ಧವರ ಸಂಭಾವಿಸಿದರ್ಯ್ ಯಮನಂದನಾದಿಗಳು ॥ ೯

ಅಱಿಸಿ ಕಾಣವು ವೇದತತಿ ತಾ
ನಱಿಸಿ ಒಂದನು ಭಕ್ತರನು ತನ
ಗೆಱಗಿ ಮೆಚ್ಚಿಸಲಬ್ಜಯರಜರುದ್ರಾಮರೇಶ್ವರರು ।
ಎಱಗುವನು ಧರ್ಮಜಗೆ ತನ್ನನು
ಕುಱುಹುಗಾಣವು ವೇದತತಿಗಿದು
ಮಱವೆಯೋ ಹರಿ ಬಂದು ಕಂಡನು ಧರ್ಮನಂದನನ ॥ ೧೦

ಲೀಲೆಯೋ ಯಿದು ಕೃಷ್ಣರಾಯನ
ಬಾಲಕೇಳಿಯೊ ನೆನವೊ ಪೂರ್ವ್ಕದ

[1] ಕೀರ್ತಿ, ಕ. ಖ. ಚ.

ಕೌಳಿಕದ ಕಣುಮಾಯೆಯೋ ಯಿದು ಶಿವ ಶಿವೆಂದೀಗ |
ಕಾಳಿಗೆಱಗಿದ ಕೃಷ್ಣನನು ಭೂ
ಪಾಲ ತೆಗೆದಪ್ಪಿದನು ನಿಗಮದ
ಮೌಳಿ ತಲೆವಾಗಿದುದು ಲಜ್ಜಾಭೂರಿಭಾರದಲಿ || ೭

ಆಗ ಬಾಲರಿಗೆ ಕೃಷ್ಣನು ಆಭರಣಗಳನ್ನು ಕೊಡುವಿಕೆ.

ಅರಸ ಸಹಿತಸಮಸ್ತಪುರಜನ
ಪರಿಜನದ ಮೇಳದಲಿ ಯಾದವ
ರರಸ ಬಿಜಯಂಗೈದು ಕುಂತೀಸುತರ ಭವನದಲಿ |
ಅರಸಿಯರ ಸುಕುಮಾರವರ್ಗವ
ಕರೆಸಿ ಕಾಣಿಕೆಗೊಂಡು ದಿವ್ಯಾ
ಭರಣವಸನಾದಿಯಲಿ ಮನ್ನಿಸಿದನಂದಾಮಹೀಶ್ವರನ || ೮

ಜಲಧಿಮಧ್ಯದಲಿರವೊ ಗಗನ
ಸ್ಥಲವೊ ಮೇಣಾಯಂಧಕಾರದ
ಕಟಿವುಗಳೊ ವೈಕುಂಠವೋ ಮುನಿಜನದ ಹೃದ್ಗುಹೆಯೊ |
ತಿಳಿಯೆ ಸಚರಾಚರದ ಚೇತನ
ದೊಳಗೆಯೋ ನೆಲೆ ಯಾವುದೆಂಬ
ಗ್ಗಳದ ದೈವದ ನೆಲೆಯ ಕಂಡನು ಪಾರ್ಥ ಭವನದಲಿ || ೯

ಈತನರ್ಜುನನರಮನೆಯಲಭಿ
ಜಾತನೆನಿಪಭಿಮನ್ಯುವನು ಸಂ
ಪ್ರೀತಿಯಿಂದಪ್ಪಿದನು ಕೊಟ್ಟನು ಬಾಲದೊಡಿಗೆಗಳ |
ಖ್ಯಾತಪಂಚದ್ರೌಪದಿಯ ಸಂ
ಜಾತರನು ಮನ್ನಿಸಿ ಮಹಾವಿಭ
ವಾತಿಶಯದಲಿ ಪತಿಕರಿಸಿದನು ಪಾಂಡುನಂದನರ || ೧೦

ಬಲರಾಮಾದಿಗಳನ್ನು ಕಳುಹಿಸಿ ಕೃಷ್ಣನು ಅರ್ಜುನನ ಬಳಿಯಿರುವಿಕೆ.

ಅರಸ ಕೇಳೈ ಕೆಲವುದಿನ ಸಂ
ಚರಿಸಿ ಸೌಖ್ಯದಲಿದ್ದು ತಮ್ಮಯ

ಪುರಕೆ ಬಲಭದ್ರನನು ಯಾದವರಾಯ ದಳಸಹಿತ ।
ಹರಿ ಸಮಾಧಾನದಲಿ ಕಳುಹಿಸಿ
ನರನೊಡನೆ ಮೃಹಾಳಿಮೃಗಯಾ
ವರವಿಹಾರದೊಳಿದ್ದನಿಂದ್ರಪ್ರಸ್ಥನಗರಿಯಲಿ ॥ ೧೧

ಆಗ ಅಗ್ನಿಯು ವಿಪ್ರರೂಪನಾಗಿ ಅರ್ಜುನನನ್ನು ಅನ್ನವಂ ಬೇಡುವಿಕೆ.

ಹರಿಧನಂಜಯರೊಂದುದಿನ ಮೃಗ
ಹರಣಕೇಳಿಕಳಾಪದಲಿ ಸಂ
ಚರಿಸಿ ಬನದಲಿ ಬಹುಳಮಾರ್ಗಶ್ರಮದ ಭಾರದಲಿ ।
ಬರುತ ನೀರಡಿಸಿದರು ಕಂಡುಙಿ
ಸರಸಿಯಲಿ ನಿಜಚರಣವ ತೊಳದು
ಪರಿಹೃತಶ್ರಮರಾಗಿ ನಿಂದರು ಕೊಳನ ತೀರದಲಿ * ॥ ೧೨

ಆಸಮಯದಲಿ ಬಂದನೊಬ್ಬನು
ಭೂಸುರನು ಕಿಡಿಗಳ ತುಷಾರದ
ಮೀಸೆಗಡ್ಡದ ಸುತ್ತಿದಲೆಯ ಕಬೊರ್ಗೆಯ ಜುಂಜುರಿನ ।
ಭಾಸುರದ ಬಳಲುಡಿಗೆ ಮುಟ್ಟಿಯ
ಧೂಸರದ ಮೈದೊಡಿಗೆ ಮೌಂಜಿಯ ವಿ
ಳಾಸದಲಿ ನಡೆತಂದನರ್ಜುನದೇವನಿದ್ದೆಡೆಗೆ ॥ ೧೩

ಹರಸಿದನು ವೇದಾರ್ಥದಲಿ ವಿ
ಸ್ತರಿಸಿ ಕೊಂಡಾಡಿದನು ವಿಪ್ರನ
ಪರಮಯೋಗ್ಯತೆಗಾರು ಸರಿ ಪರಮೇಷ್ಠಿ ಹೊಣಿತಾಗಿ ।
ಬರವಿದೇನೆನಗೇನನುಗ್ರಹ

---

* ಬರುತ ನೀರಡಿಸಿದರು ಕಂಡರು
ಸರಸಿಯನು ರಥವಿಳಿದು ನೆಳಲಲಿ
ಪರಿಹೃತಶ್ರಮರಾಗೆ ಹರಿ ಹೊಕ್ಕನು ಸರೋವರವ, ಚ. ಠ.

ವರಸಿದರೆ ನಿಮ್ಮಿಷ್ಟವನು ಗೋ
ಚರಿಸುವೆನು ನಿಮಗೆಂದು ನುಡಿದನು ಪಾರ್ಥ ವಿನಯದಲಿ ॥ ೧೪

ಪಾರ್ಥ ಕೇಳತಿಗಹನವೇನ್ ಗ್ರಾ
ಸಾರ್ಥಿಗಳು ನಾವಾದೆವೆಮ್ಮಿ
ಷ್ಟಾರ್ಥಸಿದ್ಧಿಯು ಘಟಿಸು ಸಾಕು ಸಮಗ್ರಫಲವಹುದು ।
ತೀರ್ಥ ವಿನ್ನೇಕತಿಥಿ ಯಿರಲು ಪ
ರಾರ್ಥಸಾಧಕವೆಮಗೆ ಪರಮ
ಸ್ವಾರ್ಥವೆಂಬರು ಸುಜನರೆಂದನು ಕಪಟದ್ವಿಜ ನಗುತ ॥ ೧೫

ಕೃಷ್ಣನು ಭಯವನ್ನು ಸೂಚಿಸುವಿಕೆ.

ಕೊಟ್ಟೆನೆಂದನು ಪಾರ್ಥನಿವರೊಡ
ಬಟ್ಟರೀ ನುಡಿಗೇಳ ದನುಜಘ
ರಟ್ಟ ಬಂದನು ಹದನನಱಿದನು ಹವ್ಯವಾಹನನ ।
ಕೊಟ್ಟುದೇನು ಕಿರೀಟಿಯಿವರೇ
ಮುಟ್ಟಿದರೆ ಮುನಿವವರಲೇ ನೀ
ಕೊಟ್ಟುದುಣಬಡಿಸುವುದು ಭಾರವಿದೆಂದನಸುರಾರಿ ॥ ೧೬

ಮುಖರನಾದೈ ಪಾರ್ಥಬರ್ಹಿ
ರ್ಮುಖರ ಬಾಣಸದಾತನೀತನು
ಸುಖವ ಹೇಟೈ ತಂದೆ ಖಾಂಡವವನದ ನಿರ್ದಹನ ।
ನಿಖಿಳನಿರ್ಜರಬಲದೊಡನೆ ಶತ
ಮಖನೊಡನೆ ವಿಗ್ರಹವಲಾ ಸ
ಮ್ಮುಖಕೆ ಬಂದುದು ಭಂಗವೆಂದನು ನಗುತ ಮುರವೈರಿ ॥ ೧೭

ಅರ್ಜನನು ನಿಮ್ಮ ದಯೆಯಿದ್ದರೆ ಭಯವೇನೆಂದು ಹೇಳುವಿಕೆ.

ಭಂಗವೇಕೈ ಕೃಷ್ಣ ನಿರ್ಜರ
ಪುಂಗವನ ಗೆಲಿದವನ ಬಾಣಸಿ
ಗಂಗೆ ಬಾಣಸ ಮಾಡುವೆನು ಖಾಂಡವಮಹಾವನವ

ಅಂಗವಣೆಯನು ನೋಡು ನೀನೇ
ಕಾಂಗದಲಿ ನಿರ್ವಹಿಸುವೆನು ಭಯ
ಭಂಗವುಂಟೇ ನಿನ್ನ ಕೃಪೆಯಿರಲೆಂದನಾಪಾರ್ಥ ॥ ೧೮

ಮೆಚ್ಚಿದನು ಘೃತಯೋನಿ ಪೂತುಱೆ
ನಿಚ್ಚಟನು ನೀನೆನುತ ಶಿಖೆಗಳ
ಬಿಚ್ಚಲುದುರಿತು ಚಾಪವಮೋಘಶರರಥತುರಂಗಚಯ ।
ಅಚ್ಚರಿಯನೇನೆಂಬೆನ್ಯ ಸ
ಪ್ತಾರ್ಚಿಯಿತ್ತನು ವರವನಿಂದ್ರನ
ಮುಚ್ಚುಮಱೆಯಾಕಿನ್ನು ಸಮಗುಣಬಡಿಸು ಸಾಕೆಂದ ॥ ೧೯

ಪಾರ್ಥಕೃಷ್ಣರಿಗೆ ಅಗ್ನಿಯು ರಥಾದಿಗಳನ್ನೊದಗಿಸಿ ಕೊಡುವಿಕೆ.

ಧರಣಿಪತಿ ಕೇಳಗ್ನಿಯಿತ್ತನು
ಹರಿಧನಂಜಯರಿಗೆ ರಥಂಗಳ
ನುರುಶರಾವಳಿ ದಿವ್ಯಧನುಕೌಮೋದಕೀಗದೆಯ ।
ವರತನುತ್ರಸಿತಾಶ್ವವಕ್ಷಯ
ಶರನಿಷಂಗಾದಿಗಳನಿವರು
ಬ್ಬರಿಸಿದರು ಹರುಷದಲಿ ನನೆದರು ಪುಳಕವಾರಿಯಲಿ ॥ ೨೦

ಹೂಡಿದರು ರಥವೆರಡನಿವರು ಸ
ಗಾಢದಲಿ ಕಪಿಗರುಡಸಿಂಧವ
ಜೋಡಿಸಿದರೇಱಿದರು ನಗುತ ಧನಂಜಯಾಚ್ಯುತರು ।
ಮೂಡಿಗೆಯ ಮೊನೆಗಣೆಗಳಿಗೆ ಕೈ
ನೀಡಿ ಬೊಬ್ಬಿಱಿದರು ದಿಗಂತವ
ನೀಡಿಱಿದುದಬ್ಬರಣೆ ಬಿರಿದುದು ಧರಣಿ ಧಾಟಿಯಲಿ ॥ ೨೧

ಪಾರ್ಥ ಕೃಷ್ಣರು ಸನ್ನದ್ಧರಾಗಿ ಖಾಂಡವವನವನ್ನು ಪ್ರವೇಶಿಸುವಿಕೆ.

ಬೊಬ್ಬಿಱಿದು ಹರಿ ಪಾಂಚಜನ್ಯವ
ನುಬ್ಬಿ ದನಿಮಾಡಿದನು ಪಾರ್ಥನ

ಬೊಬ್ಬೆಯಬ್ಬರ ತೀವಿ ತಾ ಬ್ರಹ್ಮಾಂಡಮಂಡಲವ ।
ಗಬ್ಬರಿಸಿದುದು ಗಗನವೆನು ಶರ
ದುಬ್ಬರದ ಬಲುಗಿಡಿಯ ಗಡಣವು
ಹಬ್ಬಿ ಹರಿದುದು ದೆಸೆಗಳಿಗೆ ಭೂಪಾಲ ಕೇಳೆಂದ ॥ ೧೧

ಧಾಳಿಯಿಟ್ಟರು ಸುರವನಕೆ ಸುರ
ಜಾಲ ಜಱಿದುದು ಬೊಬ್ಬೆಯಲಿ ದೆ
ಖ್ಖಳಿಸಿದುದುತ್ಪಾತಶತ ಖಾಂಡವವನದ ಮಧ್ಯದಲಿ ।
ಕೂಟೆಗಳ ಕುಡಿವಿಾನವ್ರೋಲ್ವಿಹ
ಗಾಳಿ ಹುದುಗಿತು ನಡುಗಿದರು ವನ
ಪಾಲಕರು ನಿಂದೊಣಗಿದುವು ಹರಿಚಂದನಾದಿಗಳು ॥ ೧೩

ವನದಲ್ಲಿದ್ದ ಸರ್ವವನ್ನು ನನಗೆ ಕೊಡಬೇಕೆಂದು ಅಗ್ನಿಯ ಪ್ರಾರ್ಥನೆ

ತೂಗಿ ಬಾಣವ ಹೂಡಿ ಕಿವಿವರೆ
ಗಾಗಿ ಬರಸೆಳೆದಾರಿ ಬೊಬ್ಬಿಱಿ
ದಾಗಲಿಂತೆಂದನು ಧನಂಜಯನಾಧನಂಜಯಗೆ ।
ಈಗಲೀವನದೊಳಗೆ ಖಗಮೃಗ
ನಾಗಸುರದನುಜಾದಿಜೀವರ
ಹೋಗಲೀಯದೆ ತಱುಬಿ ಶರದಲಿ ಕಾಯಬೇಕೆಂದ ॥ ೧೪

ಅದರಂತೆ ಅರ್ಜುನನ ವಾಗ್ದಾನ.

ಹೈ ಸಮಗ್ರಾತಿಥ್ಯದಲಿ ನಿಮ
ಗೀಸಮಸ್ತಪ್ರಾಣಿಸಹಿತಸು
ರೇಶನುದ್ಯಾನವನು ಕೊಟ್ಟೆನು ಬಾಣಧಾರೆಯಲಿ ।
ನೀ ಸಮಾಧಾನದಲಿ ಸುಪುರೋ
ಡಾಶವಿದೆ ಸಮಿದಾಜ್ಯಸಹಿತಮ
ಹಾಸುವಿಸ್ತಾರದಲಿ ಕೊಂಬುದು ಭೀತಿ ಬೇಡೆಂದ ॥ ೧೫

ಎನುತ ಬಿಡೆ ತಿರುವಾಯನೊದೆದು
ಬ್ಬಿನಲಿ ಬೊಬ್ಬಿಱಿದಂಬು ಸುರಪನ
ವನವ ಮುತ್ತಿತು ಕೂಡೆ ಹೆಚ್ಚಿತು ಹೊಗೆಯು ಹೊರಳಿಯಲಿ ।
ತನಿಗಿಡಿಯು ದಳ್ಳುರಿಯು ನಾಲಿಗೆ
ಗೊನೆಗಳಲ್ಲಾಡಿದುವು ಕಡು ಲಾ
ಗಿನಲಿ ಲಂಬಿಸೆ ಚುಂಬಿಸಿದುದುಱೆ ಲಲಿತನಂದನವ ॥ ೨೬

ಹೊದಱಿನಲಿ ಭುಗಿಭುಗಿಲು ಭುಗಿಲೆಂ
ದೊದೆದುದುರಿ ಯಂಬರವನೊಣಗಿದ
ಬಿದಿರಮೆಳೆಯಲಿ ಧಗಧಗಿಸಿ ಛಟ ಛಟನೆ ಛಟಛಟಿಸಿ ।
ಕದಳಿಖರ್ಜೂರಾದಿತರುಜಾ
ಲದಲಿ ಸಿಮಿ ಸಿಮಿ ಸಿಮಿ ಸಿಮಾಯುತ
ವೊದಗೆ ಗಹನೋದರದೊಳಗೆ ಗಾಢಿಸಿತು ಘನವಹ್ನಿ ॥ ೨೭

ಏನನೆಂಬೆನು ದಿವಿಜರಾಜೋ
ದ್ಯಾನಹಾನಿಯನಾತನಾಳು ಕೃ
ಶಾನುವಿನ ತನಿಗೊಬ್ಬನೀಕೃಷ್ಣಾರ್ಜುನರ ಬಲುಹ ।
ಆನಿಖಿಳನಿರ್ಜರರು ತಾಗೆ ವಿ
ಮಾನಗತಿಯಲಿ ಹಾಯ್ದರಂದವ
ಮಾನಗತಿಯಲಿ ಗಗನದಲಿ ಗೀರ್ವಾಣಪುರವರಕೆ ॥ ೨೮

ಹೊಗೆಯ ಬಟ್ಟೆಯಲಿ ತಳಿತ ಹುಯ್ಯಲ
ಬೆಗಡಿದೇನೋ ಕೇಳನುತ ಸಿರಿ
ಮೊಗದ ಬೆಳಗಿನ ಸಾವಿರಾಲಿಯೊಳೊಗುವ ಕಿಡಿಗಳಲಿ ।
ಹಗೆಗಳಾರು ನಿವಾತಕವಚಾ
ದಿಗಳು ತಾನಾರೆಂಬ ಶಕ್ರನ
ದುಗುಡವನು ದಿವಿಜಾಳಿ ಕಂಡುದು ಮೂಱಿದರು ಸರನ ॥ ೨೯

ಇಂದ್ರನಿಗೆ ಯುದ್ಧಕ್ಕಾಗಿ ದೇವತೆಗಳ ಪ್ರೇರಣೆ.

ನಿನಗೆ ಮಗನೇ ಪಾರ್ಥ ನಿನ್ನರ
ಮನೆಯ ಗೋಟಿನ ನಾಯಕನೆ [1] ಶಿಖಿ
ಯನುಜನೇ ಮುರವೈರಿ ನಿನಗನುಕೂಲರಾದರೆಲೈ ।
ಬನದ ಬೇಗೆಯೊ ಪರಿಭವಾಲಂ
ಬನದ ಪೊಸಗೆಯೊ ಬಂದುದಿದೆ ಬಿಡು
ಮನೆಯ ಮನ್ನೆಯ ಗಂಡನಾಗೆಂದುದು ಸುರಸ್ತೋಮ ॥ ೨೦

ಇಂದ್ರನು ಸಿಟ್ಟಿನಿಂದ ಮಳೆಯನ್ನು ಕರೆಸುವಿಕೆ.

ಐಸಲೇ ನಮ್ಮವರಲಾ ಹೋ
ಹೋ ಸುರರು ಕಳವಳಿಸದಿರಿ ನೀ
ವೈಸನಾಹುತಿಗೊಳಲಿ ಪಾವಕನಮ್ಮ ಖಾಂಡವವ ।
ಈಸುರರಿಗಾನರರಿಗಂತರ
ವೇಸು ಪೂತುಱೆ ಕಾಲಗತಿಯೆನು
ತಾಸುರೇಶ್ವರ ಖಾತಿಗೊಂಡನು ಕೃಷ್ಣಫಲುಗುಣರ ॥ ೨೧

ಕಾಹು ತೆಗೆಯಲಿಕಲ್ಪಮೇಘ
ವ್ಯೂಹಗಳ ಬರಹೇಟು ಕಾಂಬೆನು
ಸಾಹಸವನಿದಱೊಳಗೆ ಕೃಷ್ಣಧನಂಜಯದ್ವಯದ ।
ಈಹದಕೆ ಪಡಿಪಚ್ಚವಿಲ್ಲವ
ಗಾಹಿಸಲಿ ಖಾಂಡವವ ಹುಲ್ಲೆಯ
ಹೂಹೆಗಳು ಹೆಬ್ಬುಲಿಯ ಹೊಯ್ಪವೆನುತ್ತ ಗರ್ಜಿಸಿದ ॥ ೨೨

ಅರಸ ಕೇಳ್ಕಲ್ಪಾಂತಮೇಘೋ
ತ್ಕರದ ಪಾಳೆಯವೆತ್ತಿ ಬಿಟ್ಟುದು
ಧರಣಿಯಗಲಕೆ ಥಾಟಿಯಿಟ್ಟುದು ಸಿಡಿಲುಮಿಂಚುಗಳು ।
ಕರಿಯ ಬಱಿಕೈಗೆಣೆಯೆನಿಪ ನಿ

1 ಬಾಣಸದಾತನೇ, ಚ. ಟ.

ಷ್ಟುರದ ಧಾರಾಸಾರ ನೆರಳಿಚಿ
ಸುರಿದುದಾಖಾಂಡವದ ಸೀಮಾಸನ್ನಿವೇಶದಲಿ ॥ ೩೩

ಆಸಕಲ ಸಾಗರವನೊಂದೇ
ಶ್ವಾಸದಲಿ ತೆಗೆದೆತ್ತಿ ಮೊಗುಚಿದು
ವಾಸಮಸ್ತಬಳಾಹಕಾವಳಿ ವನದ ಮಧ್ಯದಲಿ ।
ಏಸು ಸಾಹಸ ಸತ್ವ ತನಗುಂ
ಟೈಸರಲಿ ತಲೆಯೆತ್ತಿ ಜಲದಲಿ
ಘಾಸಿಯಾದನು ವಹ್ನಿ ನುಡಿದನು ಕೃಷ್ಣಪಾರ್ಥರಿಗೆ ॥ ೩೪

ಆಗ ಮಳೆಯ ಬಾಧೆಯನ್ನು ತಪ್ಪಿಸೆಂದು ಅರ್ಜುನನಿಗೆ
ಅಗ್ನಿಯು ಹೇಳುವಿಕೆ.

ಕಲಹವಿಂದ್ರನ ಕೂಡೆ ಕಲ್ಪದ
ಮಳೆಗಳಿವು ಮೋಹಿಸಿದಿರೂಟವ
ನೆಳದವೊಲಿನ ತುತ್ತನರ್ಜುನ ಕಾಯ್ದುಕೊಳ್ಳೆನಲು ।
ಮಳೆಗಳಿಗೆ ಶರಪಂಜರವ ವಿರಚಿಸಿ
ಬಚಿಕ ವಾಯುವ್ಯಾಸ್ತ್ರದಲಿ ನಿ
ಸ್ಖಲಿತಮೇಘವ್ರಜವನೆಚ್ಚನು ಪಾರ್ಥ ವಹಿಲದಲಿ ॥ ೩೫

ಏನ ಹೇಳುವೆನರಸ ಪಾರ್ಥನ
ನೂನಶಕ್ತಿಯನುಜುಬಿದನು ಪವ
ಮಾನಶರದಲಿ [1] ಪುಷ್ಕಳಾವರ್ತಾದಿಘನಘಟೆಯು ।
ಭಾನುತಿಮಿರಂಗಳಿಗೆ ಮೇಘವು
ಹಾನಿಲಂಗಳಿಗಾವುದಂತರ
ಸೋನೆ ತೆಗೆದುದು ಹೊಗೆದುದಾಖಾಂಡವಮಹೋದ್ಯಾನ ॥ ೩೬

ಹಾಱಲೂದಿತು ಮೇಘವನು ಕಿಡಿ
ತೂಱಲುಬ್ಬರಿಸಿತು ಮಹಾಗ್ನಿಯು

1 ನೊಡ್ಡಿದ, ಕ. ಖ.

ನೋಡಿಸಿತು ಖಾಂಡವದೊಳಗೆ ಬಿರುಗಾಳಿ ಸುತ್ತಿಸುತ್ತಿದು ।
ಮೋಡಿಯೊಣಗಿದುವಮರರಿಗೆ ಮೈ
ಮೂರಿಗಳ ಸುಡು ಮೂಲೆಯುಪದಿರು
ಮಿಾಱುವರಲಾ ಯೆನುತ ಸುರಪತಿ ತರಿಸಿದನು ಗಜವ ॥ ೩೭

ಇಂದ್ರನ ಯುದ್ಧಸನ್ನಾಹ.

ನೆರೆದರಮರರು ಸಿದ್ಧವಿದ್ಯಾ
ಧರಭುಜಂಗಮ ಯಕ್ಷಕಿನ್ನರ
ಗರುಡರಾಕ್ಷಸಸಾಧ್ಯಗುಹ್ಯಕಭೂತಗಂಧರ್ವ ।
ತರಣಿಶಶಿರುದ್ರಾದಿಗಳು ಮೋ
ಹರಿಸಿದರು ಮುಂಗುಡಿಯಲಿಂದ್ರನ
ಸಿರಿಯ ರಚನೆಯನೇನನೆಂಬೆನು ಭೂಪ ಕೇಳೆಂದ ॥ ೩೮

ಯುದ್ಧದಲ್ಲಿ ದೇವತೆಗಳು ಕಂಗೆಡುವಿಕೆ.

ಮಸಗಿತಮರವ್ರಾತವಭ್ರವ
ಮುಸುಕಿದುವು ಝಲ್ಲರಿಗಳಿಂದ್ರನ
ವಿಶ್ವಸನಕೆ ಮೆಚ್ಚಿಸುವೆ ವಸುಗಳನೆನುತ ತಮತಮಗೆ ।
ಮುಸುಕಿದುವು ಮೃಗರಾಜಸಿಂಹದ
ಮುಸುಕನುಗಿದಂದದಲಿ ಬಾಣದ
ಹಸರವನು ಹರಹಿದನು ಮುಂದೆ ಧನಂಜಯಾಚ್ಯುತರ ॥ ೩೯

ಹೂಣೆಹೊಕ್ಕೆಚ್ಚರು ಮಹಾದ್ಭುತ
ಬಾಣವನು ದೃಢಬಾಣರೋ ಗೀ
ರ್ವಾಣರೋ ನೀವಾರು ನುಡಿಯರಲ್ಲೈ ಮಹಾದೇವ ।
ಸಾಣೆಯಲಗಿಗೆ ಸಾಱುವಿರಿ ತನಿ
ಶೋಣಿತವ ನೀವ್ ಕೊಂಡದೆ ಸುರಪ
ನಾಣೆ ಹಿಮ್ಮೆಟ್ಟಿದಿರೆನುತ ತೆಗೆದೆಚ್ಚನಾಪಾರ್ಥ ॥ ೪೦

ತುಱುಗಿ ಕೂರಂಬುಗಳು ಮೈಯ್ಯಲಿ
ಮುಱಿದುವರ್ಜುನನೆಸುಗೆಯಲಿ ಮೈ
ಮಱೆದುದಮರನಿಕಾಯ ಕೆದಱಿತು ಧೊರೆಯ ಮನ್ನಿಸದೆ ।
ಮುಱಿದುದೀ ಕೃಷ್ಣಾರ್ಜುನರ ಬೊ
ಬ್ಬಿಱಿತಕವರೆದೆ ಯೊಡೆಯಲಿಂದ್ರನ
ಮಱೆಯ ಹೊಕ್ಕುದು ದೇವಸಂತತಿ ಭೂಪ ಕೇಳೆಂದ ॥ ೪೧

ನರನು ಹರಹಿದ ಹವ್ಯಕವ್ಯೋ
ತ್ತರಹವಿರ್ಭಾಗವನು ತಿಂದು
ಬ್ಬರಿಸಿ ದೇವಸ್ತ್ರೀಕದಂಬದ ಖೇಳಮೇಳದಲಿ ।
ಇರವು ನಿಮಗೀ ರೌದ್ರಬಾಣ
ಸ್ಫುರಿತಕರ್ಕಶವಿಸ್ಫುಲಿಂಗೋ
ತ್ಕರದೊಳಗೆ ನೀವೇತಕೆಂದನು ನಗುತ ಕಲಿಪಾರ್ಥ ॥ ೪೨

ಮುಱಿದ ನಿರ್ಜರಸೇನೆಗಭಯದ
ಕರವ ನೆಗಹಿ ಕರೀಂದ್ರನನು ಶಿರ
ಬಿರಿಯಲಂಕುಶಮುಖದೊಳೊತ್ತಿ ಮಹೋಗ್ರಕೋಪದಲಿ ।
ನರಮುರಾಂತಕರಿದಿರಿನಲಿ ಮದ
ಕರಿಯ ಬಿಟ್ಟನು ಶಕ್ರನಾತನ
ಬಿರುದು ಸಂಭಾಳಿಸಿತು ಪಾತಕಕೋಟಿ ಗಡಬಡಿಸಿ [1] ॥ ೪೩

ನಮುಚಿಮಸ್ತಕಶೂಕ ಬಲಸಂ
ಕ್ರಮಣಭಾಸ್ಕರ ಜಂಭಭುಜವಿ
ಕ್ರಮಮಹಾಂಬುಧಿಕುಂಭಸಂಭವ ವೃತ್ರಗಿರಿವಜ್ರ ।
ಕಮಲಭವಹರವಿಷ್ಣು ಹೊಱಗಾ
ದಮಿತಭುಜಬಲಮೌಳಿಮಣಿಸಂ
ಕ್ರಮಿತಚತುರಪದಾಬ್ಜರೆಂದುದು ಮಾಗಧಸ್ತೋಮ ॥ ೪೪

---

1 ಸಂಭಾವಿಸಿದರಭ್ರದ ಸೂತಮಾಗಧರು, ಚ.

ನೂಕಿದನು ಸುರಪತಿ ಗಜವನ
ವ್ಯಾಕುಳರಲೇ ಕೃಷ್ಣ ಪಾರ್ಥರಿ
ದೇಕೆ ನಮಗೀವಾಸಿ ವಾಸವ ಲೇಸು ಮರಳುವುದು ।
ನಾಕನಿಳಯರು ತಂದ ಜಯವೇ
ಸಾಕು ಸೋಲುವರಲ್ಲ ನೀವಿದ
ಕೇಕೆ ನೆಱೆ ಮುಂಕೊಂಡಿರೆಂದನು ನಗುತ ಕಲಿಪಾರ್ಥ ॥ ೪೫

ಆಗ ಬ್ರಹ್ಮವಾಕ್ಯ.

ಜನಪ ಕೇಳಾ ಸಮಯದಲಿ ವಾ
ಗ್ವನಿತೆಯರಸನು ಗಗನಮಾರ್ಗದೊ
ಳನಿಮಿಷಾಧಿಪನಲ್ಲಿಗೈತರೆ ಕಂಡು ಸುರನಿಕರ ।
ತನತನಗೆ ಬಾಳದಲಿ ನಿಜಕರ
ವನೊರುಹಲು ಮುಗಿಯಿಸಿದರಿಂದ್ರಂ
ಗನುವರವ ಮಾಣಿಸಲು ಬೇಕೆಂದಬುಜಭವ ನುಡಿದ ॥ ೪೬

ಮರುಳನೈ ನೀನಿವರ ನಾರೆಂ
ದಱಿಯಲಾ ನಾರಾಯಣನು ಮುರ
ಹರನು ನರನಲ್ಲಾ ಧನಂಜಯನಿವರು ಕಿಱುಕುಳರೆ ।
ಗರುವರಿವರೆಂದಿಂದ್ರನಾನೆಯ
ತಿರುಹಿದನು ಪರಮೇಷ್ಠಿ ಯುತ್ತಲು
ಮುಱಿದರಲ್ಲಿಂದಿತ್ತ ಕೇಳಿಯನಾವನಾಂತರದಿ ॥ ೪೭

ವಹ್ನಿಯ ಸ್ವೇಚ್ಛಾವಿಹಾರ.

ಜಂಬುಚೂತಪಲಾಶವಟದಾ
ಳಿಂಬಬಿಲ್ವತಮಾಲಚಂಪಕ
ನಿಂಬಬಕುಳಕಪಿತ್ಥಕುಟಜವಶೋಕಪುನ್ನಾಗ ।
ತುಂಬುರರಳಿಲವಂಗಬಕುಳಕ

ದಂಬಗುಗ್ಗುಳಸಾಲತಿಲಕವು
ದುಂಬರಾದಿದ್ರುಮಕುಲವನಾಲಿಂಗಿಸಿತು ವಹ್ನಿ ॥ ೪೮

ಸುೞಿಸುೞಿದು ಶಶಿಕಾಂತಮಯದ
ಗ್ಗಳದ ವೇದಿಕೆಗಳಲಿ ನೀಲದ
ನೆಲೆಯ ಚೌಕಿಗೆಗಳಲಿ ಮಂಟಪದಲಿ ಲತಾವಳಿಯ ।
ಲಲಿತಸೌಧದ ಚಾರುಚಿತ್ರಾ
ವಳಿಯ ಮೇಲ್ಕಟ್ಟುಗಳ ಭವನಂ
ಗಳಲಿ ಬಿಟ್ಟುದು ಕೂಡೆ ಪಾಳೆಯ ವಹ್ನಿಭೂಪತಿಯ ॥ ೪೯

ಅಗ್ನಿಯಿಂದ ವನದಲ್ಲಿದ್ದವುಗಳೆಲ್ಲವೂ ಸುಡಲ್ಪಡುವಿಕೆ.

ಕುರಳ ತುಂಬಿಯ ತನಿಗೆದಱಿ ಮುಖ
ಸರಸಿಜವ ಚುಂಬಿಸಿ ತಮಾಲದ
ತುಱುಬ ಹಿಡಿದಧರಪ್ರವಾಳದ ರಸವನುಱೆ ಪೀರ್ದು ।
ಉರುಪಯೋಧರಬಿಲ್ವವನು ಹೊ
ಯ್ದೊರಸಿ ಕದಳಿಯನುಣ್ದೊಡೆಯ ನಿ
ಟ್ಟೊರಸಿ ರಮಿಸಿತು ವನಸಿರಿಯಪಿಪ್ಪಲದಳಾಂಗದಲಿ [1] ॥ ೫೦

ಧರಣಿಪತಿ ಕೇಳ್ ಶರಭಮೃಗಪತಿ
ಕರಿಕಳಭಶಾರ್ದೂಲಸೂಕರ
ಕರಡಿಕಾಸರ ಶಲಮೃಗಾದನಖಡ್ಗಗೋಮಾಯು ।
ಎರಳೆ ಮೊಲ ಸಾರಂಗವಾನರ
ನುರುಕುರಂಗಪ್ರಮುಖಮೃಗಕುಲ
ವುರಿಗೆ ಸಿಲುಕಿತು ದಳ್ಳುರಿಯ ಬೆಳ್ಳಾರವಲೆಗಳಲಿ ॥ ೫೧

ಶುಕಮಯೂರಮರಾಳಟಿಟ್ಟಿಭ
ಪಿಕಚಕೋರಕಪೋತವಾಯಸ

1 ದಗ್ನಿನೃಪನುತ್ಪಲದಳಾಂಗದಲಿ, ಕ.

ಬಕಪದಾಯುಧಚಕ್ರವಾಕಕಳಿಂಗಕಲವಿಂಕ ।
ಕುಕಿಲಸಾರಸಕಾಕರಿಪುಚಾ
ತಕಭರದ್ವಾಜಾದಿಪಕ್ಷಿ
ಪ್ರಕರ ಬಿದ್ದುದು ಬಿಗಿದಕೇಸುರಿಕಣ್ಣಿವಲೆಗಳಲಿ ॥ ೫೨

ಹರಡೆ ಗೀಜಗ ಮರಗೊಳಲೆ ಕಾ
ರ್ಬುರಲೆ ಲಾವುಗೆ ಗೌಜು ಪಾರಿವ
ಸರಟ ಸಾಳುವ ಚಿಲಿಮಿಲಿಗಚಂಬೋತ ಮಿಾನ್ಬುಲಿಗ ।
ಮರಕುಟಿಗ ಕಬ್ಬಕ್ಕಿ ಕೊಟ್ಟುಗ
ವೊರಲಿ ಕೊಂಚೆಗ ಪಿಂಜುಗಿಂಚಲು
ಗರಿಗವೊದಲಾದಖಿಳಖಗಕುಲ ಬಿದ್ದುದುರಿಯೊಳಗೆ ॥ ೫೩

ಝುಳಕೆ ತಿಳಿಗೊಳದುದಕ ಕಾಯ್ದು
ಚ್ಚಳಿಸಿದುವು ತನಿಗುದಿದು ಮತ್ಸ್ಯಾ
ವಳಿಗಳಂಬುಜದೆಸಳು ಸೀದುವು ತುಂಬಿಗಳು ಸಹಿತ ।
ಹಿಳಿದು ಸಿಡಿದುವು ಚಾರುಚಂದ್ರೋ
ತ್ಪಲರಚಿತಸೋಪಾನರತುನಾ
ವಳಿಯು ರಾಶಿಗಳಿದ್ದಲಾದುವು ಭೂಪ ಕೇಳೆಂದ [1] ॥ ೫೪

ಇಟ್ಟಣಿಸಿ ಛಳಿಛಳಿಸಿ ಕಿಡಿ ಪುಟ
ವಿಟ್ಟುದೊಣಗಿಲು ಹೊದಱಿನಲಿ ಮಿಗೆ
ಸುಟ್ಟು ಕರ್ಬೊಗೆ ಝುಗೆಯು ಹೊರಳಿಯು ಕಿಡಿಯು ಗಡಣದಲಿ ।
ಹುಟ್ಟಿದುರಿ ಹೆಮ್ಮರನ ಸುತ್ತಲು
ಕಟ್ಟತಲ್ಲಿಯು ತೊಡಕಿನಲಿ ಭುಗಿ
ಲಿಟ್ಟು ಕವಿದುದು ಕಣುಗಿ ಬಹುಶಾಖೋಪಶಾಖೆಗಳ ॥ ೫೫

ಹೊಗೆಯು ಹಬ್ಬುಗೆ ಸತ್ಯಲೋಕವ
ನುಗಿದುದುರಿನಾಲಗೆಯು ಗರವೊ

---

1 ಬಿದ್ದ ಕಿಡಿಗಳಲಿ, ಚ

ಟ್ಟಗೆಯು ತೊಟಲಿಕೆ ತೆರಳಚಿತು ತೆತ್ತೀಸುಕೋಟಿಗಳ ।
ಹಗಲಗಡಿತಕೆಹೊಕ್ಕುದೋ ಕಡೆ
ಮುಗಿಲು ಕಾಣೆನು ದಿವವನೆತ್ತಣ
ಗಗನಮಣಿನಕ್ಷತ್ರಚಂದ್ರಮರರಸ ಕೇಳೆಂದ ॥ ೫೬

ಛಿಳಿಛಿಳಿಲುಛಿಳಿರವದ ಘುಳುಘುಳು
ಘುಳುಘುಳಧ್ವನಿಮಯದ ಕಪಿಗಳ
ಕಿಳಕಿಳಾಯುತರವದಿ ಮೃಗಸಂಕುಳದ ಕಳಕಳದಿ ।
ಹಿಳಿದುರಿವಹೆಬ್ಬಿದಿರ ಗಂಟಿನ
ಠಳಠಳತ್ಕಾರದಲಿ ದಿಶಾಮಂ
ಡಲದ ಮೂಲೆಗಳೊಡೆದುದದ್ಭುತವಾಯ್ತು ವನದಹನ ॥ ೫೭

ಆಗ ತಕ್ಷಕನ ಸಂತತಿಯು ಅಶ್ವಸೇನನು ಗಗನಕ್ಕೆ ಹಾರಿ ಹೋಗುವಿಕೆ.

ಅರಸ ಕೇಳೈ ಮುನ್ನ ವಿತಳಕೆ
ಗರುಡಭಯವಾಯ್ತೆಂದು ತಕ್ಷಕ
ನಿರಿಸಿದನು ನಿಜಸುತನನಮರೇಶ್ವರಸನುಜ್ಞೆಯಲಿ ।
ಇರಿಲಿರಲು ಸುತರಾದರಾತಂ
ಉರಗವಂಶದೊಳಶ್ವಸೇನಗೆ
ಹಿರಿದು ಹೆಚ್ಚಿತು ತಕ್ಷಕನ ಸಂತತಿ ವನಾಂತದಲಿ ॥ ೫೮

ಈಮಹಾವನವಹ್ನಿ ಭೂತ
ಸ್ತೋಮಸಂಹೃತಿಕರ್ಮಶೌರ್ಯೋ
ದ್ದಾಮವವಗಾಹಿಸುತ ಬಂದುದು ಮುಂದೆ ಚೂಣಿಯಲಿ ।
ಧೂಮವಿಟ್ಟಿದುದು ಹುತ್ತಿನಲಿ ನಿ
ಸ್ಸೀಮಜನಿತಜ್ವಾಲೆಗಳ ಝಳ
ವಾಮಹೋರಗಚಯವ ಚುಂಬಿಸಿತರಸ ಕೇಳೆಂದ ॥ ೫೯

ಹೂಸಿ ಹುತ್ತಿನ ಮಣ್ಣರಂಧ್ರಿಸಿ
ಕಾಸಿದರೊ ಫಣಿಕುಲವನೆನೆ ಡೊ

ಳ್ಳಾಸದಲಿ ಡಾವರಿಸಿದುದು ಕಿಡಿ ಧೂತಧೂಮದಲಿ ।
ಆಸುರದ ಕಬ್ಬೊಗೆಯು ಕವಚದ
ಕೇಸುರಿಗಳೊಳಬಿದ್ದುದುರಿ ಹೊರ
ಸೂಸಿ ಹಿಡಿದುದು ಹಾವುಗಳ ಬಲುಹೊದರ ಹೊರಳಿಗಳ ॥ ೬೦

ಹೆಡೆಯ ಮಣಿಗಳ ಕೊಡಹಿ ಸೂಸಿದ
ಕಿಡಿಗಳಲಿ ಹಾ ಯೆನುತ ತಲೆಗಳ
ಕೊಡಹಿ ಸೀದುರಗಿಯರು ಮಱಿಗಳ ಮೇಲೆ ಮೈಚಾಚಿ ।
ಕಡುಹೊಗೆಯು ಕೇಸುರಿಯು ಕಿಡಿಗಳ
ಗಡಣದಲಿ ಕಾರೆದ್ದು ಮೈಗಳ
ಕೊಡಹಿ ಬಿಸುಸುಯ್ಯುತ್ತ ಮಗ್ಗಿದುದುರಿಯೊಳಹಿನಿಕರ ॥ ೬೧

ಕುದಿದುರಿವ ಹುತ್ತಿನಲಿ ಕೂಱು ದಿ
ಗುದಿವ ಸರ್ಪಸ್ತೋಮಮಧ್ಯದೊ
ಳೊದೆದು ಹಾಯಿದನಶ್ವಸೇನನು ಗಗನಮಂಡಲಕೆ ।
ಕೆದಱಿದುವು ಕೆಂಗಿಡಿಗಳುರಿಯು
ಬ್ಬಿದುದು ಘುಳುಘುಳುರಭಸ ಮಿಗೆ ಹೆ
ಚ್ಚಿದುದು ತಬ್ಬಿದುದೀತನನು ತಡವರಿಸಿ ಗಗನದಲಿ ॥ ೬೨

ಆಗ ಅಶ್ವಸೇನನನ್ನು ತರಿಸಿಕೊಂಡೆಂದು ಅಗ್ನಿಯು ಪ್ರಾರ್ಥನೆ.

ಉರಿಯುಗಂಟಲನೊದೆದು ಫಣಿ ಮಿ
ಕ್ಕುರುವಣಿಸೆ ಹಾ ಹಾ ಧನಂಜಯ
ಹರಿವುತಿದೆ ಹಾ ವೊಂದು ತಪ್ಪಿತು ಬಾಯ ತುತ್ತೆನಗೆ ।
ತರಿಸಿಕೊಡು ಶರವೇಧೆಯನು ವಿ
ಸ್ತರಿಸು ಮಹಿಲದೊಳನಲು ವೈಶ್ವಾ
ನರನ ಮಾತಿಗೆ ನಗುತ ಕೊಂಡನು ವಿಜಯ ಗಾಂಡಿವವ ॥ ೬೩

ಆಗ ಅರ್ಜುನನನ್ನು ಕುರಿತು ಸರ್ಪವಾಕ್ಯ.

ಆವ ಶರಸಂಧಾನವೋ ಗಗ
ನಾವಲಂಬಿಯು ಕೊರಳನೆಚ್ಚನು
ಪಾವಕನ ಮಧ್ಯದಲಿ ಬಿದ್ದುದು ಮುಂಡವಹಿಪತಿಯ |
ಜೀವ ವುಳಿದುದು ಶಿರದೊಳಾತಂ
ಗಾವಿಗಡ ಫಣಿ ನುಡಿದುದೆಲೆ ಗಾಂ
ಡೀವಿ ಮಱೆಯದಿರೆನ್ನ ಹಗೆಯಲಿ ಮರಣ ನಿನಗೆನುತ ‖ ೬೪

ಎಂದು ಗಗನದೊಳೊದಱಿ ಫಣಿಶಿರ
ವೆಂದು ಹಾಯ್ದುದು ಧರೆಗೆ ರಾಧಾ
ನಂದನನ ಬತ್ತಳಿಕೆಯಲಿ ಶರವಾಯ್ತು ಜಗವಱಿಯೆ |
ಸಂದುದದು ಬಳಿಕಿತ್ತಲಿಂದ್ರನ
ನಂದನದ ಬೇಗೆಯಲಿ ಬದುಕಿತು
ಮಂದಪಾಲನ ಸುತಚತುಷ್ಟಯವರಸ ಕೇಳೆಂದ ‖ ೬೫

ಆಗ ಕೆಲವು ಪಕ್ಷಿಗಳು ಅಗ್ನಿಸೂಕ್ತಜಪದಿಂದ ಬದುಕಿದುವು.

ಮೆಚ್ಚಿಸಿದುವಿವು ವಹ್ನಿಸೂಕ್ತವ
ನುಚ್ಚರಿಸಿ ತಜ್ಜ್ವಲನಮುಖವನು
ಬಿಚ್ಚಿ ಬದುಕಿದುವಾ ಋಷಿಯ ಸಂತಾನಪಕ್ಷಿಗಳು |
ಹೆಚ್ಚಿದುರಿಹಬ್ಬುಗೆಯ ಹೊಯಿಲಲಿ
ಬಿಚ್ಚಿ ಮಯನರ್ಜುನನ ಹೊಗಳಿಯೆ
ಕಿಚ್ಚಿನಲಿ ಬದುಕಿದನು ಧರಣೀಪಾಲ ಕೇಳೆಂದ ‖ ೬೬

ಖಗಚತುಷ್ಟಯ ಮಯಸಹಿತವುರಿ
ಯುಗುಳ್ದುಳಿದ ಸಮಸ್ತ ಭೂತಾ
ಳಿಗಳನಾಹುತಿಗೊಂಡುದಗ್ನಿ ಧನಂಜಯಾಜ್ಞೆಯಲಿ |
ಗಗನದಿಂದಿಳಿತಂದು ಸುರಪತಿ
ಮಗನ ಮನ್ನಿಸಿ ಕೊಟ್ಟನಗ್ಗದ
ಗಗನಮಣಿಗೆಣೆಯೆನಿಪ ಮಕುಟವನೊಲಿದು ಪಾರ್ಥಂಗೆ ‖ ೬೭

ಇಂದ್ರನ ಗಮನ ಮತ್ತು ಕೃಷ್ಣಾರ್ಜುನರು ಬಂದು ಭೀಮಾದಿಗಳಿಗೆ ಇದನ್ನು ಹೇಳುವಿಕೆ.

ಹರಿಗೆ ವಂದಿಸಿ ಮಗನನೊಲಿದಾ
ದರಿಸಿ ತಿರುಗಿದನಿಂದ್ರನಿತ್ತಲು
ಭರದಿನಿವರೈತಂದರಿಂದ್ರಪ್ರಸ್ಥಪುರವರಕೆ ।
ಧರಣಿಪತಿಗಾಖಾಂಡವದ ದ
ಳ್ಳುರಿಯ ಹೋಮದ ಹೊಸಕಥೆಯ ವಿ
ಸ್ತರಿಸಿ ಹೇಳಿದನಸುರರಿಪು ಭೀಮಾದಿಗಳು ನಲಿಯೆ ॥ ೩೮

ಧಾರುಣೀಶ್ವರರೈವರನು ಸುಕು
ಮಾರವರ್ಗವನಾಸುಭದ್ರಾ
ನಾರಿಯನು ಪಾಂಚಾಲಿಯನು ತತ್ಸಕಲಬಾಂಧವರ ।
ಸೂರಿಗಳ ಸಚಿವಾದಿನೃಪಪರಿ
ವಾರವನು ಸತ್ಕರಿಸಿ ಬಂದನು
ದ್ವಾರಕೆಗೆ ಹರುಷದಲಿ ಗದುಗಿನ ವೀರನಾರಯಣ ॥ ೩೯

ಮೂವತ್ತ ಏಳನೆಯ ಸಂಧಿ ಮುಗಿದುದು.

ಇತಿ ಶ್ರೀಮದಚಿಂತ್ಯಮಹಿಮ ಗದುಗುವೀರನಾರಾಯಣಚರಣಾರ
ವಿಂದ ಮಕರಂದ ಮಧುಪಾನ ಪುಷ್ಟವಚಃಷಟ್ಪದೀನಿಕಾಯ
ಶ್ರೀಮತ್ಕುಮಾರವ್ಯಾಸಯೋಗೀಂದ್ರ ವಿರಚಿತಮಪ್ಪ
ಕರ್ಣಾಟಭಾರತ ಕಥಾಮಂಜರಿಯೊಳ್
ಆದಿಪರ್ವಂ ಮುಗಿದುದು.

ಪರಿಶಿಷ್ಟ ೧

* ಸೂಚನೆ.

ಪುತ್ರಕಾಮೇಷ್ಟಿಯನು ಮಾಡಿದ
ಕ್ಷತ್ರಿಯೋತ್ತಮ ಕಮಲಮಿತ್ರನ
ಗೋತ್ರದ ಹರಿಶ್ಚಂದ್ರಭೂಭುಜನುರ್ವಿಮಧ್ಯದಲಿ ||

ಹರಿಶ್ಚಂದ್ರನ ಕಥೆ.

ಕೇಳು ಜನಮೇಜಯ ಧರಿತ್ರೀ
ಪಾಲ ಪುತ್ರನ ನೀನು ಪಡೆವೊಡೆ
ಕೇಳುವುದು ಹರಿಶ್ಚಂದ್ರಭೂಪನ ಯಾಗನಿರ್ಣಯವ |
ಹೇಳುವೆನು ದಿನಕರನ ವಂಶದ
ಲೋಲಮತಿ ಧರಣೀಶ ವರುಣಗೆ
ಬೇಳದೀನರಮೇಧಯಾಗದ ಕಥೆಯ ಕೌತುಕವ || ೧

ಪರಮಪುರಷೋತ್ತಮನ ದೆಸೆಯಿಂ
ಸರಸಿರುಹಸಂಭೂತನಾತನ
ಹೊರೆಯಲುದುಭವಿಸಿದನು ಕಶ್ಯಪ ಕಶ್ಯಪಾಂಗದಲಿ |
ತರಣಿ ಜನಿಸಿದ ಜನಿಸಲಾತನ
ವರಕುಮಾರಕನಾಗಿ ಜನಿಸಿದ
ನಿರುತವೈವಸ್ವತನು ವೈವಸ್ವತನಿಗಿಕ್ಷ್ವಾಕು || ೨

---

* ಗ. ಘ. ಙ. ಶ. ಗುರ್ತಿನ ಕರ್ಣಾಟಕ ಮಹಾಭಾರತ ಪುಸ್ತಕ ಪ್ರಕಾರ ಆದಿಪರ್ವದ೩—೪ ನೇ ಸಂಧಿಗಳ ಮಧ್ಯದಲ್ಲಿ ಈ ಸಂಧಿಯು ದೊರೆಯುತ್ತದೆ.

ಆ ಕಥೆಯಲ್ಲಿ—ಹರಿಶ್ಚಂದ್ರರಾಯನ ರಾಜ್ಯಭಾರ ಮತ್ತು ಮಕ್ಕಳಿಲ್ಲದ ಚಿಂತೆ.

ಅರಸ ಕೇಳಿಕ್ಷ್ವಾಕುನೃಪಗಾ
ಪರಮಚಕ್ಷುಸ ಚಕ್ಷುವಿಂದವೆ
ಧರಣಿಪತಿಯು ತ್ರಿಶಂಕು ಶಂಕುಗೆ ವರಹರಿಶ್ಚಂದ್ರ ।
ವರಹರಿಶ್ಚಂದ್ರಮನು ರಾಜ್ಯವ
ಹಿರಿದು ಕಾಲಂ ಮಾಡಿ ಮಕ್ಕಳ
ಪರುಷ ಗಾಣದೆ ಚಿಂತೆವಿಡಿದಿರೆ ಹಲವುವರ್ಷಗಳು ॥ ೩

ಧರಣಿಪತಿ ಬಲ್ಲಿದನು ಸತ್ಯದ
ಪರಮಜೀವನನಾಗಿ ಭೂಮಿಯೊ
ಳರಿಭಯಂಕರನಾಗಿ ರಾಜ್ಯವನಾಳಿದನು ನೃಪತಿ ।
ಪರಿಹರಿಸಲಱುವತ್ತು ಸಾವಿರ
ವಿರಲು ಭೂಪತಿ ಹಿರಿದು ಚಿಂತಿಸಿ
ನಿರುತದಲಿ ನೆಱೆ ಪಶ್ಚಿಮಾಂಬುಧಿಯೆಡೆಗೆ ಬರುತಿರಲು ॥ ೪

ಆಗ ವರುಣನಿಂದ ಪುತ್ರವರವನ್ನು ಪಡೆದು ಆಶಿಶುವನ್ನು ಅಗ್ನಿಮುಖದಲ್ಲಿ ನಿನಗಾಗಿ ಕೊಡುವೆನೆಂದು ರಾಜನ ಪ್ರತಿಜ್ಞೆ.

ಬರಬರಲು ತದ್ದಿಕ್ಕಿನಧಿಪನ
ಹಿರಿದು ಭಜಿಸಿಯೆ ಬೇಡಿಕೊಂಡನು
ವರುಣದೇವರೆ ತನಗೆ ನೀನೊಬ್ಬಮಳಪುತ್ರನನು ।
ಕರುಣಿಸುವುದೈ ಪುತ್ರವರಮುಖ
ದರುಶನವ ನೆಱೆ ಮಾಡಿ ಯಾತನ
ಶಿರವ ಕಡಿದಾಹುತಿಯನೀವೆನು ನಿಮಗೆ ಹವನದಲಿ ॥ ೫

ಎನಲು ಮೆಚ್ಚಿಯೆ ವರುಣನಾತಂ
ಗನಿತುವರವನು ಕೊಟ್ಟು ಕಳುಹಲು
ಜನಪ ಮರಳಿಯೆ ಬಂದು ಹೊಕ್ಕನು ತನ್ನಪಟ್ಟಣವ ।

ವನಿತೆಯನು ಕರೆತರಿಸಿ ತಂನಯ
ಜನಕನಾತದ್ದಿನದ ಪಿಂಡವ
ಜನಪನೀಯಲು ಗರ್ಭವಾಯಿತು ಚಂದ್ರಮತಿಗಾಗ ॥ ೬

ಮೂಲದಲಿ ಮೂಱನೆಯ ಚರಣದ
ಕಾಲದಲಿ ಪತಿಯೊಡನೆ ಪವಡಿಸೆ
ಲೋಲಲೋಚನೆಗಾಯ್ತು ಹರುಷದ ಪೂರ್ಣಗರ್ಭವದು ।
ಜಾಳಿಸಲಿಕೀರೈದುಮಾಸಕೆ
ಬಾಲನುಱಿ ನಕ್ಷತ್ರಮಾಸದ
ಕಾಲದಲಿ ವೈಶಾಖಬಹುಳದ್ವಾದಶಾಶ್ವಿನಿಗೆ ॥ ೭

ಪುತ್ರ ಜನನವಾಗಲು ವರುಣದೇವರು ಪುತ್ರನನ್ನು ಕೇಳಿದಾಗ ನಾನಾ ವಿಧೋಪಾಯಗಳಿಂದ ಕೊಡದೆ ಇರುವಿಕೆ.

ಜನಿಸಿದನು ತಾ ಲೋಹಿತಾಶ್ವನು
ಜನಿಸಲಲ್ಲಿಗೆ ವರುಣದೇವರು
ನೆನೆದು ಬಂದರು ಭೂಪನಿದ್ದೆಡೆಗಾಗಿ ವಹಿಲದಲಿ ।
ವಿನಯದಿಂ ಕೈಮುಗಿದು ವರುಣಗೆ
ಮುನಿಮತವನುಸುರಿದನು ಪುತ್ರನ
ತನುವಯೊಗ್ಯವು ಶುಕ್ಲಶೋಣಿತದಿಂದ ಸೂತಕದ ॥ ೮

ದಿನ ಪವೆಯಲೀಸುತನನೀಯುವೆ
ನೆನಲು ಗಂಗಾರಮಣ ತಿರುಗಿದ
ನನಿತು ತಾನೀರಾಱುದಿವಸಕೆ ಮಕರವಾಹನನು ।
ಅನುವಿನಿಂ ನಡೆತಂದು ಭೂಪನ
ತನುಜನನು ಬೇಡಿದನು ಬೇಡಲು
ಜನಪನುಸುರಿದನೀತ ನೆಱಿ ಸಂಸ್ಕಾರಿ ಯಲ್ಲೆಂದ ॥ ೯

ಈತಗುಪನಯನಕರ್ಮವಾದುದ
ಪ್ರೀತಿಯಲಿ ವಿಸ್ತರಿಸಿ ಸುತನನು

ವೀತಿಹೋತ್ರನ ಮುಖದಲೀವೆನು ನಿಮಗೆ ಸತ್ಕರಿಸಿ ।
ಆತಗುಪನಯವಾಯ್ತು ಕ್ಷತ್ರಿಯ
ರೀತಿಯಲ್ಲೀರಾಱುವತ್ಸರ
ಕಾತ ಬಂದನು ಜಲಧಿಯಧಿಪತಿ ನೃಪನ ಹೊರೆಗಾಗಿ ॥ ೧೦

ಬರಲಿಕರಸನು ನುಡಿದನಾತಗೆ
ತರಳನಿವನತಿಮೂರ್ಖನಾಗಿಹ
ನಿರುತದಲಿ ಮಂಗಳವನೋದಿಸಿ ಯೋಗ್ಯನೆಂದೆನಿಸಿ ।
ವರಕುಮಾರನನೀವೆನೆನಲಿಕೆ
ಮರಳಿದನು ಮಕರೇಶನತ್ತಲು
ವರುಷನಾಲ್ಕಕೆ ಲೋಹಿತಾಶ್ವನು ವೇದವೆಲ್ಲವನು ॥ ೧೧

ಓದಿ ನಡುಗಿದನಿನ್ನು ವರುಣನ
ಬಾಧೆಗರಸನು ನೆನಹ ಕಾಣನು
ವೇದಿಸುವನೆಂದಂಜಿ ತಂದೆಗೆ ಮಗನು ಹೇಳದಲೆ ।
ಹೋದನಡವಿಗೆ ಲೋಹಿತಾಶ್ವನು
ವೇಧೆಯಲಿ ಜಡರಾಶಿಗಧಿಪನು
ಮೇದಿನೀಶ್ವರನತ್ತ ಬಂದನು ಮಗನ ಬೇಡಲಿಕೆ ॥ ೧೨

ಬರಲಿಕೆ ಹರಿಶ್ಚಂದ್ರಭೂಪನು
ಹಿರಿದು ಸತ್ಕರಿಸಿದನು ವರುಣನ
ಪರಮಹರುಷದೊಳಿರಲು ಬೇಡಿದನಾನೃಪೋತ್ತಮನ ।
ಅರಸ ಕೊಡು ನಂಮಾಗತವನೀ
ಮರಳಿ ಮಾತಂ ನುಡಿಯದೀಗಳು
ಹಿರಿದು ಹುಸಿಯದಿರೆನಲು ಬಿಂನಹಮಾಡಿದನು ಮಗುಳ[1] ॥ ೧೩

---

1 ನಡುಗಿ, ಗ. ಘ.

ಅತಿಥಿಯ ಅಸಂತೋಷದಿಂದ ರಾಜನಿಗೆ ಮಹೋದರರೋಗಪ್ರಾಪ್ತಿ.

ದೇವ ನಿಮ್ಮಯ ಭಯದಿ ಮಗನಿ
ನ್ನಾವತಾವಿಗೆ ಹೋದನೆಂಬುದ
ತಾವೆಱಿಯೆವೆಂದೆನಲಿಕತ್ತಲು ಲೋಹಿತಾಶ್ವಂಗೆ ।
ಆವಿಚಿತ್ರವನೇನ ಹೇಳುವೆ
ದೇವರಾಜನು ತಡವ ಮಾಡಿದ
ಭೂವರಜಲೋದರವನಾತಿಥಿಯಱಿದು ಬರುತಿರಲು ॥ ೧೪

ಇರಲಿಕಿತ್ತಲು ವರಮಹೀಪತಿ
ವರುಣಗೆಂದನು ತನ್ನ ಪುಣ್ಯದ
ನೆರವಿ ಯಿಾಪರಿ ಯಾಯ್ತುದೆನಲಿಕೆ ಜಲಧಿಪತಿ ನುಡಿದ ।
ಮರುಳೆ ತಾನಿನ್ನರಸ ಕೇಳ್ಳೈ
ತಿರುಗಿ ನಿನ್ನಯ ಪುತ್ರ ಹೋದರೆ
ಧರಣಿಯಮರನ ಪುತ್ರನೊಬ್ಬನ ನೀ ಕ್ರಯಂಗೊಂಡು ॥ ೧೫

ಆಗ ವರುಣನ ಇಷ್ಟದಂತೆ ವಿಪ್ರಪುತ್ರನನ್ನು ಕ್ರಯಕ್ಕೆ ತೆಗೆದು
ಕೊಳ್ಳಲು ಹೋಗುವಿಕೆ.

ಏನಸಿತ್ತಾದೊಡೆಯು ತಂದಾ
ಸೂನುವನು ತನಗೀವುದೆನಲಿಕೆ
ಮಾನನಿಧಿ ತನುಧನವನೊಪ್ಪಿಸಿ ತಹೆನು ಭೂಸುರನ ।
ಸೂನುವನ್ನೆಂದವನಿಳೆವಿಪ್ರ
ಸ್ಥಾನಕ್ಕೈದಿದನಖಿಳತೀರ್ಥ
ಸ್ನಾನವನು ನೆಱೆ ಮಾಡುತಲ್ಲಿಯೆ ವರತಪೋವನದಿ ॥ ೧೬

ಅರಸನನು ಕಂಡೊಬ್ಬ ನುಡಿದನು
ಧರಣಿಯಮರನು ನಿನಗೆ ಹಿರಿದಹ
ವರಿಯ ವಿಧಿಯನ್ನೇಕೆ ಮಾಡುವೆ ಯೆನಲಿಕುಸುರಿದನು ।

*ಈ ಕಥೆಯು ಭಾಗವತಾದಿಗಳಲ್ಲಿರುವದಕ್ಕಿಂತ ಬೇರೇ ರೀತಿಯಾಗಿದೆ.

ವರುಣದೇವರಿಗೊಬ್ಬ ಪುತ್ರನ
ವರಸಿ ಬೇಡಿದೆ ಪುತ್ರವರಮುಖ
ದರುಶನವ ಮಾಡುವೆನೆನುತಲಾ ಮಗನು ಮೋಱಿಯನು ॥ ೧೭

ತೋಱಿ ಮಱುದಿನವಗಲಿ ಹೋದನು
ನೀಱನತಿವೇದಾಂತವೇದ್ಯನ
ಮಾಱುಗೊಂಡೆನು ಸಕಲವೇದಪುರಾಣಶಾಸ್ತ್ರದಲಿ ।
ತೋಱಿ ನುಡಿದೆನು ಹರಿಯ ಗುಣಗಳ
ನೂಱುಪರಿಯಲಿ ಮಗನ ಹೊಂದಲಿ
ಕಾಱಿನೆಂದು ತ್ರಿಶಂಕುನಂದನನಾಜಿಗರ್ತನಿಗೆ ॥ ೧೮

ಪುತ್ರಮುಖದರುಶನವು ಜನನದ
ಮಾತ್ರದಲಿ ತಾನಲ್ಲಿ ನೀತಿಯೆ
ಪುತ್ರ ಹದಿನಾಱಬ್ದವಾಗಲು ಮಗನ ಶುಭಗುಣನ ।
ಮಿತ್ರಗೋತ್ರಸುಪುತ್ರನೆಂದಾ
ಪುತ್ರನನು ತಾ ನೋಱ್ಪುದಾಗ ಪ
ವಿತ್ರಗುಣಯುತ ತಂದೆಯಾದಗೆ ಶಿಷ್ಟಮತವೆಂದು ॥ ೧೯

ನೋಡಿದೆನು ಸುತಮುಖವನಾಗಲೆ
ನೋಡಿದೆನು ತಾನೊಮ್ಮೆ ಮಱುದಿನ
ನೀಡುವೆನು ನದಿಪತಿಗೆ ಯೆನಲಿಕೆ ಮಗನು ಭೀತಿಯಲಿ ।
ಓಡಿ ಹೋದನು ತನಗೆ ಮಾತಿನ
ಪಾಡು ಬಿದ್ದುದು ವಿತಥವಾಣಿಯು
ನಾಡಲಾಱೆನು ನಿಮಗೆ ಮೂವರು ಸುತರು ಯಿಹರೆಂದು ॥ ೨೦

ಅಜೀಗರ್ತರ ಬಳಿ ಹೋಗಿ ಕೇಳಿದ ಬೆಲೆಯನ್ನು ಕೊಡುವೆನು
ಮಗನನ್ನು ಕೊಡಿ ಎಂದು ಕೇಳುವಿಕೆ.

ಬಂದೆನಿಲ್ಲಿಗೆ ನಿಮ್ಮ ಮಕ್ಕಳ
ಗೆಂದ ಬೆಲೆಯನು ಕೊಡುವೆನೆನಲಿಕೆ

ತಂದೆ ಮಕ್ಕಳ ಮಾಱತೊಡಗಿತು ತ್ರೇತೆಯುಪರದಲಿ ।
ಬಂದುದೈ ನೆಱೆ ಪೊಂದುಪಾದದ
ನಿಂದಿತದ ಕಡುಪಾಪವಾಗಳು
ಸಂಧಿಸಲ್ಕಜಿಗರ್ತನೆಂದನು ತನ್ನ ಸತಿಯೊಡನೆ ॥ ೨೧

ಮೂವರೊಳಗೊಬ್ಬನನು ಕೊಡುವೊಡೆ
ಯಾವನನು ಕೊಡಬಹುದು ಯೆಂದೆನ
ಲಾವಧುವು ನಿರ್ಣಯವ ಮಾಡಿದಳರಸನಿದಿರಿನಲಿ ।
ಈವೊಡೆನ್ನಯ ಕಡೆಯ ಕಂದನ
ನೀವುದಿಲ್ಲೆನೆ ವಿಪ್ರ ತನ್ನಯ
ಜೀವಸಖನಹ ಜ್ಯೇಷ್ಟಪುತ್ರನ ತಾನು ಕೊಡೆನೆಂದ ॥ ೨೨

ಆಗ ಮಧ್ಯಮ ಪುತ್ರನನ್ನು ವಿಕ್ರಯಿಸುವಿಕೆ.

ಈವೊಡೆಯು ಮಧ್ಯಮನನೀಗಳು
ಭೂವಧೂವಲ್ಲಭನ ಯಾಗ
ಕ್ಕೀವೆವೆಂದಾಮಿಥುನ ನೈರ್ಘಣ್ಯದಲಿ ಮಧ್ಯಮನ ।
ತಾವು ಬೆಲೆ ಮಾಡಿದರು ತತ್‌ಕ್ಷಣ
ಸಾವಿರದ ಮುನ್ನೂಱುಸಾಂಗದ
ದೇವಯೋಗ್ಯದ ಕಪಿಲೆಯಾವನು ದಕ್ಷಿಣೆಯುಸಹಿತ ॥ ೨೩

ಮೂಱು ಗೋದಾನಕ್ಕೆ ದಕ್ಷಿಣೆ
ಮೂಱಹುದು ಕೇಳೆಂದು ರುಷಿಮತ
ವಿಾಱದೀವುದು ನೀನಲಂಕರಿಸೀಗ ಬೇಗದಲಿ ।
ಮಾಱಿದೆನು ತನ್ನ ಮಳಪುತ್ರಗೆ
ಭೂರಮಣ ಕೊಡು ಸಾವಿರದ ಏ
ಬ್ನೂಱ ಮೂವತ್ತಾಱನೆನೆ ಪೊಲಿದಿತ್ತನಾದ್ವಿಜಗೆ ॥ ೨೪

ಆತನನ್ನು ತಂದು ಯೂಪಸ್ತಂಭಕ್ಕೆ ಕಟ್ಟುವಿಕೆ.

ಕೊಂಡು ಬಂದನಯೋಧ್ಯಪುರಕೆ ಪ್ರ
ಚಂಡಸೂನುವನಾಗ ಭೂಪತಿ
ಕೊಂಡದಿದಿರಿನ ಯೂಪಕಂಭಕೆ ಕಟ್ಟಿದನು ಭೂಸುರನ ।
ಚಂಡಿಕೆಯುನೊಂದವೊಳಪಾಶದಿ
ದಂಡಿಸಿದ ಕೊರಳಿಂಗೆ ಪಾಶದಿ
ಮಂಡಿಸಿಯೆ ನಾಭಿಯನು ಬಿಗಿದನು ಮೂಱುಪಾಶದಲಿ ॥ ೨೫

ಬಿಗಿದ ಬಟುಕಂ ಸಕಲ ಯಾಜ್ಞಿಕ
ನಿಗಮದಧಿಕರ ಕರೆಸಿ ಹೋಮವ
ಜಗದ ವಲ್ಲಭನಾಹರಿಶ್ಚಂದ್ರಮನು ಹುಱಿಕೊಳಿಸಿ ।
ಮಿಗಿಲೆನಿಪ ವರಸಪ್ತಋಷಿಗಳ
ಸೊಗಿಸಿ ಕರೆತರಿಸಿದನು ಚತುರ್ದಶ
ಜಗದ ದೇವರ ಸಕಲರುಷಿಯುರನುರ್ವಿಯುಮರರನು ॥ ೨೬

ನೆರಹಿದನು ನಾನಾದಿಗಂತದ
ಧರಣಿಪರ ಹರಿಶ್ಚಂದ್ರಭೂಪತಿ
ನಿರವಿಸಿದ ತಂನ್ನ ಮಲಗುರುವಿಗೆ ಯಾಗದುಪಕ್ರಮವ ।
ನಿರವಿಸಲು ರವಿಕುಲದುಪಾಧ್ಯರು
ವರಿಸಿದರು ದ್ವಿಜನಿಕರಕಗ್ರದ
ಪರಮನರವೋಧದಲಿ ಮಿಾಱಿಸಲಾಗ ಕೌಶಿಕನ ॥ ೨೭

ವರಸದಶ್ಯತ್ವದಲಿ ರುಷಿಯುರು
ನೆರೆದರುದ್ಗಾತೃತ್ವಹೋತ್ರದಿ
ನಿರುತ ಪರುತವಿಸಿದನು ವಿಶ್ವಾಮಿತ್ರಮೊದಲಾಗಿ ।
ಇರಿಸಿ ದಿಗುಪಾಲಕರನಾಗಳು
ಕರೆಸಿ ಮಂದಿಯು ನವಗ್ರಹಂಗಳ
ಸ್ಮರಿಸಿ ತ್ರೇತಾಗ್ನಿಯನು ಧ್ಯಾನಿಸಿದಾವಶಿಷ್ಠಮುನಿ ॥ ೨೮

ಹುಱಿಕೊಳಿಸಿ ನರಮೇಧಕಾರ್ಯ್ಯಕೆ
ಪಿರಿದೆನಿಸಿ ವೇದೋಕ್ತಮಂತ್ರದಿ
ನೆರಹಿ ತಾ ಗೀರ್ವಾಣನಾಯಕಮುಖ್ಯನಾಕಜರು ।
ವರಹರಿಶ್ಚಂದ್ರಮನ ಯಾಗದ
ಪರಿವಿಡಿಯ ಕಂಡೆಲ್ಲ ಹರುಷವ
ಧರಿಸಿ ನಿಲಲಿಕೆ ಯಾಗದೀಕ್ಷಿತನಾದನಾಭೂಪ ॥ ೨೯

ಪಠಿಸಿ ಚಾತುರ್ವೇದಮಂತ್ರವ
ನಿರುತಪಶುವಧೆಗಾಗ ವಿಬುಧರು
ಧರಣಿಸುರನಜಿಗರ್ತನಾತ್ಮಜಗಾಗಿ ಬರುತಿರಲು ।
ಬರಲಿಕಾತನ ಕಟ್ಟು ಬಿಟ್ಟುದು
ನಿರುತ ಯೂಪಸ್ತಂಭದೆಡೆಯಲಿ
ಹರುಷಿಸಿಯೆ ಭೂಸುರನು ನುಡಿದನು ಸಕಲವಿಬುಧರಿಗೆ ॥ ೩೦

ಆಗ ಅಜಿಗರ್ತನ ಮಗನು ನನ್ನನ್ನು ವಧಿಸಿದರೆ ದೋಷವು ಬರುವು
ದೆಂದು ಹೇಳುವಿಕೆ.

ಕೊಂದು ಮಿಗೆ ನರಮೇಧಯಾಗವ
ನಿಂದುಮಾಡಲು ನಿಮಗೆ ಹತ್ಯವು
ಬಂದಪುದು ಮಧುಕೈಟಭಾಂತಕನಾಣೆಯೆಂದೆನುತ ।
ಅಂದು ಶೌಚಾಚಮನ ಮಾಡಿಯೆ
ನಿಂದಿದನು ವೇದಾಂಗವೇದ್ಯನ
ವಂದಿಸುತ ಹೊಗಟಿದನು ನಾನಾಶ್ರುತಿಯ ರುಕ್ಕಿನಲಿ ॥ ೩೧

ದೇವದೇವನ ನಿಖಿಳಜೀವರ
ತಾವಱಿದು ಕೈವಲ್ಯವಾಸವ
ನೀವನನು ನೆಱೆ ಸ್ತುತಿಸಿ ತನ್ನಯ ಮತಿಗೆ ಗೋಚರಿಸಿ ।
ದೇವನನು ನೆನೆನೆನೆದು ಮೊದಲ

ಲ್ಲಾ ವಿರಿಂಚಾದಿಗಳು ತುತಿಸುತ
ಭಾವದಲಿ ಭಜಿಸಿದನು ವಿಬುಧರನನಲವೊದಲಾಗಿ ‖ ೩೨

ಅವರವರನಂದಮಳಸೂಕ್ತದ
ವಿವರದಲಿ ಹೊಗಟಲಿಕೆ ನೆರೆದಿಹ
ವಿವಿಧಗೀರ್ವಾಣೋತ್ತಮಾದಿಗಳಖಿಳಮುನಿವರರು ।
ಅವನಿಪನ ಯಾಗದಲಿ ಬೇಳುವ
ಹವಿಸು ಬಂದುದು ಪಶುವಿನಂಗದ
ಹವನದಲಿ ತಮಗಿಂದು ಹೋಯಿತು ಹಸಿವು ನಾಕಜರ ‖ ೩೩

ಆಗ ಸಮಸ್ತದೇವತೆಗಳು ನಾವು ತೃಪ್ತರಾದೆವು ಅವನನ್ನು
ಬಿಟ್ಟುಬಿಡೆಂದು ಹೇಳುವಿಕೆ.

ಅರಸ ಕೇಳ್ಳೈ ನಿನ್ನ ಯಾಗದ
ನಿರುತ ನರಮೇಧದಲಿ ಯಿಾದ್ವಿಜ
ಪರಮಹರುಷವ ತಂದ ಯಜ್ಞೇಶ್ವರನ ಸತ್ಕರಿಸಿ ‖
ಹರುಷಿಸಿದನಂದಾಪ್ರಚೇತನು
ಧರಣಿಪನ ಕೊಂಡಾಡಿ ನಿನ್ನಯ
ವರಕುಮಾರನ ಯಾಗ ಬಂದುದು ಸಕಲಸುರಗಣಕೆ ‖ ೩೪

ಆಗ ಸರ್ವರೂ ಈತನನ್ನು ಸ್ತುತಿಸುವಿಕೆ.

ಎನಲಿಕಜಿಗರ್ತ್ತಮುನಿತನುಜನ
ವಿನಯದಲಿ ವೈದಡವಿ ಭೂಪತಿ
ಯನಿಮಿಷಾದ್ಯರು ಮುಖ್ಯರುಷಿಗಣವೈದೆ ಕೊಂಡಾಡಿ ।
ತನತನಗೆ ಹೊಗಟಲಿಕೆ ಕೌಶಿಕ
ಮುನಿಪ ಹರುಷಿಸಿ ನುಡಿದನಾಗಳು
ತನುಜ ಜನಿಸುವೊಡಿಂತು ಜನಿಸುಗುವಿಾಧರಿತ್ರಿಯಲಿ ‖ ೩೫

ತಾಯಿತಂದೆಗಳಾನುಪಥ್ಯವ
ನೋಯಿಸದೆ ಯಜಮಾನಯಜ್ಞವ

ನಾಯುತದಿ ಪೂರೈಸಿ ಕೊಟ್ಟನು ತನ್ನ ನೆಱಿ ತಿಳುಹಿ ।
ಸಾಯುಲೊಲ್ಲದೆ ಸಕಲನಾಕಜ
ದಾಯುವನು ನೆಱಿ ತುಷ್ಟಿಪಡಿಸುವ
ನೀಯುಪೂರ್ವದ ಪುತ್ರ ದೊರಕಿದೊಡವ ಕೃತಾರ್ಥನಲ್ಲೆ ॥ ೩೬

ಬಂದುದಾಗಳು ರುಷಿಕದಂಬವು
ಚಂದದಲಿ ಕೊಂಡಾಡೆ ಭೂಸುರ
ನಂದನನ ಕಳುಹಿದಪನಾತನ ಪಿತನ ಹೊರೆಗಾಗಿ ॥
ಕಂದ ನಡೆ ನಡೆ ಯೆನಲಿಕಾತನು
ಯೆಂದನಗ್ರದದೇವರುಷಿಯುರಿ
ಗಂದು ವಿನಯುದಲೆಱಗಿ ಬಿನ್ನಹಮಾಡಿದನು ಮುದದಿ ॥ ೩೭

ಆಗ ಋಷಿಪುತ್ರನು ಮಧ್ಯಮನಾಗಿ ನಾನು ಬದುಕಲಾರೆನನ್ನಲು ನನಗೆ ಮಗನಾಗಿರೆಂದು ವಿಶ್ವಾಮಿತ್ರನು ಹೇಳುವಿಕೆ.

ಮಾಱಿದರು ನೆಱಿ ತಾಯಿತಂದೆಗ
ಳೀಱುವಡೆಯುದೆ ತನ್ನಯುಜ್ಞಕೆ
ಮಾಱಿದರು ಯೆನಗೇಕೆ ಹೋಗಲಿ ಯೀಜಗತ್ತಿನಲಿ ।
ಸಾಱಿದೆನು ನಿಮಗಿನ್ನು ಪುಟ್ಟುವೆ
ನೀಱರಿಗೆ ನಡುಪುತ್ರನಾಗಿಯೆ
ತೋಱಿ ಜನಿಸಲ್ಕಲ್ಲ ಜನಿಸಲಿಕೆನ್ನ ತೆಱನಹುದು ॥ ೩೮

ಹಿರಿಯುನಲಿ ಜನಕಂಗೆ ಮೋಹವು
ಕಿಱಿಯುನಲಿ ಕಡುಮೋಹ ಜನನಿಗೆ
ನಿರುತ ಮರುಚಲು ಮಗನು ದೇಸಿಗನಾಗಿ ಚರಿಸುವೆನು ।
ಪರಿಹರಿಪೆನಾತಾವನೀಗಳು
ಹಿರಿದು ಕಿಱಿದಾಗಿಹೆನು ಅಲ್ಲದೆ
ನಿರುತ ಮಧ್ಯಮನಾಗಿ ಬದುಕೆನು ಯೆನಲು ಕೌಶಿಕನು ॥ ೩೯

ಮೆಚ್ಚಿ ತನ್ನಯ ಪುತ್ರನಾಗೆನೆ
ಚೊಚ್ಚಲವೆ ತಾನಹೆನು ಮಾತೆಗೆ
ನಚ್ಚಿ ನಿಂ ಕಡೆ ಹುಟ್ಟಿಹೆನು ಅಲ್ಲದೆ ಮತ್ತೆ ಮಧ್ಯಮದ।
ಕೊಚ್ಚಿ ಬಿಸುಡುವ ತಾವಿಗೆಱಗೆನು
ಕಿಚ್ಚಿನಲಿ ಸುಡಬೇಕು ಮಧ್ಯನ
ನಚ್ಚಲಾಗದದೆನಲಿಕೆ ಮುನಿಪತಿ ಯಧಿಕಕಱರುಷದಲಿ ॥ ೪೦

ವಿಶ್ವಾಮಿತ್ರನು ತನ್ನ ಮಕ್ಕಳನ್ನು ಕರೆದು ಈತನನ್ನು ಜ್ಯೇಷ್ಠಭ್ರಾತನನ್ನಾಗಿ ಭಾವಿಸಿರಿ ಎಂದು ಹೇಳಲು ಅವರ ಅನನುಮತಿ.

ತನ್ನ ಸುತರನು ಕರೆದು ಕೇಳಿದ
ಚೆಣ್ಣ ಜ್ಯೇಷ್ಟಭ್ರಾತನಾಗಿಯೆ
ಮನ್ನಿಸುವಿರೈ ಕಿಱಿಯರಾಗಿಯೆ ನಿಚ್ಚ ನೀವೆನಲು।
ಮನ್ನಿಸೆವು ಯಿಾದ್ವಿಜನ ಸರ್ವಥ
ಮನ್ನಿಸೆವು ನಿವಿಪ್ರಪ್ರಳಾಪವ
ಮನ್ನಿಸೆವು ಜನಜನಿತವೆನಲಿಕೆ ಮುನಿಪ ಕೋಪಿಸಿದ ॥ ೪೧

ಕೋಪಿಸಿಯೆ ತತ್ಸುತರ ನೆಱೆ
ಶಾಪಿಸಲು ನೆಱೆ ನೂಱುಜನಗಳು
ಭೂಪ ಕೇಳೈ ಡೊಂಬರಾಗಿಯೆ ಚರಿಸಿ ಜಗದೊಳಗೆ।
ವ್ಯಾಪಿಸುವುದಗಲದಲಿ ನೀವು ಬಹು
ರೂಪಿನಲಿ ಕಡು ವರ್ಣಸಂಕರದ
ಕೋಪದಲಿ ವರ್ತಿಸುವುದೆಂದಾಸುತನ ಪತಿಕರಿಸಿ ॥ ೪೨

ನೀತಿಯಲಿ ಮುನಿ ಯಿರಲು ಭೂಪತಿ
ಯಾತತುಕ್ಷಣ ಸಕಲವಿಪ್ರರ
ನೋಡು ಕಳುಹಿದ ಸಕಲದಕ್ಷಿಣೆಯಿಂದ ನೆರೆದವರ।

ವ್ರಾತವನು ಮನ್ನಿಸುತ ವರುಣನ
ಭೂತಳೇಶನು ಕಳುಹತಿರಲಿ
ಖ್ಯಾತ ಬಂದನು ಲೋಹಿತಾಶ್ವನು ರಾಜಮಂದಿರಕೆ ॥ ೪೩

ಆಗ ವಿಶ್ವಾಮಿತ್ರರ ಶಾಪ.

ಮಾಸವಾಣಿಖ್ಯಾತನಂಗದ
ದೋಷ ಹರಿಸಲು ಬಳಿಕ ರಾಜ್ಯಮ
ಹೀಶ ಮಾಡಿದನಖಿಳಭಾರತವಂಶಮಧ್ಯದಲಿ ।
ನಾಶಗಂಡರು ಸಕಲಯಾಚಕ
ಭೂಸುರರು ತಮ್ಮಾನುಪಥ್ಯಮ
ಹೀಶ ಗದುಗಿನ ವೀರನಾರಾಯಣನ ಕರುಣದಲಿ ॥ ೪೪

ಸಂಧಿ ಸಂಪೂರ್ಣ.

ಪರಿಶಿಷ್ಟ ೨.

* ಸೂಚನೆ.

ದಂಡಕನ ಕೈಕೊಂಡು ಸಲೆ ಭೂ
ಮಂಡಲವ ಸುಡೆ ದೇವಯಾನಿಯು
ಅಂಡಲೆದು ಮಗುಳಾ [1] ಯಯಾತಿಯೊಳಾಸಕ್ತನವಿರಲು ॥

* ಗ. ಘ. ಜ. ಥ ಗುರ್ತಿನ ಕರ್ಣಾಟಕ ಮಹಾಭಾರತ ಪುಸ್ತಕ ಪ್ರಕಾರ ಆದಿಪರ್ವದ 13-14ನೇ ಸಂಧಿಗಳ ಮಧ್ಯದಲ್ಲಿ ಈ ಸಂಧಿಗಳು ದೊರೆಯುತ್ತವೆ.

1 ಹೆಂಡತಿಯು ಮರುಳಾ, ಗ. ಜ.

ವೃಷಪರ್ವನ ವೃತ್ತಾಂತ

ಕೇಳು ಜನಮೇಜಯ ಧರಿತ್ರೀ
ಪಾಲ ಕ್ಷೀರಾಂಬುಧಿಯೊಳಗ್ಗದ
ಲೋಲರೂಪ ಮುಕುಂದ ಮುರಹರಗಾದನಾಳಾಗಿ ।
ಹೇಟಿಲೇನ್ನೈ ಗರುಡದೇವರ
ಆಳುತನವಾಚಂದ್ರತಾರೆಗ
ಳೊಳೆಯಿಂ ಮಿಗಿಲಾಗೆ ಸೇವಿಪನಂತನಾತನನು ॥ ೧

ಭೀತಿರಹಿತ ಜಿತೇಂದ್ರ ಕರ್ಮ
ವ್ರಾತದಲಿ ನೆಱೆ ಕಾಲನೇಮಿಯು
ಆತಗತಿಬಳವಿಪ್ರಚಿತ್ತಿಯು ಅಂಧಕಾಸುರನು ।
ನೀತಿಗೆಡೆ ಬಟಿಕವರ ರಾಜ್ಯದ
ಭೂತಳದ ಸಪ್ತಾಂಗವೆಲ್ಲವ
ನಾತನಾಳಿದ ಬಹಳದಿನ ವೃಷಪರ್ವನೆಂಬಸುರ ॥ ೨

ಶುಕ್ರಾಚಾರ್ಯರ ಮಗಳಿಗೆ ದಂಡಕರಾಯನ ದರ್ಶನ.

ಆತಗಗ್ಗದ ವರಪುರೋಹಿತ
ನೀತಿವಿದ ಕವಿ ಯಿದ್ದನಾತಗೆ
ಪ್ರೀತಿಯಲಿ ಮಗಳೊಬ್ಬಳಿದ್ದಳು ಶುಭಗುಣಾನ್ವಿತೆಯು ।
ಓತು ತಂದೆಯು ಭಾವಭಕ್ತಿಯು
ನಾತುರದಿ ನೆಱೆ ಮಾಡುತಿರ್ದಳು
ಸೋತು ದಂಡಕನೆಂಬ ನೃಪತಿಯು ತರಳ ಕಂಡೊಮ್ಮೆ ॥ ೩

ದೇವಯಾನಿಯು ದಂಡಕನನ್ನು ಗಂಡನಾಗೆಂದು ಪ್ರಾರ್ಥಿಸುವಿಕೆ.

ವೈಯ್ಯಾ ಯೌವ್ವನಭರದಿ ಕಾಮನ
ಕೈಯ್ಯು ಬಾಧಿಸೆ ಸಹಿಸಲಾಱದೆ [1]
ಅಯ್ಯಗವ್ವೆಗೆ ಹೇಟಿದಾವಂಡಕನೃಪೋತ್ತಮನ ।

---

[1] ಕೊಳಲಿಕಾ, ಗ. ಘ.

ಒಯ್ಯನಿದ್ದೆಡೆಯಱಿತು ಮೃಗಗಳ
ಹುಯ್ಯಲಲಿ ಬೆಳ್ಳಾರಹಬ್ಬುಗೆ
ಗೈಯ್ದಿ ಯಿರಲಾದೇವಮಾನಿಯು ಬಂದು ವಿನಯದಲಿ ॥ ೪

ಗಂಡನಾಗೆನೆ ನಿನ್ನ ತಾ ಕೈ
ಕೊಂಡೆನಾದೊಡೆ ನಿಮ್ಮ ತಂದೆ ಪ್ರ
ಚಂಡಬಲ ಶಾಪಿಸುವ ತನ್ನನು ನಿನ್ನ ಸಂಗವನು ।
ಕೊಂಡು ಬಳಸಲದೇನು ಶಾಪವ
ಕಂಡು ಕೊಡಲಿಕ್ಕಬಲೆಯಾಗಳ
ಕೊಂಡು ಬಳಸಲಧಿಕಗುಣನುದ್ವಾಹಿಕಕೆ ತನಗೆಂದು ॥ ೫

ತನಗೆ ಸಂದುವು ವರುಷ ಸಹಜದಿ
ವಿನುತ ಹದಿನಾಱಾಗಲಿಂದಿಗೆ
ಜನಕ ಪರಿಣಯವೆಸಗಲೊಲ್ಲನು ತನಗೆ ಮಗುಳೊಬ್ಬ ।
ತನುಜೆ ತನುಜಗಳಿಲ್ಲ ವೆಂದಾ
ಜನನಿಯಾಡುವ ಮಾತಗೇಳಿಯೆ
ಜನಕ ಮದುವೆಯ ಮಾಡ ಮನೆಯಲಿ ಮಕ್ಕಳಿಲ್ಲೆಂದು ॥ ೬

ಆವಮಂಗಳಗೇಹ ಸಂಪದ
ವಾವ ಪುಣ್ಯಸ್ತ್ರೀಯ ಸ್ವೈರಣೆ
ಆವುವುತ್ತಮಭಕ್ತಿಯಿಂದ ಪುರಾಣಕಥನಗಳ ।
ದೇವತತಿಯನ್ನಿಳಯಲಾವನು
ನೋವದಿಪ್ಪನು ಮಕ್ಕಳಿಲ್ಲದೆ
ದೇವನೇತಕೆ ಯೆನಲು ಶಂಕರ ತನ್ನ ಸದನದಲಿ ॥ ೭

ಅರಸಿಗಾಗದ ಬಸುಱನಱಿದಾ
ಹರನು ಮಾಡನೆ ಮಗನು ಕರಿಮುಖ
ಪರಮಸುತನೆಂದಾಗ ಗೌರಿಯು ವರನ ಸಂಗಮವ ।

ಪ್ರಾರ್ಥನೆಯಂತೆ ದೇವಯಾನಿಯನ್ನು ದಂಡಕನು ಸ್ವೀಕರಿಸುವಿಕೆ.

ಸರಕುಮಾಡಳೆ ಯೆನಲು ಗಂಗಾ
ಧರನ ನೆನೆಯುತ ದೇವಯಾನಿಯು
ಪರಿಣಯವ ಕೈಕೊಂಡ ಗೃಹ್ಯೋಕ್ತದಲಿ ದಂಡಕನು ॥ ೮

ಶುಕ್ರಾಚಾರ್ಯರು ಈ ವರ್ತಮಾನವನ್ನು ಕೇಳಿ ಕೋಪದಿಂದ ಶಪಿಸುವಿಕೆ.

ಇರಲಿಕತ್ತಲು ಶುಕ್ರದೇವರು
ಬರಲು ತನ್ನಾಲಯಕೆ ತನುಜೆಯು
ಬರವ ಕಾಣದೆ ದೇವಯಾನಿಯು ಸುಳಿವದೇನಾಯ್ತು ।
ವರಸುತೆಯು ದಂಡಕನ ಮುದದಲಿ
ಪರಿಣಯವ ಕೈಕೊಂಡಳೆನಲಿಕೆ
ಹಿರಿದು ಕೋಪವ ತಾಳ್ದು ಶಪಿಸಿದ ಮುಗಳುಹೊಳತಾಗಿ ॥ ೯

ಆದೇಶವೆಲ್ಲ ಸುಟ್ಟುಹೋಗಿ ಅರಣ್ಯವಾಗುವಿಕೆ.

ಉರುಹಿದನು ದಂಡಕನ ದೇಶವ
ನಿರುತಗೌತಮಿವರತಟಾಕದ
ವರೆಗೆ ತತ್ಕ್ಷಣಕಡವಿಯಾಗಲು ಭೂಮಿಯೆಲ್ಲವನು ।

ದೇವದೈತ್ಯರ ಪರಸ್ಪರ ಯುದ್ಧ.

ಉರುಹಲಿಕೆ ಬಹುದಿವಸ ಮುಗಳೆ
ನ್ನಿರಿಸಿಕೊಂಡಿರೆ ದೇವದೈತ್ಯರೊ
ಳೊರಸೊರಸು ಕಡು ಮುಸೆದು ಪುನರಪಿ ಯುದ್ಧ ತೊಡುಗುತಿರೆ ॥

ಯುದ್ಧದಲ್ಲಿ ಸತ್ತವರನ್ನು ಶುಕ್ರನು ಬದುಕಿಸುವಿಕೆ.

ದನುಜರಗಣಿತವತ್ತಿಯೆ ನಾಕಜ
ಜನರಿಗಾಗದು ಮರಣ ಪೂರ್ವದಿ
ವರಸುಧೆಯನುಂಡಿರಲು ದೈತ್ಯರನೆತ್ತುವನು ಶುಕ್ರ ।

ಆಗ ಗುರುಸುತನಾದ ಕಚನು ಮೃತಸಂಜೀವಿನೀವಿದ್ಯೆಯನ್ನು
ಕಲಿಯಲು ಬರುವಿಕೆ.

ವಿನುತಸಂಜೀವಿನಿಯ ವಿದ್ಯದ
ಘನತೆಯಲಿ ಜೀವಿಸುವುದದಱಿಂ
ದಿನವು ಹಲವಾಗಲಿಕೆ ಸುರಗುರುತನುಜ ಭೃಗುಸುತೆಯ ॥ ೧೧

ಮನೆಗೆ ಬಂದರೆ ಹರುಷಪುಳಕದಿ
ವನಿತೆಯಲಿ ಕಚ ಕಲಿತ ಸಂಜೀ
ವಿನಿಯ ವಿದ್ಯೆಯ ಕಲಿಯಲಾಯಕೆ ಕಚನಿಗುಸರಿದಳು ।

ಬಳಿಕ ದೇವಯಾನಿಯು ಕಚನನ್ನು ವರಿಸಲು ನೀನೆನಗೆ ಗುರುವಾ
ದುದರಿಂದ ಒಲ್ಲೆನೆಂದು ಹೇಳುವಿಕೆ.

ವನಿತೆ ತಾ ನಿನಗಪ್ಪೆನೆನಲಿಕೆ
ಅನಿಮಿಷರ ಗುರುಸುತನು ನುಡಿದನು
ತನಗೆ ನೀ ಗುರುವಾದೆ ವೊಲ್ಲೆನು ನಿನ್ನ ಕೂಡೆನಗೆ ॥ ೧೨

ಒಕ್ಕತನವಿರಬಾರದೆನುತಲಿ
ಒಕ್ಕನೊಡಲನು ಬಳಿಕ ಸತಿಯೊಳು
ನಕ್ಕು ಮಾನಸವೋಹದಿಂದಿರಲೊಂದುದಿವಸದಲಿ ।
ರಕ್ಕಸರ ಗುರು ಬಂದು ಶಿಷ್ಯನ
ನೆಕ್ಕಸರದಲಿ ಪಡೆದು ಹೋಮವ
ನಿಕ್ಕಲಿಕೆ ತರೆ ಸಮಿಧೆಗೆಂದಾಕಚನ ಕಳುಹಲಿಕೆ ॥ ೧೩

ಕಚನನ್ನು ಸಂಹರಿಸುವ ಪ್ರಯತ್ನ.

ಅಡವಿಗೈದಲು ದುಷ್ಟದೈತ್ಯರ
ಗಡಣ ನೆರೆದಾಕಚನ ಕೊಂದರು
ಬಿಡದೆ ದಹಿಸಿಯೆ ಆತನಂಗವ ಭಸಿತಮಾಡಿದರು ।

ಕಡುವಿರೋಧವ ಹಿಡಿದು ದೈತ್ಯರ
ಪಡೆಯುಪಾಧ್ಯರ ಪುತ್ರನೀತನು
ಮಡಿದವರ ತಾನೆತ್ತುವತಿಶಯವಿದ್ಯೆಗಲಿತಿಹನು ॥ ೧೪

ಎಂದು ಕೊಂದರು ಕೊಲೆಯ ವಾರ್ತೆಯ
ನಂದು ಕೇಳಿಯೆ ಶುಕ್ರ ಬೇಗದಿ
ಬಂದು ಬೂದಿಯನುಡಿಗಿ ಯೆತ್ತಿದನಱಿದ ಗುರುಸುತನ ।
ಅಂದು ಮೃತಸಂಜೀವಿಯೌಷಧಿ
ಯಿಂದ ಬದುಕಿಸಿ ಮನೆಗೆ ತಂದನು
ಹಿಂದುಗಳೆಯದೆ ಯಿರಲಿಕೊಂದಿನ ಕಚನು ದರ್ಭೆಯನು ॥ ೧೫

ತರಲು ಹೋಗಲು ಮತ್ತೆ ದೈತ್ಯರು
ನೆರೆದು ಕಚನನು ಕೊಂದು ದಹಿಸಿಯೆ
ನಿರುತ ಬೂದಿಯು ಕದಡಿ ನೀರೊಳು ಕುಡಿದರೊಂದಾಗಿ ।
ಇರಲು ಭೃಗು ಕಚ ಬಾರದಿರನೆಂ
ದಱಿದು ದೈತ್ಯರ ವೇದಮಂತ್ರದಿ
ತರಿಸಿ ನಿಗ್ರಹಿಸಿರಲಿಕೆಂದರು ದನುಜರಾಹದನ ॥ ೧೬

ಹೇೞಲಿಕೆ ಯಾಕರುಷಣಂಗಳ
ಕೇಳಿ ಮಾಡಿದ ದೈತ್ಯರಂಗವ
ಜಾಳಿಸಿದನಾಕಚನ ನಿಮಿಷಕೆ ಮುನ್ನಿನಂದದಲಿ ।
ಬಾಲಕನ ನೆಱೆ ಯಿರಿಸಿ ಸಂತಸ
ದೇೞಗೆಯ ನೆಱೆ ಕೊಡುತ ಶಿಷ್ಯನ
ಪಾಲಿಸಿದ ತನ್ನುದರಮಧ್ಯದೊಳರಸ ಕೇಳೆಂದ ॥ ೧೭

ಎನಲು ವೈಶಂಪಾಯುಮುನಿಪಗೆ
ಜನಪ ಬಿನ್ನಹ ಮಾಡಿದಂದವ
ನೆನಗೆ ಕರುಣಿಸು ಕಚನನೇತಕೆ ದೈತ್ಯದಾನವರು ।

ತನುವ ಕೆಡಹಿದರೇನು ಕಾರಣ
ವೆನಗೆ ವಿಸ್ಮಯವೀಗ ತೋಱಿತು
ವಿಶ್ರುತಗುರುಸುತವಧೆಯನೇತಕ್ಕವರು ಮಾಡಿದರು ॥ ೧೮

ತನಗೆ ತಿಳಿದುದ ಮುನಿಪನಾಕ್ಷಣ
ಜನಪತಿಗೆ ಸಂತಸದಿ ನುಡಿದನು
ಜನಪ ಕೇಳಾ ನಿನಗೆ ಪೇೞುವೆ ಪೂರ್ವಸಂಗತಿಯ ।
ದನುಜಮರ್ದನ ಪೂರ್ವಕಾಲದಿ
ವಿನುತಕಪಟದಿ ಸುರೆಯನೆಱೆಯಲು
ದನುಜರತಿಭೀತಿಯಲಿ ಸೈನ್ಯವ ಕೂಡಿ ಧಾೞಿಯನು ॥ ೧೯

ನಿರುತ ಹಾಯುತೆ ಯಿಂದ್ರಲೋಕವ
ನುರುಹಿ ಗಂಧರ್ವಾದಿನಿಕರವ
ತರತರದಿ ನೆಱೆ ಗೆಲಿದು ತಿರುಗಲು ಸುರಪಸಿದಿರಾಗಿ ।
ಹಿರಿದು ಬಾಣದಿ ಕೆಣಕಿ ಕಾದಲು
ನಿರುತ ನುಡಿದನು ದಾನವೇಂದ್ರನು
ಮರಳಿ ಕಪಟದಿ ಹಿಂದೆ ಸುರೆಯನ್ನೆಱೆದು ದಾನವರ ॥ ೨೦

ವರನೃಪರು ತಾವೆನಿಸುವೆಂಥಾ
ಸುರನ ಅಗ್ಗಳಕಾಲನೇಮಿಯು
ವರಮಹಾಬಲವಿಪ್ರಚಿತ್ತಿಯು ಸೈನ್ಯಸಹಿತವರ ।
ಹುರುಳುಗೆಡಿಸಿಯೆ ಬಾಣದಿಂದವೆ
ಹರಿಯು ಮಾಯೆಯ ಮಾಡಿ ಕೆಡಹಿದ
ಪರಿಯು ನಡೆಯದು ಯೆನುತ ದಾನವರಾಯ ಖಡ್ಗದಲಿ ॥ ೨೧

ಹೊಡೆದು ರಥವನು ಛತ್ರವೆಲ್ಲವ
ಕೆಡಹಿ ಪುನರಪಿ ತಿರುಗಿ ಖತಿಯನು
ಹಿಡಿದು ವಜ್ರವ ಕೊಂಡು ಸುರಪತಿ ಕೆಣಕುತಿಂತೆಂದ ।

ನುಡಿದೊಡೇನಹುದಿನ್ನು ತನ್ನೊಳು
ಕಡೆಗೆ ಸಾಧಿಸಿ ಕಾದಿ ಗೆಲಿದರೆ
ಕಡು ಸಮರ್ಥನು ಬಿಡದೆ ಗಱಹದಿರೆನುತ ತಾ ಹೊಯ್ದ ॥ ೧೨

ಘಾಯವಾಗಲು ಮಂತ್ರದಿಂದವೆ
ಘಾಯವನು ಸಂತೈಸಿ ತಾ ಪೂ
ರಾಯುಘಾಯುವ ಮಾಡಿ ಸುರಪನ ಗೆಲಿದು ಯಮಪುರವ ।
ಮಾಯೆಯುಲಿ ತಾನೈದಿ ಪೂರ್ವದ
ದಾಯುವೈರವಿದೆಂದು ದಾನವ
ರಾಯನಱುಹಿಯೆ ತಿರುಗಿ ಬಂದನು ತನ್ನ ಪಟ್ಟಣಕೆ ॥ ೧೩

ಹಿಂದೆ ದಿವಿಜರು ಸಕಲಸೈನ್ಯದ
ವೃಂದವನು ಸಂಹರಿಸಿ ಕೊಂಡೈ
ತಂದರಾಕ್ಷಣ ದಾನವೇಂದ್ರನ ದೇಶದೆಡೆಗಾಗಿ ।
ಬಂದ ಹದನನು ಕೇಳಿ ರಾಕ್ಷಸ
ನಂದು ಮಂದಿಯು ನೆಱಹಿ ಕೊಂಡೈ
ತಂದು ಕಾದಿದ ಹಲವುದಿನ ಭೂಪಾಲ ಕೇಳೆಂದ ॥ ೧೪

ಕಾದುತಿರಲೊಂದಿವಸ ಸುರಪತಿ
ವಾದದಲಿ ಗಜವೇಱಿ ತತ್ಕ್ಷಣ
ಮೇದಿನಿಗೆ ಹೊಸತೆನಿಸಿ ವಜ್ರವ ಕೊಂಡು ಕಾದಿದನು ।
ಹೋದೆ ಹೋಗಿನ್ನೇನುತ ರಾಕ್ಷಸ
ರಾದಿಯನು ನೆಱೆ ಸದೆದು ಪುನರಪಿ
ಭೇದಕೋಪದಿ ದಾನವೇಂದ್ರನ ಉರವ ನೆಱೆ ಹೊಯ್ದ ॥ ೧೫

ಯಕ್ಷನಾಯಕ ಸಕಲರಾಕ್ಷಸ
ಪಕ್ಷರನು ನೆಱೆ ಹೊಯ್ಯೆ ತಾ ದು
ರ್ಭಿಕ್ಷದಲಿ ನೆಱೆ ಭೋಜ್ಯ ಮಾಡುವ ತೆಱದಿ ಮಗುಳ ಸುತ ।

ಯಕ್ಷನನು ಸಂಹರಿಸಿ ಸಾಸಿರ
ಚಕ್ಷುಸನು ನೆಱೆ ಯೆಸೆಯೆ ಸಾಸಿರ
ಚಕ್ಷು ಮುಱಿಯುತ ಹೊಯ್ದನಾಗಳ ಸಕಲಸೈನಿಕರ ॥ ೨೬.

ಶುಕ್ರನನ್ನು ಕುರಿತು ವೃಷಪರ್ವನ ಪ್ರಾರ್ಥನೆ.

ಅಂದು ತತ್ತಱಿದಱಿದು ದಾನವ
ವೃಂದವನು ದಿವಿಜೇಂದ್ರನೆಸೆಯಲು
ಬಂದನಾಕ್ಷಣ ಪಶ್ಚಿಮಾದ್ರಿಗೆ ಭಾನು ಹರುಷದಲಿ ।
ಸಂದರಾತ್ರಿಯೊಳಲ್ಲಿ ಗುರುಗಳ
ಚಂದನಿಳಯಕ್ಕೈದಿ ಚರಣ
ಕ್ಕಂದು ನಮಿಸುತ್ತಾಗ ಬಿನ್ನವಿಸಿದನು ವೃಷಪರ್ವ ॥ ೨೭

ಗುರುವೆ ಬಿನ್ನಹ ಸೈನ್ಯವೆಲ್ಲವ
ನಿರುತದಲಿ ಸಂಹರಿಸಿ ಸುರಪತಿ
ತಿರುಗಿದನು ಬಯಲಾಯ್ತು ನಮ್ಮಯ ಸೇನೆ ನೀವಿರಲು ।
ಪರಮಗುರು ನೀವಿಂದು ಸೇನೆಯ
ಕರುಣದಲಿ ನೆಱೆ ಕಾಯಬೇಕೆನ
ಲರಸನನು ಸಂತೈಸಿ ಭಾರ್ಗವ ನಿಮಿಷಮಾತ್ರದಲಿ ॥ ೨೮

ನಿಳಯಕತ್ತಲು ಕಳುಹಿ ಭೂಪನ
ಲಲಿತಸೇನೆಯನೆತ್ತಲೋಸುಗ
ತಳಕೆ ಗುರುವೈತರಲಿಕಿನನುದಯಾದ್ರಿಗೈತಂದ ।
ಬಟಿಕ ಮೃತಸಂಜೀವಿವಿದ್ಯೆಯ
ಬಟಿಕೆಯಿಂದಲಿ ಯೆತ್ತಿ ಗುರುವಿರೆ
ಮೊಲಿದು ಸಾಹಸಿ ಬಂದು ಕೆಣಕಿದ ಮೆತ್ತೆ ಸುರಕುಲವ ॥ ೨೯

ಬಂದು ಕೆಣಕಲು ಸುರರು ಪುನರಪಿ
ಅಂದು ದಾನವಬಲವ ಕೆಡಹ
ಲ್ಕಂದದಲಿ ಗುರುವೇಕೆ ಸುರಗುರುಸುತನು ಕಂಡದಕೆ ।

ಇಂದು ಯೀವಿದ್ಯೆಯನು ನೆಱೆ ಕಲಿ
ತಿಂದು ಬಹೆನೆಂದಿತ್ತಲೈತರೆ
ಬಂದು ದಿವಿಜರ ಸತ್ತರೆಲ್ಲರನೀತನೆಬ್ಬಿಸುವ ॥ ೩೦

ಇಂದು ಭಾರ್ಗವಶಿಷ್ಯನೀಕಚ
ನೆಂದು ರಾಕ್ಷಸವೃಂದ ಕೆಡಹಲು
ಬಂದು ಯಿವನೆತ್ತುವೆನದೀತನ ಕೆಡಹಬೇಕೆನುತ ।
ಕೊಂದು ತಿರುಗಲಿಕತ್ತಲಾಯುಷ
ವೊಂದು ಯೆರಡೆತ್ತಿದನು ತತ್‌ಕ್ಷಣ
ಮುಂದೆ ಕೆಲಸಕೆ ಕಳುಹೆ ಕಚನನು ಕಂಡು ರಾಕ್ಷಸರು ॥ ೩೧

ಭಂಡನಿವ ತಿರುಗಿದನು ಸುರಗುರು
ಚಂಡರೊಳು ಕೂಡುವನು ಗುರುವಿನ
ಗಂಡು ವಿದ್ಯವನಿಲ್ಲಿ ಕಲಿಸುವ ದಿವಿಜರಗ್ಗಳಗೆ ।
ಭಂಡತನವನೆ ವಿದ್ಯದ ಬಲದಿ
ದಂಡಿಯಿಂದೈತಂದು ಕಾದಲು
ಕಂಡು ತಾವಿದಿರಾಗೆ ಕಚನನು ಹಿಡಿದು ನಿಮಿಷದಲಿ ॥ ೩೨

ಕಚನ ಸಂಹಾರ ಮತ್ತು ಉಜ್ಜೀವನ.

ಕೊಲಲಿಕಾಕ್ಷಣ ಶುಕ್ರನಱಿಯದೆ
ಬಟಿಕ ದರ್ಭೆಯು ತಾರನೆನುತಲಿ
ತಿಳಿದು ನೋಡಿದ ಮಂತ್ರದಿಂದವೆ ತರಿಸಿ ಘಾತುಕರ ।
ತಿಳಿಯು ಹೇಳಿದರಲ್ಲಿ ಮಾಡಿದ
ನೆಲೆಯನಱೆ ತಾ ಕೇಳಿ ಶಿಷ್ಯನ
ಕೆಲಕೆ ತೆಗೆದನು ನಮ್ಮ ಸಂಜೀವಿನಿಯ ಬಲದಿಂದ ॥ ೩೩

ಇಂತು ತಾ ಕೊಲೆಯಾಯ್ತು ದೈತ್ಯರ
ಸಂತತಿಯು ನೆಱೆ ಕಚನ ಕೊಂದರು
ಪಜ್ತಿಯಲಿ ರಾಕ್ಷಸರು ಪುನರಪಿ ವಧೆಯ ಮಾಡಿದರು ।

ಮುಂದೆ ಕೇಳ್ಳ ಕಥೆಯು ಕಚನನು
ಸಂತತವು ವೃಷ ಕೊಲಲು ಜಠರದ
ಪಜ್ಜಿಗೇಹದೊಳಿರಿಸಿ ಸಲಹಿದನರಸ ಕೇಳೆಂದ ॥ ೩೪

ಇರಿಸಲಾತಗೆ ನುಡಿದ ನಿನ್ನನು
ಮರಳಿ ತೆಗೆವೆನು ತನಗೆ ಹೇಬುವು
ದರಿಗಳಱಿಯದೊಲೆನಲಿಕೆಂದನು ವರುಷ ಹಲವಾಗೆ।
ಗುರುವೆ ತನ್ನನ್ನಿರಿಸಿಕೊಂಡಿರೆ
ಹಿರಿದು ಬಱಲಿದೆನೆನಲು ಶುಕ್ರನು
ಮರಳಿ ನುಡಿದನು ತನ್ನಜಠರವನೊಡೆಯುಬಹುದೆಂದು ॥ ೩೫

ದೇವಯಾನಿಯು ಕಚನನ್ನು ವರಿಸಲು ಆತನು ಅಂಗೀಕರಿಸದೆ ಇರುವಿಕೆ.

ಸತ್ತತನ್ನನ್ನೆತ್ತುವಂತಾ
ಮೃತ್ಯುಹರದೌಷಧಿಯನಿತ್ತಾ
ಸತ್ತ ಶಿಷ್ಯನ ತೆಗೆದು ಮೃತಸಂಜೀವವಮಂತ್ರವನು।
ಇತ್ತು ಲಾಲಿಸುತಿರಲು ಕವಿಸುತೆ
ಮತ್ತೆ ನುಡಿದಳು ಕಚಗೆ ತನ್ನಯ
ಚಿತ್ತವಲ್ಲಭನಾಗು ಎನಲಿಕೆ ನುಡಿದನನುಮತವ ॥ ೩೬

ನೀನು ತನ್ನೊಡಹುಟ್ಟಿದಾಕೆಯು
ತಾನು ನಿನ್ನನುಜಾತನೆನಲಿಕೆ
ಮಾನಿನಿಯು ಕಡು ಕೋಪದಿಂದವೆ ಶಪಿಸಿ ಗುರುಸುತನ।
ನೀನು ನಮ್ಮಲಿ ಕಲಿತ ವಿದ್ಯಕೆ
ಹಾನಿಯಾಗುವುದೆನಲು ಭಾರ್ಗವ
ಮಾನಿನಿಗೆ ಮರಳೆಂದ ನೀನುಱಿ ನೃಪರ ಕೂಡುವುದು ॥ ೩೭

ದೇವಯಾನಿಯು ಶಾಪ.

ಇವನ ವಿದ್ಯೆವದಿವಗೆ ಫಲಿಸದೆ
ಭುವನದೊಳಗಿರಲಿವನ ಕೈಯಲಿ

ವಿವರಿಸಿಯು ಕಲಿತವರಿಗಾಗುವುದೆಂದು ಗುರುಸುತನ |
ಅವರು ಕಳುಹಲು ಬಂದು ತನ್ನಯ
ಭವನದಲಿ ಸುರಗುರುವ ಕಂಡುಱೆ
ಹವಣ ಹೇೞಿದ ತನ್ನ ಪೂರ್ವಾಪರದ ಸಂಗತಿಯ ‖ ೩೮

ಹೇೞಿ ಮೃತಸಂಜೀವಮಂತ್ರವ
ಲಾಲಿಸಿಯೆ ತಮ್ಮೆಕ್ರೈಯ್ಯಾಗಱುಹಿದ
ಮೇಲೆ ಯಿರಲಾದೇವಯಾನಿಯು ಬಯಕೆ ಬಱಿಡಾಯ್ತು |
ಕಾಳಗವು ಹಿರಿದಾಗೆ ದೈತ್ಯರು
ಜಾಳಿಸಲಿಕೊಂದಿವಸ ದೈತ್ಯರ
ಬಾಲೆ ಕರ ಕಳವಳಿಸುತೊಂದಿನ ಶುಕ್ರಸುತೆಯನ್ನು ‖ ೩೯

ದೇವಯಾನಿಯು ಸಂಗಡ ಶರ್ಮಿಷ್ಠೆಯ ಜಲಕೇಳಿ.

ಇರಲಿ ಕಾವೃಷಪರ್ವನಾತ್ಮಜೆ
ಸುರನದಿಯು ಜಲಕೇಳಿಗೋಸುಗ
ಕರೆಸಿದಳು ತಾ ದೇವಯಾನಿಯನಂದು ಶರ್ಮಿಷ್ಠೆ |
ಉರುವಣಿಸಿ ಗಂಗಾಪ್ರವಾಹದೊ
ೞರುತ ಸತಿಯರು ಕೂಡಿಯಾಡಲು
ಹಿರಿದು ಬೞಲಿಯೆ ದೇವಯಾನಿಯು ತಡಿಗೆ ಸಾಱಿದಳು ‖ ೪೦

ಆಗ ದೇವಯಾನಿಯು ಶರ್ಮಿಷ್ಠೆಯು ಸೀರೆಯನ್ನುಡುವಿಕೆ

ನೀಱೆ ತಾನಂದುತ್ತಮೋತ್ತಮ
ಸೀಱೆಯೆರಡನು ತೆಗೆದು ಬೇಗದಿ
ನಾರಿಯುಟ್ಟಳು ವಸ್ತ್ರಯುಗವನು ಪರಮಹರುಷದಲಿ |
ನೀರ ತಡಿಯಲ್ಲಿರಲಿಕಾಕೆಯು
ಸೀಱೆಯನು ಶರ್ಮಿಷ್ಠೆ ಮುಱಿಸಿಯೆ
ನಾರಿಯುಟ್ಟಿರೆ ಯಮಳವಸ್ತ್ರವ ಕಂಡು ತಾ ಸುಲಿದು ‖ ೪೧

ಆಗ ಆಕೆಯು ನೀರಲ್ಲಿ ದೊಬ್ಬಿ ಹೋಗುವಿಕೆ

ಕೊಂಡು ಶುಕ್ರನ ಮಗಳ ಬೇಗದಿ
ಕೊಂಡದಲಿ ಕೆಡೆ ನೂಕಿ ಕೋಪದಿ
ಕೊಂಡು ಹೋದಳು ಮನೆಗೆ ವೃಷಭನ ಮಗಳು ಸೀಱೆಯನು ।

ಆಗ ದೇವಯಾನಿಗೆ ಯಯಾತಿಯು ದರ್ಶನ.

ಮಿಂಡಿ ನೀರೊಳಗಿರಲು ಮಱುದಿನ
ಕಂಡನಗ್ಗದನೃಪ ಯಯಾತಿಯು
ಕಂಡು ನೀನಾರೆನಲು ದೈತ್ಯರ ಗುರುವಿನಾತ್ಮಜೆಯು ॥ ೪೨

ಎಂದಳಾನಿನ್ನ ಮಳವಧುವಹೆ
ನಿಂದೆನಗೆ ನೀನುಟ್ಟಸೀಱೆಯ
ನೊಂದನೀಯೆನಲಾಯಯಾತಿಯು ವನಿತೆಗಿಂತೆಂದ ।
ಹಿಂದೆ ದಂಡಕನರಸಿಯಾಗಲಿ
ಕಂದು ದಹಿಸಿದನಾತನಂಗವ
ತಂದೆ ನಿಮ್ಮಯ ಶುಕ್ರನಾಜ್ಞೆಯೊಳಹೆನು ಪತಿಯೆಂದ ॥ ೩೪

ದೇವಯಾನಿಯು ಕೋಪದಿಂದಿರಲು ನಿನ್ನಿಷ್ಟವನ್ನು
ಮಾಡುವೆನೆಂದು ಶುಕ್ರನ ಪ್ರತಿಜ್ಞೆ.

ತೊಟ್ಟನಾಗೊಂದಮಳವಸ್ತ್ರವ
ನುಟ್ಟಳಾಕೆಯು ಹೋಗಿ ಮನೆಯಲಿ
ಬಿಟ್ಟು ಹಱೆಯಂಬರವನುಟ್ಟಳು ದುಗುಡಭಾರದಲಿ ।
ಉಟ್ಟಿರಲಿಕಾಜನಕ ಬಂದನು
ನಿಷ್ಠೆಯಲಿ ದೇವಾರ್ಚನಾದಿಯ
ಮುಟ್ಟ ಮಾಡಿಯೆ ಮಗಳ ಕರೆಸಿದನಾಗ ಭೋಜನಕೆ ॥ ೪೪

ಕರೆಸಲಿಕೆ ವರದೇವಯಾನಿಯು
ಹಿರಿದು ಕೋಪದಿ ತಂದೆ ಯತ್ತಲು
ತಿರುಗದಿರೆ ಭೃಗು ಬಂದಸೆಬ್ಬಿಸಿ ಮಗಳ ಕೇಳಲಿಕೆ ।

ಸರಸಿಜಾಕ್ಷಿಯು ಕೆರಳಿ ಕೋಪದಿ
ಹಿರಿದು ನುಡಿದಪಳೆಂದು ತನ್ನನು
ವರಯಯಾತಿಗೆ ಕೊಟ್ಟು ನಿನ್ನಯ ದೈತ್ಯನಾಯಕನ ॥ ೪೫
ಮಗಳ ತನಗಾತೊತ್ತುಗೆಲಸಕೆ
ಹುಗಿಸಿ ಬಱುವಱಿ ಯಿತ್ತುದಾದರೆ
ಮಗಳು ನಿನಗಹೆ ನಿನ್ನ ಸಂಗಡ ಭೋಜನಂಗಳನು ।
ಸೊಗಿಸಿ ಮಾಡುವೆನಲ್ಲದಿದ್ದರೆ
ಮಗುಳೆ ಮರಣವನೈದಿ ಹೋಹೆನು
ವಿಗಡ ನನ್ನಿ ಮಾತ ಮಾಡದೆ ಯಿರಲು ತನಗದಱ ॥ ೪೬
ಗೊಡವೆ ಯಿಲ್ಲೆನೆ ತಂದೆ ಶುಕ್ರನು
ನಡುಗಿ ಮಗಳಿಗೆ ಮಾತ ಪಾಲಿಸಿ
ಹಿಡಿದನಾಕೆಯ ನುಡಿಯ ಕೈಕೊಳುತಾತನಿಂತೆಂದ ।
ಪೊಡವಿಯೊಳು ನಿನ್ನನು ಯಯಾತಿಗೆ
ಕೊಡುವೆ ದೈತ್ಯನ ಮಗಳ ತೊತ್ತನು
ಬಿಡದೆ ಮಾಡುವೆನೆಂದು ತಿಳುಹಿದನಾತ್ಮಪುತ್ರಿಯನು ॥ ೪೭
ತಾಯೆ ಬಾರೌ ತಂಗಿ ಯೆನ್ನುತ
ಲಾಯತಾಕ್ಷಿಯ ತಂದು ಭೋಜನ
ದಾಯತವ ನೆಱೆ ಮಾಡಿ ದೈತ್ಯನ ಗೇಹಕೈದಿದನು ।
ರಾಯ ಕೇಳ್ದೈ ದೈತ್ಯರಾಯನ
ನಾಯಕರು ಕಡಿಖಂಡವಾದರು
ಘಾಯದಲ್ಲಮರೇಶನಿಂದವೆ ಮರಳಿ ನೊಂದಿರಲು ॥ ೪೮

ಶುಕ್ರನು ವೃಷಪರ್ವನ ಮುಂದೆ ಸ್ವಾಭಿಪ್ರಾಯವನ್ನು ಹೇಳಿದುದು.

ದನುಜರಗಣಿತರಾಗ ಸುಮ್ಮನೆ
ಮನದಿ ನೊಂದರು ಶುಕ್ರದೇವರು
ಮನೆಗೆ ಬರಲಿಕೆ ದೈತ್ಯವರ್ಗದಿ ಸಹಿತ ವೃಷಪರ್ವ ।

ತನುವ ಚರಣಕೆ ಚಾಚಿ ತನ್ನಯ
ಅನುವರದ ಪರಿವಾರ ವೆಡಯಿತು
ಅನಿಮಿಷರ ಕೈಯಿಂದ ನೀವಿದನೆತ್ತಬೇಕೆಂದ ॥ ೪೯

ನವಗೆ ನೂಕದು ನಿನ್ನ ಗೇಹದ
ವಿಮಳಪೌರೋಹಿತ್ಯ ನಿನ್ನಯ
ಕುಮತಿ ಕನ್ಯಕೆ ದೇವಯಾನಿಯ ಸುರಿದು ನೀರೊಳಗೆ ।
ಮಮತೆ ಯಿಲ್ಲದೆ ನೂಕಿ ಹೋದಳು
ಶ್ರಮವನಱಿಯದೆ ಯೆನಲು ಕವಿಗುಱಿ
ಸಮತೆಯಲಿ ಕೈಮುಗಿದು ಬಿನ್ನಹಮಾಡಿದನು ನಡುಗಿ ॥ ೫೦

ಏನುಮಾಡುವೆನಿದಕೆ ತನ್ನಯ
ಮಾನಿನಿಯು ಮಗಳಿಂಗೆ ಯೆನಲಿ
ಕ್ಕಾನಿಶಾಚರಗೆಂದ ನಿನ್ನಯ ಮಗಳು ತೊತ್ತಾಗಿ ।
ನೀನು ಯಿತ್ತೊಡೆ ದೇವಯಾನಿಗೆ
ಆನಿರೂಢಿಯು ಯುದ್ಧರಂಗದ
ದಾನವರನೆತ್ತುವೆನು ಸತ್ವರ ನಿಮಿಷಮಾತ್ರದಲಿ ॥ ೫೧

ಅದಕ್ಕೆ ವೃಷಪರ್ವನ ಅನುಮತಿ.

ಎನಲು ಖರಲೇಸೆಂದು ಮಗಳನು
ದನುಜನಿತ್ತನು ಹತ್ತುಸಾವಿರ
ವನಿತೆಯರನೊಡಗೂಡಿ ತನುಜೆಯ ಕಳಿಯನೊಡಬಡಿಸಿ ।
ಕನಲಿಕೆಯ ನೆಱೆ ಬಿಟ್ಟು ಶುಕ್ರನ
ತನುಜೆ ತಂದೆಯ ಕೈಯ್ಯಲಾಗಳು
ತನಗೆ ಪರಿಣಯ ಮಾಡಿಕೊಂಡಳು ವರಯಯಾತಿಯನು ॥ ೫೨

ಹರುಷದಲಿ ಶರ್ಮಿಷ್ಠೆ ಸಹಿತವೆ
ಕರಿಪುರಕೆ ಬಂದಷ್ಟ ಶೋಭೆಯ
ಪರಿಣಯವನಳವಡಿಸ ಹೊಕ್ಕಳು ರಾಜಮಂದಿರವ ।

ಪುರದ ಬಾಹೆಯುಲಂದು ಬಿಟ್ಟಳು
ಹಿರಿದು ಬೀಡನು ರಾಕ್ಷಸೇಂದ್ರನ
ವರಸುತೆಯು ಪುರದೊಳಗೆ ಹೊಕ್ಕಳು ಶುಕ್ರನಂದನೆಯು ॥೫೩

ಇರಲು ಪೂರ್ವದ ಕಚನ ಶಾಪದ
ನಿರುತದಲಿ ವರದೇವಯಾನಿಯು
ನರರ ಹೆಂಡತಿಯಾದಳದು ಪೌರಾಣಿಸಿದ್ಧವಲ ।
ಇರಲಿಕೊಂದಿನ ವರಯಯಾತಿಯು
ಹಿರಿದು ಪಾರುಧಿಗೆಂದು ಕಾನನ
ಕುರುವಣಿಸಿ ಪೊರಮಡಲು ಹೊಡೆದುವು ಕೋಟಿನಿಸ್ಸಾಳ ॥ ೫೪

ವರಮಹಾನಿಸ್ಸಾಳತಂಬಟ
ಪಿರಿದು ಕಹಳೆಯು ನಾದ ಭೇರಿಯು
ಪರಮಡಿಂಡಿಮನಾದ ಡೌಡೆಮೃದಂಗಮದ್ದಳೆಯು ।
ಹಿರಿದು ಭೂ ಕಂಪಿಸಲು ನಾದದ
ವರರವದಲಾರ್ಭಟೆಯು ಲೋಕದ
ವರಜನದ ಕಿವಿ ಛೀಱಿಡಲು ನೃಪ ಹೊಱವಂಟನಾಲಯುವ ॥ ೫೫

ಬಳಿಕಲೈದಿತು ತುರಗಕೋಟಿಯು
ನೆಲೆಯು ತೊಂಬತ್ತಾಱು ಬಳಿಕವೆ
ನೆಲೆಯು ತಿಳಿಯಲು ಗಜಘಟಾವಳಿ ಕೋಟಿಮೂವತ್ತು ।
ತಿಳಿದು ಕೇಳ್ವ ವರರಥಾವಳಿ
ನೆಲೆಯು ತಾ ಪದಿನಾಱುಕೋಟಿಯು
ನೆಲೆಯು ತಿಳಿಯೆ ಪದಾತಿ ತಾನುಱಿ ಕೋಟಿ ಯಿಾಱೆಂಟು ॥ ೫೬

ಸಕಲಸೇನಾನಿವಹದಿಂದವೆ
ಚಕಿತನೃಪ ಹೊಱವಂಟು ನಾನಾ
ವಿಕಟಕಾನನದೊಳಗೆ ಸೂಕರವ್ಯಾಘ್ರಮೊದಲಾಗಿ ।

ಸಕಲಮೃಗಗಳತಾನು ಬಿಲ್ಲಿನ
ಮುಕುತಿಯಲಿ ಸಂಹರಿಸಿ ಭೂಪತಿ
ಸುಖಸಮೂಹದೊಳಿದ್ದು ಪಾಳೆಯಕ್ಕೈದಿದಾಕ್ಷಣದಿ ॥ ೫೭

ಕೂಳುಕಾಣಿಕೆ ಯಿತ್ತು ತತ್ಕ್ಷಣ
ವಾಳುಗಳ ಪರುಠವಿಸಿ ಕಳುಹಲು
ಪಾಳೆಯವು ತಾ ತಿರುಗಿ ಬಿಟ್ಟುದು ವರಯಯಾತಿಯದು ।
ಮೇಲೆ ಗಜತುರಗಾದಿಸರ್ವವ
ಲೋಲತಾಣದಿ ಕಟ್ಟಿ ಭೂಪತಿ
ಲೀಲೆಯಿಂ ಪ್ರಿಯರೊಡನೆ ಭೋಜನ ಮಾಡುತಿರುತಿರಲು ॥ ೫೮

ಮಱುದಿವಸ ಪಾರುಧಿಯನಾಡಿಯೆ
ವರಮಹಾಪಾಳೆಯವ ಹೊಕ್ಕರು
ಹರುಷದಲಿ ವರಭೋಜನಂಗಳ ಮಾಡಿ ಸುಖದಿಂದ ।
ಇರುತ ಕಳೆದರು ವರವಿನೋದದ
ಚರಿತ ಪಾರುಧಿಯಿಂದ ಬಹುದಿನ
ವಿರುತಿರಲು ಬಹುದಿನದ ಮೇಲೊಂದಿನದ ರಾತ್ರಿಯೊಳು ॥ ೫೯

ನೆಱೆಯ ಕಾಲದ ವೃಷ್ಟಿ ಸುಱಿಯಲು
ಪರಿಹರಿಸಿ ಪಾರುಧಿಯ ಭೂಪತಿ
ಮರಳುತಲೆ ಮಱೆಗಂಜಿ ಹೊಕ್ಕನು ದೈತ್ಯನಂದನೆಯು ।
ನಿರುತ ಮಂದಿರದೊಳಗೆ ಬರಲಿ
ಕ್ಕರಸನನು ಸತ್ಕರಿಸಿ ದನುಜೆಯು
ನೆರೆದಳಾತನ ಕೂಡಿ ರತಿಕೇಳಿಯಲಿ ಮನವೊಲಿದು ॥ ೬೦

ನೆರೆಯಲಿಕೆ ದಿನದಿನದಿ ಗರ್ಭವು
ನಿರುತವಾಗಲಿಕತ್ತ ಶುಕ್ರನ
ವರಕುಮಾರಿಗೆ ಗರ್ಭವಾಯಿತು ವರಯಯಾತಿಯಲಿ ।

ವರುಷಯೆರಡಕೆ ದೇವಯಾನಿಗೆ
ನಿರುತದಲಿ ಜನಿಯಿಸಿದರಿಬ್ಬರು
ವರಕುಮಾರರು ಯದುಪುರೂರವರಾಗ ಭೂಮಿಪರು ॥ ೬೧

ಜನಿಸಿದನು ಶರ್ಮಿಷ್ಠೆಗಾಗಳು
ವಿನಯದಲಿ ಬಲುಹುಳ್ಳಮತ್ತಾ
ಜನಪಪುರುಮಹಿಮಂಡಲೇಶ್ವರನೆನಿಪಸುತನೊಬ್ಬ ।
ಜನಿಸಿ ದಿನದಿಂ ಬಳೆವುತಿರ್ದರು
ಜನಪಪುತ್ರರು ತಮ್ಮ ಜನನಿಯ
ಮನೆಮನೆಗಳಲಿ ಯಿರಲಿಕೊಂದಿನ ನೃಪನ ಚಾವಡಿಗೆ ॥ ೬೨

ಬರಲು ತತ್‌ಕ್ಷಣ ವರಕುಮಾರನು
ನಿರುತದಲಿ ಶರ್ಮಿಷ್ಠೆಯಾತ್ಮಜ
ಹಿರಿದು ನೃಪತಿಯ ತೊಡೆಯನೇಱಲು ಕಂಡು ಕವಿಸುತೆಯು ।
ಕೆರಳಿ ನೋಡಿಯೆ ಹೊರೆಯಲಿದ್ದರ
ಕರೆದು ಕೇಳಿದಳಿವನದಾರ್ಯ
ವರಕುಮಾರಕನಾರಸುತನಿವನೆಂದು ಕೋಪದಲಿ ॥ ೬೩

ದೇವಿ ವರಶರ್ಮಿಷ್ಠೆ ಬಸುಱೊಳು
ಭೂವಧೂವಲ್ಲಭಗೆ ಜನಿಸಿದ
ನೀವು ಆತಗೆ ಪಿರಿಯ ತಾಯಿಗಳೆನಲು ಜಠರದಲಿ ।
ನೋವುತಲಿ ಉರಿ ನೆಗೆಯೆ ಭೂಪನ
ದೇವಯಾನಿಯು ಬೈಯ್ಯುತಾಗಳು
ಪಾವಕನ ತೆಱದಿಂದ ನಡೆದಳು ತಂದೆಯೆಡೆಗಾಗಿ ॥ ೬೪

ದಾನವರ ಗುರುವಿಂಗೆ ಕಡು ದು
ಮ್ಮಾನದಲಿ ಗೋಟಿಟ್ಟು ತನಗೆಯು
ಹಾನಿಯಾಯಿತು ತೊತ್ತುಯಿದ್ದೆಡೆಯಲ್ಲಿ ನೃಪ ಸುತರ ।

ಮಾನನಿಧಿ ಪುಟ್ಟಿಸಿದ ತನ್ನಯ
ಸೂನುಗಳಗತಿಚಲುವಪುತ್ರನ
ಆನಿಶಾಚರಮಗಳ ಸಂಗವ ಮಾಡಿದಾನೃಪನ ॥ ೬೫
ನೀನು ವೃದ್ಧನ ಮಾಡಿ ಶಾಪವ
ನಾನರೇಂದ್ರಂಗೀವುದೆನಲಿಕೆ
ಮಾನನಿಧಿ ಬೇಡೆಂದು ನುಡಿದನು ತನ್ನ ನಂದನೆಗೆ ।
ಹಾನಿಯುಹುದತಿಮಥನವೆನಲಿಕೆ
ಆನಿರೂಢಿಯು ಸುದತಿ ಜನಕಗೆ
ಏನುವಱಿಯದೆ ಮೇಲುಗಾಣದೆ ಖತಿಯು ಭಾರದಲಿ ॥ ೬೬

ಯಯಾತಿಗೆ ಶುಕ್ರನ ಶಾಪದಿಂದ ವೃದ್ಧತ್ವಪ್ರಾಪ್ತಿ.

ತನ್ನ ಹಾನಿಯು ತಾನು ನೋಡದೆ
ಚೆನ್ನೆ ದೇಹವ ಬಿಡುವೆನೆನಲಿಕೆ
ಮನ್ನಿಸಿಯೆ ಪಿತ ಶಾಪವಿತ್ತನು ಕೋಪಭರದಿಂದ ।
ಭಿನ್ನವಾಗಿಯೆ ಮಾಡುತಾಕ್ಷಣ
ನನ್ನಿಯಿಲ್ಲದೆ ವೃದ್ಧನಾಗಿರು
ನಿನ್ನ ತನುವಿನ ಇಂದ್ರಿಯಂಗಳು ನಿನ್ನ ಬಿಟ್ಟಿರಲಿ ॥ ೬೭
ಎಂದು ಶಪಿಸಿಯೆ ಮಗಳ ಸೆಱಗಿನ
ಲಂದು ಕಟ್ಟಿದ ಕವಿಯು ಪುನರಪಿ
ಬಂದು ಹೊಕ್ಕಳು ದೇವಯಾನಿಯು ತನ್ನ ಮಂದಿರವ ।
ಮುಂದುಗಾಣದೆ ಪತಿಯು ಶಪಿಸಲು
ಬಂದುದಾಕ್ಷಣ ವೃದ್ಧವಯಸಿನ
ದಂದುಗವು ನೆಱೆ ಯಾಯು ಭೂಪತಿಗೆ ನಿಮಿಷಮಾತ್ರದಲಿ ॥ ೬೮

ಯಯಾತಿಯು ತಾರುಣ್ಯಕ್ಕಾಗಿ ದೇವಯಾನಿಯು ತಂದೆಯನ್ನು ಪ್ರಾರ್ಥಿಸುವಿಕೆ.

ಇಂತುವಿರೆ ಮುನ್ನೂಱುವತ್ಸರ
ವೆಂತರಿಸೆಲಾಸತಿಯುರಿಬ್ಬರು
ಕಂತುವಿನ ಸರಳಿಂದ ನೋವುತ ಶುಕ್ರನಂದನೆಯು ।

ಚಿಂತಿಸುತ ಮನದೊಳಗೆ ವಿಗತ
ಭ್ರಾಂತಿಯಲಿ ನಡೆತಂದು ತನ್ನಯ
ಕಂತುಶರದಾಕಡುರಹಸ್ಯವ ತಾತಗುಸುರಿದಳು ॥ ೬೯

ಎಂತು ಸ್ವೈರಿಸಬಹುದು ತನ್ನಯ
ಕಾಂತನಿಲ್ಲದೆ ವೃದ್ಧತನವನು
ಅಂತರಿಸಿ ತಮಗೀವ್ರದಾತಂಗಧಿಕಯೌವ್ವನವ ।
ಕಂತುವಿನ ಪ್ರತಿರೂಪ ಹೋಲುವ
ಜಂತ್ರ ಶುದ್ಧವ ಮಾಡಿ ಕೊಡುವುದ
ದೆಂತು ಸ್ವೈರಿಸಬಹುದು ಸತಿಯರು ಪುರುಷನಿಲ್ಲದೊಡೆ ॥ ೭೦

ತರುಣಿಯರಿಗತಿವಿಷವು ವೃದ್ಧನು
ನಿರುತದಲಿ ದಾರಿದ್ರ್ಯಗತಿವಿಷ
ಪರಿಕಿಸಲು ಮಿಗೆ ಕದನ ವಿಷವಾಗೋಷ್ಠಿ ಮೂರ್ಖರಿಗೆ ।
ಹರಿಕಥಾಮೃತ ವಿಷಸಮಾನವು
ಸುರಸಭೋಜನವಾಅಜೀರ್ಣಕೆ
ನಿರುತವಿಷವಾಗಿಹುದು ತಥ್ಯವು ಜನಪ ಕೇಳೆಂದ ॥ ೭೧

ಕಱೆಯದಿಹ ಹಸುವಿದ್ದು ಕಷ್ಟವು
ಹರುಬಿಗೊದಗದ ಪತಿಯ ಯೌವ್ವನ
ಕಿಱುಮೆಳೆಯು ತಾ ಪೋವಗೋವಿನ ಪರಿಯು ತಾನಾಗಿ ।
ಇರವಿನಂತಿಹುದೆನಲು ಭೃಗುಕುಲ
ವರಲಲಾಮನು ಮಗುಳ ಮಾತನು
ನೆಱೆ ಪರೀಕ್ಷಿಸಿ ದೇವಯಾನಿಗೆ ಮಗುಳ ಯಿಂತೆಂದ ॥ ೭೨

ನಿನ್ನ ಪುರುಷಂಗಿನ್ನು ಪುನರಪಿ
ತನ್ನ ಪೂರ್ವೋನ್ನತಿಯ ವಯಸುಗ
ಳನ್ನು ಬಾರವು ಮರಳಿ ನೃಪತಿಯ ಪುತ್ರರಾದವರು ।
ನನ್ನಿ ಯಿಲ್ಲದೆ ತಮ್ಮ ವಯಸನು

ನಿನ್ನ ಪುರುಷಂಗಿತ್ತೊಡಹುದೆನೆ
ಮನ್ನಿಸುತಲಾವೃದ್ಧವಯಸನು ಕೊಂಡೊಡಾತ್ಮಜರು ॥ ೩೩

ನಿಮ್ಮ ಯೌವ್ವನವನ್ನು ತಂದೆಗೆ ಕೊಡಿರೆಂದು
ತಾಯಿಯು ಮಕ್ಕಳಿಗೆ ಹೇಳುವಿಕೆ.

ನೆರೆವೆನಂಗಜರೂಪನೆನಲಿಕೆ
ತರಳ ತನ್ನಾಲಯಕೆ ಮರಳಿಯೆ
ಕರೆದು ಯದುಪೂರವರಿಗೆಂದಳು ಜನನಿ ದುಗುಡದಲಿ ।
ತರಳರಿರ ವಾರ್ಧಿಕ್ಯಗೊಂಬುದು
ಮರಳಿ ನಿಮ್ಮಯ ಪ್ರಾಯದಂಗವ
ನರಸಗೀವುದದೆನಲಿಕವದಿರು ಯಿಬ್ಬರಾಕೆಯನು ॥ ೩೪
ಉಸುರಿದರು ತಮ್ಮನುವ ಜನನಿಗೆ
ವಸುಧೆಯಲ್ಲೀ ಮರ್ತ್ಯಜಾತಿಗೆ
ಹಸನು ಯೌವ್ವನಕಾಲ ತಮಗಿದು ನೀವು ನುಡಿದಿರಲ ।
ಮಿಸುಕಲಾರೆವು ವೃದ್ಧತನವ
ನ್ನೆಸಗಿಹುದು ಮುಂದದಕೆ ತಮಗಿದು
ನಸಿವ ಮುಪ್ಪಿನ ದೇಹ ತಾನದು ನಿಮಗೆ ಕೃಪೆಯಿಲ್ಲ ॥ ೩೫
ತಾಯಿ ಮಕ್ಕಳ ವಯಸಕೆಡಿಸುವ್ರೊ
ಡಾಯುಲುಂಟೇ ಲೋಕವೂಖಖೊ
ಳಾಯುವತಿ ಕೋಪಿಸಿಯೆ ನೃಪತಿಯು ಕೂಡೊಡಂಬಡಿಸಿ ।

ಆಗ ಮಕ್ಕಳಿಗೆ ತಾಯಿಯು ಶಾಪ.

ಆಯತಾಕ್ಷಿಯು ರಾಯನಾಜ್ಞಾ
ದಾಯದಲು ಶಪಿಸಿದಳು ಯದುಗಳ
ರಾಯಪದವನು ನಿಮ್ಮ ಸಂತಾನಂಗಳತಿಬಖಡು ॥ ೩೬
ಪಟ್ಟಯೋಗ್ಯರು ಆಗಬೇಡೆಂ
ದಿಟ್ಟಳವರಿಗೆ ತಾಯಿ ಶಾಪವ
ನೆಟ್ಟನಾಪೂರುವನ ವಂಶವು ಮ್ಲೇಚ್ಛ ಜಾತಿಯಲಿ ।

ಪುಟ್ಟಲೆಂದಾದನುಜಪುತ್ರಿಗೆ
ಪುಟ್ಟದನ ಕರೆತರಿಸಿ ನುಡಿದಳು
ನೆಟ್ಟನಾತಂದೆಯೊಳಗೀ ವಾರ್ಧಿಕ್ಯವಾದುದನು ॥ ೭೭

ಇಂದು ನೀ ಕೈಕೊಂಡು ಯೌವ್ವನ
ದಂದವನು ನೆಱೆ ಯಿತ್ತು ಯಿರಲಾ
ಮುಂದೆ ಕೊಡುವೆನು ನಿನಗೆ ದೇಹಾಂತರದ ವೇಳೆಯಲಿ ।
ಕಂದ ಕೇಳ್ಯ ನೀನು ನೃಪತಿ ಪು
ರಂದರನ ಪುರಕ್ಕೈದುವಾಗಳು
ನಿಂದಿರಿಸಿ ನಿನಗೀವ ಯೌವ್ವನಸಿರಿಯು ಸಡಗರವ ॥ ೭೮

ಎನಲು ಪುರುವು ಮಹೀಶಗಾಗಳು
ವಿನಯದಲಿ ಬಿನ್ನವಿಸಿ ನುಡಿದನು
ತನುವಿನೊಡೆಯರು ನೀವು ನಿಮ್ಮೊಳು ತಾನು ವಂಚಿಸೆನು ।
ಜನನಿವಾಕ್ಯವ ಮೀಱಲಾಱೆನು
ಮನವೊಲಿದು ನೀವಿತ್ತುದೇ ಸುಖ
ತನುವಿನಾವಾರ್ಧಿಕ್ಯವಾದುದ ಕೊಟ್ಟು ಯೆನ್ನಸುವ ॥ ೭೯

ಉಱುಹುವುದು ಯೆನೆ ಕೇಳಿ ಹರುಷದಿ
ನಲಿವುತಿತ್ತಪರಾಗ ವರವನು
ಎಲೆ ಪುರುವೆ ನಿನ್ನಯ ವಂಶಕಾಗಲಿ ರಾಜ್ಯದುದ್ಭವವು ।
ಇಳೆಯು ಮೇಲತ್ಯಧಿಕದಿಂದವೆ
ಬಲುಹಿನಲಿ ಭೂತಳವನಾಳಿಯೆ
ಗೆಲುವುದಹಿತರನೆಂದು ವರವನು ಕೊಟ್ಟರಾಕ್ಷಣಕೆ [1] ॥ ೮೦

ಕರೆಸಿದನು ತಾ ದೇವಯಾನಿಯು
ನಿರುತಮತದಲಿ ದನಜಸುತೆಯನು
ಕರೆಸಲಿಕ್ಕೈತರಲು ಪೇಟ್ದಳು ಶುಕ್ರನಂದನೆಯು ।

1 ಯದುವನು ಬೈದರಾಕ್ಷಣಕೆ, ಶ.

ನಿರುತ ತನ್ನೀತನುಜರಧಮರು
ವರಯಯಾತಿಯು ವೃದ್ಧವಯಸನು
ನಿರುತ ಪತಿಕರಿಸದಿರೆ ಕರೆದೆನು ನಿನ್ನ ನಂದನನ ॥ ೮೧

ಕರೆದು ತಾನೀ ಮಾತ ಹೇಳಲು
ಹಿರಿದು ಹೊಂಪುಳಿಯೋಗಿ ತನುಜನು
ನಿರುತ ಪತಿಕರಿಸಿರಲು ಭೂಪತಿ ಮುದದಿ ವರವಿತ್ತು ।
ಹರಸಿ ಕೊಟ್ಟನು ಮುಂದೆ ರಾಜ್ಯವ
ಹಿರಿದು ಕೋಪಿಸಿ ವಧುವಿಗಾಕ್ಷಣ
ನಿರುತ ಶಾಪವನಿತ್ತನೆಂದಳು ಶುಕ್ರನಂದನೆಯು ॥ ೮೨

ಎನಲಿಕಾಶರ್ಮಿಷ್ಠೆ ಕೇಳಯೆ
ವಿನಯದಲಿ ಭೂಪತಿಗೆ ನುಡಿದಳು
ತನುಜರಱಿಯದೆ ಮಾತನೆಂದರದೇಕೆ ಶಪಿಸಿದಿರಿ ।
ತನುಜರಿವರವರೊಳಗೆ ಭೇದವೆ
ಜನಪ ಬೇಕ್ಕೈಸೆನಲು ಕೇಳಯೆ
ಕನಲಿ ನುಡಿದಪನಧಮತನುಜರ ಮಾತದೇಕೆಂದ ॥ ೮೩

ಎಂದ ಮಾತನು ಕೇಳಿ ಶುಕ್ರನ
ನಂದನೆಯು ಶರ್ಮಿಷ್ಠೆಗೆಂದಪ
ಳಿಂದವರ ಮಾತೇಕದೆಂದಳು ಸುಭಗಸುಖಿ ನೀನು ।
ಅಂದದಕೆ ಶರ್ಮಿಷ್ಠೆ ಹರುಷದ
ವೃಂದದಲ್ಲೋಲಾಡಿ ಭೂಪತಿ
ಯಂದು ಪುರುವನು ಹೊಗಳಿ ಯದುವನು ಬೈದು ಕೈಕೊಂಡ ॥

ಯಯಾತಿಯ ತಾರುಣ್ಯ.

ಪುರುವಿನಂಗದ ಪೂರ್ವವಯಸಿನ
ಇರವ ನೆಱೆ ಕೈಕೊಂಡು ಪುರುವಿಗೆ
ಯಿರಿಸಿದನು ತನ್ನ ಪರವಯಸಿನ ಜರೆಯ ದೇಹವನು ।

ಪೆರುತವಿಸೆಲಾಕ್ಷಣವು ತಮ್ಮಯ
ಪುರುಷ ಪ್ರಾಯತನಾಗೆ ಯಿಬ್ಬರ
ಪರಮಹರುಷವನೇನನೆಂಬೆನು ದೇವದಾನವರ ॥ ೮೫

ಪುರುವಿಗೆ ತಾರುಣ್ಯಲಾಭ.

ಅರಸನನು ಬಹುಕಾಲ ಭೋಗಿಸೆ
ಹರುಷದಬ್ಧಿಯೊಳಾಯಯಾತಿಯು
ನಿರುತ ತನ್ನಯ ಜರೆಯ ದೇಹವ ಕೊಂಡು ಮೃತನಾದ ।
ಧರಿಸಿದನು ಪುರು ತನ್ನ ಮುನ್ನಿನ
ಪರಮಯೌವ್ವನಸಿರಿಯನಾಕ್ಷಣ
ಹರಿಯಲೀ ಭೃಗುಶಾಪಕಾರಣವೀಧರಿತ್ರಿಯಲಿ ॥ ೮೬

ಹಿರಿಯರಾಶೀರ್ವಾದ ಸಂತತ
ದೊರಕಲಿಕೆ ಪುರುಗಾದಪರಿಯೀ
ನರರ ಶಾಪವು ಯದುವಿಗಿಂದೆಂತಹುದು ಧರಣಿಯಲಿ ।
ನಿರುತ ಯದುಸಂತತಿಗೆ ರಾಜ್ಯೋ
ತ್ಕರುಷವಿಲ್ಲೈ ನಿಮ್ಮ ಪುರುವಿನ
ವರನೃಪಾನ್ವಯಕಾಯ್ತು ರಾಜ್ಯೈಶ್ವರ್ಯವಿಹಪರದ ॥ ೮೭

ಯದುಗಳನ್ವಯದಲ್ಲಿ ಜನಿಸಿದ
ಪದುಮನಾಭನು ನೃಪರ ಪದವನು
ಮುದದಿ ಕೊಟ್ಟನು ನಿಮಗೆ ಸಂತತರಾಜ್ಯವಿಭವವನು ।
ಮುದದೊಳರ್ಜುನದೇವನೊಳು ನೆಱೆ
ತ್ರಿದಶವಂದಿತಸೇವೆಗೈದಿದ
ವಿದಿತಗದುಗಿನ ವೀರನಾರಾಯಣನ ಮನಮುಟ್ಟಿ ॥ ೮೮

ಸಂಧಿ ಸಂಪೂರ್ಣಂ.

ಯಯಾತಿಯು ಇಂದ್ರಲೋಕಗಮನ.

ಕೇಳು ಜನಮೇಜಯ ಧರಿತ್ರೀ
ಪಾಲ ನಿಮ್ಮ ಯಯಾತಿ ತನ್ನಯ
ಬಾಲಕನ ಕರೆದಿತ್ತು ತತ್ಕ್ಷಣ ವೃದ್ಧವಯಸುವನು ।
ಜಾಳಿಸಿದ ಮಗಗಂದು ಯೌವ್ವನ
ದೇಟಿಗೆಯ ನೆಱೆ ಯಿತ್ತು ತನ್ನಯ
ಕಾಲಕಂದಾ ಅಪರವಯಸುವ ಕೊಂಡು ಬೇಗದಲಿ ॥ ೧

ಪರಮಗಂಗಾದ್ವಾರಕೈದಿದ
ಹಿರಿದುಕಾಲಕೆ ಹರಿಪದಾಂಬುಜ
ನಿರುತನಾಗಿಯೆ ವರವಿಮಾನದಲಿಂದ್ರನೋಲಗಕೆ ।

ಯಯಾತಿಯು ತನ್ನ ತಪಃಫಲವನ್ನು ಇಂದ್ರನನ್ನು ಕೇಳುವಿಕೆ.

ತೆರಳಿ ತನ್ನಯ ತಪದ ಸಿರಿಯನು
ಮೆರಳಿ ಮಗುಳುಸುರಿದನು ಪುನರಪಿ
ಸುರಪತಿಯು ಕೇಳಿದನು ತದನುಷ್ಠಾನಸಂಗತಿಯ ॥ ೨

ಫಲವ ಪರಿಸುತ್ತಿರಲು ಕೋಪಿಸಿ
ಕುಲಿಶಧರನುಸುರಿದನು ನಿನ್ನಯ
ಬಲುತಪವ ನಾನುಸುರಲಱಿಯೆನು ಫಲವ ಕೇಳುವೊಡೆ ।

ಇಂದ್ರನ ಅಪ್ಪಣೆಯಂತೆ ಶಿವನನ್ನು ಕೇಳುವಿಕೆ.

ಅಲಸದೆಯುದ್ಭ್ರದಲಿ ತಮ್ಮಯ
ಹೊಂಬಿಲ ಮೇಲಂತಪ್ಪಶೂಲಿಯ
ಪೊಟಲಿಗೈದುವುದಕ್ಕೆ ಕೇಳುವುದಾತ್ರಿಲೋಚನನ ॥ ೩

ನಿನ್ನ ತಪಫಲ ವೆನಲಿಕಾಕ್ಷಣ
ಮನ್ನಿಸಿಯೆ ತಪಲೋಕಕೈದಿಯೆ
ಪನ್ನಗಶ್ರೀ ಭೂಷಣಾಂಗನ ಕಂಡು ಬಿನ್ನವಿಸೆ ।

ತನ್ನ ತಪಸಿನ ಫಲದ ಸಿರಿಸಂ
ಪನ್ನತೆಯನುಸುರಲಿಕೆ ಆತನ
ಮನ್ನಿಸಿಯೆ ನೀನೆಂದಮಾತನು ಪೇೞಲಾನಱಿಯೆ ॥ ೪

ಶಿವನ ಅಪ್ಪಣೆಯಂತೆ ಬ್ರಹ್ಮನನ್ನು ಕೇಳುವಿಕೆ.

ನೃಪ ನಿದಾನವ ಕೇಳುವೊಡೆ ನೀ
ತಪದ ಫಲವನ್ನಾವಿರಂಚಿಯು
ನುಪಚರಿಸಿ ಕೇಳೆಂದು ಕಳುಹಿದನಾಯಯಾತಿಯನು ।
ತಪದ ಲೋಕದಿ ಸತ್ಯಲೋಕಕೆ
ಅಪಸರಿಯರಾನೃಪನ ರಥದಿಂ
ನಿಪುಣೆಯರು ಕೊಂಡೊಯ್ದು ನಿಂದರು ಬ್ರಹ್ಮನಿದಿರಿನಲಿ ॥ ೫

ಇರಿಸಲಿಕೆ ಬಂದಾಯಯಾತಿಯು
ಸರಸಿರುಹಸಂಭವನ ಕಾಣುತ
ಚರಣಕೆಱಗಿಯೆ ನಿಂದು ಬಿನ್ನಹಮಾಡಿದನು ವಿಧಿಗೆ ।
ಧರಣಿಯಲಿ ತನ್ನಂತೆ ಯಜ್ಞವ
ನೆಱೆಯೆ ಮಾಡಿದನಲ್ಲಿದಾರೆನೆ
ಕೆರಳಿ ನೋಡಿದನಾವಿರಿಂಚಿಯು ನೃಪಯಯಾತಿಯನು ॥ ೬

ಆಗ ಬ್ರಹ್ಮನಕೋಪ.

ನಿನ್ನ ಯಜ್ಞದ ಹದನದೇನೆನೆ
ಮುನ್ನ ಮಾಡಿದ ಸೂರ್ಯವಂಶದ
ಚೆನ್ನರಿದೆ ಪದಿನೆಂಟು ಸಾಸಿರ ಸಗರಮೊದಲಾದ ।
ನಿನ್ನ ಪರಿಯಲಿ ಧರ್ಮ ಕೆಡುಗರ
ನಿನ್ನ ಪರಿಯಂತಱಿಯೆಸೀಗಳು
ನಿನ್ನ ಧರ್ಮವ ನೀನು ಕೆಡಿಸಿದೆ ಹೊಗೞಿಯನವರತ ॥ ೭

ಮನುಜಪತಿ ನೀ ಹೋಗು ಧರಣಿಗ
ದೆನಲಿಕಾಕ್ಷಣ ನೃಪವಿಮಾನವ

ಕನಲಿ ಕೆಡಹಲಿಕಾಯಯಾತಿಯು ನಡುಗಿ ಬೇಡಿದನು ।
ವನಜಸಂಭವ ತನ್ನ ಗಾವಿಲ
ತನವ ನೋಡದೆ ನೀವು ನಿಮ್ಮಯ
ಘನತೆಯನು ಮೆಱೆದೀಗ ಕೊಡುವುದು ತನಗೆ ಉತ್ತಮರ ॥ ೮

ಸಂಗವಾಗಲಿ ದೇವ ತನಗೀ
ಭಂಗವಾಗದ ಗರ್ವ ದೊರಕಿದ
ಕಿಂಗಿತವ ಕರುಣಿಪುದು ಪೂರ್ವದ ಪಾಪಸಂಗತಿಯ ।

ಆಗ ಪ್ರಾರ್ಥಿಸಲು ವರದಾನ.

ಕಂಗಳಱಿಯುವದೆನಲಿಕಾಗಳು
ಅಂಗಜನ ಹಿರಿಯಣ್ಣ ನುಸುರಿದ
ಮಂಗಳಾತ್ಮಕನಾಗಿ ಕಮಲಜನಾಯಯಾತಿಯೊಳು ॥ ೯

ನೀನು ಪೂರ್ವದಿ ರಾಜಮದದಲಿ
ಕಾನನಕ್ಕಯು ಮೃಗದ ಕೇಳಯ
ತಾನಕೈದಲು ಮೇಘವೆದ್ದುದು ಭೂಮಿಲಂಬದಲಿ ।
ಆನಿರೂಢಿಯ ಮಳೆಯು ಕೈಕೊಳೆ
ನೀನು ತಿರುಗಿದಿ ಬೆಳಗಲಂದಾ
ಸೇನೆ ನೆಱೆ ಕಂಗೆಡಲು ಮುಂದಣ ತೊತ್ತಿನಾಲಯವ ॥ ೧೦

ಕಂಡು ಪೋಗೆ ಶರ್ಮಿಷ್ಟೆ ನಿನ್ನನು
ಕೊಂಡು ಬಳಸಲು ನೀನು ಸತಿಯಳ
ಹೆಂಡತಿಯ ನೆಱೆ ಮಾಡಿ ಮಕ್ಕಳ ಪಡೆದ ಕಾರಣದಿ ।
ಭಂಡವಾಯಿತು ಗರ್ವಗಿರಿ ಭೂ
ಮಂಡಲಕೆ ಕಡು ಪಾಸಿ ಗರ್ವವ
ಕೊಂಡು ಬಳಸಲು ಕೆಡೆವನುತ್ತಮಲೋಕಕೈದುತಲು ॥ ೧೧

ಇದಕೆ ಶೇಷವು ನಿನ್ನ ಪುರುವಿನ
ಸುದತಿ ಯೆಂಬಳ ಕಡೆಯ ತವುರಲಿ
ಕದನಗರಿಗಳು ಪುಟ್ಟೆ ಪಡೆವರು ಸ್ವರ್ಗ್ಗಪದವಿಯನು ।
ಅದಕೆ ನೀನಂಜದಿರು ಮರಳಾ
ತ್ರಿದಶಲೋಕವು ನಿನಗೆ ಶಾಶ್ವತ
ಪದುಮನಾಭನ ಚರಣ ನಿನಗಹುದರಸ ಕೇಳೆಂದ ॥ ೧೦

ಧರಣಿಗೈದಿಯೆ ಕೇತುಮಾಲದ
ಪರಮಖಂಡದ ಮಧ್ಯದುಪವನ
ವಿರಲು ಬಂದಪನಂದು ಕಂಡನದೊಬ್ಬ ಭೂಸುರನ ।
ಧರಣಿಪತಿ ವೈಯ್ಯಿಕ್ಕಿ ಕೇಳಿದ
ಪರಮಹಂಸರು ಚರಿಸುತಿಪ್ಪಾ
ವರವರಾಶ್ರಮವಾವುದೆನಲಿಕೆ ವಿಪ್ರನಿಂತೆಂದ ॥ ೧೩

ಪರಮಭಾರತಖಂಡಮಧ್ಯದಿ
ನಿರುತ ಭಾರತಕ್ಷೇತ್ರಭೂಮಿಯು
ನರನರಾಯಣರಿಪ್ಪ ವನದಲ್ಲೊಂದುದೇಶದಲಿ ।
ಹರಿಕಥಾಮೃತ ಕೇಳುತಿಪ್ಪರು
ಹರುಷದಲಿ ಮಾಂಧಾತಸಿಬಿನೃಗ
ನರಪರಜಸಾಪರ್ಣಿಸಗರರು ದುಂದುಮಾರುಗಳು ॥ ೧೪

ಕೇಳುವರು ವರ್ಣಾಶ್ರಮಂಗಳ
ಲೋಲಚರಿತವ ನಕುಲಯುತಿವರ
ಭಾಳಲೋಚನನೆಂಬ ಶ್ರೀದೂರ್ವಾಸಮುನಿಯಿಂದ ।
ಕೇಳು ನಡೆ ನೀನವರ ಸಂಗಡ
ಹಾಳಹುದು ನಿನ್ನಧಿಕಗರ್ವವ
ನಾಲಿಸೆಂದೆನೆ ಬಂದನಲ್ಲಿಗೆ ವರನೃಪೋತ್ತಮನು ॥ ೧೫

ನಾನಾಧರ್ಮಸ್ವರೂಪಕಥನ.

ಬರಲು ಮನ್ನಿಸಲಾತನಾತಗೆ
ಹಿರಿದು ಪ್ರತ್ಯುತ್ಥಾನ ಮಾಡಿಯೆ
ಪರಮಭಕ್ತಿಯೊಳಿರಲು ಹೇಳದರಾತಗೊಲವಿನಲಿ ।
ನಿರುತ ನಾನಾಪುಣ್ಯರಾಸಿಯು
ನೆರವೇಱಿಗೆ ತಂದಿರಿಸಿ ಬ್ರಾಹ್ಮಣ
ವರಸತಿಯು ಬಸುಱಿಂಗೆ ಹಾಕಿದುದು ಹತ್ತುತಿಂಗಳಿಗೆ ॥ ೧೬

ಜನಿಸಿ ಜಾತದ ಕರ್ಮವಾಗಲಿ
ಕನಿತುಹನ್ನೆರಡಾದ ದಿನದಲಿ
ಜನಕಜನನಿಗಳಿಂದ ಹೆಸರಂ ಪಡೆದು ಜೀವಿಸಲು ।
ದಿನವೆಱಿತು ಉಪನಯನವಾಗಲು
ತನುಜನಿಗೆ ಪದಿನಾಱುವತ್ಸರ
ದಿನ ಸವೆಯಲಿನ್ನಬರ ಶಾಖೆಯಲಿರುತ ಪರಿಣಯವ ॥ ೧೭

ಎಸಗಿ ಷಟ್ಕರ್ಮದಲಿ ನೆಱೆ ಜೀ
ವಿಸುವ ವತ್ಸರವಾಱು ದಶಕವ
ನುಸುಳಿ ವಾನಪ್ರಸ್ಥದಿಂದವೆ ತನ್ನ ಮಾನಿನಿಯು ।
ಎಸಗಿ ಕೈವಿಡಿದಿರ್ದು ವಿಷಯವೆ
ವಸುಧೆ ಮೆಚ್ಚಲು ಪುತ್ರನಿಕರಕೆ
ಹಸುಗೆ ಮಾಡಿಯೆ ಹತ್ತುವರುಷವು ತನ್ನ ಮಾನಿನಿಯು ॥ ೧೮

ಬೆನ್ನಲಾಕೆಯು ಕೊಂಡು ನಿಚ್ಚತ
ನನ್ನಿಯಿಲ್ಲದೆ ಯಾಯವಾರದಿ
ಮನ್ನಿಸುತದೊಬ್ಬತಿಥಿಗಿಕ್ಕುತಲೇಕಭುಕ್ತದಲಿ ।
ತನ್ನ ಪರಮೌಪಾಸನಾಗ್ನಿಯ
ಭಿನ್ನವಿಲ್ಲದೆ ಬೇಳ ರಾತ್ರಿಯ
ಕನ್ನೆಯಲಿ ವಿಜಿತೇಂದ್ರಿಯಂಗಿದು ಬದುಕು ಲೋಕದಲಿ ॥ ೧೯

ತಂದು ಪುತ್ರನ ಕೈಯ್ಯಲಿತ್ತಾ
ಚಂದ್ರವದನೆಯನುಳಿದು ಬಳಿಕಾ
ಬಂದು ಸದ್ಗುರುರಾಜನಂಘ್ರಿಯ ಭಜಿಸಿ ಪರಗತಿಯ ।
ಮಂದಿರವ ಸಾಱಲಿಕೆ ದೇವಕಿ
ನಂದನನ ನೆಱೆ ಸರ್ವಜಗತಿನ
ತಂದೆಯೆಂಬನ ಸಾಱಿ ಸನ್ಯಾಸಾಶ್ರಮಂಗಳನು ॥ ೨೦

ಆವನೊಬ್ಬನು ತನ್ನಿವೃತ್ತಿಯ
ಕಾವಿನಲಿ ನೆಱೆ ರಾಹುಪರ್ವದಿ
ಭಾವದಲಿ ಭೂಸುರಗೆ ವೊಂದೇ ಧೇನುದಾನವನು ।
ಆವ ಮಾಡುವನವನು ಕೃಷಿಯುಹ
ನಾವಿದಗ್ಧಗೆ ಜನಿಸಿ ಬೆಳದತಿ
ಜೀವಿಸುತ ಭೂಸುರರಿಗಿಳೆಯನು ಬಿತ್ತಿ ಕೊಡುತಿರಲು ॥ ೨೧

ಆತಗಹುದೈ ಬಳಿಕ ಮುಂದಕೆ
ನೀತಿಯಲಿ ತಾ ವೈಶ್ಯಜಾತಿ
ವ್ರಾತದಲಿ ಜನಿಸುವನು ನಾನಾಗುಣದ ರಾಶಿಯಲಿ ।
ಭೂತಳದೊಳಿರುತಲ್ಲಿ ಧನಗಳ
ವ್ರಾತದಲಿ ಬದುಕುವನು ಬದುಕುತ
ಪ್ರೀತಿಯಲಿ ಭೂಸುರರ ತನುಜಗೆ ಪೂರ್ವಕರ್ಮವನು ॥ ೨೨

ಮಾಡಿಸಿದ ವರ ವೈಶ್ಯನೈದುವ
ರೂಢಿಯಲಿ ಜನ್ಮವನು ರೂಢಿಪ
ನೋಡೆ ನೊಡೀವಿಪ್ರನೊಬ್ಬಗೆ ವರವಿವಾಹವನು ।
ಮಾಡಲಿಕೆ ಭೂಸುರರು ಜನ್ನಕೆ
ನೀಡುವನು ತನ್ನುತ್ತಮಾಂಗವ
ರೂಢಿಯಲಿ ಹದಿನೆಂಟು ಜಾತಿಯ ಜೀವಪರಿವಿಡಿಯ ॥ ೨೩

ಮಾಡಲಿಕೆ ತಮ ತಮ್ಮ ಜಾತಿಯು
ಕೇಡಗಾಂಬರು ಹೊಲೆಯನೊಮ್ಮೆಯು
ಪಾಡಲಿಕೆಯರವಿಂದನಾಭನ ನಾಮಮಾತ್ರದಲಿ ।
ರೂಢಿಸಿ ಯೆನುತ ಚರ್ಮಕಾಱರ
ಗೂಡಿನಲಿ ಜನಿಸುವನು ಬ್ರಾಹ್ಮರ
ನೋಡಿ ಪಾದತ್ರಾಣವೀಯ್ಯಲು ರಜಕಜಾತಿಯಲಿ ॥ ೨೪

ಕೂಡುವನು ಬಟ್ಟೆಕವನು ವಿಪ್ರರ
ನೋಡಿ ವಸ್ತ್ರವನೊಗೆಯೆ ಭಿಲ್ಲರ
ಜಾತಿಯಲಿ ಜನಿಸುವನು ಜನಿಸಲಿಕವನು ಮೇಳೊಮ್ಮೆ ।
ಕಾಡಿನಲಿ ಭೂಸುರರ ಭಯವನು
ನೋಡಿ ಮಾಣಿಸೆ ಕುಂಬಜಾತಿಯ
ಲಾಡುವನು ಆಕುಂಬನೊಬ್ಬಗೆ ಪೊಂದುಕಂಬಳಿಯ ॥ ೨೫

ಭೂಸುರಂಗದನೀಯ್ಯೆ ಬಟ್ಟೆಕವ
ನೀಸವನು ನರಕಂಬಿಯಾದುದು
ಬೀಸಣಿಗೆ ಪೊಂದುವನು ಗ್ರೀಷ್ಮದ ರುತುವಿನೆಡೆಗಳಗೆ ।
ಭೂಸುರಂಗವನೀಯೆ ಆಟವುದು
ಈಶನಾಜ್ಞೆಗೆ ಯೊಳವನು ಜನಿಸುವ
ದೇಶದೇಶವ ತೊಳಲಿ ಕೊಂಬನು ದೇಹದೊಳವನು ಭೂಸುರನ॥

ಕಾಣುತವೆ ಕೈಮುಗಿಯೆ ತನ್ನಯ
ಪ್ರಾಣವಿತ್ತಿದಾ ಬಟ್ಟೆಕ ಜನಿಸುವ
ವರ್ಣದಾದ್ವಿಜನ ಕುಲದಿಂ ದೊಬ್ಬ ಭೂಸುರಗೆ ।
ಜಾಣಿನಲಿ ಪೊಬ್ಬ ಮಳ ವಿಪ್ರಗೆ
ಕ್ಷೋಣಿಯಲಿ ವೈವಾಹಮಾಡಲು
ಪ್ರಾಣವಿತ್ತಿದಾ ಚಕ್ರ ಜಾತಿಯೊಳ್ಪದೆ ತಾ ಜನಿಸಿ ॥ ೨೭

ಮಾಡಿ ಭಾಂಡವದಾತನಾಗಳು
ನೋಡೆ ವಿಪ್ರವಿವಾಹಕಾಲದಿ
ಬೇಡಿದ್ದೈಸುವ ತಾನು ನಡೆಸುತ್ತಿರಲು ಭಾಂಡಗಳ ।
ನಡೆಸಿ ಬಿಡುವನು ತನ್ನ ಜನ್ಮವ
ದೃಢದಿ ಜನಿಸುವನವನು ವಿಶ್ವಕ
ನೊಡಲಿನಲಿ ಬಟಿಕಲ್ಲಿ ಬೆಳಯಲು ವಿಪ್ರಜಾತಿಯೊಳು ॥ ೨೮

ಆವನೊಬ್ಬನದೊಂದು ಗೃಹವನು
ಮೋವಿ ಮಾಡಲು ಅವನು ಮುಚ್ಚಿಗ
ತಾವಿನಲಿ ಜನಿಸುವನು ಸಾತ್ವಿಕಭಾವದೇಳ್ಗೆಯಲಿ ।
ಓದಿ ವಿಪ್ರನ ಸುತನ ಮುಂಜಿಗೆ
ತೀವಿದ್ಯೈಸನು ಯಿತ್ತು ಮಾಡಿಸ
ಲಾವಿಗಡ ಜನಿಸುವನು ಚಿಪ್ಪಿಗನಾಗಿ ಧರಣಿಯಲಿ ॥ ೨೯

ಬಂದುಕುಪ್ಪಸವಾತ ವಿಪ್ರಗೆ
ತಂದು ಕೊಡಲಿಕ್ಕಾತಗಾಗಳು
ಮುಂದೆ ಜನ್ಮಾಂತರಕೆ ಜನಿಸುವ ಮನ್ನೆಯಂಗದೊಳು ।
ಅಂದು ಮನ್ನೆಯ-ನಾದ ಮನುಜನು
ಬಂದು ಬ್ರಾಹ್ಮರ ಊರ ಕಾಯಲು
ಮುಂದೆ ಜನಿಸುವನವನು ಪಂಚಮನಾಗಿ ಧರಣಿಯಲಿ ॥ ೩೦

ಎಂಬ ವರ್ಣಾಶ್ರಮದ ಧರ್ಮವ
ನಿಂಬಿನಲಿ ನೆಱೆ ಕೇಳಿ ಬಟಿಕ ತ್ರಿ
ಯಂಬಕನು ನೆಱೆ ಹೇಳಿದಂದವ ಕೇಳಿ ನೃಪರೆಲ್ಲ ।
ತುಂಬಿದಗ್ಗದ ಧರ್ಮಸಾರವ
ನಂಬುಜಾಕ್ಷನು ಮೆಚ್ಚಿ ತನ್ನೊಳ
ಗಿಂಬಿನಲಿ ಹುದುಗಿದ್ದರ್ ಹಮ್ಮನು ಕಳದು ನಿಮಿಷದಲಿ ॥ ೩೧

ಬಂದುದಲ್ಲಿಗೆ ನಾಲ್ಕುಘಂಟಾ
ಬಂಧುರದ ಪುಷ್ಪಕವು ನಿಮಿಷಕೆ
ತಂದರವರಾಂಗನೆಯರಾಗಳು ಭೂಪರೆಲ್ಲರಿಗೆ ।
ಅಂದು ಹರಿಪದಧ್ಯಾನದಿಂದವೆ
ಬಂದರಾಕ್ಷಣ ದೇವಲೋಕದೆ
ಸಂದನೈ ನಿರ್ಮ್ಮಿಯಯಾತಿಯು ನಿತ್ಯಸುಖಗಳನು ॥ ೩೦

ಇದು ಕಥಾ ಸತ್ಸಂಗಕಾರಣ
ಇದನು ಮೀಱಿದ ಮನುಜಜಾತಿಗೆ
ತ್ರಿದಶಗೇಹಗಳಿಲ್ಲ ನಿಜವಾಗರಸ ಕೇಳೆಂದ ।
ಮುದದಿ ನಿಮ್ಮಯ ಪೂರ್ವಪುರುಷರ
ಅದಟುತನವನು ಕೇಳು ಜನಿಸುಗು
ತ್ರಿದಶಲೋಕವು ವೀರನಾರಾಯಣನ ಕರುಣದಲಿ ॥ ೩೩

ಸಂಧಿ ಸಂಪೂರ್ಣ.

ಶೋಧನ ಪತ್ರಿಕೆ.

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
4	17	ಯನ್ನು	ಯವನ್ನು
9	8	ರೂಟಿಗವನು	ರೇಟಿಗೆಯನಾ
11	15	ದ್ರುಗು	ದೃಗು
,,	18	ಕಂಪಿತವ	ಕಂಪಿತದ
13	5	ಮೋಣೀ	ಮೋಣಿ
,,	20	ಧರ	ಧರ
14	13	ರೊಡನೆ	ರೊಡನೆಪರಿ
,,	14	ಪರಿಕರರು	ಕರರು
15	16	ಮಂತ್ರವೇ	ಮಂತ್ರಕೆ
16	2	ತಮ್ಮಯ	ತಂತ
,,	3	ಯೊಳಗೆ	ಮ್ಮೊಳಗೆ
28	5	ದಲಿ	ದಲಿಕಲು
,,	6	ಕಲುಮುಳು	ಮುಳು
37	13	ವಾರಿತವು	ವಾರಿತವ
42	6	ಖರ	ಖರು
43	8	ಭಿಕ್ಷೆಯತ	ಭಿಕ್ಷೆಯ
,,	9	ರಲು	ತಳೆವ
45	25	ಪುಡಿಂ	ಪುಂಡಿ
54	20	ರುಱ	ರುರು
55	15	ಹೊಱೆಯು	ಹೊರೆಯು
58	22	ದುಱ	ದುರು

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
59	5	ಊಱ	ಉರು
61	6	ಯುಱ	ಯುರು
61	8	ಮೆಚ್ಚಲಿಕ	ಮೆಚ್ಚಲು
,,	9	ವರು	ಖರರು
,,	10	ಲುಱ	ಲುರು
,,	11	ಹಿದಿದ	ಹಿಡಿದ
,,	17	ಕ	ಕೈ
63	15	ಗಳ	ಗ
65	1	ಬಕವಧ	ಚೈತ್ರರಥ
66	17	ವೃತಾಂ	ವೃತ್ತಾಂ
67	1	ಬಕವಧ	ಚೈತ್ರರಥ
69	1	ಬಕವಧ	ಚೈತ್ರರಥ
,,	22	ಸಲೆ	ಸಲೇ
70	5	ಸ್ವಯಂ	ಸ್ವಯಂವರ
,,	6	ವರಕರ	ಕರ
,,	24	ವರಣವೊ	ವರಣವೋ
71	1	ಬಕವಧ	ಚೈತ್ರರಥ
,,	2	ಮಾಡ	ಮಾಡು
73	9	ಝುಣ	ಝುಣಝುಣ
77	2	ದ್ರುಪದ	ದ್ರುಪದನ
79	1	ಸುಕ್ಷೇ	ಸುಕ್ಷಾ
,,	19	ಸುಜನ	ನಾಸುಜನ
80	20	ಕಾರಣವು	ಕಾರಣ
83	19	ವಶಿಷ	ವಶಿಷ್ಠ
88	16	ಡಣಲಿ	ಡುಣಲಿ
100	12	ಹಸ್ನ	ಸ್ನಹ
105	4	ವಸಿಷ್ಠರ	ಜಮದಗ್ನಿಯು
133	12	ಗೆಸ	ಗೆಸೆ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
134	5	ಗೆಲಲುವ	ಗೆಲುವ
140	19	ನೆರದಿಹ	ನೆರೆದಿಹ
141	13	ವರೆ	ವರು
144	23	ತ್ಯಾವ	ಥ್ಯಾವ
147	6	ವಿದರೊಂ	ವಿದಱೊಂ
173	14	ಘೊಳು	ಘೋಳು
174	3	ಕೋಮಾ	ಕೋಮ
219	23	ಪುರುಷ	ಪುರುಷರು
,,	,,	ಪಂಚಕರಾ	ಪಂಚವಾ
220	17	ಸುರನ	ಸುರೆ
226	3	ಪೋರ	ಪೊರ
231	10	ಬಿಸಿಲು	ಬಿಸಿಲುನೆರೆ
238	23	ಘನ	ಘನಗಂ
,,	24	ಸಂವಾದ	ವಾದ
239	4	ನ್ಯೊನ್ಯ	ನ್ಯೋನ್ಯ
,,	6	ರೈದುವ	ರೈದು
,,	7	ಪುರದೊ	ಪುರದೊಳ್
,,	8	ಳತೀತ	ತೀತ
249	19	ಕೇಟಿ	ಕೇಳಿ
254	21	ಖಂದನುವ	ಖಂದನು
260	20	ಯುರೊ	ಯುರೋ
263	11	ಮಾ	ಮಾಡಲಿ
,,	12	ಡಲುತರಣಿ	ಕಿನನು
,,	,,	ಶೈಲಕ್ಕಿ	ಶೈಲದೊಳಿ
264	19	ಕಮ	ಕರ್ಮ
268	25	ರಾಗ್ರ	ರಾಗ್ರಹ
286	25	ನುಬಿ	ನುಬ್ಖಿ
310	12	ದಲಿಯಾ	ದೊಳಗೀ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
312	18	ನೀವು	ನೀವ
,,	23	ನೋಡು	ನೋತು
318	14	ದೈತ್ಯರ	ದೈತ್ಯರ
328	15	ಹೊಱವಂಟ	ಹೊಱಟ

337 ನೆಯ ಪುಟದ ಪ್ರಾರಂಭದಲ್ಲಿ

ಸೂಚನೆ.

ಸುರಪುರಕೆ ಹೋಗುವ ಯಯಾತಿಯು
ಮರಳಿ ತಿರುಗಿದ ನೀಧರಿತ್ರಿಗೆ
ಹಿರಿದಹಂಕಾರಿಸಲು ಬಿದ್ದನು ವರತಪೋವನಕೆ ||